ಕರ್ನಾಟಕ ನಾಟಕ ಅಕಾಡೆಮಿ

# ಗದಗ

## ಜಿಲ್ಲಾ ರಂಗಮಾಹಿತಿ

ರವೀಂದ್ರ ಆರ್. ಕೊಪ್ಪರ್



ಜಿಲ್ಲಾ ರಂಗಮಾಹಿತಿ ಮಾಲಿಕೆ

# ಗದಗ

## ಜಿಲ್ಲಾ ರಂಗ ಮಾಹಿತಿ

ರವೀಂದ್ರ ಆರ್. ಕೊಪ್ಪರ್

**ಕರ್ನಾಟಕ ನಾಟಕ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–02

**GADAGA JILLA RANGA MAHITI :**
District theatre information written by **Ravindra R. Koppar**
Published by **B. Manjunatha Aradya,** Registrar, Karnataka Nataka Academy, Kannada Bhavana, J.C. Road, Bengaluru - 560 002.
Phone: 080-22237484

| | | |
|---|---|---|
| ಹಕ್ಕುಗಳು | : | ಕರ್ನಾಟಕ ನಾಟಕ ಅಕಾಡೆಮಿ |
| ಮೊದಲ ಮುದ್ರಣ | : | 2016 |
| ಪ್ರತಿಗಳು | : | 1000 |
| ಪುಟಗಳು | : | vii+118 |
| ಬೆಲೆ | : | ರೂ. 60/- |

ಪ್ರಕಾಶಕರು : ಬಿ. ಮಂಜುನಾಥ ಆರಾಧ್ಯ, ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು
ದೂರವಾಣಿ : 080 22237484
ಇಮೇಲ್: academy.nataka@gmail.com

ಪ್ರಕಟಣಾ ಸಮಿತಿ ಸದಸ್ಯರು : ಮುದ್ದಣ್ಣ ರಟ್ಟೇಹಳ್ಳಿ
ಎಸ್.ಕೆ. ಕೊನೆಸಾಗರ
ಎಂ.ಎಸ್. ಗುಣಶೀಲನ್

ಮುದ್ರಕರು : ಪ್ರಗತಿ ಪ್ರಿಂಟ್ ಕಮ್ಯುನಿಕೇಷನ್
ಬೆಂಗಳೂರು-560020.
ದೂ.: 9845986569

# ಅಧ್ಯಕ್ಷರ ನುಡಿ

ಕರ್ನಾಟಕ ನಾಟಕ ಅಕಾಡೆಮಿ ಮೂರು ವರ್ಷದ ನಮ್ಮ ಅವಧಿಯ ಮುಕ್ತಾಯದ ಹಂತಕ್ಕೆ ಬಂದಿದ್ದೇವೆ. ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಬಾಗಲಕೋಟೆ ಜಿಲ್ಲೆ ಇಳಕಲ್‌ನಲ್ಲಿ 30 ದಿನಗಳ ವೃತ್ತಿರಂಗಭೂಮಿ ತರಬೇತಿ ಶಿಬಿರ, ಮುಂಬಯಿ, ದೆಹಲಿ ಹಾಗೂ ಕೇರಳದ ತ್ರಿಶೂರಿನಲ್ಲಿ ಹೊರರಾಜ್ಯ ನಾಟಕೋತ್ಸವ, ಕಾಸರಗೋಡಿನಲ್ಲಿ ಗಡಿನಾಡು ಬಹುಭಾಷಾ ನಾಟಕೋತ್ಸವ ಮತ್ತು ವ್ಯೆಂದರ್ಗಿಯಲ್ಲಿ ಗಡಿನಾಡ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮಗಳನ್ನು ಕಳೆದ ಮೂರು ವರ್ಷಕಾಲ ಹಮ್ಮಿಕೊಂಡಿದ್ದೆವು.

ವಿಜಯಪುರದಲ್ಲಿ 2015 ಸೆ.24 ರಿಂದ 30ರ ವರೆಗೆ ನಡೆದರಾಜ್ಯ ವೃತ್ತಿರಂಗ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್. ಅರಿಷಿಣ ಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ.ಆಲ್ದಾಳ ಅವರಿಗೆ ಕಲಬುರಗಿಯಲ್ಲಿ, ಹಿರಿಯ ನಟ ಕಂಚಿಕೇರಿ ಶಿವಣ್ಣ ಅವರಿಗೆ ದಾವಣಗೆರೆಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ 21 ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಹಾಗೂ ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಏಳು ದಿನಗಳ ಕಾಲ ನಡೆದ ವೃತ್ತಿರಂಗಭೂಮಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ 30 ಜಿಲ್ಲೆಗಳಲ್ಲಿ ರಂಗ ಶಿಬಿರ, ನಾಟಕ ಪ್ರದರ್ಶನ ಏರ್ಪಡಿಸಿದ್ದೇವೆ. ವಿಶೇಷ ಘಟಕ ಯೋಜನೆಯಡಿ ಐದು ಕಲಾವಿದರ ಮತ್ತು ಗಿರಿಜನ ಯೋಜನೆಯಲ್ಲಿ ಇಬ್ಬರು ಕಲಾವಿದರ ಸಾಕ್ಷ್ಯಚಿತ್ರ ನಿರ್ಮಾಣ ಮಾಡಲಾಗಿದೆ. 12 ವೃತ್ತಿ ನಾಟಕ ಕಂಪನಿಗಳ

ಸಾಕ್ಷ್ಯಚಿತ್ರ ನಿರ್ಮಿಸಲಾಗುತ್ತಿದೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಸರಿಸುಮಾರು 20 ವರ್ಷಗಳಿಂದ ಸ್ಥಗಿತಗೊಂಡಿದ್ದಕರ್ನಾಟಕ ನಾಟಕಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ. ನಾಟಕರಚನಾ ಶಿಬಿರದಲ್ಲಿ ಆಯ್ಕೆಯಾದ ಏಳು ನಾಟಕಗಳ ಸಂಕಲನವನ್ನು ಹೊರತರಲಾಗುವುದು.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪ್ರಥಮ ಹಂತದಲ್ಲಿ ಜಿಲ್ಲಾರಂಗ ಮಾಹಿತಿ ಮಾಲಿಕೆ ಮತ್ತು ರಂಗಸಂಪನ್ನರು ಮಾಲಿಕೆಯ 18 ಪುಸ್ತಕಗಳು ಬಿಡುಗಡೆಯಾಗಿವೆ. ಎರಡನೇ ಹಂತದಲ್ಲಿ 15 ಪುಸ್ತಕಗಳು ಬಿಡುಗಡೆಯಾಗುತ್ತಿವೆ. ಶತಮಾನದ ಶಕಪುರುಷ ಏಣಗಿ ಬಾಳಪ್ಪ, ರಂಗಭೂಮಿ ಮತ್ತು ಮಹಿಳೆ ಪುಸ್ತಕಗಳನ್ನು ಹೊರತರಲಾಗಿದೆ. 1959 ರಿಂದ 2016 ರ ವರೆಗಿನ ನಾಟಕ ಅಕಾಡೆಮಿಯ ಎಲ್ಲಾ ಪ್ರಶಸ್ತಿ ಪುರಸ್ಕೃತರ ಪರಿಚಯದ ಪುಸ್ತಕವನ್ನು ಹೊರತರಲು ಕ್ರಮವಹಿಸಲಾಗುತ್ತಿದೆ. ಈ ಎಲ್ಲಾ ಕನಸು ಸಾಕಾರಗೊಳ್ಳಲು ಶ್ರಮಿಸಿದ ಪ್ರಕಟಣಾ ಸಮಿತಿ ಸದಸ್ಯರು/ನಾಟಕ ಅಕಾಡೆಮಿ ಸದಸ್ಯರು ಹಾಗೂ ಜಿಲ್ಲಾರಂಗ ಮಾಹಿತಿ ಮಾಲಿಕೆಯಡಿ ಸರಿಸುಮಾರು 25 ಮತ್ತು ರಂಗ ಸಂಪನ್ನರು ಮಾಲಿಕೆಯಡಿ 15 ಕಲಾವಿದರ ಪುಸ್ತಕಗಳನ್ನು ಬರೆದುಕೊಟ್ಟ ಎಲ್ಲಾ ಲೇಖಕರಿಗೆ, ಪುಸ್ತಕವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ಎಂ.ಎಸ್. ಗ್ರಾಫಿಕ್ಸ್ ಅವರಿಗೂ, ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಮಂಜುನಾಥ ಆರಾಧ್ಯ ಹಾಗೂ ಅಕಾಡೆಮಿಯ ಎಲ್ಲ ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳು.

ಎಲ್.ಬಿ. ಶೇಖ (ಮಾಸ್ತರ)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

# ರಂಗ ಕೈಪಿಡಿಗೊಂದು ಮುನ್ನುಡಿ

ಒಂದೊಂದು ಜಿಲ್ಲೆಗಳ ರಂಗಮಾಹಿತಿ ಪ್ರತ್ಯೇಕವಾಗಿ ಪುಸ್ತಕ ರೂಪದಲ್ಲಿ ಲಭ್ಯವಿರಬೇಕು ಎನ್ನುವುದು ನಾಟಕ ಅಕಾಡೆಮಿಯ ಬಹುದಿನದ ಕನಸು. ಇದು ಗುರುತರ ಕೆಲಸ. ಬಿ.ವಿ. ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಇದಕ್ಕೆ ಚಾಲನೆ ನೀಡಲಾಯಿತು. ಅಕಾಡೆಮಿ ಸದಸ್ಯರಿಗೆ ಇದರ ಹೊಣೆ ಹೊರಿಸಿ ಜಿಲ್ಲೆಯ ಮಟ್ಟದಲ್ಲಿ ಮಾಹಿತಿ ಸಂಗ್ರಹಿಸುವ ಹತ್ತಾರು ರಂಗಕರ್ಮಿಗಳ ಸಂಪಾದಕೀಯ ಸಮಿತಿ ರಚಿಸಲಾಯಿತು. ಹಾಗೂ ಹೀಗೂ 5–6 ಜಿಲ್ಲೆಗಳ ರಂಗಮಾಹಿತಿಯೂ ಸಿದ್ಧಗೊಂಡಿತು. ಆದರೆ ಪುಸ್ತಕಗಳು ಹೊರಬರಲಿಲ್ಲ. ಜಿಲ್ಲೆಯ ಮಟ್ಟದಲ್ಲಿ ಹೆಚ್ಚಿನ ಜನರನ್ನು ಈ ಕೆಲಸಕ್ಕಾಗಿ ತೊಡಗಿಸುವುದು ಕಷ್ಟಕರ. ನಮ್ಮ ಮಿತಿಯಲ್ಲಿ ಅಪ್ರಾಯೋಗಿಕ ಎನಿಸಿತು. ಅಂತೆಯೇ ಒಂದು ಜಿಲ್ಲೆಯ ರಂಗಮಾಹಿತಿ ಸಂಗ್ರಹಿಸಿ ಬರೆಯುವ ಕೆಲಸವನ್ನು ಒಬ್ಬರಿಗೇ ವಹಿಸಿ ಕಾರ್ಯಪ್ರವೃತ್ತರಾದೆವು. ಅದಕ್ಕಾಗಿ 'ಜಿಲ್ಲಾ ರಂಗಮಾಹಿತಿ' ಮಾಲಿಕೆ ಯೋಜನೆ ರೂಪಿಸಲಾಯಿತು. ಅದು ಫಲ ನೀಡಿತು. ಇಪ್ಪತ್ತಕ್ಕೂಅಧಿಕ ಜಿಲ್ಲೆಗಳ ರಂಗಮಾಹಿತಿ ಪುಸ್ತಕಗಳು ಈಗ ಹೊರಬಂದವು.

ಜಿಲ್ಲೆಯ ರಂಗಭೂಮಿ ಸಂಕ್ಷಿಪ್ತ ಇತಿಹಾಸ; ಹವ್ಯಾಸಿ, ವೃತ್ತಿ ತಂಡಗಳು, ನಟ ನಟಿ, ನಿರ್ದೇಶಕ, ನೇಪಥ್ಯ ಕಲಾವಿದರ ಸಂಕ್ಷಿಪ್ತ ಪರಿಚಯ; ರಂಗಮಂದಿರ – ಹೀಗೆ 13 ವಿಷಯಗಳ ಪಟ್ಟಿವಾಡಿ ಲೇಖಕರಿಗೆ ಕಳಿಸಿಕೊಟ್ಟಿದ್ದೆವು. ರಂಗಲೇಖಕರು ವಿರಳವಾಗಿರುವುದರಿಂದ ಕೆಲವು ಜಿಲ್ಲೆಗಳಲ್ಲಿ ಕಲಾವಿದರಿಗೇ ಬರಹದ ಕೆಲಸ ನೀಡಲಾಗಿತ್ತು. ಒಬ್ಬರು ಕಲಾವಿದರ ಮೂಲಕ, ಮತ್ತೊಬ್ಬರು ನಾಟಕಕಾರರ ಮೂಲಕ, ಮತ್ತೆ ಕೆಲವರು ರಂಗ ತಂಡಗಳ ಕ್ರಿಯಾಶೀಲತೆ ಮೂಲಕ ಜಿಲ್ಲೆಯ ರಂಗಮಾಹಿತಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಮಗ್ರ ಎಂದು ಭಾವಿಸಬಾರದು. ಜಿಲ್ಲೆಯ ಕುರಿತು ಒಂದು ಪಕ್ಷಿನೋಟ ಇದು. ಒಂದು ಜಿಲ್ಲೆಯ ಕೆಲವಷ್ಟು ಮಾಹಿತಿಯನ್ನು ಈ ಪುಸ್ತಕಗಳು ಒಳಗೊಂಡಿವೆ. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

## ಆಧುನಿಕ ರಂಗಭೂಮಿಯ ಕತೆ

ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿಗೆ ನಾಂದಿ ಹಾಡಿದ್ದು ಗದಗ. ಅಂತೆಯೇ ಬಹುದೊಡ್ಡ ನಟ, ನಾಟಕಕಾರ, ದಿಗ್ದರ್ಶಕರಿಗೆ ಈ ಜಿಲ್ಲೆ ಜನ್ಮ ನೀಡಿದೆ. ಹಾಗೆ ಬೆಳೆದುಬಂದ ಆಧುನಿಕ ರಂಗಭೂಮಿ (ವೃತ್ತಿ ರಂಗಭೂಮಿ) ಚಿತ್ರಣವನ್ನು ರವೀಂದ್ರ ಕೊಪ್ಪರ್ ಅವರು ಈ ಕೃತಿಯಲ್ಲಿ ಚಿಕ್ಕದಾಗಿ, ಚೊಕ್ಕವಾಗಿ ವಿಶ್ಲೇಷಿಸಿದ್ದಾರೆ. ಜಿಲ್ಲೆಯ ರಂಗಮಾಹಿತಿ ಕಲೆಹಾಕುವದು ಎಂದರೆ ಸಾಮಾನ್ಯವಾಗಿ ಅಂಕಿಅಂಶಗಳೇ ಹೆಚ್ಚಿರುತ್ತವೆ. ಅದು ಅನಿವಾರ್ಯ ಕೂಡ. ಆದರೆ ಸುಭಗ ಓದಿಗೆ ಅಂತಹ ಕೃತಿಗಳು ದಕ್ಕುವುದಿಲ್ಲ. ಆದರೆ ಕೊಪ್ಪರ್ ಅವರ ಈ ಕೃತಿ ಅದಕ್ಕೆ ಹೊರತಾಗಿದೆ.

ಕವಿ, ನಾಟಕಕಾರ, ನಟ, ನಿರ್ದೇಶಕ ರವೀಂದ್ರ ಆರ್. ಕೊಪ್ಪರ್ ಅವರು ಬಹುಮುಖಿ ಪ್ರತಿಭಾವಂತರು. ಅವರ ಸೃಜನಶೀಲ ಅಭಿವ್ಯಕ್ತಿ ವಿಸ್ತಾರವಾದುದು. ಗದಗ ಜಿಲ್ಲೆಯ ರಂಗ ಇತಿಹಾಸವನ್ನು ಸ್ಪಷ್ಟವಾದ ವಿಂಗಡನೆಯಿಂದ ಕಟ್ಟಿಕೊಟ್ಟಿದ್ದಾರೆ. ವಿಷಯದ ನಿರ್ದುಷ್ಟತೆ ಮತ್ತು ಸರಳ ನಿರೂಪಣೆಯಿಂದ ಈ ಕೃತಿ ಗಮನ ಸೆಳೆಯುತ್ತದೆ. ರಂಗ ಇತಿಹಾಸದ ಪ್ರಮುಖ ಘಟ್ಟಗಳನ್ನು ಕತೆಯ ಹಾಗೆ ಹೇಳುತ್ತ ಹೋಗಿದ್ದಾರೆ. ಸಲೀಸಾಗಿ ಓದಿಸಿಕೊಳ್ಳುತ್ತದೆ.

–ಗುಡಿಹಳ್ಳಿ ನಾಗರಾಜ
ಪ್ರಕಟಣಾ ಸಮಿತಿ ಪರವಾಗಿ

## ಕರ್ನಾಟಕ ನಾಟಕ ಅಕಾಡೆಮಿ

### ಅಧ್ಯಕ್ಷರು ಮತ್ತು ಸದಸ್ಯರ ಪಟ್ಟಿ

ಶ್ರೀ ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ, ವಿಜಯಪುರ

ಸದಸ್ಯರು, ಕರ್ನಾಟಕ ನಾಟಕ ಅಕಾಡೆಮಿ

ಶ್ರೀ ಪಿ.ತಿಪ್ಪೇಸ್ವಾಮಿ, ಚಳ್ಳಕೆರೆ
ಶ್ರೀ ರಾಜಪ್ಪ ಕಿರಗಸೂರು, ಮೈಸೂರು ಜಿಲ್ಲೆ
ಶ್ರೀ ಎಸ್.ಕೆ.ಕೊನೆಸಾಗರ, ಹುನಗುಂದ
ಶ್ರೀ ಎಂ.ಎಸ್.ಗುಣಶೀಲನ್, ಬೆಂಗಳೂರು
ಶ್ರೀಮತಿ ಕಲ್ಪನಾ ನಾಗನಾಥ್, ಬೆಂಗಳೂರು
ಶ್ರೀ ಮುದ್ದಣ್ಣ ರಟ್ಟೆಹಳ್ಳಿ, ಹಾವೇರಿ ಜಿಲ್ಲೆ
ಶ್ರೀಮತಿ ಅನ್ನಪೂರ್ಣ ಸಾಗರ, ಶಿವಮೊಗ್ಗ ಜಿಲ್ಲೆ
ಶ್ರೀ ಎಚ್.ಷಡಾಕ್ಷರಪ್ಪ ಹೊಸಮನಿ, ಹರಪನಹಳ್ಳಿ
ಶ್ರೀ ಕೆ.ಜಗುಚಂದ್ರ, ಧಾರವಾಡ
ಶ್ರೀ ಉಮೇಶ ಸಾಲಿಯಾನ್, ಕಾಸರಗೋಡು
ಶ್ರೀ ಹಾಲ್ಕುರಿಕೆ ಶಿವಶಂಕರ್, ಕೊಪ್ಪಳ ಜಿಲ್ಲೆ
ಶ್ರೀ ವಿ.ಎನ್.ಅಕ್ಕಿ, ರಾಯಚೂರು
ಶ್ರೀ ಬಿ.ಎಂ.ರಾಮಚಂದ್ರ, ಮೈಸೂರು
ಶ್ರೀ ಎನ್.ಕೆ.ರಾಮಕೃಷ್ಣ, ಬೆಂಗಳೂರು
ಶ್ರೀಮತಿ ಎ.ವರಲಕ್ಷ್ಮಿ, ಬಳ್ಳಾರಿ

ಕೋಪ್ಟ್ ಆದ ಸಹಸದಸ್ಯರು
ಶ್ರೀ ಗುಡಿಹಳ್ಳಿ ನಾಗರಾಜ, ಬೆಂಗಳೂರು
ಡಾ. ಶ್ರೀಪಾದ ಭಟ್, ಶಿರಸಿ
ಶ್ರೀ ಎಲ್.ಎಚ್.ರಂಗನಾಥಪ್ಪ, ಶಿರಾ

ರಿಜಿಸ್ಟ್ರಾರ್: ಬಿ.ಮಂಜುನಾಥ ಆರಾಧ್ಯ
ಯೋಜನಾ ಸಹಾಯಕರು: ಕೆ.ರೇವಣ್ಣ
ಕಚೇರಿ ಸಿಬ್ಬಂದಿ: ಸೌಭಾಗ್ಯಲಕ್ಷ್ಮೀ, ಎಂ.ಭೋಜಣ್ಣ, ಸುಶೀಲಮ್ಮ

# ಅರಿಕೆ

ಗದಗ ಜಿಲ್ಲೆಯ ನಾಟಕರಂಗ ಮಾಹಿತಿಯನ್ನು ಪರಿಚಯಿಸುವ ಈ ಕಿರುಕೃತಿಯನ್ನು ಓದುಗರಿಗೆ ಒಪ್ಪಿಸಲು ಸಂತಸವೆನಿಸಿದೆ. ಜಿಲ್ಲೆಯ ಕಿರು ಭೌಗೋಳಿಕ ನೆಲೆಯ ಸಾಂಸ್ಕೃತಿಕ ಬದುಕಿನ ಭಾಗವಾಗಿರುವ ರಂಗಭೂಮಿಯ ಸಮಗ್ರ ದರ್ಶನವು ಬೃಹತ್ ಸಮುದಾಯದ ಸಾಂಸ್ಕೃತಿಕ ಚರಿತ್ರೆಯ ಸಮಗ್ರತೆಯನ್ನು ಸಮೃದ್ಧಗೊಳಿಸುತ್ತದೆ. ಸ್ಥಾನಿಕ ನೆಲೆಯ ಸಮಸ್ತ ವಿದ್ಯಮಾನಗಳನ್ನೊಳಗೊಂಡ ಇಂತಹ ಪರಿಚಯ ಕೃತಿಗಳನ್ನು ಪ್ರಕಟಿಸುವ ಕರ್ನಾಟಕ ನಾಟಕ ಅಕಾಡೆಮಿಯ ಕ್ರಿಯಾಯೋಜನೆ ಸ್ತುತ್ಯ ಹಾಗೂ ಶ್ಲಾಘನೀಯ. ಜಿಲ್ಲೆಯ ರಂಗಭೂಮಿ ಕುರಿತಾದ ವಿದ್ಯಮಾನಗಳನ್ನು ನಾಡಿನ ಸಮಷ್ಟಿ ಚಿತ್ರಣಕ್ಕೆ ಪೂರಕವಾಗುವಂತೆ ದಾಖಲಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇನೆ.

ಕರ್ನಾಟಕ ವೃತ್ತಿರಂಗಭೂಮಿಯ ಚರಿತ್ರೆಯಲ್ಲಿ ಗದುಗಿನ ಪರಿಸರ ಕೇಂದ್ರನೆಲೆಯಾಗಿ, ಅದರ ಏಳು-ಉಬ್ಬರ-ಬೀಳುಗಳ ಮಹತ್ತರ ವಿದ್ಯಮಾನಗಳಿಗೆ ಸಾಕ್ಷಿಯಾಗಿದೆ. ಹವ್ಯಾಸಿ ರಂಗಭೂಮಿ ಹೊಸತನದಿಂದ ಬೀಗುತ್ತ, ಮಿಂಚಿನಂತೆ ಮಿಣುಕುತ್ತ ನಿಧಾನವಾಗಿಯಾದರೂ ಬೆಳವಣಿಗೆಯ ಪಥದಲ್ಲಿ ಸಾಗುತ್ತಿದೆ. ಈ ಎಲ್ಲ ಆಗುಹೋಗುಗಳ ಮೆರವಣಿಗೆಯ ಸಂಭ್ರಮದ ನೈಪಥ್ಯದಲ್ಲಿ ನೋವು-ನಿರಾಶೆ-ಹತಾಶೆಯ ಚೀತ್ಕಾರವೂ ಇದೆ. ಇದೆಲ್ಲದರ ಯಥಾವತ್ತಾದ ಚಿತ್ರಣವನ್ನು ನೀಡುವ ಪ್ರಯತ್ನ ಮಾಡಿದ್ದೇನೆ.

ಈ ಕೃತಿರಚನೆಯಲ್ಲಿ ಹಲವು ಗ್ರಂಥ-ಲೇಖನಗಳ ನೆರವನ್ನು ಪಡೆದಿದ್ದು, ಆ ಎಲ್ಲ ಸಂಶೋಧಕ ಕೃತಿಕಾರ ಮಹನೀಯರಿಗೆ ನಾನು ಕೃತಜ್ಞನಾಗಿದ್ದೇನೆ. ಈ ಕೃತಿ ರಂಗಾಸಕ್ತರಿಗೆ ಜಿಲ್ಲೆಯ ರಂಗಭೂಮಿ ಪರಿಚಯವನ್ನು ನಿಕಟಗೊಳಿಸಿ ಇಷ್ಟವಾದರೆ ಹಾಗೂ ಯುವಜನರಲ್ಲಿ ರಂಗಾಸಕ್ತಿಯನ್ನು ಪ್ರೇರೇಪಿಸುವುದಾದರೆ ನನ್ನ ಪ್ರಯತ್ನ ಸಫಲವೆಂದು ಭಾವಿಸುತ್ತೇನೆ.

ಇಂತಹ ಒಂದು ಉತ್ಕಟ ಬರಹದ ಸದವಕಾಶವನ್ನು ವಿಶ್ವಾಸದಿಂದ ಒದಗಿಸಿಕೊಟ್ಟಿದ್ದ ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷ ಡಾ. ಬಿ.ವ್ಹಿ. ರಾಜಾರಾಂ ಇವರಿಗೆ ಹಾಗೂ ಇದೀಗ ಈ ಕೃತಿ ಪ್ರಕಟನೆಗೆ ಚಾಲನೆ ನೀಡಿರುವ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾಗಿರುವ ಶ್ರೀ ಎಲ್.ಬಿ. ಶೇಖ ಇವರಿಗೆ ನಾನು ಋಣಿಯಾಗಿದ್ದೇನೆ. ಹಾಗೆಯೇ ನನ್ನ ಬಗೆಗಿನ ಮೆಚ್ಚುಗೆ, ಅಭಿಮಾನದಿಂದ ಸಚೇತಕರಾಗಿ ಕಾರ್ಯನಿರ್ವಹಿಸಿದ ಶ್ರೀ ಗುಡಿಹಳ್ಳಿ ನಾಗರಾಜ ಹಾಗೂ ಸ್ನೇಹಿತ ಶ್ರೀ ಮಾಲತೇಶ ಬಡಿಗೇರ ಇವರಿಗೆ ನನ್ನ ವಿಶೇಷ ನೆನಕೆಗಳು ಸಲ್ಲುತ್ತವೆ. ಜಿಲ್ಲೆಯಾದ್ಯಂತ ನಾಟಕ ಮಂಡಳಿಗಳ ಹಾಗೂ ಕಲಾವಿದರ ವಿವರಗಳನ್ನು ನೀಡಿ ಸಹಕರಿಸಿದ ಎಲ್ಲ ಮಹನೀಯರಿಗೆ ನಾನು ಆಭಾರಿಯಾಗಿದ್ದೇನೆ.

- ರವೀಂದ್ರ ಆರ್. ಕೊಪ್ಪರ್

# ಪರಿವಿಡಿ

೧. ಪ್ರವೇಶ ೧-೪
ಮೊದಲೊಂದು ಮಾತು ೧. ಗೀತಮೇಳ ೨.

೨. ಗದಗ ಜಿಲ್ಲೆ ನಾಟಕ ರಂಗಭೂಮಿ ೫-೬೭
ನಾಂದಿ ೫. ಉತ್ತರ ಕರ್ನಾಟಕ ವೃತ್ತಿರಂಗಭೂಮಿ ೭.
ಗದಗ ಜಿಲ್ಲೆ ವೃತ್ತಿ ನಾಟಕ ಮಂಡಳಿಗಳು ೧೮.
ವೃತ್ತಿರಂಗ ಕಲಾವಿದರು ೫೫.
ಗದಗ ಜಿಲ್ಲೆ ರಂಗ ನಾಟಕಕಾರರು ೬೨.
ಉಪಸಂಹಾರ ೬೬.

೩. ಗದಗ ಜಿಲ್ಲೆ ಹವ್ಯಾಸಿ ರಂಗಭೂಮಿ ೬೮-೧೦೩
ಹಿನ್ನೆಲೆ ೬೮. ಹವ್ಯಾಸಿ ರಂಗಭೂಮಿಯ ಹುಟ್ಟು-ಬೆಳವಣಿಗೆ ೬೯.
ಗದಗ ಜಿಲ್ಲೆ ಹವ್ಯಾಸಿ ರಂಗಚಟುವಟಿಕೆಗಳು ೭೨.
ಗದಗ ತಾಲೂಕಿನ ನಾಟಕ ಮಂಡಳಿಗಳು ಮತ್ತು ಕಲಾವಿದರು ೮೯.
ರೋಣ ತಾಲೂಕಿನ ಹವ್ಯಾಸಿ ರಂಗ ಚಟುವಟಿಕೆಗಳು ೯೦.
ರೋಣ ತಾಲೂಕಿನ ನಾಟಕ ಮಂಡಳಿಗಳು ಮತ್ತು ಕಲಾವಿದರು ೯೨.
ನರಗುಂದ ತಾಲೂಕಿನ ಹವ್ಯಾಸಿ ರಂಗ ಚಟುವಟಿಕೆಗಳು ೯೯.
ನರಗುಂದ ತಾಲೂಕಿನ ನಾಟಕ ಮಂಡಳಿಗಳು ಮತ್ತು ಕಲಾವಿದರು ೧೦೦.
ಶಿರಹಟ್ಟಿ ತಾಲೂಕಿನ ನಾಟಕ ಮಂಡಳಿಗಳು ಮತ್ತು ಕಲಾವಿದರು ೧೦೧.
ಮುಂಡರಗಿ ತಾಲೂಕಿನ ನಾಟಕಮಂಡಳಿಗಳು ಮತ್ತು ಕಲಾವಿದರು ೧೦೨.

೪. 'ಪ್ರಸಾಧನ' ಕಲಾವಂತರು, ನಾಟಕ ಸಾಮಗ್ರಿಗಳನ್ನು ಸರಬರಾಜು ಮಾಡುವ ರಂಗಕರ್ಮಿಗಳು ೧೦೪.

೫. ಈಗ ಬರಿ ನೆನಪಾಗಿ ಉಳಿದ ರಂಗಮಂದಿರಗಳು ೧೦೯.
ಹವ್ಯಾಸಿ ರಂಗ ಚಟುವಟಿಕೆಗಳ ಪ್ರದರ್ಶನಾಂಗಣಗಳು ೧೧೧.

೬. ರಂಗವಿಮರ್ಶಕರು ೧೧೩-೧೧೫.
ಸಮಾರೋಪ ೧೧೪.
ಮಾಹಿತಿ ನೀಡಿದ ರಂಗಾಸಕ್ತರಿಗೆ ನಮನ-ಕೃತಜ್ಞತೆಗಳು ೧೧೬-೧೭.
ಗ್ರಂಥಋಣ ೧೧೮.

# ೧. ಪ್ರವೇಶ

## ಮೊದಲೊಂದು ಮಾತು

ಪ್ರತಿಯೊಂದು ಚಿಕ್ಕ ಸಮುದಾಯಕ್ಕೆ ಅದರದ್ದೆ ಆದ ಚಾರಿತ್ರಿಕ ಹಿನ್ನೆಲೆಯಿದೆ. ಜಿಲ್ಲೆಯ ವ್ಯಾಪ್ತಿಯಲ್ಲಿ ಅದರ ಎಲ್ಲ ಮೂಲಭೂತ ಅಂಗಗಳ ಒಟ್ಟಾರೆ ಆಗುಹೋಗುಗಳನ್ನು ಸಮಷ್ಟಿಯ ರೂಪದಲ್ಲಿ ದಾಖಲಿಸುವುದು ಒಂದು ಕ್ರಮ. ರಾಷ್ಟ್ರದ ಸಾಂಸ್ಕೃತಿಕ, ಆರ್ಥಿಕ ಹಾಗೂ ರಾಜಕೀಯ ಆಗುಹೋಗುಗಳಲ್ಲಿ ಅದರ ಕಿರುವ್ಯಾಪ್ತಿಯ ಸಮುದಾಯಗಳ ಸಿದ್ಧಿ-ಸಾಧನೆಗಳು ಸೇರಿಕೊಂಡಿರುತ್ತವೆ. ನಮ್ಮದು ಬೃಹತ್ ರಾಷ್ಟ್ರ, ವಿಸ್ತಾರದಲ್ಲಿ ವಿಶಾಲವಾದುದು. ಈ ವಿಸ್ತೃತ ನೆಲೆ ಭೌಗೋಳಿಕವಾಗಿ ಮಾತ್ರವಲ್ಲದೆ ಊಟೋಪಚಾರ, ವೇಷಭೂಷಣ, ವರ್ಣ, ಭಾಷೆ ಮೊದಲಾದವುಗಳಲ್ಲೂ ಅಪಾರ ವೈವಿಧ್ಯತೆಗಳನ್ನೊಳಗೊಂಡಿದೆ. ಈ ಅಗಾಧ ವಿವಿಧತೆಯ ಮಧ್ಯೆ ಏಕತೆಯಿದೆ. ಅದುವೇ ಭಾರತೀಯತ್ವ ಎಂಬ ಸಾಂಸ್ಕೃತಿಕ ಸಮರಸತ್ವ ; ಮೌಲ್ಯ, ನಂಬಿಕೆ, ಜೀವನದೃಷ್ಟಿಯಲ್ಲಿಯ ಏಕತಾನ ಭಾವ, ಸಮಷ್ಟಿ ಮಾನಸಿಕತೆ.

ಸಾಂಸ್ಕೃತಿಕ ರಂಗಕ್ಕೆ ಸಂಬಂಧಿಸಿದಂತೆ ಯಾವುದೊಂದು ರಂಗದ ಆಗುಹೋಗುಗಳ ರಾಷ್ಟ್ರಮಟ್ಟದ ಸಮೀಕ್ಷೆ-ಸಿಂಹಾವಲೋಕನವು ಬೃಹದಾಕಾರ ನೋಟದ್ದಾಗಿರುತ್ತದೆ. ಸಮಷ್ಟಿಯ ನೆಲೆಯಲ್ಲಿ ಕಿರುಪ್ರಾದೇಶಿಕ ಮಟ್ಟದ ವಿವರಗಳು ಸಂಕೋಚನಗೊಂಡು ಸಂಕ್ಷೇಪಾಕೃತಿಗಳಾಗುತ್ತವೆ. ಸಮಷ್ಟಿಯ ಅವಲೋಕನವನ್ನಷ್ಟೆ ಮಾಡುವುದಾದರೆ ತಳಹಂತದ ಪ್ರಾದೇಶಿಕ ವಿವರಗಳು ಮಸುಕಾಗುತ್ತವೆ. ಕಾಲಾಂತರದಲ್ಲಿ ಅವು ಜನರ ಸ್ಮೃತಿಪಟಲದಿಂದ ಅಳಿಸಿ ಹೋಗುತ್ತವೆ. ಒಂದು ರಾಷ್ಟ್ರದ ಸಾರ್ವತ್ರಿಕತೆಗೆ ವೈವಿಧ್ಯತೆ ಮತ್ತು ವೈಶಿಷ್ಟ್ಯಗಳು ಅಗತ್ಯವಾದಂತೆ ಸತ್ವಯುತ ಸಂಸ್ಕೃತಿಗೆ ಏಕತೆ ಮತ್ತು ಸಾರ್ವತ್ರಿಕತೆಗಳೂ ಅವಶ್ಯ. ಆದಕಾರಣ ಸಮಷ್ಟಿಯ ಬೃಹತ್ ಓಘದಲ್ಲಿ ಕಿರುದಾಗಿಬಿಡುವ ಕಿರು ಪ್ರಾದೇಶಿಕ ನೆಲೆಗಳ ಆಗುಹೋಗುಗಳನ್ನು ಸೂಕ್ಷ್ಮದರ್ಶಕ ಗಾಜುಗಳ ಮೂಲಕ ಬೃಹದಾಕಾರದ ರೂಪದಲ್ಲಿ ಬಿಂಬಿಸುವ ಸಮೀಕ್ಷೆಗಳು ಅಗತ್ಯವಾಗಿವೆ. ಗತಕಾಲದ ಅರಿವು-ಅನುಭವಗಳು ವರ್ತಮಾನ ಹಾಗೂ ಭವಿಷ್ಯಕ್ಕೆ ದಾರಿದೀಪವಾಗಬೇಕಾದರೆ ಇಂತಹ ಸವಿವರ ದಾಖಲೆಗಳನ್ನುಳ್ಳ ('ಜಿಲ್ಲೆ ರಂಗಭೂಮಿ'ಯಂತಹ) ಕೃತಿಗಳು ಪ್ರಸ್ತುತವಾಗುತ್ತವೆ.

ಈ ಅಗತ್ಯವನ್ನು ಮನಗಂಡು ಕನ್ನಡ ರಂಗಭೂಮಿ ಇತಿಹಾಸದಲ್ಲಿ ಜಿಲ್ಲೆ ವ್ಯಾಪ್ತಿಯ ವಿದ್ಯಮಾನಗಳನ್ನು ಸಮಷ್ಟಿ ನೋಟಕ್ಕೆ ಪೂರಕವಾಗುವಂತೆ ಕ್ರಮಬದ್ಧವಾಗಿ ದಾಖಲಿಸುವ ಪ್ರಯತ್ನವೇ ಈ ಕಿರು ಕೃತಿ ರಚನೆಯ ಉದ್ದೇಶ.

ಗದಗ ಜಿಲ್ಲೆ ನಾಟಕ ರಂಗಭೂಮಿಯನ್ನು ವೃತ್ತಿ ನಾಟಕ ರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿ ಎಂಬ ಎರಡು ಪ್ರಮುಖ ಭಾಗಗಳಲ್ಲಿ ವಿಂಗಡಿಸಿ ಸಮಗ್ರ ವಿವರಗಳನ್ನು ಸಾದರಪಡಿಸಲಾಗಿದೆ. ವಿವರಗಳನ್ನು ಕಲೆ ಹಾಕುವ ಯತ್ನದಲ್ಲಿ ಲೋಪಗಳಾಗಿರಬಹುದಾದರೂ ಈ ಆರಂಭಿಕ ಯತ್ನವು ಕ್ರಮವಾಗಿ ಉದ್ದೇಶಿತ ಪರಿಣಾಮವನ್ನು ಸಾಕಾರಗೊಳಿಸುವಲ್ಲಿ ದಿಕ್ಸೂಚಿಯಾಗಿ ಭವಿತವ್ಯದ ಸುಸಂಘಟಿತ ಯತ್ನಗಳಿಗೆ ನೆರವಾಗಬಲ್ಲುದು.

## ೨. ಗೀತಮೇಳ

### (ಸ್ವಾಗತ ತಮಗೆಲ್ಲ, ನಮ್ಮ ಗದುಗು ಜಿಲ್ಲೆಗೆ)

೪೬೫೬ ಚದರು ಕಿಲೊಮೀಟರು ವಿಸ್ತಾರದ ಗದಗ ಜಿಲ್ಲೆಯು, ಗದಗ, ಮುಂಡರಗಿ, ಶಿರಹಟ್ಟಿ, ರೋಣ, ನರಗುಂದ ತಾಲೂಕುಗಳನ್ನೊಳಗೊಂಡಿದೆ. ಗದಗ ನಗರ ಜಿಲ್ಲೆಯ ಕೇಂದ್ರಸ್ಥಳವಾಗಿದೆ. ೧೦ ಲಕ್ಷ ಜನಸಂಖ್ಯೆಯನ್ನುಳ್ಳ ಗದಗ ಜಿಲ್ಲೆ ಅರಣ್ಯ-ಸಸ್ಯ ಸಂಪತ್ತಿನಿಂದ ಸಮೃದ್ಧವಾಗಿದೆ. ಗದುಗಿನ ಗಾಳಿಯಲ್ಲಿ ಶಕ್ತಿಯಿದೆ, ಗದುಗಿನ ಮಣ್ಣಲ್ಲಿ ಚಿನ್ನವಿದೆ.

ಗದಗ ಜಿಲ್ಲೆ ಪರಿಸರಕ್ಕೆ ವಿಶಿಷ್ಟ ಚಾರಿತ್ರಿಕ ಹಿನ್ನೆಲೆಯಿದೆ. ಸಿರಿವಂತ ಸಂಸ್ಕೃತಿ-ಪರಂಪರೆಗಳ ಘನವಾದ ಬಳುವಳಿಯಿದೆ.

ಕುಮಾರವ್ಯಾಸ, ಚಾಮರಸ, ನಯಸೇನ, ದುರ್ಗಸಿಂಹ, ಸೋಮನಾಥ ಕವಿಪುಂಗವರು ಆಗಿ ಹೋದ ನೆಲೆಯಿದು. ಸಾಹಿತ್ಯ, ಸಂಗೀತ, ಲಲಿತಕಲೆಗಳ ಬೀಡಾದ ಗದಗ ಜಿಲ್ಲೆ ಕರ್ನಾಟಕದ ಮಧ್ಯದಲ್ಲಿರುವ ಬಯಲು ಸೀಮೆಯ ಗಂಡುಮೆಟ್ಟಿನ ನಾಡು.

ಮಧ್ಯಕಾಲೀನ ಇತಿಹಾಸದ ಕಾಲಕ್ಕೆ ನಿರ್ಮಾಣಗೊಂಡ ತ್ರಿಕೂಟೇಶ್ವರ, ಸರಸ್ವತಿ ದೇವಾಲಯಗಳು, ಲಕ್ಕುಂಡಿ, ಡಂಬಳ, ಲಕ್ಷ್ಮೇಶ್ವರದ ಹಲವು ದೇವಾಲಯಗಳು ವಾಸ್ತುಶಿಲ್ಪ-ಶಿಲ್ಪಕಲೆಯ ಅಪರೂಪದ ಕಲಾಕೃತಿಗಳಾಗಿ ನಾಡಿನಾದ್ಯಂತ ಎಲ್ಲೆಡೆಗಳಿಂದ ಯಾತ್ರಿಕರನ್ನು - ಪ್ರವಾಸಿಗಳನ್ನು ಆಕರ್ಷಿಸುತ್ತಿವೆ.

* ಧರ್ಮ, ಕಲೆ, ನುಡಿಯ ಶ್ರೇಯಸ್ಸಿಗೆ ಶ್ರಮಿಸಿದ ದಾನಚಿಂತಾಮಣಿ ಅತ್ತಿಮಬ್ಬೆ, ಶರಣ ಅಜಗಣ್ಣ, ಶರಣೆ ಮುಕ್ತಾಯಕ್ಕ, ಆದಯ್ಯ, ಅನುಭಾವಿ ಮಹಾಂತ ಶಿವಯೋಗಿಗಳು,
* ಭಾರತದ ಸಶಸ್ತ್ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಲಿತನದಿಂದ ಕಾದಿದ ನರಗುಂದ ಬಾಬಾಸಾಹೇಬ, ಮುಂಡರಗಿ ಭೀಮರಾಯರು,

* ಕರ್ನಾಟಕ ಏಕೀಕರಣ ಆಂದೋಲನಕ್ಕೆ ಚಾಲನೆ ನೀಡಿದ ಆಲೂರು ವೆಂಕಟರಾಯರು, ಅಂದಾನೆಪ್ಪ ದೊಡ್ಡಮೇಟಿ, ಹುಯಿಲಗೋಳ ನಾರಾಯಣರಾಯರು,

* ಕರ್ನಾಟಕ ವೃತ್ತಿ ನಾಟಕ ರಂಗಭೂಮಿಯನ್ನು ಸಿರಿವಂತಗೊಳಿಸಿದ ಶಿರಹಟ್ಟಿ ವೆಂಕೋಬರಾಯರು, ವಾಮನರಾಯರು, ಗರುಡ ಸದಾಶಿವರಾಯರು, ರಂಗನಾಟಕಕಾರರಾದ ಎಚ್.ಟಿ. ಮಹಾಂತೇಶಶಾಸ್ತ್ರಿ, ಮಾರುತೇಶ ಮಾಂಡ್ರೆ, ಎಚ್.ಎನ್. ಹೂಗಾರರು,

* ಸಹಕಾರಿ ರಂಗದಲ್ಲಿ ಅಮೋಘ ಸಾಧನೆ ಮಾಡಿದ ಸಿದ್ದನಗೌಡ ಪಾಟೀಲ, ಕೆ.ಎಚ್.ಪಾಟೀಲರು,

* ಚಿತ್ರಕಲಾ ದಿಗ್ಗಜರಾದ ಮುರಿಗೆಪ್ಪ ಚೆಟ್ಟಿ, ಟಿ.ಪಿ. ಅಕ್ಕಿ, ಸಿ.ಎನ್. ಪಾಟೀಲ, ಸುರೇಶ ಕುಲಕರ್ಣಿ,

* ಸಂಗೀತಕ್ಷೇತ್ರದಲ್ಲಿ ಅಪಾರ ಸಾಧನೆಗೈದು ಉಭಯಗಾಯನವಿಶಾರದರಾಗಿ, ಅಂಧ-ಅನಾಥ ಮಕ್ಕಳನ್ನು ಸಲುಹಿ, ಸಂಗೀತ ಕೋವಿದರನ್ನಾಗಿ, ಕಲಾವಿದರನ್ನಾಗಿ ನಾಡಿಗೆ ನೀಡಿದ ಗುರು ಪಂಚಾಕ್ಷರ ಗವಾಯಿಗಳು ಹಾಗೂ ದೇವಮಾನವರಾಗಿ ಬಾಳಿದ ಪಂಡಿತ ಡಾ. ಪುಟ್ಟರಾಜ ಕವಿ ಗವಾಯಿಗಳು, ಸಿದ್ಧರಾಮ ಜಂಬಲದಿನ್ನಿ,

* ಸಂಗೀತ ಕ್ಷೇತ್ರದಲ್ಲಿ ದೇಶ-ವಿದೇಶಗಳಲ್ಲಿ ಖ್ಯಾತಿಯನ್ನು ಅರ್ಜಿಸಿದ ಭೀಮಸೇನ ಜೋಷಿ,

* ಕ್ರೀಡಾರಂಗದಲ್ಲಿ ರಾಷ್ಟ್ರಮಟ್ಟದಲ್ಲಿ ಮಿಂಚಿದ ಸುನೀಲ ಜೋಷಿ, ಬೆನು ಭಾಟ್, ಮಹೇಶ ಬಾಗಡೆ, ಪರಶುರಾಮ ಗಡಾದ, ಎಚ್.ಆರ್. ಕಟ್ಟಿಮನಿ, ವೆಂಕಟೇಶ ಕಟ್ಟಿಮನಿ,

* ಆಧುನಿಕ ಕನ್ನಡ ಸಾಹಿತ್ಯವನ್ನು ಸಿರಿವಂತಗೊಳಿಸಿದ ವರಕವಿ ದ.ರಾ.ಬೇಂದ್ರೆ, ರಂ.ಶ್ರೀ. ಮುಗಳಿ, ಚೆನ್ನವೀರ ಕಣವಿ, ಎನ್.ಕೆ. ಕುಲಕರ್ಣಿ, ಪಂಢರಿನಾಥಾಚಾರ್ಯ ಗಲಗಲಿ, ಶ್ರೀಪಾದ ತಾಪಸ, ಜಿ.ಬಿ. ಜೋಷಿ, ಕೀರ್ತಿನಾಥ ಕುರ್ತಕೋಟಿ, ಮೇವುಂಡಿ ಮಲ್ಹಾರಿರಾವ, ಜಿ.ಎಸ್. ಆಮೂರ, ಸಂ.ಶಿ. ಭೂಸನೂರಮಠ, ಚೆನ್ನಪ್ಪ ಉತ್ತಂಗಿ, ಆರ್.ಸಿ. ಹಿರೇಮಠ, ಗಿರಡ್ಡಿ ಗೋವಿಂದರಾಜ, ಸೋಮಶೇಖರ ಇಮ್ರಾಪೂರ, ಎಂ.ಎಸ್. ಸುಂಕಾಪೂರ, ರಾಜಶೇಖರ ಭೂಸನೂರಮಠ, ಡಾ. ಬಿ.ವ್ಹಿ. ಮಲ್ಲಾಪೂರ ಮಾಧವ ಕುಲಕರ್ಣಿ, ಸದಾನಂದ ಕವನಳ್ಳಿ, ಪತ್ರಕರ್ತರಾದ ಜಿ.ಎಮ್. ಶಿರಹಟ್ಟಿ,

ಎಚ್.ಆರ್. ಕಿದಿಯೂರು ಹಾಗೂ ಕೌತಾಳ ವೀರಪ್ಪ ಇವರೆಲ್ಲ ಈ ಜಿಲ್ಲೆಯವರೆ.

ವಿದ್ಯೆಯ ಹಣತೆ ಹಚ್ಚಿ, ಧರ್ಮ-ಸಾಹಿತ್ಯ ಸಂವರ್ಧನೆಯಲ್ಲಿ ತೊಡಗಿರುವ ಗದಗ-ಡಂಬಳ ತೋಂಟದಾರ್ಯ ಮಠ, ಹಾಲಕೆರೆ ಅನ್ನದಾನೀಶ್ವರ ಮಠ, ಮುಂಡರಗಿಯ ಅನ್ನದಾನೀಶ್ವರ ಮಠ, ಗದುಗಿನ ಶಿವಾನಂದ ಮಠ, ಬಳಗಾನೂರ ಶರಣರ ಮಠ, ನೀಲಮ್ಮತಾಯಿ ಮಠ, ದಿಂಗಾಲೇಶ್ವರ ಮಠ, ಬಾಲಲೀಲಾ ಮಹಾಂತ ಶಿವಯೋಗಿಗಳ ಮಠ, ವೀರೇಶ್ವರ ಪುಣ್ಯಾಶ್ರಮ, ಸರ್ವ ಧರ್ಮ ಸಮನ್ವಯದ ನೆಲೆಯಾದ ಶಿರಹಟ್ಟಿಯ ಫಕ್ಕೀರೇಶ್ವರ ಮಠ ಈ ನೆಲದ ಚಿರಾಸ್ತಿಗಳಾಗಿವೆ.

ಹೀಗೆ, ಧರ್ಮ-ಸಂಸ್ಕೃತಿಯ ನೆಲೆವೀಡಾಗಿ, ಶಿಲ್ಪಕಲೆಯ ಬೀಡಾಗಿ, ಸಂಗೀತದ ತವರಾಗಿ, ಶೈಕ್ಷಣಿಕ ಕೇಂದ್ರವಾಗಿ ಮುನ್ನಡೆಯುತ್ತಿರುವ ಗದಗ ಜಿಲ್ಲೆ ಪ್ರೇಕ್ಷಣೀಯವಾಗಿದೆ.

ಭಾರತೀಯ ಸಂಸ್ಕೃತಿಯ ವಿಶಿಷ್ಟ ಗುಣವಿಶೇಷಗಳಾದ ಸತ್ಯ, ಪ್ರೇಮ, ಅಹಿಂಸೆ, ತ್ಯಾಗ, ಉದಾರ ಜೀವನ ದೃಷ್ಟಿಯ ಸಮಸ್ತ ಸಾರದ ಕಿರುರೂಪವನ್ನು ಈ ಜಿಲ್ಲೆಯಲ್ಲಿ ಧಾರಾಳವಾಗಿ ಕಾಣಬಹುದಾಗಿದೆ.

# ೩. ಗದಗ ಜಿಲ್ಲೆ ನಾಟಕ ರಂಗಭೂಮಿ

## ನಾಂದಿ

ರಂಗಭೂಮಿ ಹಲವು ಲಲಿತ ಕಲೆಗಳ ಸವಿ ರಸಾಯನ. ನಾಟಕವೇ ಅದರ ಜೀವಾಳ. ಪ್ರೇಕ್ಷಕರ ಮನಸ್ಸನ್ನು ತಣಿಸಿ ಮುದಗೊಳಿಸಲು ನವರಸಗಳು ಹಿತವಾಗಿ ಸಮ್ಮಿಳನಗೊಳ್ಳಬೇಕು. ಸಂಗೀತ, ನೃತ್ಯ, ಅಭಿನಯ ಹೃದಯವನ್ನು ತಟ್ಟಬೇಕು. ವಿಭಿನ್ನ ಅಭಿರುಚಿಗಳನ್ನುಳ್ಳ ಪ್ರೇಕ್ಷಕವೃಂದವನ್ನು ಏಕಪ್ರಕಾರವಾಗಿ ರಂಜಿಸಬೇಕು. ಜೊತೆಗೆ ಬುದ್ಧಿ-ಭಾವಕ್ಕೆ ಹೊಸ ಅರಿವನ್ನುಂಟು ಮಾಡಬೇಕು. ದೃಶ್ಯಮಾಧ್ಯಮವಾದ ರಂಗಪ್ರದರ್ಶನ ಈ ಉದ್ದೇಶಗಳ ಸಾಕಾರಕ್ಕೆ ತಕ್ಕುದಾದ ಪರಿಣಾಮಕಾರಿ ಸಾಧನವಾಗಿದೆ.

'ರಂಗಭೂಮಿ' ಪರಿಕಲ್ಪನೆ ನಾಟಕ-ನಟ-ಪ್ರೇಕ್ಷಕರನ್ನು ಒಳಗೊಳ್ಳುವ ಒಂದು ಸಂಸ್ಥೆ. ಪ್ರಾಕಾರಿಕವಾಗಿ ನಾಟಕ ಎಂತಹದೆ ಆದರೂ, ಅದರ ಪ್ರಸ್ತುತಿಯ ಅಂತಿಮ ಗುರಿ ನೋಡುಗರನ್ನು ರಂಜಿಸುವುದಾಗಿದೆ. ನಾಟಕದ ರಚನೆ ಈ ಉದ್ದೇಶ ಸಾಧನೆಗೆ ಪೂರಕವಾಗಿರಬೇಕು. ಅರ್ಥವತ್ತಾದ ಕಥೆ, ಅದರ ಸುಸಂಬದ್ಧ ಬೆಳವಣಿಗೆ - ಓಘ ಪ್ರೇಕ್ಷಕರ ಚಿತ್ತವನ್ನು ಸೆರೆ ಹಿಡಿದಿಡಬಲ್ಲುದು. ಅದರ ಪ್ರಸ್ತುತಿ ಪರಿಣಾಮಕಾರಿಯಾಗಿರಬೇಕು. ಪ್ರೇಕ್ಷಕವೃಂದದ ಮಟ್ಟ, ಅಭಿಷ್ಟೆ, ಮಾನಸಿಕತೆಯನ್ನು ಅನುಸರಿಸಿಕೊಂಡೆ ಅದು ರಚನೆಗೊಳ್ಳಬೇಕು.

ಭಾರತದ ನಾಟಕ ರಂಗಭೂಮಿಗೆ ಸುದೀರ್ಘ ಹಿನ್ನೆಲೆಯಿದೆ. ಋಗ್ವೇದದ ಪ್ರಾರ್ಥನಾ ಗೀತೆಗಳು ಮತ್ತು ಸಂಭಾಷಣೆಗಳಲ್ಲಿ ನಾಟಕದ ಅಂಶಗಳಿವೆ. ರಾಮಾಯಣ-ಮಹಾಭಾರತಗಳಲ್ಲಿ 'ನಾಟಕ' ಕುರಿತ ಉಲ್ಲೇಖಗಳಿವೆ. ಶ್ರೀಕೃಷ್ಣ ದಂತಕತೆಗಳಲ್ಲಿ ಹಾಡು, ಸಂಗೀತ, ನೃತ್ಯಗಳ ರೂಪದಲ್ಲಿ 'ನಾಟಕ' ವಿಕಾಸಗೊಳ್ಳುತ್ತ ಬಂದಿತು. ಪಾಣಿನಿಯು (ಕ್ರಿ.ಶ. ಪೂರ್ವ ಆರನೆಯ ಶತಮಾನ) ನಾಟಕದ ಹಲವು ರೂಪಗಳನ್ನು ವಿವರಿಸಿದ್ದಾನೆಂಬ ಉಲ್ಲೇಖಗಳು ಇತರ ಗ್ರಂಥಗಳಲ್ಲಿವೆ. 'ನಾಟ್ಯಶಾಸ್ತ್ರ'ವು ನಾಟಕಕಲೆ ಬೆಳೆದು ಬಂದಿದ್ದುದನ್ನು ಹಾಗೂ ನಾಟಕಗಳು ಪ್ರದರ್ಶಿತವಾಗುತ್ತಿದ್ದವೆಂಬುದನ್ನು ಸೂಚಿಸುತ್ತದೆ. ಛೋಟಾನಾಗಪುರದಲ್ಲಿ ಭೂಉತ್ಖನನದಲ್ಲಿ ಕ್ರಿ.ಶ. ಪೂರ್ವ ಎರಡನೆಯ ಶತಮಾನಕ್ಕೆ ಸಂಬಂಧಿಸಿದ್ದ ರಂಗಮಂದಿರವೊಂದು ದೊರೆತಿದ್ದು, ನಾಟ್ಯಶಾಸ್ತ್ರದ ವಿವರಣೆಗಳೊಂದಿಗೆ ಅದರಲ್ಲಿ ಹೋಲಿಕೆಯಿರುವುದು ನಾಟಕರಂಗದ ಪ್ರಾಚೀನತೆಯನ್ನು ಪುಷ್ಟೀಕರಿಸುತ್ತದೆ. ಭಾಸನ ನಾಟಕಗಳನ್ನು ಕುರಿತಾದ ಉಲ್ಲೇಖಗಳು ಕ್ರಿ.ಶ. ಪೂರ್ವ ಮೂರನೆಯ ಶತಮಾನದಲ್ಲಿ ಸಂಸ್ಕೃತ ನಾಟಕವು ಪ್ರವರ್ಧಮಾನಕ್ಕೆ ಬಂದಿತ್ತೆಂಬುದನ್ನು ಸೂಚಿಸುತ್ತವೆ. ಅಂದು ಸಂಸ್ಕೃತ ನಾಟಕಗಳ ರಂಗಪ್ರದರ್ಶನಗಳು ಬುದ್ಧಿವಂತ ಪ್ರೇಕ್ಷಕ ವರ್ಗಕ್ಕೆ ಸೀಮಿತವಾಗಿದ್ದವು.

ಕನ್ನಡ ನಾಡಿನ ರಂಗನಾಟಕಕ್ಕೂ ಶತಕದಷ್ಟು ಕಾಲದ ಹಿನ್ನೆಲೆಯಿದೆ ಎಂಬುದನ್ನು ಕನ್ನಡ ಸಾಹಿತ್ಯದ ಮೂಲಗಳು ಹಾಗೂ ಶಾಸನಗಳ ಉಲ್ಲೇಖಗಳು ದೃಢೀಕರಿಸುತ್ತವೆ. ಧಾರವಾಡದ ಬಳಿ ಮುಗುಂದದಲ್ಲಿ (ಈಗಿನ ಮುಗದ) ಕ್ರಿ.ಶ. ೧೦೪೧ ರಲ್ಲಿ ನಾಟಕಶಾಲೆ ಇತ್ತೆಂದು ಹೇಳುವ ಶಿಲಾಫಲಕವಿದೆ. ವಿಜಯನಗರ ಅರಸರ ಕಾಲದಲ್ಲಿ ಹಾಗೂ ಕೆಳದಿ ವೆಂಕಟಪ್ಪನಾಯಕನ ಕಾಲಕ್ಕೆ (ಇಕ್ಕೇರಿಯಲ್ಲಿ) ನಾಟಕಶಾಲೆಗಳಿದ್ದವು ಎಂಬುದನ್ನು ಸಂಶೋಧನೆಗಳು ಅರುಹಿವೆ. ಅಂದಿನ ನಾಟಕ ಪ್ರದರ್ಶನಗಳು ಇಂದಿನಂತೆ ಇರಲಿಲ್ಲ. ಅವು ಅಭಿನಯ ಪ್ರಧಾನ ಕಥಾನೃತ್ಯಗಳಾಗಿದ್ದವು. ಹಸ್ತಾಭಿನಯ (ಮುದ್ರೆ), ನೇತ್ರಾಭಿನಯ ಪ್ರಧಾನವಾಗಿದ್ದ ವಿಶಿಷ್ಟ ನೃತ್ಯಪದ್ಧತಿಯು ಅಂದಿನ ನಾಟಕವಾಗಿತ್ತು.

ಈಗ ಲಭ್ಯವಿರುವ ಕನ್ನಡ ನಾಟಕಗಳಲ್ಲಿ ತೀರ ಹಳೆಯದೆಂದರೆ ಸಿಂಗಾರಾರ್ಯ ಕವಿ ವಿರಚಿತ 'ಮಿತ್ರಾವಿಂದಾಗೋವಿಂದ'. ಶ್ರೀಹರ್ಷನ 'ರತ್ನಾವಳಿ' ಎಂಬ ಸಂಸ್ಕೃತ ನಾಟಕದ ಕನ್ನಡ ರೂಪಾಂತರವಿದು. ಒಟ್ಟಾರೆ, ಈಗ ಲಭ್ಯವಿರುವ ಎಲ್ಲ ಸಾಕ್ಷಾಧಾರಗಳ ಮೇರೆಗೆ ಕನ್ನಡನಾಡಿನಲ್ಲಿ ನಾಟಕ ಪ್ರದರ್ಶನ ಒಂದು ಸಾವಿರ ವರ್ಷಗಳ ಹಿಂದೆಯೆ ಇದ್ದಿತು ಎಂದು ಧಾರಾಳವಾಗಿ ತಿಳಿಯಬಹುದು.

ಹದಿನಾರನೆಯ ಶತಮಾನದಲ್ಲಿ ಯಕ್ಷಗಾನ-ಬಯಲಾಟ ಕನ್ನಡ ಜನಪದ ರಂಗದ ಒಂದು ಪ್ರಮುಖ ಪ್ರದರ್ಶನ ಪದ್ಧತಿಯಾಗಿತ್ತು. ಅದು ಆಗ ಸಂಗೀತ ರೂಪಕವಾಗಿತ್ತು. ಇನ್ನು ರಾಜಾಶ್ರಯದಲ್ಲಿ ಕನ್ನಡ ನಾಟಕವು ವಿಶೇಷರೂಪದಲ್ಲಿ ಬೆಳೆಯುತ್ತ ಬಂದಿತು. ಸಂಸ್ಕೃತ ನಾಟಕಗಳು ಹಾಗೂ ಅವುಗಳ ಕನ್ನಡ ರೂಪಾಂತರದ ನಾಟಕಗಳು ಪ್ರದರ್ಶನಗೊಳ್ಳುತ್ತ ಬಂದವು.

ಕನ್ನಡ ಕರಾವಳಿಯ ಯಕ್ಷಗಾನವು ಮಹಾರಾಷ್ಟ್ರದ ವೃತ್ತಿರಂಗಭೂಮಿಯ ಹುಟ್ಟಿಗೆ ಕಾರಣವಾಯಿತು. ಮರಾಠಿ ವೃತ್ತಿ ನಾಟಕರಂಗ ಕನ್ನಡಿಗರ ಮನರಂಜನಾ ಮಾಧ್ಯಮವಾಗಿ ವಿಸ್ತಾರಗೊಂಡು, ವಿಶೇಷವಾಗಿ ಕರ್ನಾಟಕದ ಉತ್ತರಾರ್ಧದಲ್ಲಿ ಎಲ್ಲಿ ನೋಡಿದಲ್ಲಿ ಮರಾಠಿ ನಾಟಕಗಳೇ ಎನ್ನುವಂತಾಯಿತು. ಇದು ಕನ್ನಡಿಗರ ನಾಡು-ನುಡಿಯ ಅಭಿಮಾನ ಜಾಗೃತಿಗೆ ಚಾಲನೆ ನೀಡಿತು. ಕನ್ನಡಾಭಿಮಾನ ಜಾಗೃತಿ ಅಭಿಯಾನಗಳು ನಡೆದದ್ದು ಕನ್ನಡ ವೃತ್ತಿ ನಾಟಕ ರಂಗಕ್ಕೆ ಪೋಷಕವಾಯಿತು. ಹಾಗೆಯೇ ಪಾಶ್ಚಾತ್ಯರ ಹೊಸತನ ನಮ್ಮ ರಂಗಭೂಮಿಯ ಬಾಹ್ಯ ಸ್ವರೂಪವನ್ನು ಗಣನೀಯವಾಗಿ ಮಾರ್ಪಡಿಸಿತಾದರೂ, ಅಂತರ್ಯದ ಪರಂಪರಾಗತ ಮಾನಸಿಕತೆ ಉಳಿದುಕೊಂಡದ್ದು ನಮ್ಮ ಸಾಂಸ್ಕೃತಿಕ ಅನುರೂಪತೆಯ ಮೇಲ್ಮೆಯಾಗಿದೆ.

## ಉತ್ತರ ಕರ್ನಾಟಕ ವೃತ್ತಿರಂಗಭೂಮಿಗೆ ಗದಗದಿಂದ ನಾಂದಿ

## -ಒಂದು ಕಿರುನೋಟ

ಭಾರತದಲ್ಲಿ ಪ್ರಾಚೀನಕಾಲದಿಂದಲೂ ಜನಪದರಂಗವು ಗ್ರಾಮೀಣ ನೆಲೆಗಳಲ್ಲಿ ಜನರಿಂದಲೇ ಜನರಿಗಾಗಿ ಬೆಳೆದು ಬಂದಿದೆ. ಕಲೋಪಾಸನೆ, ಸೌಂದರ್ಯೋಪಾಸನೆಯ ಅಭಿವ್ಯಕ್ತಿಯೊಂದಿಗೆ ಮನರಂಜನೆಯನ್ನರಸುವ ಸಾಂಘಿಕ ಸಾಧನವಾಗಿ ಅದು ಬೆಳೆದು ಬಂದಿತು. ಅರಸರ ಆಶ್ರಯದ ಆಸ್ಥಾನ ರಂಗಭೂಮಿ ನೃತ್ಯನಾಟಕಗಳನ್ನು, ಸಂಸ್ಕೃತ ನಾಟಕಗಳನ್ನು ಪ್ರದರ್ಶಿಸುತ್ತ ಬಂದಿತು. ಈ ಎರಡೂ ರಂಗ ಕವಲುಗಳಿಗೆ ಅವುಗಳದ್ದೇ ಆದ ಪೋಷಕ ವರ್ಗಗಳು ಸೃಷ್ಟಿಗೊಂಡವು. ಭಾರತದಲ್ಲಿ ಬ್ರಿಟಿಷ್‌ಸತ್ತೆಯ ಪರಿಣಾಮವಾಗಿ ಬಂಗಾಳದಲ್ಲಿ ಹದಿನೆಂಟನೆಯ ಶತಮಾನದ ಕೊನೆಯಲ್ಲಿ ಪಾಶ್ಚಾತ್ಯ ಮಾದರಿಯ ರಂಗಚಟುವಟಿಕೆಗಳು ಕಾಣಿಸಿಕೊಂಡವು. ನಗರಪ್ರದೇಶಗಳಲ್ಲಿ ವಿಶಿಷ್ಟ ಸೇವೆಗಳನ್ನೊದಗಿಸುವ ಮಧ್ಯಮ ವರ್ಗದ ಜನರ ಮನರಂಜನೆಯ ಸಾಧನವಾಗಿ ವೃತ್ತಿರಂಗಭೂಮಿ ರೂಪುಗೊಂಡಿತು. ಈ ಕಲೆ ಆರಂಭದಲ್ಲಿ ಜನಪದರಂಗ ಹಾಗೂ ಆಸ್ಥಾನ ರಂಗಭೂಮಿಗಳ ಜನಪ್ರಿಯ ಅಂಶಗಳನ್ನು ಮೈಗೂಡಿಸಿಕೊಂಡು ಬೆಳೆಯಿತಾದರೂ, ಅನಂತರದಲ್ಲಿ ಪ್ರೇಕ್ಷಕರ ಒಲವು-ಅಭಿರುಚಿಗಳನ್ನು ಆಧರಿಸಿಕೊಂಡು ಬೆಳೆಯಿತು.

೧೮೫೦ ರಿಂದ ೧೮೮೦ ರ ವರೆಗೆ ಕರ್ನಾಟಕದಲ್ಲಿ, ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಮರಾಠಿ ನಾಟಕಗಳು ವಿಜೃಂಭಿಸಿದವು. ಧಾರವಾಡ, ಹುಬ್ಬಳ್ಳಿ, ಗದಗ, ಬಿಜಾಪುರ ಪಟ್ಟಣಗಳಲ್ಲಿ ಮರಾಠಿ ನಾಟಕಗಳು ಜನರನ್ನು ಆಕರ್ಷಿಸಿದವು. ಈ ಬೆಳವಣಿಗೆ ಪ್ರಜ್ಞಾವಂತ ಕನ್ನಡಾಭಿಮಾನಿಗಳನ್ನು ದಿಗ್ಭ್ರಮೆಗೊಳಿಸಿತು. ಕನ್ನಡಿಗರಲ್ಲಿ ನಾಡು-ನುಡಿ ಬಗೆಗಿನ ಅಭಿಮಾನವನ್ನು ಜಾಗೃತಗೊಳಿಸಲು ಹಾಗೂ ನಾಡಿನ ಸಂಸ್ಕೃತಿಯ ಹಿರಿಮೆಯನ್ನು ತಿಳಿಸಿಕೊಡಲು ಶಾಂತಕವಿ (ಸಕ್ಕರಿ ಬಾಳಾಚಾರ್ಯರು) ೧೮೭೭ ರಲ್ಲಿ 'ಶ್ರೀ ವೀರನಾರಾಯಣ ಪ್ರಸಾದಿಕ ಕೃತಪುರ ನಾಟಕ ಮಂಡಳಿ'ಯನ್ನು ಸಂಘಟಿಸಿದರು. ರಾಮಾಯಣ-ಮಹಾಭಾರತ ಹಾಗೂ ಪುರಾಣ ಪ್ರಸಂಗಗಳನ್ನಾಧರಿಸಿ ಶಾಂತಕವಿ ರಚಿಸಿದ 'ಕೀಚಕವಧೆ', 'ಸುಧನ್ವವಧಾ', 'ಶ್ರೀಯಾಳ ಸತ್ವಪರೀಕ್ಷೆ', 'ಸುಂದೋಪಸುಂದವಧಾ', 'ಸೀತಾರಣ್ಯ ಪ್ರವೇಶ', 'ಶಕುಂತಲೋತ್ಪತ್ತಿ' ಹಾಗೂ ಶ್ರೀನಿವಾಸ ಕವಿ ರಚಿಸಿದ 'ದ್ರೌಪತಿವಸ್ತ್ರಾಪಹರಣ' ಮತ್ತು 'ಭಸ್ಮಾಸುರ ವಧೆ' ನಾಟಕಗಳು ಉತ್ತರ ಕರ್ನಾಟಕದ ಪ್ರಸಿದ್ಧ ಬಯಲಾಟಗಳಾಗಿದ್ದವು.

ಶಾಂತಕವಿಗಳ ನಾಟಕ ಮಂಡಳಿಯ ಪ್ರದರ್ಶನಗಳಲ್ಲಿ ಪಾತ್ರಪ್ರವೇಶ ಮತ್ತು ಪ್ರಸ್ತುತಿ ತಂತ್ರಗಳು ಜನಪದ ರಂಗದ ಥರವೇ ಇದ್ದವು. ಭಾಗವತರಾಟದ ಸೂತ್ರಧಾರ ಮತ್ತು ಸಂಸ್ಕೃತ ನಾಟಕಗಳ ವಿದೂಷಕ ಪ್ರತಿ ನಾಟಕದಲ್ಲಿ ಕಾಣಿಸಿಕೊಳ್ಳುತ್ತಿದ್ದರು. ಭಾಗವತನು ಪಾತ್ರಪರಿಚಯ, ಕಥಾಸನ್ನಿವೇಶದ ವಿವರಗಳನ್ನು ನೀಡುತ್ತ ನಾಟಕ ನಡೆಸುತ್ತಿದ್ದನು. ವಿಚಿತ್ರ ವೇಷಧರಿಸಿ ತಲೆಗೆ ಬೇವಿನ ಟೊಂಗೆಗಳನ್ನು ಕಟ್ಟಿಕೊಂಡ ಅಡ್ಡಸೋಗಿನ ವಿದೂಷಕ ಪ್ರೇಕ್ಷಕರನ್ನು ರಂಜಿಸುತ್ತಿದ್ದನು. ಬಯಲಾಟದಲ್ಲಿ ಬಳಸಲಾಗುತ್ತಿದ್ದ ಭಾರವಾದ ತಲೆಕಿರೀಟ, ಭುಜಕವಚಗಳಿಗೆ ಬದಲಾಗಿ ಹಗುರವಾದ, ಆಕರ್ಷಕವಾದ ಕಿರೀಟ, ಕವಚಗಳ ಬಳಕೆ ಮಾಡಲಾಯಿತು. ಇದರಿಂದ ಪಾತ್ರಧಾರಿಗಳಿಗೆ ಅಭಿನಯಕ್ಕೆ ತಕ್ಕಂತೆ ಅಂಗಾಂಗಳ ಮುಕ್ತ ಚಲನೆಗೆ ಅವಕಾಶವಾಯಿತು. ಹಾಗೆಯೇ ಆಕರ್ಷಕವಾದ ವೇಷಗಳನ್ನು ಧರಿಸುವ ಪರಿಪಾಠ ಬೆಳೆಯಿತು. ಸಂಗೀತ-ಸಂಭಾಷಣೆಗಳಲ್ಲಿ ಹೊಸತನವಿತ್ತು. ಪಾತ್ರಧಾರಿಗಳ ವೇಷಗಳು ಮುಂಭಾಗಕ್ಕೆ ಮಾತ್ರವೇ ಸೀಮಿತವಾಗಿದ್ದರಿಂದ, ಪ್ರೇಕ್ಷಕರಿಗೆ ಬೆನ್ನು ತೋರಿಸದಂತೆ ಎಚ್ಚರಿಕೆಯಿಂದ ಅಭಿನಯಿಸಬೇಕಾದ್ದು ಒಂದು ದೊಡ್ಡ ಅಡಚಣೆಯಾಗಿತ್ತು. ಪುರುಷರೇ ಸ್ತ್ರೀಪಾತ್ರಗಳನ್ನು ಮಾಡುತ್ತಿದ್ದುದರಿಂದ ಕೃತಕ ಹಾವಭಾವಗಳನ್ನು ಮಾಡುತ್ತ ವೈಯಾರವನ್ನು ಬೀಗುತ್ತ ಗಟ್ಟಿಧ್ವನಿಯಲ್ಲಿ ಮಾತಾಡುತ್ತಿದ್ದರು. ಪುರುಷರು ದೇವ-ದಾನವರ ಠೀವಿಯಲ್ಲಿ ನಡೆದಾಡುತ್ತ ಅಬ್ಬರಿಸಿ ಮಾತಾಡುತ್ತಿದ್ದರು.

೧೮೭೦-೧೯೦೦ ಅವಧಿಯ ವೃತ್ತಿರಂಗಭೂಮಿಯ ಆರಂಭಿಕ ಹಂತವು ಪ್ರಾಯೋಗಿಕ ಸ್ವರೂಪದ್ದಾಗಿತ್ತು. ನಾಟಕ ಮಂಡಳಿಗಳು ನಿಜವಾದ ಅರ್ಥದಲ್ಲಿ ವೃತ್ತಿರಂಗ ಸಂಸ್ಥೆಗಳಾಗಿರಲಿಲ್ಲ. ಆಗ ಇದ್ದ ರಂಗಮಂದಿರಗಳಲ್ಲಿಯೇ ನಾಟಕಗಳು ಪ್ರದರ್ಶಿತವಾಗುತ್ತಿದ್ದವು. ಆಗಿದ್ದ ಅಡಚಣೆ-ಕೊರತೆ-ಅನಾನುಕೂಲತೆಗಳನ್ನು ಅನುಸರಿಸಿಕೊಂಡೇ ನಾಟಕ ಪ್ರದರ್ಶನ ಮಾಡಬೇಕಿತ್ತು. ಹಣ ನೀಡಿ ಪ್ರವೇಶ ಪಡೆಯುವ ವ್ಯವಸ್ಥೆಯಿದ್ದುದೆ ಆ ಸಂಸ್ಥೆಗಳ ವೃತ್ತಿಪರತೆಯಾಗಿತ್ತು. ನಾಡಿನ ಸಾಂಸ್ಕೃತಿಕ ಪುನರುಜ್ಜೀವನದ ಉದ್ದೇಶದಿಂದಲೇ ಹುಟ್ಟಿಕೊಂಡ ಈ ಮಂಡಳಿಗಳಿಗೆ ಹಣಗಳಿಕೆಗಿಂತ ಕಲಾಸೇವೆಯೇ ಮುಖ್ಯವಾಗಿತ್ತು. ಅಂದಿನ ಸನ್ನಿವೇಶದಲ್ಲಿ ಭವ್ಯರಂಗಸಜ್ಜಿಕೆ ನಿರ್ಮಿಸಿ, ನಿತ್ಯಪ್ರದರ್ಶನಗಳನ್ನು ಏರ್ಪಡಿಸಲು ಸಾಧ್ಯವಾಗುತ್ತಿರಲಿಲ್ಲ.

ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲೂಕಿನ ಹಲಸಗಿಯ ಬ್ರಾಹ್ಮಣ ವಿದ್ಯಾರ್ಥಿವೃಂದದಿಂದ ಸಂಘಟಿತವಾಗಿದ್ದ 'ಹಲಸಗಿ ಸಂಗೀತ ನಾಟಕ ಮಂಡಳಿ'ಯು ೧೮೭೯ ರಲ್ಲಿಯೇ ಹುಟ್ಟಿಕೊಂಡಿತ್ತು ಎಂದು ಹೇಳಲಾಗಿದೆ.

ಶ್ರೀನಿವಾಸ ಎಂಬ ಹೆಸರಿನಿಂದ ನಾಟಕಗಳನ್ನು ಬರೆದುಕೊಡುತ್ತಿದ್ದ ವೆಂಕಣ್ಣಾಚಾರ್ಯ ಅಗಳಗಟ್ಟಿಯವರ ನಾಟಕಗಳು ಹಾಗೂ ಶಾಂತಕವಿಗಳ ಮಂಡಳಿಯ ನಾಟಕಗಳು ಮರಾಠಿ ಮಂಡಳಿಗಳ ಜೊತೆ ಸ್ಪರ್ಧಿಗಿಳಿದವು. ಶಾಂತಕವಿಗಳನ್ನು 'ಕರ್ನಾಟಕ ನಾಟಕ ಪ್ರಥಮ ಗುರು' ಎಂದು ಕರೆಯಲಾಗಿದೆ.

ಶಾಂತಕವಿಗಳ ಕಾಲದಲ್ಲಿ ಪ್ರಾಯೋಗಿಕ ಹಂತದಲ್ಲಿದ್ದ ವೃತ್ತಿರಂಗ ಕೊಣ್ಣೂರ ಶಿವಮೂರ್ತಿಸ್ವಾಮಿಗಳ ಕಾಲದಲ್ಲಿ ಪೂರ್ಣಪ್ರಮಾಣದ ವೃತ್ತಿರಂಗವಾಗಿ ಮಾರ್ಪಡಿಸಿತು. ಇವರ 'ಶ್ರೀ ಕಾಡಸಿದ್ಧೇಶ್ವರ ನಾಟಕ ಮಂಡಳಿ'ಯ ರಂಗಸಜ್ಜಿಕೆ ಕಣ್ಣುಗಳನ್ನು ಕೋರೈಸುವಂತಿತ್ತು. ಅತ್ಯಾಕರ್ಷಕ ಭವ್ಯ ರಂಗಸಜ್ಜಿಕೆ, ಹೊಸ ರಂಗತಂತ್ರಗಳು, ನಾಟಕ-ನಟರ ಸೂಕ್ತ ಆಯ್ಕೆ, ವ್ಯವಸ್ಥಿತ ರಂಗಸಿದ್ಧತೆ, ತಾಲೀಮು, ಪ್ರಚಾರದಿಂದಾಗಿ ಇದೊಂದು ನಾಟಕ ಕಂಪನಿ ಎನ್ನುವಂತಾಯಿತು. ಅಲಂಕೃತ ವರ್ಣ ದೃಶ್ಯಗಳು, ಝುಗಝುಗಿಸುವ ವಿದ್ಯುದ್ದೀಪಗಳು, ದಿಢೀರನೆ ದೃಶ್ಯಪರದೆಗಳನ್ನು ಬದಲಿಸುವ ತಂತ್ರಗಾರಿಕೆ ಹಾಗೂ ನಾಟಕದಲ್ಲಿ ಸ್ತ್ರೀ ಪಾತ್ರಧಾರಿಗಳು ನಾಟಕದ ಆಕರ್ಷಣೆಯನ್ನು ಹೆಚ್ಚಿಸಿದ್ದು ವಿಶಿಷ್ಟ ಅಂಶಗಳಾಗಿದ್ದವು. 'ಶನಿಪ್ರಭಾವ' ನಾಟಕ ಈ ಮಂಡಳಿಯ ಅದ್ದೂರಿ ಪ್ರದರ್ಶನವಾಗಿತ್ತು. "ಪ್ರಪಥಮ ಬಾರಿಗೆ ಟ್ರಾನ್ಸಫರ್ ಸೀನುಗಳನ್ನು ಅಳವಡಿಸಿದ್ದ ಕಂಪನಿ ಇದು.......... ಟ್ರಾನ್ಸಫರ್ ಸೀನುಗಳ ನೆರವಿನಿಂದ ಕ್ಷಣಾರ್ಧದಲ್ಲಿ ವಿಜೃಂಭಣೆಯ ಆಸ್ಥಾನದ ದೃಶ್ಯವನ್ನು ದಟ್ಟವಾದ ಗೊಂಡಾರಣ್ಯಕ್ಕೆ ಪರಿವರ್ತಿಸಲು ಸಾಧ್ಯವಾಗಿ ಪ್ರೇಕ್ಷಕರ ಕಣ್ಣಿಗೆ ಮಾಯೆ ಕಟ್ಟಿದಂತಾಗುತ್ತಿತ್ತು. ರಾಜಾ ವಿಕ್ರಮನನ್ನು ಒಮ್ಮೆಲೆ ದೂರದ ಗೊಂಡಾರಣ್ಯಕ್ಕೆ ತಂದ ಮಾಯಾಕುದುರೆಯ ಪವಾಡವನ್ನು ಕಣ್ಣಿಗೆ ಕಟ್ಟುವಂತೆ ಸಾಧಿಸಿ ತೋರಿದ, ಕ್ಷಣಕಾಲ ರಂಗದ ದೀಪ ಆರಿ ಹತ್ತುವುದರೊಳಗಾಗಿ ಆಗಿ ಹೋದ ದೃಶ್ಯ ಜೋಡಣೆಯಿಂದ ಜನ ತಮ್ಮ ಕಣ್ಣನ್ನು ತಾವೇ ನಂಬದಂತೆ ಮಾಡುತ್ತಿದ್ದರು." * ಹೊಸ ತಂತ್ರಗಳ ಅಳವಡಿಕೆಯೊಂದಿಗೆ ನಾಟಕ ಮಂಡಳಿಗಳು ಹಾಡುಗಾರರಿಗೆ - ನಟರಿಗೆ ವಿಶೇಷ ತರಬೇತಿ ನೀಡುವ ವ್ಯವಸ್ಥೆಯನ್ನು ಮಾಡಿದವು. ಇಂತಹ ಎಲ್ಲ ಸುಧಾರಣೆಗಳಿಂದ ಕನ್ನಡ ನಾಟಕಗಳು ಮರಾಠಿ ನಾಟಕಗಳ ಪ್ರಭಾವವನ್ನು ತಗ್ಗಿಸಿದವು.

ಶಿರಹಟ್ಟಿ ವೆಂಕೋಬರಾಯರ 'ಶ್ರೀ ಮಹಾಲಕ್ಷ್ಮೀ ಪ್ರಾಸಾದಿಕ ಸಂಗೀತ ನಾಟಕ ಮಂಡಳಿ' ೧೯೦೩ ರಲ್ಲಿ ನಾಟಕಗಳನ್ನು ಪ್ರದರ್ಶಿಸಲು ಆರಂಭಿಸಿತು. ಸನ್ನಿವೇಶಗಳಿಗೆ ಸೂಕ್ತ ಹಿನ್ನೆಲೆ ಒದಗಿಸುವ ದೃಶ್ಯ ಪರದೆಗಳು, ಇಂಪಾದ ಸಂಗೀತ, ಪಾತ್ರಕ್ಕೆ ತಕ್ಕ ವೇಷಭೂಷಣಗಳು ಈ ನಾಟಕ ಮಂಡಳಿಯ ವಿಶೇಷಗಳಾಗಿದ್ದವು.

---

* ಡಾ. ರಾಮಕೃಷ್ಣ ಮರಾಠೆ, ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿ ಪುಟ ೬೨.

ರಾಜಾ ಪಾತ್ರದ ಗೋವಿಂದಾಚಾರ್ಯ, ಸ್ತ್ರೀ ಪಾತ್ರ ಖ್ಯಾತಿಯ ವರವಿ ಚೆನ್ನಯ್ಯ, ಹಾಸ್ಯಚಕ್ರವರ್ತಿ ಶಿವಾಜಿ ಸಾಳುಂಕೆ, ಗಾಯಕ ನಟ ವಾಮನರಾವ್ ಮಾಸ್ತರ, ಕಲಿಯುಗದ ಆಂಜನೇಯ ಬೆಳ್ಳೂರ ನಂಜುಂಡಯ್ಯ ಇವರೆಲ್ಲರ ಹಾಡು-ಅಭಿನಯ ಚಾತುರ್ಯದಿಂದ ಶಿರಹಟ್ಟಿ ಮಂಡಳಿಯ ನಾಟಕಗಳು ಕರ್ನಾಟಕದಾದ್ಯಂತ ಜನಪ್ರಿಯವಾದವು. ಈ ಮಂಡಳಿಯ ನಾಟಕಗಳು ಪೌರಾಣಿಕ, ಐತಿಹಾಸಿಕ ಕಥಾವಸ್ತುವನ್ನೊಳಗೊಂಡಿದ್ದರೂ ಸಮಕಾಲೀನ ಸಮಸ್ಯೆಗಳತ್ತ ಪ್ರೇಕ್ಷಕರನ್ನು ಉದ್ದೇಶಿಸಿದಂತೆ ಸಂದೇಶಿಸುತ್ತಿದ್ದವು. ಕೊಣ್ಣೂರ ಮಂಡಳಿಯು ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರದ ಕೆಲವು ಪ್ರದೇಶಗಳಲ್ಲಿ ಮಾತ್ರ ಸಂಚರಿಸಿದರೆ ಶಿರಹಟ್ಟಿ ಮಂಡಳಿಯು ಕರ್ನಾಟಕದಾದ್ಯಂತ ಸಂಚರಿಸಿತು. ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರದ ಕೆಲವೆಡೆಗಳಲ್ಲೂ ನಾಟಕಗಳನ್ನಾಡಿ ಅನ್ಯಭಾಷಿಕರಲ್ಲಿ ಕನ್ನಡ ನಾಟಕಗಳ ಬಗೆಗೆ ಗೌರವಾದರಗಳು ಮೂಡುವಂತೆ ಮಾಡಿತು.

ವೆಂಕೋಬರಾಯರ ನಾಟಕಗಳನ್ನು ಸಾಂಗ್ಲಿ ಮಹಾರಾಜರು, ಬಾಲಗಂಗಾಧರ ಟಿಳಕರು, ಜವಾಹರಲಾಲ ನೆಹರೂ ಸೇರಿದಂತೆ ಹಲವಾರು ಗಣ್ಯರು ನೋಡಿ ಮೆಚ್ಚಿಕೊಂಡಿದ್ದರು. ವೆಂಕೋಬರಾಯರು ಹಾಗೂ ಶಿವಮೂರ್ತಿಸ್ವಾಮಿಗಳು ಅರ್ಜಿಸಿದ್ದ ಯಶಸ್ಸು ಉತ್ಸಾಹಿ ತರುಣರನ್ನು ನಾಟಕರಂಗದತ್ತ ಆಕರ್ಷಿಸಿತು. ಸ್ತ್ರೀಯರು ಪಾತ್ರವಹಿಸಲು ಮುಂದಾದರು. ನಾಟಕವೃತ್ತಿ ಲಾಭದಾಯಕವೂ, ಮಾನದಾಯಕವೂ ಎಂದೆನಿಸಿದ್ದರಿಂದ ಉತ್ಸಾಹಿ ಜನರು ರಂಗಕಲೆಯನ್ನು ವೃತ್ತಿಯಾಗಿಸಿಕೊಳ್ಳುವಲ್ಲಿ ಒಲವು ತೋರತೊಡಗಿದರು. ಹಾಗಾಗಿ ೧೯೦೫ರ ನಂತರ ನಾಟಕ ಮಂಡಳಿಗಳ ಸಂಖ್ಯೆ ಹೆಚ್ಚುತ್ತ ಹೋಯಿತು.

೧೯೧೧ ರಲ್ಲಿ ಅಸ್ತಿತ್ವಕ್ಕೆ ಬಂದ ಹಲಗೇರಿಯ 'ಶ್ರೀ ಹಾಲಸಿದ್ಧೇಶ್ವರ ನಾಟಕ ಮಂಡಳಿ' ಹಾಸ್ಯವನ್ನು ಪ್ರಮುಖ ಆಕರ್ಷಣೆಯನ್ನಾಗಿಸಿತು. ಚಿಕ್ಕ ಜಟ್ಟೆಪ್ಪನವರ ಹಾಸ್ಯ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸುತ್ತಿತ್ತು. ಮಧುರ ಹಾಡುಗಾರಿಕೆ ಮನಸ್ಸನ್ನು ರಂಜಿಸುತ್ತಿತ್ತು. "ಕಲಾವಿದರಿಂದ, ರಂಗಕಲಾಭಿಮಾನಿಗಳಿಂದ ಶೇರು ಸಂಗ್ರಹಿಸುವುದರ ಮೂಲಕ ಸಾರ್ವಜನಿಕ ರಂಗಸಂಸ್ಥೆಯಂತೆ ರೂಪಗೊಂಡಿದ್ದುದು ಈ ಮಂಡಳಿಯ ವಿಶೇಷತೆ" (ಡಾ. ರಾಮಕೃಷ್ಣ ಮರಾಠೆ).

ಶಿರಹಟ್ಟಿ ವೆಂಕೋಬರಾಯರ ನಾಟಕ ಮಂಡಳಿಯಲ್ಲಿ ಗಾಯಕ ನಟರಾಗಿದ್ದ ವಾಮನರಾಯರು ೧೯೧೪ ರಲ್ಲಿ 'ವಿಶ್ವಗುಣಾದರ್ಶಕ ನಾಟಕ ಮಂಡಳಿ'ಯನ್ನು ಕಟ್ಟಿ 'ಕವಿರತ್ನ ಕಾಳಿದಾಸ' ನಾಟಕದೊಂದಿಗೆ ರಂಗಸೇವೆಗೆ ತೊಡಗಿದರು. ಈ ಮಂಡಳಿಯ ನಾಟಕಗಳು ಶಾಸ್ತ್ರಶುದ್ಧ ಸಂಗೀತದಿಂದ ರಂಗಮಂದಿರದ

ಆಕರ್ಷಣೆಯನ್ನು ಹೆಚ್ಚಿಸಿದವು. ಕಂದ, ಸೀಸ ಪದ್ಯಗಳನ್ನು ಆಲಿಸಲು ಪ್ರೇಕ್ಷಕರು ಕಿಕ್ಕಿರಿದು ನೆರೆಯುತ್ತಿದ್ದರು.

"ಕೊಣ್ಣೂರ ಕಂಪನಿ ವೈಭವಪೂರ್ಣ ರಂಗಸಜ್ಜಿಕೆಗಳಿಗೆ, ನೂತನ ಪ್ರಯೋಗಗಳಿಗೆ ಹೆಸರಾದರೆ ಶಿರಹಟ್ಟಿ ಕಂಪನಿಯು ಅದ್ಭುತ ರಂಗಸೃಷ್ಟಿಯಿಂದ ಕೀರ್ತಿ ಪಡೆಯಿತು. ಪ್ರೇಕ್ಷಕರನ್ನು ನಗಿಸುವ ಕಲೆಯಿಂದ ಹಲಗೇರಿ ಕಂಪನಿ ಹೆಸರು ಪಡೆದರೆ, ರಂಗಸಂಗೀತಕ್ಕಾಗಿ ವಿಶ್ವಗುಣಾದರ್ಶ ನಾಟಕ ಮಂಡಳಿ ಪ್ರಸಿದ್ಧಿ ಪಡೆಯಿತು. ಇದರಿಂದ ಉತ್ತರ ಕರ್ನಾಟಕ ವೃತ್ತಿರಂಗಭೂಮಿ ಪರಂಪರೆಯು ವೈಭವದೊಂದಿಗೆ ವೈವಿಧ್ಯತೆಯನ್ನೂ ಮೇಳವಿಸಿಕೊಂಡಂತಾಯಿತು".*

"ಅಂದು ಪೌರಾಣಿಕ ನಾಟಕಗಳೇ ಹೆಚ್ಚು ಪ್ರದರ್ಶನಗೊಳ್ಳುತ್ತಿದ್ದುದರಿಂದ ಅವುಗಳಲ್ಲಿಯ ಕಲ್ಪನಾರಮ್ಯ ಸನ್ನಿವೇಶಗಳನ್ನು ಅತಿರಂಜಿತವಾಗಿ ಪ್ರದರ್ಶಿಸಲು ಸಾಕಷ್ಟು ಅವಕಾಶವಿತ್ತು. ಹೀಗಾಗಿ ನಾಟಕದ ಅವಾಸ್ತವ ಘಟನೆಗಳನ್ನು ವಾಸ್ತವೀಕರಿಸಿ, ರಂಗದ ಮೇಲೆ ಅದ್ಭುತ ಜಗತ್ತನ್ನು ಸೃಷ್ಟಿಸಲು ಅಂದಿನ ಕಂಪನಿಗಳು ಧಾರಾಳವಾಗಿ ಹಣ ಖರ್ಚು ಮಾಡಿ ಪ್ರೇಕ್ಷಕರನ್ನು ಆಕರ್ಷಿಸಲು ಮುಂದಾದವು. ಶಿವಮೂರ್ತಿ ಸ್ವಾಮಿಗಳು ಟ್ರಾನ್ಸಫರ್ ಸೀನ್, ಡೈನಾಮೊ ವಿದ್ಯುತ್ ಬೆಳಕನ್ನು ಅಳವಡಿಸಿದ್ದು, ವೆಂಕೋಬರಾಯರು 'ದಶಾವತಾರ' ನಾಟಕಕ್ಕೆ ಆರು ಸಾವಿರ ರೂಪಾಯಿ ವೆಚ್ಚದಲ್ಲಿ ನಯನಮನೋಹರ ದೃಶ್ಯಗಳನ್ನು ಸಿದ್ಧಪಡಿಸಿದ್ದು ಇಲ್ಲಿ ನೆನೆಯಬೇಕು". *

" 'ರಾಜಾ ವಿಕ್ರಮ'ದಲ್ಲಿ ಅರಳುತ್ತಿರುವ ಕಮಲದೊಳಗಿಂದ ಮೇಲೇಳುವ ನರ್ತಕಿಯರು, 'ಹೇಮರೆಡ್ಡಿ ಮಲ್ಲಮ್ಮ'ದಲ್ಲಿ ಲಿಂಗ ಮಧ್ಯದೊಳಗಿಂದ ಪ್ರತ್ಯಕ್ಷನಾಗುವ ಮಲ್ಲಿಕಾರ್ಜುನ, 'ಮೃಚ್ಛಕಟಿಕ'ದಲ್ಲಿ ವಾಸ್ತವದ ಮಳೆಯಲ್ಲಿಯೆ ಚಾರುದತ್ತ ವಸಂತಸೇನೆಯರ ಪ್ರಥಮ ಸಮಾಗಮ, 'ಅಭಿಮನ್ಯು' ನಾಟಕದಲ್ಲಿ ಅಭಿಮನ್ಯುವಿನ ವಧೆಯ ನಂತರ ಅರ್ಜುನ ಕತ್ತರಿಸಿದ ಜಯದ್ರಥನ ರುಂಡ ಪ್ರೇಕ್ಷಕರಿಗೆ ಕಾಣುವಂತೆಯೆ ಅವನ ತಂದೆಯ ಕೈಯಲ್ಲಿ ಹೋಗಿಬೀಳುವುದು, ಕುರುಕ್ಷೇತ್ರದಲ್ಲಿ ಜೀವಂತ ಕುದುರೆಗಳನ್ನು ಹೂಡಿದ ರಥದಲ್ಲಿ ಕರ್ಣಾರ್ಜುನರ ಯುದ್ಧ ನಡೆಯುವುದು, 'ರಾಮಾಯಣ'ದಲ್ಲಿ ಹನುಮಂತನ ಸಮುದ್ರಲಂಘನ, ಲಂಕಾದಹನ, 'ದಶಾವತಾರ'ದಲ್ಲಿ ವೈಕುಂಠದ ಸುವರ್ಣರಂಜಿತ ಮಹಾದ್ವಾರ, ಕಾಳಿಂಗಮರ್ಧನ, ಹೀಗೆ ಆಕರ್ಷಕವೂ, ಭಾವಪ್ರಚೋದಕವೂ ಆದ ಹಲವಾರು ದೃಶ್ಯಗಳಿಂದ ರಂಗಮಂದಿರ ಹೊಸ ಚೈತನ್ಯ ತುಂಬಿಕೊಂಡು ಸಂಭ್ರಮಿಸಿತು." *

*** ಡಾ. ರಾಮಕೃಷ್ಣ ಮರಾಠೆ, ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿ ಪುಟ ೨೦-೨೧.

ಪೌರಾಣಿಕ ನಾಟಕಗಳಲ್ಲಿ ಪ್ರೇಕ್ಷಕರನ್ನು ರಂಜಿಸಲು ಸಂಗೀತ ಸಮರ್ಥ ಹಾಗೂ ಶಕ್ತಿಶಾಲಿ ಸಾಧನವಾಗಿತ್ತು. ನಾಟಕಗಳಿಗೆ ಸಂಗೀತ ನಿರ್ದೇಶಿಸಲು ಹಾಗೂ ಕಲಾವಿದರಿಗೆ ಸಂಗೀತ ಕಲಿಸಲು ಶಿವಮೂರ್ತಿಸ್ವಾಮಿಗಳು ಸಾತಾರದಿಂದ ಶ್ರೇಷ್ಠ ಸಂಗೀತ ವಿದ್ವಾನ ಗಣುಬುವಾ ಅವರನ್ನು ಕರೆತಂದರು. ವೆಂಕೋಬರಾಯರು ಇಚಲಕರಂಜಿ ಬಾಳಕೃಷ್ಣ ಬುವಾ, ವಾಸುದೇವ ಹನುಮಸಾಗರ, ಗುರುರಾವ ದೇಶಪಾಂಡೆ ಮುಂತಾದ ಸಂಗೀತಗಾರರನ್ನು ತಮ್ಮ ಮಂಡಳಿಯಲ್ಲಿರಿಸಿಕೊಂಡು ಕಲಾವಿದರಿಗೆ ಸಂಗೀತ ತರಬೇತಿಯ ವ್ಯವಸ್ಥೆ ಮಾಡಿದರು. ಸಂಗೀತ ಶಿಕ್ಷಣದ ಇಂತಹ ವ್ಯವಸ್ಥೆ ರಂಗಭೂಮಿಯ ಬೆಳವಣಿಗೆಗೆ ವರದಾನವಾಯಿತು.

ನಾಟಕಗಳಲ್ಲಿ ಸಂಗೀತವೇ ಪ್ರಧಾನವಾಗಿ ೧೯೩೦ರ ವರೆಗೂ ರಂಗವನ್ನು ಆಕ್ರಮಿಸಿಕೊಂಡಿತು. ಗರುಡ ಸದಾಶಿವರಾಯರು, ಹಂದಿಗನೂರು ಸಿದ್ಧರಾಮಪ್ಪ ಗದ್ಯಾಭಿನಯ ನಟರು. ಇವರು ಸಾಮಾಜಿಕ ವಿಷಯಾಧಾರಿತ ನಾಟಕಗಳನ್ನು ಆಡತೊಡಗಿದ ನಂತರ ಪ್ರೇಕ್ಷಕರ ಅಭಿರುಚಿಗಳಲ್ಲಿ ಮಾರ್ಪಾಡು ಕಂಡುಬರಲಾರಂಭಿಸಿತು. ಅಭಿನಯಕ್ಕೇ ವಿಶೇಷ ಆದ್ಯತೆ ನೀಡಿದ ಈ ನಟರಿಂದ ನಾಟಕಗಳಲ್ಲಿಯ ಸಂಗೀತದ ಅಬ್ಬರ ತಗ್ಗಿತು. ಆದ್ದೂರಿಯ ರಂಗಸಜ್ಜಿಕೆಗಳೇ ನಾಟಕ ಎನ್ನುವ ಪರಿಕಲ್ಪನೆ ಮಸಕಾಗಿ, ಅಭಿನಯವೇ ನಾಟಕದ ಜೀವಾಳ ಎಂಬುದು ಮನದಟ್ಟಾಗತೊಡಗಿತು. ಗರುಡ ಸದಾಶಿವರಾಯರು, ವಾಮನರಾಯರ ಪ್ರಯೋಗಶೀಲತೆಯಿಂದಾಗಿ ಅಭಿನಯಕ್ಕೆ ಆದ್ಯತೆ ಲಭಿಸಿತು. ಹೀಗೆ, ರಂಗಭೂಮಿಯಲ್ಲಿ ಹೊಸ ಅಧ್ಯಾಯವೊಂದು ತೆರೆದುಕೊಂಡಿತು. ರಂಗಸಜ್ಜಿಕೆಗಳ ಹೊರನೋಟದ ಆಕರ್ಷಣೆಯೊಂದಿಗೆ ಶುದ್ಧ, ಹಿತಮಿತವಾದ ಸಂಗೀತ, ಭಾವಾಭಿನಯಕ್ಕೆ ಪ್ರಾಶಸ್ತ್ಯ ಸಿಕ್ಕಿತು.

ಕೊಣ್ಣೂರ ಮತ್ತು ಶಿರಹಟ್ಟಿ ಮಂಡಳಿಗಳ ಪರಿಶ್ರಮ-ಪ್ರಯತ್ನಗಳಿಂದ ಮರಾಠಿ ನಾಟಕ ಮಂಡಳಿಗಳ ಪ್ರಭಾವ ತಗ್ಗಲಾರಂಭಿಸಿತು. ಕನ್ನಡಿಗರಲ್ಲಿ ನಾಡುನುಡಿಯ ಬಗೆಗೆ ಅಭಿಮಾನ ಜಾಗೃತವಾಯಿತು. ರಂಗಕಲೆಯನ್ನು ಗಂಭೀರವಾಗಿ ಪರಿಗಣಿಸಬೇಕು, ಕಲಾವಿದರು ಪರಿಶುದ್ಧತೆಯನ್ನು ಕಾಯ್ದುಕೊಂಡು ಹೋಗಬೇಕು, ಕಲೆ ಕೇವಲ ಜೀವನೋಪಾಯದ ಮಾರ್ಗವಾಗಬಾರದು ಎಂಬುದನ್ನು ವಾಮನರಾಯರು ತಮ್ಮ ಮಂಡಳಿಯ ಮೂಲಕ ಸಾಧಿಸಿ ತೋರಿದರು.

ನಾಟಕ ಮಂಡಳಿಗಳು ಸಾರ್ವಜನಿಕ ಸೇವಾ ಕಾರ್ಯಗಳಿಗೆ ಸಹಾಯಾರ್ಥವಾಗಿ ಕೆಲವು ಪ್ರದರ್ಶನಗಳನ್ನು ಮೀಸಲಿಟ್ಟವು. ರಂಗಭೂಮಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು. ನಾಡಿನ ಹಲವೆಡೆಗಳಲ್ಲಿ ಹೊಸ ನಾಟ್ಯಸಂಘಗಳು ಹುಟ್ಟಿಕೊಂಡವು. ಕೊಣ್ಣೂರ ಮತ್ತು ಶಿರಹಟ್ಟಿ ಕಂಪನಿಗಳು

ವೈಭವಾಲಂಕಾರಗಳಿಗೆ ಮಹತ್ವ ನೀಡಿದರೆ, ವಾಮನರಾಯರ ಮಂಡಳಿ ಶುದ್ಧ ಸಂಗೀತಕ್ಕೆ ಆದ್ಯತೆ ನೀಡಿತು. ಹಾಗಾಗಿ ರಂಗದ ಮೇಲೆ ಸಾಹಿತ್ಯ, ಸಂಗೀತ, ಸಂಭಾಷಣೆ ಮತ್ತು ಅಭಿನಯಗಳ ಮಧ್ಯೆ ಸಮನ್ವಯ ಮೂಡಿಬಂದಿತು.

ಬಂಗಾಳ ವಿಭಜನೆಯ ನಂತರದ ಜನಜಾಗೃತಿ ಆಂದೋಲನಗಳು ರಂಗಭೂಮಿಯಲ್ಲೂ ಪ್ರತಿಧ್ವನಿಸಿದವು. ಮರಾಠಿ ಮಂಡಳಿಗಳು ಐತಿಹಾಸಿಕ, ರಾಜಕೀಯ ವಿಷಯಾಧಾರಿತ ನಾಟಕಗಳನ್ನು ಪ್ರದರ್ಶಿಸಲಾರಂಭಿಸಿದ್ದವು. ಉತ್ತರ ಕರ್ನಾಟಕವು ಆಗಿನ್ನೂ ಪೌರಾಣಿಕ ನಾಟಕಗಳ ಪ್ರದರ್ಶನದಲ್ಲೇ ತೊಡಗಿತ್ತು.

೧೯೧೯ರಲ್ಲಿ ಗದುಗಿನಲ್ಲಿ ಗರುಡ ಸದಾಶಿವರಾಯರು 'ಶ್ರೀ ದತ್ತಾತ್ರೇಯ **ಸಂಗೀತ ನಾಟಕ ಮಂಡಳಿ**'ಯನ್ನು ಆರಂಭಿಸಿದರು. ನಟರಾಗಿ, ನಾಟಕಕಾರರಾಗಿ, ಅಭಿನಯ ಶಿಕ್ಷಕರಾಗಿ ಹಲವು ಕಂಪನಿಗಳಲ್ಲಿ ಸೇವೆ ಮಾಡಿದ್ದ ಗರುಡರಿಗೆ ರಂಗಭೂಮಿ ಕುರಿತಂತೆ ಸ್ಪಷ್ಟ ಸೈದ್ಧಾಂತಿಕ ಕಲ್ಪನೆಯಿತ್ತು. ಅದರ ಧ್ಯೇಯಗಳ ಬಗೆಗೆ ಸ್ಪಷ್ಟ ಅರಿವು ಇತ್ತು. ತಾವು ನಂಬಿದ ಆದರ್ಶಗಳಿಗೆ ಬದ್ಧತೆಯಿತ್ತು. ಕನ್ನಡ ವೃತ್ತಿರಂಗಭೂಮಿಯಲ್ಲಿ ಅಭಿನಯಕ್ಕೆ ಆದ್ಯತೆ-ಅವಕಾಶಗಳಿಲ್ಲದಿರುವುದನ್ನು ಅವರು ಗಮನಿಸಿದ್ದರು. ರಂಗಭೂಮಿ ಸಮಕಾಲೀನ ಸಮಾಜಕ್ಕೆ ನೀಡಬೇಕಾದ ಬೋಧನೆ, ಶಿಕ್ಷಣದ ಅಗತ್ಯವನ್ನು ಅವರು ಮನಗಂಡಿದ್ದರು. ದೇಶಾಭಿಮಾನದ ಜಾಗೃತಿ ಅಭಿಯಾನ ನಡೆದಿದ್ದ ಆ ಸಮಯದಲ್ಲಿ ನಾಟಕದ ಮೂಲಕ ಪರಿಣಾಮಕಾರಿ ಸಂದೇಶ ನೀಡಲು 'ಎಚ್ಚೆಮ ನಾಯಕ' ನಾಟಕ ಪ್ರದರ್ಶಿಸಿದರು. ಹಿಂದೂ-ಮುಸ್ಲಿಂ ಭಾವೈಕ್ಯತೆ ಸಾಧಿಸಲು 'ಕಬೀರದಾಸ' ನಾಟಕ ಆಡಿದರು. 'ವಿಷಮ ವಿವಾಹ' ನಾಟಕದ ಮೂಲಕ ಕೌಟುಂಬಿಕ ಸ್ವಾಸ್ಥ್ಯದ ಅಗತ್ಯವನ್ನು ಪ್ರತಿಪಾದಿಸಿದರು. 'ಪಾದುಕಾ ಪಟ್ಟಾಭಿಷೇಕ', 'ಕಂಸವಧೆ' ಮೊದಲಾದ ಪೌರಾಣಿಕ ನಾಟಕಗಳನ್ನಾಡಿದರು. ರಂಗಸಜ್ಜಿಕೆ, ವೇಷಭೂಷಣಗಳ ಆಕರ್ಷಣೆಗಳೊಂದಿಗೆ, ಸಂಗೀತ, ನೃತ್ಯಗಳ ರಸದೂಟವನ್ನು ನೀಡಿದರು. ಅದ್ಭುತ ಅಭಿನಯದಿಂದ ಪ್ರೇಕ್ಷಕರ ಭಾವನೆಗಳನ್ನು ಗಾಢವಾಗಿ ತಟ್ಟಿದರು. ಕರುಣೆ, ಶೌರ್ಯ, ವೀರಾವೇಶ, ಭಕ್ತಿ ರಸಗಳನ್ನು ಸಮೃದ್ಧವಾಗಿ ಪ್ರಕಟಿಸಿದ ಅವರ ಪಾತ್ರಾಭಿನಯಗಳು ಪ್ರೇಕ್ಷಕರನ್ನು ತಣಿಸಿದವು. ಅಮೋಘವಾದ ತಮ್ಮ ಅಭಿನಯ ಕಲೆಯಿಂದ ನಟಸಾರ್ವಭೌಮರಾದರು.

ನಾಟಕ ರಚನೆಯಲ್ಲೂ ಗರುಡರು ಧೀಮಂತ ಸಾಧನೆ ಮಾಡಿದರು. ಪಾದುಕಾ ಪಟ್ಟಾಭಿಷೇಕ, ಶರಣಬಸವ, ಎಚ್ಚೆಮ ನಾಯಕ, ಸತ್ಯಸಂಕಲ್ಪ ರಂಗನಾಟಕಗಳು ಸನ್ನಿವೇಶ ರಚನೆ, ಸಂಭಾಷಣೆ ಮತ್ತು ಸಾಹಿತ್ಯಿಕ ಪ್ರೌಢಿಮೆಯಿಂದ ಉತ್ತಮ ಕೃತಿಗಳಾಗಿವೆ. ಈ ನಾಟಕಗಳು ಹಲವು

ಪ್ರಯೋಗಗಳನ್ನು ಕಂಡು ಯಶಸ್ವಿ ನಾಟಕಗಳೆನಿಸಿದವು. ಅಭಿನಯವೇ ನಾಟಕದ ಜೀವಾಳ ಎಂಬುದನ್ನು ಗರುಡರು ಮನಗಾಣಿಸಿದರು.

ರಾಷ್ಟ್ರದ ಸ್ವಾತಂತ್ರ್ಯ ಆಂದೋಲನದಲ್ಲಿ ಗರುಡರು ಸಕ್ರಿಯವಾಗಿ ಪಾಲುಗೊಂಡರು. ಖಾದಿಯನ್ನು ಜೀವನದುದ್ದಕ್ಕೂ ಧರಿಸಿದರು. ಶಿಷ್ಟ-ಪರಿಶುದ್ಧ ಜೀವನಕ್ರಮವನ್ನು ಅನುಸರಿಸಿದರು. ನಾಡಿನ, ರಾಷ್ಟ್ರದ ಹಾಗೂ ರಂಗದ ಮುನ್ನಡೆ ಕುರಿತು ಚಿಂತಿಸಿದರು. ಅಭಿನಯಕ್ಕೆ ಆದ್ಯತೆ ಲಭಿಸಿದ್ದು ರಂಗಭೂಮಿಯ ಪ್ರಗತಿಪರ ಬೆಳವಣಿಗೆಯನ್ನು ಸಂಕೇತಿಸಿತು.

ಸ್ವಾತಂತ್ರ್ಯ ಹೋರಾಟದ ಸನ್ನಿವೇಶದಲ್ಲಿ ವೃತ್ತಿರಂಗಭೂಮಿ ಹಲವು ಕಷ್ಟನಷ್ಟಗಳನ್ನು ಅನುಭವಿಸಿತು. ಬ್ರಿಟಿಷ್ ಸರಕಾರವನ್ನು ಟೀಕಿಸುವ, ಪ್ರತಿಭಟಿಸುವ ನಾಟಕ ಮಂಡಳಿಗಳನ್ನು ಅಧಿಕಾರಿಗಳು ಬಗೆಬಗೆಯಾಗಿ ಪೀಡಿಸಿದರು. ಚಿಕ್ಕೋಡಿ ಶಿವಲಿಂಗಶಾಸ್ತ್ರಿಗಳ 'ಕಿತ್ತೂರ ಚೆನ್ನಮ್ಮ', 'ರಾಷ್ಟ್ರಧ್ವಜ', ವಿಜಾಪುರ ಮಾಸ್ತರರ 'ಸಂಗೊಳ್ಳಿ ರಾಯಣ್ಣ', ವಾಮನರಾಯರ 'ವೀರಅಭಿಮನ್ಯು', ಗರುಡರ 'ಕೀಚಕ ವಧೆ', 'ಸತ್ಯಸಂಕಲ್ಪ', ಅಚ್ಯುತರಾವ ಹುಯಿಲಗೋಳರ 'ನರಗುಂದ ಬಂಡಾಯ', ನೀಲಕಂಠ ಮಾಸ್ತರರ 'ರಾಜದ್ರೋಹ' ನಾಟಕಗಳು ಜನರಲ್ಲಿ ಸ್ವಾತಂತ್ರ್ಯದ ಹಂಬಲು-ಕೆಚ್ಚನ್ನು ತುಂಬಿದವು. ಶಿವಲಿಂಗಶಾಸ್ತ್ರಿಗಳ 'ಕಿತ್ತೂರ ಚೆನ್ನಮ್ಮ' ನಾಟಕವನ್ನು ಪ್ರದರ್ಶಿಸುತ್ತಿದ್ದ ಅಬ್ಬಿಗೇರಿಯ ಕನ್ನಡ ಸಾಹಿತ್ಯಸೇವಾ ನಾಟಕ ಮಂಡಳಿಯ ಲೈಸೆನ್ಸ್‌ನ್ನು ರದ್ದುಪಡಿಸಲಾಯಿತು. ಮಂಡಳಿಯ ಮಾಲಿಕ ಬಸನಗೌಡರು ದಿಲ್ಲಿಯವರೆಗೆ ಅಲೆದಾಡಿದರೂ ನಾಟಕ ಪ್ರದರ್ಶನಕ್ಕೆ ಅನುಮತಿ ದೊರೆಯಲಿಲ್ಲ. ಹುಬ್ಬಳ್ಳಿಯಲ್ಲಿ ೧೯೩೦ ರಲ್ಲಿ 'ನರಗುಂದ ಬಂಡಾಯ' ಪ್ರದರ್ಶಿಸಿದ್ದ ಭಾಗ್ಯೋದಯ ನಾಟಕ ಮಂಡಳಿ, ಗೋಕಾಕದಲ್ಲಿ ೧೯೩೧ ರಲ್ಲಿ 'ಸಂಗೊಳ್ಳಿ ರಾಯಣ್ಣ' ನಾಟಕ ಪ್ರದರ್ಶಿಸಿದ್ದ ಸಂಪಗಾವಿಯ ಲೋಕಸೇವಾ ಸಂಗೀತ ನಾಟಕ ಮಂಡಳಿ, ಬೆಳಗಾವಿಯಲ್ಲಿ ೧೯೪೨ ರಲ್ಲಿ 'ರಾಜದ್ರೋಹ' ನಾಟಕವನ್ನಾಡಿದ್ದ ಶ್ರೀ ಶಾರದಾ ಸಂಗೀತ ನಾಟಕ ಮಂಡಳಿ ಲೈಸೆನ್ಸ್ ಕಳಕೊಂಡವು. ತಿಂಗಳುಗಟ್ಟಲೆ ಪ್ರದರ್ಶನವಿಲ್ಲದೆ ಮಂಡಳಿಗಳು ಕಷ್ಟನಷ್ಟಗಳನ್ನು ಅನುಭವಿಸಿದವು. ಸ್ವಾತಂತ್ರ್ಯಾಂದೋಲನದಲ್ಲಿ ಪಾಲುಗೊಂಡಿದ್ದ ಭೂಗತ ಹೋರಾಟಗಾರರಿಗೆ ನಾಟಕ ಮಂಡಳಿಗಳು ಆಶ್ರಯ-ನೆರವು ನೀಡಿದವು.

ನಾಟಕಗಳಲ್ಲಿ ನಟರು ಪ್ರಮುಖ ಆಕರ್ಷಣೆಯಾಗಿದ್ದು ಈ ಅವಧಿಯಲ್ಲಿಯ ಬೆಳವಣಿಗೆಯಾಗಿತ್ತು. ಬಸವರಾಜ ಮನಸೂರ, ಗುಳೇದಗುಡ್ಡ ಗಂಗೂಬಾಯಿ, ಬೇವೂರ ಬಾದಷಾಸಾಹೇಬ, ಸೋನುಬಾಯಿ ದೊಡ್ಡಮನಿ ತಮ್ಮ ಹಾಡುಗಾರಿಕೆಯಿಂದ ಜನರನ್ನು ಆಕರ್ಷಿಸಿದರು. ಮುರಗೋಡ ಗಂಗಾಧರಪ್ಪ,

ಬಚ್ಚಾಸಾನಿ, ಹಾವೇರಿ ಮರ್ದಾನಸಜಾನ್, ಅಮೀರಜಾನ ಕರ್ನಾಟಕಿ, ಗೋಹರಜಾನ ಕರ್ನಾಟಕಿ, ಸುಭದ್ರಮ್ಮ ಮನಸೂರ ಗಾಯಕ ಕಲಾವಿದರಾಗಿ ಪ್ರಸಿದ್ಧಿಗೆ ಬಂದರು. ಪಾತ್ರಗಳಿಗೆ ಜೀವತುಂಬಿ ಪ್ರೇಕ್ಷಕರನ್ನು ಮಂತ್ರಮುಗ್ಧವಾಗಿಸುತ್ತಿದ್ದ ನವನಟ ಹಂದಿಗನೂರ ಸಿದ್ಧರಾಮಪ್ಪ ಪ್ರೇಕ್ಷಕರನ್ನು ಆಕರ್ಷಿಸುತ್ತಿದ್ದರು. **'ಕಲೆ ಎಂದರೆ ನಾಟಕ, ಕಲಾವಿದರೆಂದರೆ ನಟರು'** ಎಂಬಂತಾಗಿದ್ದ ಈ ಅವಧಿ ನಟ-ನಟಿಯರ ಕಾಲವಾಗಿತ್ತು. ನಾಟಕಕಾರರು ನಟ-ನಟಿಯರನ್ನು ಗಮನಿಸಿಕೊಂಡೇ ನಾಟಕ ರಚಿಸಿದರು. ಕಂದಗಲ್ ಹನುಮಂತರಾಯರು ಹಂದಿಗನೂರ ಸಿದ್ಧರಾಮಪ್ಪನವರಿಗಾಗಿ 'ಅಕ್ಷಯಾಂಬರ', ಅದೃಶ್ಯಪ್ಪ ಮಾನವಿಯವರಿಗಾಗಿ 'ಬಾಣಸಿಗ ಭೀಮ', 'ಕುರುಕ್ಷೇತ್ರ' ನಾಟಕಗಳನ್ನು, ಕೋಲಶಾಂತಪ್ಪನವರು ಜಟ್ಟೆಪ್ಪನವರಿಗಾಗಿ 'ಸ್ತ್ರೀ' ನಾಟಕ ಬರೆದರು. ನಟ-ನಟಿಯರ ಹೆಸರುಗಳನ್ನು ಪ್ರಕಟಿಸಿ ಪ್ರಚಾರ ಮಾಡುವುದು ಅಭಿನಯದ ಮೇಲ್ಮೆಯನ್ನು ಸ್ಥಿರೀಕರಿಸಿದ ನಿದರ್ಶನವಾಗಿತ್ತು.

೧೯೩೦ರ ದಶಕದಲ್ಲಿ ಉತ್ತರ ಕರ್ನಾಟಕ ವೃತ್ತಿ ರಂಗಭೂಮಿ ಕೀರ್ತಿಯ ಉತ್ತುಂಗದೆತ್ತರಕ್ಕೆ ಬೆಳೆಯಿತು. ಕಲಾವಿದರಿಗೆ, ನಾಟಕಕಾರರಿಗೆ, ನಾಟಕ ಕಂಪನಿಗಳ ಮಾಲಿಕರಿಗೆ ಸಮಾಜ ನೆರವು ನೀಡಿತು. ಅರ್ಹರನ್ನು ಯಥೇಚ್ಛವಾಗಿ ಕೊಂಡಾಡಿ ಸನ್ಮಾನಿಸಿತು. ಮಂಡಳಿಗಳ ನಡುವಿನ ಪೈಪೋಟಿಗಳು ತುರುಸಾಗಿದ್ದವು. ಇವು ಕೆಲವು ಸಲ ಸಂಘರ್ಷಕ್ಕೂ ಕಾರಣವಾಗುತ್ತಿದ್ದವು. ಕಲಾವಿದರು ಪರಸ್ಪರರನ್ನು ಮೆಚ್ಚಿ ಗೌರವಿಸುವ ಗುಣಸಂಪನ್ನತೆಯನ್ನು ಮೆರೆದ ಕಾಲವೂ ಇದಾಗಿತ್ತು.

ಚಲನಚಿತ್ರಗಳ ಆಗಮನ ವೃತ್ತಿರಂಗಭೂಮಿಯ ಆಕರ್ಷಣೆಯನ್ನು ಕಡಿಮೆ ಮಾಡಿತು. ಪ್ರಸಿದ್ಧರಾದ ನಟರಿಗೆ, ಕಲಾವಿದರಿಗೆ ಬೇಡಿಕೆಯಿತ್ತಾದ್ದರಿಂದ, ಒಂದು ಮಂಡಳಿಯಿಂದ ಇನ್ನೊಂದಕ್ಕೆ ಹೋಗುವುದು ಸಾಮಾನ್ಯವಾಯಿತು. ಮಂಡಳಿಗಳ ಮಾಲಿಕರಿಗೆ ಕಲಾವಿದರನ್ನು ಕಲೆ ಹಾಕುವುದು ಕಷ್ಟವಾಯಿತು. ಸಿನೇಮಾಗಳಲ್ಲಿ ನಟಿಸಲು ನಟರು ಉತ್ಸುಕರಾದರು. ರಂಗಮಂದಿರಗಳು ಸಿನೇಮಾ ಮಂದಿರಗಳಾಗಿ ಮಾರ್ಪಟ್ಟವು. ನಗರ ಕೇಂದ್ರಗಳಲ್ಲಿ ಸಿನೇಮಾಗಳು ಮನರಂಜನೆಯ ಮುಖ್ಯ ಸಾಧನಗಳಾದವು. ನಾಟಕ ಮಂಡಳಿಗಳು ಗ್ರಾಮೀಣ ನೆಲೆಗಳನ್ನೇ ನೆಚ್ಚಬೇಕಾಯಿತು. ಪ್ರಮುಖ ಗ್ರಾಮಗಳಿಗೂ ಬಂದ ಟೂರಿಂಗ್ ಟಾಕೀಜ್‌ಗಳು ನಾಟಕಮಂಡಳಿಗಳಿಗೆ ಪೆಟ್ಟು ನೀಡಿದವು. ನಾಟಕಗಳಿಗೆ ಜನರನ್ನು ಆಕರ್ಷಿಸಲು ಸಿನೇಮಾಗಳ ಥರವೆ ಅಶ್ಲೀಲತೆ, ಉದ್ರೇಕಕಾರಿ ಸಂಗೀತವನ್ನು ಅಳವಡಿಸಿಕೊಳ್ಳಲಾಯಿತು. ಇವೆಲ್ಲ ಸಂಗತಿಗಳು ನಾಟಕರಂಗದ ಬೆಳವಣಿಗೆಯನ್ನು ಕುಂಠಿತಗೊಳಿಸಿದವು.

೧೯೫೦ರ ದಶಕದಲ್ಲಿ ಸಾಹಿತ್ಯಾಸಕ್ತ ಬುದ್ಧಿಜೀವಿಗಳು ಹವ್ಯಾಸಿ ರಂಗಭೂಮಿಯನ್ನು ಹುಟ್ಟು ಹಾಕಿದರು. ಕೈಲಾಸಂ ಅವರ 'ನಮ್ಮಂಪ್ನಿ', ಶ್ರೀರಂಗರ 'ಪೂರ್ವರಂಗ', 'ಕತ್ತಲೆಬೆಳಕು', 'ಮೈರಾವಣ', ಶಿವರಾಮ ಕಾರಂತರ 'ಸುಧಾರಿತ ಸೌಭದ್ರ' ಮೊದಲಾದ ನಾಟಕಗಳು ವೃತ್ತಿರಂಗಭೂಮಿ ನಾಟಕಗಳ ಆಭಾಸ, ಲೋಪಗಳನ್ನು ವಿಡಂಬನೆ ಮಾಡಿದವು. ವೃತ್ತಿರಂಗ ನಾಟಕಗಳು ಸಾಹಿತ್ಯವೇ ಅಲ್ಲ, ಅವುಗಳನ್ನು ನೋಡುವವರು ಸದಭಿರುಚಿಯ ಪ್ರೇಕ್ಷಕರಲ್ಲ ಎಂಬ ಭಾವನೆ ಬೆಳೆಯತೊಡಗಿತು. ೧೯೪೩ ರಲ್ಲಿ ವಾಮನರಾಯರ 'ವಿಶ್ವಗುಣಾದರ್ಶ ನಾಟಕ ಮಂಡಳಿ' ಸ್ಥಗಿತಗೊಂಡಿತು. ೧೯೩೬ ರಲ್ಲಿ ಸಾಲದ ಹೊರೆಯಿಂದಾಗಿ ವೆಂಕೋಬರಾಯರ 'ಶ್ರೀ ಮಹಾಲಕ್ಷ್ಮೀ ಪ್ರಸಾದಿಕ ಸಂಗೀತ ನಾಟಕ ಮಂಡಳಿ' ಮುಚ್ಚಿಹೋಯಿತು. ೧೯೪೪ ರಲ್ಲಿ ಗರುಡ ಸದಾಶಿವರಾಯರ 'ಶ್ರೀ ದತ್ತಾತ್ರೇಯ ನಾಟಕ ಮಂಡಳಿ' ಕೊನೆಗೊಂಡಿತು.

ಶ್ರೀ ಹಾನಗಲ್ ಕುಮಾರಸ್ವಾಮಿಗಳ ಪ್ರೇರಣೆಯಿಂದ ಗಾನಯೋಗಿ ಪಂಡಿತ ಪಂಚಾಕ್ಷರ ಗವಾಯಿಗಳು 'ಶ್ರೀ ಕುಮಾರೇಶ್ವರ ಕೃಪಾಪೋಷಿತ ನಾಟಕ ಮಂಡಳಿ'ಯನ್ನು ಹುಟ್ಟಹಾಕಿದರು. ಪಂಡಿತ ಪುಟ್ಟರಾಜ ಗವಾಯಿಗಳು 'ಸಿದ್ಧರಾಮ ಸಂವಾದ' ನಾಟಕ ರಚಿಸಿ ಪ್ರದರ್ಶನಗಳನ್ನು ಆರಂಭಿಸಿದರು. ಬಸವಣ್ಣೆಪ್ಪ ಪುರಾಣಿಕರು ಕಲಾವಿದರ ಆಯ್ಕೆ, ರಂಗತಾಲೀಮಿನ ನಿರ್ವಹಣೆ ಮಾಡಿದರು. ರಂಗಪರಿಕರಗಳ ಆಡಂಬರವಿಲ್ಲದೆ ಹೊಂಬಳದಲ್ಲಿ ಹತ್ತು ಪ್ರದರ್ಶನಗಳು ಯಶಸ್ವಿಯಾಗಿ ನಡೆದವು. ಅನಂತರ ನರಗುಂದದಲ್ಲಿ ರಂಗಪರಿಕರಗಳನ್ನೊಳಗೊಂಡ ಪ್ರದರ್ಶನಗಳು ಸಾಂಗವಾದವು. ಪಂಚಾಕ್ಷರ ಗವಾಯಿಗಳು ತಬಲಾ ಬಾರಿಸುತ್ತಿದ್ದರೆ ಪುಟ್ಟರಾಜರು ಹಾರ್ಮೋನಿಯಂ ನುಡಿಸುತ್ತಿದ್ದರು. ಸರಳ ಸಂಭಾಷಣೆ, ಶಾಸ್ತ್ರಶುದ್ಧ ಸಂಗೀತದ ಹಿನ್ನೆಲೆಯಲ್ಲಿ ಸಿದ್ಧರಾಮನ ಜೀವನದ ಪ್ರಸಂಗಗಳನ್ನು ಮನೋಜ್ಞವಾಗಿ ಪ್ರದರ್ಶಿಸಲಾಯಿತು. ಅತಿ ಕಡಿಮೆ ವೆಚ್ಚದ ರಂಗಸಜ್ಜಿಕೆ, ಸಾದಾ ದೃಶ್ಯಾವಳಿ ಪರದೆಗಳು, ಸಮರ್ಪಣ ಭಾವದ ಕಲಾವಿದರಿಂದ ಕೂಡಿದ್ದ ಈ ಮಂಡಳಿಯ ನಾಟಕಗಳು ಜನರನ್ನು ರಂಜಿಸಿದವು. 'ಸತಿ ಸುಕನ್ಯಾ', 'ರಾಜಶೇಖರ ವಿಲಾಸ', 'ಶ್ರೀಕೃಷ್ಣ ಗಾರುಡಿ', 'ನವಯುಗದ ನಗೆ', 'ರತ್ನಹಾರ', 'ನೆಲ್ಲೂರ ಸಂಬೆಕ್ಕ' ನಾಟಕಗಳು ನರಗುಂದ, ರೋಣ, ಮಲ್ಲಾಪೂರ, ಬದಾಮಿ, ಬನಶಂಕರಿ ಜಾತ್ರೆ, ಮುದ್ದೇಬಿಹಾಳ, ಸಿಂದಗಿ ಮೊದಲಾದೆಡೆಗಳಲ್ಲಿ ಪ್ರದರ್ಶನಗೊಂಡವು. ಈ ಮಂಡಳಿಯ 'ಹೇಮರೆಡ್ಡಿ ಮಲ್ಲಮ್ಮ' ನಾಟಕವು ಗದುಗಿನಲ್ಲಿ ಸತತ ೩೭೦ ಪ್ರಯೋಗಗಳನ್ನು ಮಾಡಿ ಹೊಸದೊಂದು

ದಾಖಲೆಯನ್ನೇ ನಿರ್ಮಿಸಿತು. ಈ ಮಂಡಳಿ ಈಗಲೂ ನಾಟಕಗಳನ್ನು ಪ್ರದರ್ಶಿಸುತ್ತಿದ್ದು, ಸ್ತ್ರೀ ಪಾತ್ರಗಳನ್ನು ಪುರುಷರೆ ನಿರ್ವಹಿಸುತ್ತಿದ್ದಾರೆ.

೧೯೫೯ ರಲ್ಲಿ ಹುಟ್ಟಿಕೊಂಡ ಬೆಳವಣಿಕಿ (ರೋಣ ತಾಲೂಕು)ಯ ಶ್ರೀ **'ವೀರಭದ್ರೇಶ್ವರ ನಾಟ್ಯಸಂಘ'**ವು ಕಂದಗಲ್ ಹನುಮಂತರಾಯರ 'ಜಗನ್ಮಾಯಾ', ಎಚ್.ಎನ್. ಹೂಗಾರರ 'ಸುವರ್ಣಾ' ಹಾಗೂ ಪೌರಾಣಿಕ ನಾಟಕಗಳನ್ನು ಹಲವು ಊರುಗಳಲ್ಲಿ ಪ್ರದರ್ಶಿಸಿತು.

೧೯೬೦ರ ದಶಕದಲ್ಲಿ ಹುಟ್ಟಿಕೊಂಡ ಬಹುತೇಕ ಮಂಡಳಿಗಳು ವಿಶೇಷವಾದ ಸಾಧನೆಗಳನ್ನು ಮಾಡಲಿಲ್ಲ. ಮಂಡಳಿಗಳ ನಡುವಿನ ಅಹಿತಕರ ಸ್ಪರ್ಧೆ, ಹೆಚ್ಚಿನ ಪ್ರೋತ್ಸಾಹನವಿಲ್ಲದ ಪರಿಸರದಿಂದಾಗಿ ನಾಟಕ ಮಂಡಳಿಗಳು ನೆಲಕಚ್ಚಿದವು. ಹೊಸ ನಾಟಕ ಮಂಡಳಿಗಳು ಹೆಚ್ಚಿನ ಬಂಡವಾಳವಿಲ್ಲದೆ ನಾಟಕಗಳನ್ನು ಪ್ರದರ್ಶಿಸಲು ಅನುವಾಗುವಂತೆ ಎಚ್.ಟಿ. ಮಹಾಂತೇಶ ಶಾಸ್ತ್ರೀ, ಕೆ.ಎನ್. ಸಾಳುಂಕೆ, ಧುತ್ತರಗಿ, ಭಸ್ಮೆ, ಎಚ್.ಎನ್. ಹೂಗಾರ, ಮಾರುತೇಶ ಮಾಂಡ್ರೆ ಮೊದಲಾದ ನಾಟಕಕಾರರು ಸಂಭಾಷಣೆ-ಸಾಹಿತ್ಯ ಪ್ರಧಾನ ನಾಟಕಗಳನ್ನು ರಚಿಸಿದರು. ಮೊದಲು ಸ್ತ್ರೀ ಪಾತ್ರಧಾರಿಗಳ ಕೊರತೆಯನ್ನು ಅನುಭವಿಸುತ್ತಿದ್ದ ನಾಟಕ ಮಂಡಳಿಗಳು ಈ ಹಂತದಲ್ಲಿ ಅಭಿನಯ ಚತುರ ಆಕರ್ಷಕ ನಟಿಯರನ್ನು ಉಳಿಸಿಕೊಳ್ಳಲು ಹೆಣಗಬೇಕಾಯಿತು. ಕಲಾವಿದರ ಶೋಷಣೆ, ಅನೀತಿಯ ವ್ಯವಹರಣೆಗಳು ಕೂಡ ಮಂಡಳಿಗಳಲ್ಲಿ ಹೆಚ್ಚಿದವು. ಸಿನೇಮಾ ನಟಿಯರನ್ನು ಕರೆತಂದು ನಾಟಕಗಳಲ್ಲಿ ಜನಪ್ರಿಯ ಗೀತೆಗಳನ್ನು ಹಾಡಿಸುವ ಪರಾಟ ನಡೆಯಿತು. ಅಶ್ಲೀಲ ಸಂಭಾಷಣೆಗಳು, ಎಲ್ಲೆಮೀರಿದ ಅಂಗಾಂಗ ಪ್ರದರ್ಶನ, ಅನಗತ್ಯವಾದ ಕ್ಯಾಬರೆ ಕುಣಿತಗಳು, ಉದ್ರೇಕಕಾರಿ ಸಂಗೀತ ಎಲ್ಲವೂ ರಂಗಭೂಮಿಯ ಅವಸಾನವನ್ನು ತೀವ್ರಗೊಳಿಸಿದವು.

ಇದೆಲ್ಲದರ ಮಧ್ಯೆಯೂ ಇಂದಿಗೂ ಹಲವು ಮಂಡಳಿಗಳು ರಂಗಭೂಮಿಯನ್ನು ಜೀವಂತವಾಗಿರಿಸಿವೆ. ಜಮಖಂಡಿಯ 'ಶ್ರೀ ಗಜಾನನ ಮಂಡಳಿ', ಗದುಗಿನ **'ಶ್ರೀ ಕುಮಾರೇಶ್ವರ ನಾಟ್ಯ ಸಂಘ'**, ಗುಡಗೇರಿಯ 'ಶ್ರೀ ಸಂಗಮೇಶ್ವರ ನಾಟ್ಯಸಂಘ', ಕಮತಗಿಯ 'ಶ್ರೀ ಹೊಳೆ ಹುಚ್ಚೇಶ್ವರ ನಾಟ್ಯಸಂಘ', ಚಿತ್ತರಗಿಯ 'ಶ್ರೀ ಕುಮಾರ ವಿಜಯ ನಾಟ್ಯ ಸಂಘ' ಏಣಗಿ ಬಾಳಪ್ಪನವರ 'ಕಾಲವೈಭವ ನಾಟಕ ಮಂಡಳಿ' ಮೊದಲಾದವುಗಳು ರಂಗಪರಂಪರೆಯನ್ನು ಜೀವಂತವಾಗಿರಿಸಿಕೊಂಡು ಮುನ್ನಡೆಯುತ್ತಿವೆ.

# ಗದಗ ಜಿಲ್ಲೆ ವೃತ್ತಿ ನಾಟಕ ಮಂಡಳಿಗಳು

ಉತ್ತರ ಕರ್ನಾಟಕದಲ್ಲಿ ೧೮೫೦ ರಿಂದ ೧೮೮೦ರ ವರೆಗೆ ಮರಾಠಿ ನಾಟಕಗಳ ಪ್ರದರ್ಶನ ಅದ್ದೂರಿಯಾಗಿಯೆ ನಡೆಯಿತು. ರಂಗುರಂಗಾದ ರಂಗಸಜ್ಜಿಕೆ, ಝಗಝಗಿಸುವ ಬೆಳಕು, ಲಕ್ಷಣವಾದ ಉಡುಪುಗಳು, ಸೊಗಸಾದ ಅಲಂಕಾರ, ಇಂಪಾದ ಸಂಗೀತ, ಮೋಡಿ ಮಾಡುವ ಗಮ್ಮತ್ತಿನ ಹಾವಭಾವಗಳು, ಸ್ತ್ರೀಪಾತ್ರಗಳ ವೈಯಾರ, ಮೈನವಿರೇಳಿಸುವ ಕುಣಿತ, ಮನಸ್ಸನ್ನಾವರಿಸುವ ಕಥಾವಸ್ತು - ಒಟ್ಟಾರೆ ಮಾಯಾಬಜಾರದಂತೆ ಕಂಗೊಳಿಸುವ ಥಳುಕಿನ ಬಣ್ಣದ ಲೋಕವನ್ನು ಸೃಷ್ಟಿಸುತ್ತಿದ್ದ ವೃತ್ತಿನಾಟಕ ಕಂಪನಿಗಳು ಜನರನ್ನು ಆಕರ್ಷಿಸಿದವು. ಹೊಸತೊಂದು ಬಗೆಯ ಮನರಂಜನೆ ಜನರ ಕುತೂಹಲವನ್ನು ಕೆರಳಿಸಿತ್ತು. ಹಠಾತ್ತಾದ ಬದಲಾವಣೆಗಳು ಜನರ ಬದುಕಿನಲ್ಲಿ ಹೊಸತೊಂದು ಸುದ್ದಿ ಮಾಡುತ್ತವೆ. ಮರಾಠಿ ಭಾಷೆ ಸರಿಯಾಗಿ ಅರ್ಥವಾಗದಿದ್ದರೇನಂತೆ ; ಆ ನಾಟಕಗಳನ್ನು ನೋಡಬೇಕೆಂಬ ಕುತೂಹಲ, ಇನ್ನಿಷ್ಟು ನೋಡಬೇಕೆಂಬ ಒಲವು ಗೀಳಾಗಿ ಪರಿಣಮಿಸಿದ್ದರಲ್ಲಿ ಆಚ್ಚರಿಯೇನಿಲ್ಲ. ಒಂದೆಡೆ ನಾಡು-ನುಡಿಯ ಬಗೆಗಿನ ಅಭಿಮಾನವನ್ನು ಕೆರಳಿಸಲೂ ಈ ಹೊರನಾಡ ಕಂಪನಿಗಳು ಅನೇರವಾಗಿ ಪ್ರೇರಕವಾದವು. ಕನ್ನಡಾಭಿಮಾನಿಗಳು, ಕಲಾವಿದರು ಮುಜುಗರಪಟ್ಟುಕೊಂಡು ಯೋಚನೆಗೆ ತೊಡಗಿದರು.

ಗದುಗು ಆಗ ಪ್ರಧಾನವಾಗಿ ವ್ಯಾಪಾರದ ಪಡಮೂಲೆಸ್ಥಳ. ಕೃಷಿ ಉತ್ಪಾದನೆಗಳ ಕೇಂದ್ರಸ್ಥಾನ. ಸಾವಿರ ವರ್ಷಗಳಿಂದ ನಾಡಿನ ರಾಜಕೀಯ ಏಳುಬೀಳುಗಳಿಗೆ ಈಡಾಗಿಕೊಂಡ ಬೆಳ್ವಲನಾಡಿನ ಮಹತ್ವದ ಕೇಂದ್ರಸ್ಥಾನ. ಕನ್ನಡ ನಾಡಿನ ಸಾಮ್ರಾಜ್ಯಗಳ ರಾಜಕೀಯ ಪೈಪೋಟಿಯಲ್ಲಿ ಆಯಕಟ್ಟಿನ ನೆಲೆಯಾದ ಈ ಪ್ರದೇಶ ಹಲವು ಮಾಂಡಲಿಕರು, ಸಾಮ್ರಾಟರು, ಅರಸರ ಆಳ್ವಿಕೆಯಲ್ಲಿ ಹಲವು ರೀತಿಯ ಪ್ರಭಾವಗಳಿಗೆ ಮೈಯೊಡ್ಡಿ ರಾಜಕೀಯ-ಸಾಂಸ್ಕೃತಿಕ ಪ್ರಜ್ಞೆಯನ್ನು ಸಹಜವಾಗಿಯೇ ಮೈಗೂಡಿಸಿಕೊಂಡು ಬೆಳೆದಿತ್ತು. ಹಲವು ಶ್ರೇಷ್ಠ ಕವಿಪುಂಗವರು ಕಾವ್ಯಗಳನ್ನು ರಚಿಸಿ ನಾಡಿನ ಗಮನವನ್ನು ಸೆಳೆದ ಸಾಹಿತ್ಯದ ತವರಾಗಿರುವ ಈ ನೆಲ ಧರ್ಮ, ಸಂಸ್ಕೃತಿಯ ಬೀಡಾಗಿದ್ದು, ಇಲ್ಲಿನ ಜನ ಸುಸಂಸ್ಕೃತ ಮನೋಭಾವದವರೂ, ಲಲಿತಕಲಾಸಕ್ತರೂ, ರಸಿಕರೂ ಆಗಿದ್ದರು. ಇಲ್ಲಿನ ಜನಪದರಂಗ ಸಿರಿವಂತವಾಗಿ ಬೆಳೆದು ಬಂದಿತ್ತು. ಮಿತವಾದ ಬೇಡಿಕೆಗಳನ್ನುಳ್ಳ ಸಂತೃಪ್ತ ಜೀವನವನ್ನು ಸಾಗಿಸುತ್ತಿದ್ದ ಈ ಜನರನ್ನು ಅದ್ದೂರಿಯ ರಂಗಸಜ್ಜಿಕೆಯಲ್ಲಿ ನಟಿಸುವ ಕಲಾವಿದರು ಹಾಗೂ ಪೌರಾಣಿಕ ನಾಟಕಗಳು ಆಕರ್ಷಿಸಿದವು. ವ್ಯಾಪಾರದ ಕೇಂದ್ರಸ್ಥಾನವಾಗಿದ್ದ ಗದುಗಿನ ಸಂತೆಗಳಲ್ಲಿ ಗ್ರಾಮೀಣ ಪ್ರದೇಶಗಳ ಜನರು ಅಧಿಕ ಸಂಖ್ಯೆಯಲ್ಲಿ

ಕಲೆಯುತ್ತಿದ್ದುದರಿಂದ, ಈ ಊರು ವೃತ್ತಿ ನಾಟಕ ಕಂಪನಿಗಳಿಗೆ ಲಾಭದ ಕೇಂದ್ರವೂ ಆಗಿತ್ತು.

"ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯ ಇತಿಹಾಸದಲ್ಲಿ ಗದುಗಿಗೇ ಪ್ರಥಮ ಗದ್ದುಗೆ ಸಲ್ಲಬೇಕು. ಶಾಂತಕವಿಗಳು, ಗದುಗಿನ ಗರುಡರು, ವೀರನಾರಾಯಣನ ಭಕ್ತ ಹುಯಿಲಗೋಳ ನಾರಾಯಣರಾಯರು ಉತ್ತರ ಕರ್ನಾಟಕ ವೃತ್ತಿರಂಗ ಶಿಲ್ಪದ ಮೂರು ಗೋಪುರಗಳು".* ಕನ್ನಡ ಆಧುನಿಕ ರಂಗಭೂಮಿ ಆಂದೋಲನವನ್ನು ಆರಂಭಿಸಿದ ಶ್ರೇಯಸ್ಸು ಗದುಗಿನವರೇ ಆದ ಶಾಂತಕವಿಗಳಿಗೆ ಸಲ್ಲುತ್ತದೆ. ಕನ್ನಡ ನಾಟಕದ ಪ್ರಥಮಗುರು ಎಂದು ಇವರನ್ನು ಸಂಬೋಧಿಸಲಾಗಿದೆ. ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲೂಕಿನ ಹಲಸಗಿಯ ಬ್ರಾಹ್ಮಣ ವಿದ್ಯಾರ್ಥಿ ವೃಂದದಿಂದ ಸಂಘಟಿತವಾದ 'ಹಲಸಗಿ ಸಂಗೀತ ನಾಟಕ ಮಂಡಳಿ'ಯೇ ಮೊದಲಿನ ವೃತ್ತಿ ನಾಟಕ ಮಂಡಳಿ ಎಂಬುದಾಗಿ ಹಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಅದೇನೇ ಆಗಿದ್ದರೂ ಅಂದಿನ ಸನ್ನಿವೇಶದಲ್ಲಿ ಮರಾಠಿ ನಾಟಕಗಳ ಪ್ರಾಬಲ್ಯದಲ್ಲಿ ತೇಜೋಹೀನವಾಗಿ ನಿಂತ ಕನ್ನಡ ರಂಗ ಕಲೆಗೆ ಪುನಶ್ಚೇತನ ನೀಡುವ ಉದ್ದೇಶದಿಂದ 'ಕೃತಪುರ ನಾಟಕ ಮಂಡಳಿ' ಕಟ್ಟಿ ಮರಾಠಿ ಮಂಡಳಿಗಳೊಡನೆ ತೀವ್ರ ಹೋರಾಟಕ್ಕಿಳಿದ ಶಾಂತಕವಿಗಳನ್ನು 'ಕರ್ನಾಟಕ ನಾಟಕ ಪ್ರಥಮ ಗುರು' ಎಂದು ಕರೆಯಲಾಗಿದೆ.

## ಶಾಂತಕವಿಗಳ

## ಶ್ರೀ ವೀರನಾರಾಯಣ ಪ್ರಾಸಾದಿಕ ಕೃತಪುರ ನಾಟಕ ಮಂಡಳಿ

ಮರಾಠಿ ನಾಟಕಗಳು ಕನ್ನಡಿಗರನ್ನು ಅಭಿಮಾನಶೂನ್ಯರನ್ನಾಗಿ ಮಾಡತೊಡಗಿದ್ದು ಪ್ರಜ್ಞಾವಂತ ಕನ್ನಡಿಗರ ಸ್ವಾಭಿಮಾನಕ್ಕೆ ಸವಾಲಾಗಿ ಪರಿಣಮಿಸಿತ್ತು. ಮರಾಠಿ ನಾಟಕಗಳ ಹಾವಳಿಯನ್ನು ಕಂಡು ಗದುಗಿನಲ್ಲಿ ಕನ್ನಡಶಾಲಾ ಶಿಕ್ಷಕರಾಗಿದ್ದ ಶಾಂತಕವಿಗಳು ನೊಂದುಕೊಂಡರು. "ನಮ್ಮ ಯಕ್ಷಗಾನದಿಂದ ಕಡ ತೆಗೆದುಕೊಂಡು ನಮ್ಮ ದೀಪದಿಂದಲೇ ತಮ್ಮ ರಂಗದೀಪವನ್ನು ಹೊತ್ತಿಸಿಕೊಂಡ ಈ ಮರಾಠಿಗರು ನಮ್ಮ ಮೇಲೆಯೆ ದಾಡು ನಡೆಸಿದರೆ...... ಎಂದು ಸಿಡಿದೆದ್ದ ಶಾಂತಕವಿಗಳು ಅಶಾಂತರಾಗಿ ತಮ್ಮ ಕನ್ನಡ ಶಾಲಾ ಶಿಕ್ಷಕನ ಲೆಕ್ಕಣಿಕೆಯನ್ನು ಈ ಸಾಂಗ್ಲಿ ಕಾರಕೂನನ (ವಿಷ್ಣುದಾಸ ಭಾವೆ)

* ಎಸ್.ಕೆ.ಕುಲಕರ್ಣಿ, ('ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿ' ಪ್ರಬಂಧದಲ್ಲಿ) ಕರ್ನಾಟಕ ರಂಗಭೂಮಿ-ನೆನ್ನೆ, ಇಂದು, ನಾಳೆ. ಸಂಪಾದಕರು : ಡಾ. ಸಿಂಧುವಳ್ಳಿ ಅನಂತಮೂರ್ತಿ, ಎಚ್.ಕೆ. ರಾಮನಾಥ್. ಪುಟ ೨೬.

ಲೇಖಣಿಕೆಗೆ ಪ್ರತಿಸ್ಪರ್ಧಿಯಾಗಿ ಮಸೆದರು.'' (ಎನ್.ಕೆ. ಕುಲಕರ್ಣಿ) ಎಲ್ಲಿ ನೋಡಿದರಲ್ಲಿ ಮರಾಠಿ ನಾಟಕ, ನಾಟಕ ಕೀರ್ತಿ, ನಾಟಕದೂಟ ಎಂದು ಆಕ್ರೋಶ ಮಾಡಿದರು. "ಕೆಚ್ಚೆದೆಯ ಕನ್ನಡಿಗನ ಈ ಆಕ್ರೋಶಕ್ಕೆ ಕಾರಣ ಬರಿ ಸಾಂಗ್ಲಿ ನಾಟಕದ ಪ್ರಭಾವವಷ್ಟೇ ಅಲ್ಲ, ಕನ್ನಡಿಗರ ದಾಸರಾಟ, ಇಲ್ಲವೆ ರಾಜಾನಾಟ, ಚಿಮಣಾನಾಟಗಳೆಂಬ ಹಳ್ಳಿಯ ಪ್ರಕಾರದಿಂದ **'ತಮಾಷಾ'** ಎಂದು ನಾಮಾಂತರ ಹೊಂದಿ, ಕರ್ನಾಟಕದ ಮೇಲೆಯೇ ಮೋಹವೆರಚಿದ ಮರಾಠೀ ಜಾನಪದ ಮೇಲುಗೈಯನ್ನು ನೋಡಿ ಶಾಂತಕವಿಗಳು ಪ್ರಕ್ಷುಬ್ಧರಾಗಿರಬೇಕು.'' **(ಎನ್.ಕೆ. ಕುಲಕರ್ಣಿ ಉತ್ತರ ಕರ್ನಾಟಕದ ವೃತ್ತಿರಂಗಭೂಮಿ ಪ್ರಬಂಧದಲ್ಲಿ).**

ನಾಡಸೇವೆಯ ಛಲದಿಂದಲೇ ಶಾಂತಕವಿಗಳು ನಾಟ್ಯಸಂಘವನ್ನು ಕಟ್ಟಲು ಮುಂದಾದರು. ಇಂತಹದೆ ನಿಲುವಿಗೆ ಬದ್ಧರಾಗಿದ್ದ ಉಮಚಗಿ ಲಚ್ಚಪ್ಪ ನಾಯಕರು, ಗುಡಿ ರಾಘವೇಂದ್ರಾಚಾರ್ಯರು, ಹಂಪಿಹೊಳಿ ಶಂಕರಭಟ್ಟರು ಮೊದಲಾದವರನ್ನೊಳಗೊಂಡು **"ಶ್ರೀ ವೀರನಾರಾಯಣ ಪ್ರಾಸಾದಿಕ ಕೃತಪುರ ನಾಟಕ ಮಂಡಳಿ"** ೧೮೭೭ ರಲ್ಲಿ ಅವತರಿಸಿತು. ನಾಟಕ ಪ್ರದರ್ಶನಕ್ಕೆಂದೇ ಶಾಂತಕವಿಗಳು **'ಉಷಾಹರಣ'** ಎಂಬ ಕನ್ನಡ ನಾಟಕ ರಚಿಸಿದರು. ನಾಟಕದ ನಿರ್ದೇಶನವನ್ನು ಅವರೆ ವಹಿಸಿಕೊಂಡರು.

ಕೃತಪುರ ನಾಟಕಮಂಡಳಿಯ ನಾಟಕಗಳನ್ನು ಪ್ರೇಕ್ಷಕರು ಬಹುವಾಗಿ ಮೆಚ್ಚಿಕೊಂಡರು. ರಂಗಮಂಟಪದಲ್ಲಿ ದೇವತೆಗಳು ಕನ್ನಡದಲ್ಲೆ ಮಾತಾಡುತ್ತಿರುವುದನ್ನು ಕೇಳಿದಾಗ ಸಂತಸಪಟ್ಟರು. ಕನ್ನಡ ಮಾತುಗಳು, ಕನ್ನಡ ಹಾಡುಗಳು ಜನರಿಗಿಷ್ಟವಾದವು. ನಾಟಕಗಳ ಹಾಗೂ ನಟರ ಬಗೆಗೆ ಅಭಿಮಾನ, ಪ್ರೋತ್ಸಾಹದ ಮಾತುಗಳು ಕೇಳಿಬಂದವು. ಕನ್ನಡದ ಡಿಂಡಿಮವನ್ನು ಭರ್ಜರಿಯಾಗಿ ಬಾರಿಸಿದ ಶಾಂತಕವಿಗಳು ವೈಯಕ್ತಿಕ ಪ್ರಶಂಸೆಗೂ ಪಾತ್ರರಾದರು. ಅವರ ಸಾಧನೆ ಕನ್ನಡದ ಬೆಳವಣಿಗೆಗೆ ಚೇತೋಹಾರಿಯಾಯಿತು. ಅವರ ಸಿದ್ಧಿ ಕನ್ನಡನಾಡಿಗೆ ವರವಾಯಿತು.

ಶಾಂತಕವಿ ಬರೆದ **'ಶ್ರೀಯಾಳ ಸತ್ವಪರೀಕ್ಷೆ'**, **'ಸುಂದೋಪಸುಂದವಧಾ'**, **'ಕೀಚಕವಧಾ'**, **'ಸುಧನ್ವವಧಾ'**, **'ಸೀತಾರಣ್ಯ ಪ್ರವೇಶ'**, **'ಶಕುಂತಲೋತ್ಪತ್ತಿ'**, **'ಚಂದ್ರಾವಳೀ ಚರಿತ್ರ'** ಮೊದಲಾದ ನಾಟಕಗಳು ವೃತ್ತಿರಂಗಭೂಮಿಯ ಮೇಲೆ ಯಶಸ್ಸನ್ನು ಕಂಡವು.

ಕನ್ನಡ ರಂಗಕಲೆಯನ್ನು ಬೆಳೆಸುವುದು, ಹೊಸ ಜಾಗೃತಿಯನ್ನು ಮೂಡಿಸುವುದು ಶಾಂತಕವಿಗಳ ತುಡಿತವಾಗಿತ್ತು. ಅವರ ನಾಟಕ ಮಂಡಳಿ ವಿಶೇಷ ಮುತುವರ್ಜಿ, ಪರಿಶ್ರಮದಿಂದ ಕಾರ್ಯನಿರ್ವಹಿಸಿತು. ಧಾರವಾಡ, ಬೆಳಗಾವಿ, ನವಲಗುಂದ,

ಹುಬ್ಬಳ್ಳಿ, ಸವದತ್ತಿಗಳಲ್ಲಿ ನಾಟಕಗಳನ್ನು ಪ್ರದರ್ಶಿಸಲಾಯಿತು. ಹಣಕಾಸಿನ ತೊಂದರೆ, ಪ್ರಯಾಣ ಸೌಲಭ್ಯಗಳ ಅನಾನುಕೂಲತೆಗಳಿಂದಾಗಿ ಅವರು ಬಯಸಿದಷ್ಟು ಸ್ಥಳಗಳಿಗೆ ಹೋಗಲಿಕ್ಕಾಗಲಿಲ್ಲ. ಈ ಹಿನ್ನೆಲೆಯಲ್ಲಿ ಗಮನಿಸುವಾಗ ಅವರ ಅಂದಿನ ಸಾಧನೆಗಳು ರೋಚಕ ಸಾಹಸವನ್ನು ಸಂಕೇತಿಸುತ್ತವೆ.

ಕೃತಪುರ ಮಂಡಳಿಯ ನಟರು ಸಂಸ್ಕೃತ-ಕನ್ನಡ ಸಾಹಿತ್ಯಾಭ್ಯಾಸಿಗಳಾಗಿದ್ದರು ಹಾಗೂ ಕೀರ್ತನಕಾರರಾಗಿದ್ದರು. ಕುಮಾರವ್ಯಾಸ ಭಾರತದ ಪ್ರವಚನಕಾರರಾಗಿದ್ದರು. ಜನರ ದೃಷ್ಟಿಯಲ್ಲಿ ಗೌರವಾನ್ವಿತರಾಗಿದ್ದರು. ಗುಡಿ ರಾಘವೇಂದ್ರಾಚಾರ್ಯರು ಅಸ್ಖಲಿತ ಮಾತುಗಾರರಾಗಿದ್ದಂತೆ ಅಭಿನಯ ಚತುರರೂ ಆಗಿದ್ದರು. ಅವರು ಅಭಿನಯಿಸುತ್ತಿದ್ದ ನಾಟಕಗಳಲ್ಲಿ ರಂಗಮಂದಿರ ತುಂಬಿ ಹೋಗಿರುತ್ತಿತ್ತು ಎಂಬುದಾಗಿ ನಾರಾಯಣರಾವ ಹುಯಿಲಗೋಳ ಹೇಳಿದ್ದಾರೆ. ಹಾಗೆಯೇ ಡಂಬಳ ಹುಚ್ಚಾಚಾರ್ಯರ ಸ್ತ್ರೀಪಾತ್ರ ನಿರ್ವಹಣೆ ಅಮೋಘವೂ, ಸಹಜವೂ ಆಗಿತ್ತಂತೆ. ಅವರು ಸ್ತ್ರೀವೇಷ ತೊಟ್ಟು ಅರಿಷಿಣ-ಕುಂಕುಮ ಕಾರ್ಯಕ್ರಮಗಳಿಗೆ ಹೋದರೆ ಆಕೆ ಹೆಣ್ಣುಮಗಳೆ ಎಂದು ಸ್ತ್ರೀಯರು ಭಾವಿಸುತ್ತಿದ್ದರಂತೆ. ವಿದೂಷಕ ಪಾತ್ರಧಾರಿ ಬಾದಾಮಿ ಪುಟ್ಟಾಚಾರ್ಯರು, ನಾಟಕದ ಸೂತ್ರಧಾರಿ ಜೀವೂ ಬಾಳಪ್ಪನವರು ಜನಪ್ರಿಯರಾಗಿದ್ದರು. ಗಾಯಕರಾಗಿದ್ದ ನಾಗೇಶಭಟ್ಟರು, ತಮ್ಮಣ್ಣಭಟ್ಟರು, ಮದ್ದಳೆ ಬಾರಿಸುವ ಕುನ್ನಿಭಾವಿ ಇಮ್ಮಣ್ಣ ಕೃತಪುರ ಮಂಡಳಿಯ ಆಸ್ತಿಗಳಾಗಿದ್ದು, ಅದರ ಯಶೋಗಾಥೆಗೆ ಕಾರಣರಾಗಿದ್ದರು.

"ಶಾಂತಕವಿಗಳು ಉತ್ತರ ಕರ್ನಾಟಕದ ಬಯಲು ನಾಟಕದ ನೆಲದ ಮೇಲೆಯೆ ವೃತ್ತಿರಂಗ ಮಹಲನ್ನು ಏರಿಸಿದರು. ಈ ಹರಿಕಥಾ ಕವಿ-ನಾಟಕಕಾರನಿಗೆ ಯಾವ ರಾಜಾಶ್ರಯವೂ ಇರಲಿಲ್ಲ. ಇಷ್ಟೇ ಅಲ್ಲ, ಈ ಕನ್ನಡ ನಾಟಕ ಚಳುವಳಿಗಾರ ತನ್ನ ಶಿಕ್ಷಕ ವೃತ್ತಿಗೆ ವ್ಯತ್ಯಯ ತರುವನೆಂದು ಮೇಲಧಿಕಾರಿಗಳು ಇವರನ್ನು ಗದುಗಿನ ಬಳಿಯ ಗ್ರಾಮವಾದ ಹೊಂಬಳಕ್ಕೆ ವರ್ಗಾಯಿಸಿದರು. ಇದರ ಹಿಂದೆ ಶಾಂತಕವಿಗಳ ಬಗ್ಗೆ ತೆರೆಯ ಹಿಂದೆಯೆ ಮತ್ಸರದ ನಾಟಕವೊಂದು ನಡೆದಿತ್ತೆಂದು ತಿಳಿಯುತ್ತದೆ. ಆದರೆ ಕೆಚ್ಚಿನ ಶಾಂತಕವಿ ಇದಕ್ಕೆ ಜಗ್ಗಲಿಲ್ಲ, ಬಗ್ಗಲಿಲ್ಲ. ಶಾಲೆ ಬಿಟ್ಟ ಮೇಲೆ ಹೊಂಬಳದಿಂದ ಐದು ಮೈಲು ನಡೆದುಕೊಂಡೊ, ಕುದುರೆಯ ಮೇಲೊ, ಎಮ್ಮೆಯ ಮೇಲೊ ಗದುಗಿನವರೆಗೂ ಬಂದು ರಂಗತಾಲೀಮು ನಡೆಸಿ ಮತ್ತು ಬೆಳಗಾಗುತ್ತಲೇ ಹೊಂಬಳ ತಲುಪುತ್ತಿದ್ದರಂತೆ." (ಎನ್.ಕೆ. ಕುಲಕರ್ಣಿ).

ಕೃತಪುರ ಮಂಡಳಿಯ ನಾಟಕಗಳ ರಚನೆ, ಪ್ರಸ್ತುತಿ, ತಂತ್ರಗಾರಿಕೆ,. ಜಾನಪದ ಹಾಗೂ ಆಧುನಿಕ ನಾಟಕಗಳ ಮೇಳೈಕೆಯಾಗಿತ್ತು. ಭಾಗವತರ ಆಟಗಳು

ಹಾಗೂ ಸಂಸ್ಕೃತ ನಾಟಕಗಳೆರಡರ ರೀತಿನೀತಿಗಳನ್ನು ಹೊಸತನಕ್ಕೆ ಪೋಷಕವಾಗುವಂತೆ ಸಮ್ಮಿಳಿಸಲಾಗಿತ್ತು. ತಮ್ಮ ಪ್ರಯೋಗಶೀಲ ಯತ್ನಗಳಿಂದ ಶಾಂತಕವಿಗಳು ಕನ್ನಡ ವೃತ್ತಿ ರಂಗಭೂಮಿಯಲ್ಲಿ ಹೊಸತನವನ್ನು ಹುಟ್ಟುಹಾಕಿದರು.

ಕೃತಪುರ ಮಂಡಳಿಯು ನಾಟಕಗಳಲ್ಲಿ ಯಕ್ಷಗಾನ ಪ್ರದರ್ಶನಗಳ ಥರವೆ ಸೂತ್ರಧಾರ (ಭಾಗವತ)ನು ನಾಟಕದುದ್ದಕ್ಕೂ ರಂಗದ ಮೇಲೆಯೆ ನಿಂತು ಅದನ್ನು ದಿಗ್ದರ್ಶಿಸುತ್ತಿದ್ದ. ಹೊಸ ಪಾತ್ರಗಳ ಪರಿಚಯ, ಹಿನ್ನೆಲೆ ಹಾಡು, ದೃಶ್ಯಗಳ ನಡುವಣ ಕಥಾ ನಿರೂಪಣೆ ಆತನ ಕೆಲಸ. ಆರಂಭದಲ್ಲಿ ನಾಂದಿಹಾಡಿ ವಿದ್ಯಾದೇವತೆಗಳನ್ನು ಸ್ತುತಿಸಿದಾಗ ಗಣಪತಿ ಹಾಗೂ ಶಾರದೆಯ ಪಾತ್ರಧಾರಿಗಳು ರಂಗದ ಮೇಲೆ ಕಾಣಿಸಿಕೊಳ್ಳುತ್ತಿದ್ದರು. ನಂತರ ವಿದೂಷಕನ ಆಗಮನ. ಚಿತ್ರವಿಚಿತ್ರ ವೇಷ, ತಲೆಗೆ ಸುತ್ತಲೂ ಬೇವಿನ ರೆಂಬೆಗಳನ್ನು ಕಟ್ಟಿಕೊಂಡು, ಅಡ್ಡಾದಿಡ್ಡಿ ಕುಣಿತ, ಹಾಡು, ಮಾತುಗಳಿಂದ ಪ್ರೇಕ್ಷಕರನ್ನು ನಗಿಸುತ್ತಿದ್ದ. ಆನಂತರದಲ್ಲಿ ನಾಟಕ ಆರಂಭವಾಗುತ್ತಿತ್ತು.

ಕೃತಪುರ ಮಂಡಳಿಯು ಸುಮಾರು ಹದಿನೈದು ವರ್ಷಗಳ ಕಾಲ ಸತತವಾಗಿ ನಾಟಕಗಳನ್ನು ಪ್ರದರ್ಶಿಸಿತು. ಅದು ತಟಸ್ಥವಾದ ಮೇಲೂ ಶಾಂತಕವಿಗಳು ಕನ್ನಡ ಮಂಡಳಿಗಳಿಗೆ ನಾಟಕಗಳನ್ನು ಬರೆದುಕೊಟ್ಟರು. ನರಗುಂದದ ನಾಟಕ ಮಂಡಳಿ ಅವರು ಬರೆದ ನಾಟಕಗಳನ್ನಾಡಿತು. ಶಿರಹಟ್ಟಿ ವೆಂಕೋಬರಾಯರ 'ಶ್ರೀ ಮಹಾಲಕ್ಷ್ಮೀ ಪ್ರಾಸಾದಿಕ ಸಂಗೀತ ನಾಟಕ ಮಂಡಳಿ'ಯಲ್ಲಿ ನಾಟಕಕಾರರಾಗಿ ಸೇವೆ ಸಲ್ಲಿಸಿದರು. ಕನ್ನಡ ನಾಡು, ನುಡಿಯ ಉತ್ಕಟ ಅಭಿಮಾನದಿಂದ ನಾಟಕಗಳನ್ನು ರಚಿಸಿ, ನಾಟಕ ಮಂಡಳಿಯನ್ನು ಕಟ್ಟಿ, ಅಭಿನಯ ತರಬೇತಿ ನೀಡಿ ವೃತ್ತಿನಾಟಕದ ಹೊಸ ಸಂಪ್ರದಾಯಕ್ಕೆ ನಾಂದಿ ಹಾಕಿದ ಶಾಂತಕವಿಗಳನ್ನು **'ಕರ್ನಾಟಕ ನಾಟಕ ಪಿತಾಮಹ'** ಎಂದು ಕರೆಯಲಾಗಿದೆ.

ಹತ್ತೊಂಭತ್ತನೆಯ ಶತಮಾನದ ಕೊನೆಯಲ್ಲಿ ಕನ್ನಡ ವೃತ್ತಿ ನಾಟಕರಂಗ ಹಲವು ತೊಂದರೆಗಳನ್ನು ಎದುರಿಸಿ ಬಡವಾಯಿತು. ಹೇಳಿಕೊಳ್ಳುವಂತಹ ಬೆಳವಣಿಗೆಗಳು ಕಾಣಲಿಲ್ಲ. ಹಲಸಗಿ, ಧಾರವಾಡ ಮಂಡಳಿಗಳು ಸ್ಥಗಿತವಾದವು. ಮರಾಠಿ ಮಂಡಳಿಗಳು ಮತ್ತೇ ಉತ್ತರ ಕರ್ನಾಟಕದಲ್ಲಿ ವಿಜೃಂಭಿಸಿದವು. ಮರಾಠಿ ಮಂಡಳಿಗಳ ವ್ಯವಸ್ಥಿತ ರಮ್ಯ ಪ್ರದರ್ಶನಗಳು, ರಂಗಮಂದಿರ ಪರಿಕರಗಳಲ್ಲಿಯ ನಾವಿನ್ಯತೆ, ಸೊಗಸಾದ ಅಭಿನಯ, ಮನಸೂರೆಗೊಳ್ಳುವ ಕಲೆ-ಸಂಗೀತದಿಂದ ವಿರಾಜಿಸಿದ ಮರಾಠಿ ನಾಟಕಗಳು ಕನ್ನಡಿಗರನ್ನು ಆಕರ್ಷಿಸಿದವು. ಅವುಗಳೆದುರಲ್ಲಿ ಕನ್ನಡ ನಾಟಕಗಳ ಕಳಪೆತನ ತಾನುತಾನಾಗಿಯೆ ವೇದ್ಯವಾಗುವಂತಿತ್ತು. ಧಾರವಾಡದ ಹಿಂದೂ ಯೂನಿಯನ್ ಕ್ಲಬ್, ಬಿಜಾಪುರದ ಕನ್ನಡ ಕಲಾವಿದರು

ಮರಾಠಿ ನಾಟಕಗಳನ್ನು ಆಡುವ ಮೂಲಕ ಮರಾಠಿ ಮಂಡಳಿಗಳ ಸಂಚಾರವನ್ನು ತಡೆಗಟ್ಟಲು ಯತ್ನಿಸಿದರು. ಆದರೇನು, ಕನ್ನಡ ನಾಡಿನಲ್ಲಿ ಮರಾಠಿ ನಾಟಕಗಳು ಜನಪ್ರಿಯವಾಗತೊಡಗಿದ್ದವು. ಧಾರವಾಡದ 'ಭರತ ಕಲೋತ್ತೇಜಕ ಸಂಗೀತ ಸಮಾಜ' ಎಂಬ ಹವ್ಯಾಸಿ ಮಂಡಳಿಯು ಕನ್ನಡ ರಂಗಭೂಮಿಯನ್ನು ಬಲಪಡಿಸಲೆಂದೇ ೧೯೦೯ರಲ್ಲಿ ಹುಟ್ಟಿಕೊಂಡು, ಚುರಮುರಿಯವರ 'ಕನ್ನಡ ಶಾಕುಂತಲ', ಉಳಿವೇಶ ಕವಿಯ ಮೃಚ್ಛಕಟಿಕದ ಕನ್ನಡಾನುವಾದದ ನಾಟಕ. ಮುದುವೀಡು ಕೃಷ್ಣರಾಯರು ಮರಾಠಿಯಿಂದ ಕನ್ನಡಕ್ಕೆ ಅನುವಾದಿಸಿದ್ದ 'ರಾಮರಾಜ್ಯ ವಿಯೋಗ' ಮತ್ತು 'ಸೌಭದ್ರ' ನಾಟಕಗಳನ್ನು ಯಶಸ್ವಿಯಾಗಿ ಪ್ರಯೋಗಿಸಿ ೧೯೧೬ರಲ್ಲಿ ಸ್ಥಗಿತಗೊಂಡಿತು.

## ಕಲಾವಿದರು :

| | |
|---|---|
| ಶಾಂತಕವಿ | : (ಸಕ್ಕರಿ ಬಾಳಾಚಾರ್ಯರು) ಕರ್ನಾಟಕ ನಾಟಕ ಪಿತಾಮಹ, ನಾಟಕಕಾರರು, ರಂಗಶಿಕ್ಷಕರು, ಮಂಡಳಿಯ ಮೇಲ್ವಿಚಾರಕರು, ವೇದಾಧ್ಯಯನ ಪರಿಣತರಾಗಿದ್ದರು. ಕನ್ನಡ ಕಾವ್ಯ ಗಮಕಿಗಳು ಹಾಗೂ ಪ್ರವಚನಕಾರರಾಗಿದ್ದರು. |
| ಗುಡಿ ರಾಘವೇಂದ್ರಾಚಾರ್ಯರು | : ಅಭಿನಯ ಚತುರರು, ಭೀಮಸೇನ, ಘಟೋತ್ಕಚ ಪಾತ್ರಗಳನ್ನು ಅದ್ಭುತವಾಗಿ ಮಾಡಿದವರು. |
| ಡಂಬಳ ಹುಚ್ಚಾಚಾರ್ಯರು | : ಸ್ತ್ರೀ ಪಾತ್ರಕ್ಕಾಗಿಯೇ ಹೇಳಿ ಮಾಡಿಸಿದಂತಹ ಕಲಾವಿದ. |
| ಬಾದಾಮಿ ಪುಟ್ಟಾಚಾರ್ಯರು | : ಖ್ಯಾತ ವಿದೂಷಕ ನಟ. |
| ಕೊಣ್ಣೂರ ಜೀವೂ ಬಾಳಪ್ಪನವರು | : ನಾಟಕದ ಸೂತ್ರಧಾರರು, ಸಂಗೀತ ಮೇಳದಲ್ಲಿ ಮುಖ್ಯ ಹಾಡುಗಾರರು. |
| ನಾಗೇಶಭಟ್ಟರು ಮತ್ತು ತಿಮ್ಮಣ್ಣಭಟ್ಟರು | : ಹಿಮ್ಮೇಳ ಹಾಡುಗಾರರು |
| ಕುನ್ನಿಭಾವಿ ಇಮ್ಮಣ್ಣನವರು | : ಹೆಸರಾಂತ ಮದ್ದಳೆ ವಾದಕರು. |

ಅಸುಂಡಿ ವೆಂಕಪ್ಪ, ಡೋಣಿ ರಂಗಪ್ಪ, ತಳಕಲ್ಲ ಗುರುಲಿಂಗಪ್ಪ, ಯಜ್ಞೇಶ್ವರ ಪಂತ ಮೊದಲಾದವರು ಇನ್ನಿತರ ಪ್ರಮುಖ ಕಲಾವಿದರಾಗಿದ್ದರು.

## ಶಿರಹಟ್ಟಿ ವೆಂಕೋಬರಾವ್ ಹಲಗೇರಿಕರ್ ಅವರ

# ಶ್ರೀ ಮಹಾಲಕ್ಷ್ಮೀ ಪ್ರಾಸಾದಿಕ ಸಂಗೀತ ನಾಟಕ ಮಂಡಳಿ

ಗದಗ ಜಿಲ್ಲೆಯ ಶಿರಹಟ್ಟಿಯ ವೆಂಕೋಬರಾವ್ ಹಲಗೇರಿಕರ್ ಅವರು 'ಶಿರಹಟ್ಟಿ ವೆಂಕೋಬರಾಯರು' ಎಂದೇ ಚಿರಪರಿಚಿತರು. ಕನ್ನಡ ವೃತ್ತಿ ನಾಟಕ ಮಂಡಳಿಯನ್ನು ಸಂಘಟಿಸಿ, ವೈಭವದಿಂದ ಮುನ್ನಡೆಸಿ ಅದಕ್ಕೊಂದು ಪ್ರಸಿದ್ಧಿಯನ್ನು ತರುವಲ್ಲಿ ಬಹುವಾಗಿ ಶ್ರಮಿಸಿದ ಧೀಮಂತರು. ೧೯೦೩ರಲ್ಲಿ ಅವರು ಆರಂಭಿಸಿದ್ದ 'ಶ್ರೀ ಮಹಾಲಕ್ಷ್ಮೀ ಪ್ರಾಸಾದಿಕ ಸಂಗೀತ ನಾಟಕ ಮಂಡಳಿ' ೨೦ನೆಯ ಶತಮಾನದ ಆರಂಭದ ದಶಕದಲ್ಲಿ ಪ್ರಸಿದ್ಧ ವೃತ್ತಿ ನಾಟಕ ಮಂಡಳಿಯಾಗಿತ್ತು. ಈ ಮಂಡಳಿ ಪ್ರದರ್ಶಿಸಿದ ಮೊದಲ ನಾಟಕ 'ಪದ್ಮಾವತಿ ಪರಿಣಯ' ಭಾರಿ ಸುದ್ದಿ ಮಾಡಿತು. ೧೯೦೬ರಲ್ಲಿ ರಂಗಕ್ಕೇರಿದ 'ಕನ್ನಡ ಶಾಕುಂತಲ' (ಚುರಮುರಿ ಶೇಷಗಿರಿರಾಯರ ಅನುವಾದ) ಹಾಗೂ ಹೊಸ ಸಾಮಾಜಿಕ ನಾಟಕಗಳಾದ 'ಕಾಲಿದಾಸ ಕಲ್ಪಿತ' ಮತ್ತು 'ಯುವತೀ ವಿಜಯ' ಪ್ರೇಕ್ಷಕರ ಮೆಚ್ಚುಗೆಯೊಂದಿಗೆ ಗಲ್ಲಾಪೆಟ್ಟಿಗೆ ಯಶಸ್ಸನ್ನು ಸಾಧಿಸಿದವು. ಕೊಲ್ಲೂರಯ್ಯಸ್ವಾಮಿ, ಗೋವಿಂದಾಚಾರ್ಯ ಹಾಗೂ ವಾಮನರಾವ್ ಮಾಸ್ತರ ವೆಂಕೋಬರಾಯರ ನಾಟಕ ಮಂಡಳಿಯ ಯಶಸ್ಸಿನಲ್ಲಿ ಪಾಲುದಾರರಾಗಿದ್ದರು. ಈ ಮಂಡಳಿಯ ನಾಟಕಗಳು ಮೈಸೂರಿನ ಪುರಭವನದಲ್ಲಿ ಪ್ರದರ್ಶನಗೊಂಡವು. ರಂಗಸಂಗೀತ ಪ್ರೇಕ್ಷಕವೃಂದದ ಮನವನ್ನು ಸೂರೆಗೊಂಡಿತು. ಮೈಸೂರು ಅರಸರಿಂದಲೂ ಆಹ್ವಾನ ಬಂದು, ಅರಸರ ಸಮ್ಮುಖದಲ್ಲಿ 'ಯುವತೀ ವಿಜಯ', 'ಭೋಜ ಪ್ರಬಂಧ' ನಾಟಕಗಳು ಪ್ರದರ್ಶನಗೊಂಡವು. 'ಕಾಳಿದಾಸ' ನಾಟಕದಲ್ಲಿ ಭಟ್ಟ ನಾಯಕನ ಪಾತ್ರವನ್ನು ಆಡಿದ್ದ ವಾಮನರಾವ್ ಮೈಸೂರಿನ ಜನರಿಗೆ ಬಹು ಇಷ್ಟವಾದರು. ಮುಂದೆ ಈ ಮಂಡಳಿಯು ಆಂಧ್ರ ಹಾಗೂ ಮಹಾರಾಷ್ಟ್ರ ರಾಜ್ಯಗಳ ಪ್ರಮುಖ ಪಟ್ಟಣಗಳಲ್ಲಿ ಕನ್ನಡ ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿತು. 'ವಿವೇಕೋದಯ', 'ಕಾಳಿದಾಸ ಚರಿತೆ', 'ಪ್ರಹ್ಲಾದ ಚರಿತೆ', 'ಕೃಷ್ಣಲೀಲಾ', 'ರಾಮಾಯಣ' ಮೊದಲಾದವುಗಳು ಈ ಮಂಡಳಿಯಿಂದ ಪ್ರದರ್ಶನಗೊಂಡವು.

೧೯೧೬ ರಲ್ಲಿ ಮಂಡಳಿಯು ಪುನಃ ಮೈಸೂರು ಪಟ್ಟಣದಲ್ಲಿ ಅರಸರ ಎದುರು 'ಶನಿಪ್ರಭಾವ' ಮತ್ತು 'ಕೃಷ್ಣಲೀಲಾ' ನಾಟಕಗಳನ್ನು ಪ್ರದರ್ಶಿಸಿ ಮನ್ನಣೆ ಪಡೆದುಕೊಂಡಿತು. ತೋರಣಗಲ್ಲಿನ ರಾಜಾರಾಯರು ರಚಿಸಿದ 'ರಾಮಾಂಜನೇಯ ಯುದ್ಧ' ಹಾಗೂ ಮಮದಾಪೂರ ಗುರುರಾಯರು ಮರಾಠಿ ಕೃತಿಯಿಂದ ಅನುವಾದಿಸಿದ್ದ 'ಇಂದಿರಾ' ನಾಟಕ ಪ್ರದರ್ಶನಗಳು ಅದ್ಭುತ ಯಶಸ್ಸನ್ನು ಸಾಧಿಸಿದವು.

ಶಿರಹಟ್ಟಿ ವೆಂಕೋಬರಾಯರು ಸ್ವತಃ ಶ್ರೇಷ್ಠ ನಟರಾಗಿದ್ದರು. ಅವರ ರಸಭರಿತ ಅಭಿನಯ ಮತ್ತು ವಾಮನರಾಯರ ಅದ್ಭುತ ಸಂಗೀತ ನಾಟಕಗಳಲ್ಲಿ ಪರಸ್ಪರ ಸ್ಪರ್ಧಾತ್ಮಕ ಎಂಬಂತೆ ತೋರುತ್ತಿದ್ದವು. ಪ್ರೇಕ್ಷಕರು ಇವರೀರ್ವರ ಮೇಲ್ಮೆಯ ಏರಾಟಗಳನ್ನು ನೋಡುತ್ತಿದ್ದಂತೆ ಮಂತ್ರಮುಗ್ಧರಾಗುತ್ತಿದ್ದರಂತೆ. ನಾಟಕಗಳನ್ನು ನೋಡಿಯಾದ ಮೇಲೆ ಬಹು ಸಮಯದ ವರೆಗೆ ವೆಂಕೋಬರಾಯರ ನಟನಾ ಚಾತುರ್ಯ ಹಾಗೂ ವಾಮನರಾಯರ ಚಮತ್ಕಾರಿಕ ಸಂಗೀತ ಜನರ ಚರ್ಚೆಯ ವಿಷಯವಾಗಿ 'ಅವರೇ ಮೇಲು, ಇವರದ್ದೇ ಹೆಚ್ಚುಗಾರಿಕೆ' ಎಂಬಂತೆ ಮಾತುಗಳಾಗಿ ಪ್ರಶಂಸೆಗಳು ವಿಮರ್ಶೆಯ ರೀತಿಯಲ್ಲಿ ನಡೆಯುತ್ತಿದ್ದವು ಎಂದು ಹೇಳಲಾಗಿದೆ. ವೆಂಕೋಬರಾಯರ ನಾರದ ಪಾತ್ರಾಭಿನಯ, ಲಕ್ಷ್ಮಣಪುರಿಯವರ ವಿದೂಷಕ ಪಾತ್ರಾಭಿನಯ, ಅಸುಂಡಿ ಹಾಗೂ ವಾಮನರಾಯರ ಸಂಗೀತ, ಹೊಂಬಳ ವಾಸುದೇವಾಚಾರ್ಯರ ಆಲಾಪನ ಅಂದಿನ ಪ್ರೇಕ್ಷಕ ವೃಂದದ ಮೆಲುಕಾಟದ ಪ್ರಶಂಸೆಗಳಾಗಿದ್ದವು.

ವೆಂಕೋಬರಾಯರ ಮಂಡಳಿಯ ರಂಗಸಜ್ಜಿಕೆ, ಪಾತ್ರಧಾರಿಗಳ ವೇಷಾಲಂಕಾರಗಳು ವಿಶೇಷವಾಗಿ ಜನಮನವನ್ನು ಸೆಳೆದಿದ್ದವು. ಇದಕ್ಕಾಗಿ ಅವರು ಸಾಕಷ್ಟು ಹಣವನ್ನು ತೊಡಗಿಸುತ್ತಿದ್ದರು. 'ದಶಾವತಾರ'ಕ್ಕಾಗಿ ನಿರ್ಮಿಸಿದ್ದ ರಂಗಸಜ್ಜಿಕೆ ಬಹಳಷ್ಟು ವೆಚ್ಚದಾಯಕವಾಗಿತ್ತು. ರಂಗಮಂಟಪದಲ್ಲಿ ದೀಪ ಆರಿ ಹತ್ತುವ ಕ್ಷಣಾರ್ಧದಲ್ಲಿಯೇ ದೃಶ್ಯಗಳನ್ನು ಬದಲಿಸುವ ತಂತ್ರ (ಟ್ರಾನ್ಸಫರ್ ಸೀನ್ಸ್) ಆ ಕಾಲದಲ್ಲಿ ತೀರ ಹೊಸ ತಂತ್ರವಾಗಿತ್ತು. "ದೃಶ್ಯವೈಭವ, ರಂಗತಂತ್ರಗಳ ಬಳಕೆಯಲ್ಲಿ ಈ ಕಂಪನಿಯ ಸಾಧನೆ ಅಪೂರ್ವವಾದದ್ದು. 'ದಶಾವತಾರ', 'ಲಂಕಾದಹನ', 'ಸಂಪೂರ್ಣ ರಾಮಾಯಣ', 'ಶಿವಲೀಲಾ' ಮುಂತಾದ ನಾಟಕಗಳಿಗೆ ಅದ್ಭುತ ರಂಗಸಜ್ಜಿಕೆಗಳನ್ನು ಅಳವಡಿಸಲಾಗಿತ್ತು. 'ದಶಾವತಾರ'ದ ಒಂದು ದೃಶ್ಯಕ್ಕಾಗಿ ಆರು ಸಾವಿರ ರೂಪಾಯಿ ಖರ್ಚು ಮಾಡಲಾಗಿತ್ತು. ನರಸಿಂಹ ಕಂಭ ಸೀಳಿ ಬರುವ ದೃಶ್ಯ ರೋಮಾಂಚನಕಾರಿಯಾಗಿತ್ತು. ಒಂದು ಕಂಭದಲ್ಲಿ ನರಸಿಂಹ ಪ್ರಕಟವಾದ ತಕ್ಷಣ ಉಳಿದೆಲ್ಲ ಕಂಭಗಳಿಂದಲೂ ನರಸಿಂಹ ಎದ್ದು ಬರುವಂತೆ ಅವನ ವೇಷದ ಕಲಾವಿದರು ಪ್ರಕಟಗೊಳ್ಳುವ ಏರ್ಪಾಡು ಮಾಡಲಾಗಿತ್ತು."*

" 'ಲಂಕಾ ದಹನ'ದಲ್ಲಿ ಹನುಮಂತನು ಗಿಡದಿಂದ ಗಿಡಕ್ಕೆ ಹಾರಾಡುವ ಮತ್ತು ಲಂಕೆಗೆ ಬೆಂಕಿ ಇಡುವ ದೃಶ್ಯಾವಳಿಗಾಗಿ ಬಾಳೆ ಗಿಡ, ರಟ್ಟಿನ ಮನೆಗಳನ್ನು

---

* ಡಾ. ರಾಮಕೃಷ್ಣ ಮರಾಠೆ, ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿ ಪುಟ ೭೫.

ಬಳಸಲಾಗುತ್ತಿತ್ತು. 'ಕೃಷ್ಣಲೀಲೆ'ಯಲ್ಲಿ ಕಂಸನು ದೇವಕಿಯ ಎಂಟನೆಯ ಮಗುವನ್ನು ಕೊಲ್ಲಲು ಕೈಎತ್ತಿದಾಗ ಮಗು ಆಕಾಶಕ್ಕೆ ನೆಗೆಯುವುದನ್ನು ರಂಗಮಂದಿರದ ಮೇಲ್ಭಾಗದಲ್ಲಿ ಆಳವಡಿಸಿದ ಸ್ಟ್ರಿಂಗ್ ತಂತಿಗೂ ಅರಿವೆ ಗೊಂಬೆಗೂ ಸೂಕ್ಷ್ಮ ದಾರ ಕಟ್ಟಿ ಎಳೆಯುವ ರೀತಿ ಪ್ರೇಕ್ಷಕರಿಗೆ ನಿಜವೆನ್ನುವಂತೆ ಭಾಸವಾಗುತ್ತಿತ್ತು. ಕಾಳಿಂಗಮರ್ದನ ಸನ್ನಿವೇಶ ಕೂಡ ಟ್ರಾನ್ಸಫರ್ ಸೀನಿನ ಹಿನ್ನೆಲೆಯಲ್ಲಿ ಸುಂದರವಾಗಿ ಗೋಚರಿಸುತ್ತಿತ್ತು."*

೧೯೧೫ ರಿಂದ ೧೯೨೫ರ ಅವಧಿಯಲ್ಲಿ ರಂಗಸಜ್ಜಿಕೆ ಹಾಗೂ ನಟವರ್ಗದ ಪೋಷಾಕುಗಳ ವಿಷಯದಲ್ಲಿ ವೆಂಕೋಬರಾಯರ ಮಂಡಳಿಯೆ ಅತ್ಯಂತ ಸಿರಿಸಂಪನ್ನವೂ, ವೈಭವಪೇರಿತವೂ ಆಗಿತ್ತು. ವೆಂಕೋಬರಾಯರು ಸಂಘಟನಾ ಚತುರರಾಗಿದ್ದರು. ತಮ್ಮ ಸಮಯಪ್ರಜ್ಞೆ, ಮುಂದಾಲೋಚನೆಯಿಂದ ನಾಟಕ ಪ್ರದರ್ಶನಗಳ ಸ್ಥಳದ ಆಯ್ಕೆಯಿಂದ ಹಿಡಿದು ಮಂಡಳಿಯ ಕಲಾವಿದರನ್ನು ಸಂಭಾಳಿಸುವುದು, ಪ್ರತಿಭಾ ಸಂಪನ್ನ ಹೊಸ ಕಲಾವಿದರನ್ನು ಕಲೆಹಾಕುವುದು ಹಾಗೂ ನಾಟಕದ ನಿತ್ಯ ಓಘ-ಓಟ ಸುರಳಿತವಾಗಿರುವಂತೆ ಎಚ್ಚರಿಕೆವಹಿಸುತ್ತಿದ್ದರು. ಪ್ರೇಕ್ಷಕರ ಇಷ್ಟ, ಒಲವುಗಳನ್ನು ಗಮನಿಸಿ, ಅವರ ಸ್ಪಂದನೆ - ಪ್ರತಿಸ್ಪಂದನೆಗಳಿಗೆ ತಕ್ಕಂತೆ ಪ್ರದರ್ಶನಗಳಲ್ಲಿ ಮಾರ್ಪಾಡುಗಳನ್ನು ಮಾಡುತ್ತ, ತಮ್ಮ ಮಂಡಳಿಯ ಜನಪ್ರಿಯತೆಯನ್ನು ಸುಮಾರು ಮೂರು ದಶಕಗಳ ಕಾಲ ಉಳಿಸಿಕೊಂಡು, ನಾಟಕಗಳನ್ನು ಯಶಸ್ವಿಯಾಗಿ ನಡೆಸಿದರು. ೧೯೩೬ ರಲ್ಲಿ ಅವರ ನಾಟಕ ಮಂಡಳಿ ಸ್ಥಗಿತವಾಯಿತು. ಮುಂದೆ ಮೂರು ವರ್ಷಗಳಲ್ಲಿ ಅವರು ವಿಧಿವಶರಾದರು. ಉತ್ತರ ಕರ್ನಾಟಕದ ರಂಗಭೂಮಿಗೆ ಅಮೋಘವಾದ ಸ್ಮರಣೀಯ ಕಾಣಿಕೆಗಳನ್ನಿತ್ತ ಹಿರಿಮೆ ಅವರದು.

## ಕಲಾವಿದರು :

ವೆಂಕೋಬರಾಯರು, ರೊಟ್ಟಿ ಗೋವಿಂದಾಚಾರ್ಯ, ವರವಿ ಚೆನ್ನಯ್ಯ, ಕೊಟ್ಟೂರಪ್ಪ, ವಾಮನರಾವ ಮಾಸ್ತರ, ಶಿವಾಜಿ ಮಲ್ಲೂರ, ಅಂಬಾದಾಸರಾವ, ಲಕ್ಷ್ಮಣರಾವ ಅಸುಂಡಿ, ಲಕ್ಷ್ಮಣರಾವ ಪುರಿ, ವರವಿ ಫಕೀರಯ್ಯ, ನರಸಿಂಹ ಪೇಂಟರ್, ಎಲ್ಲಪ್ಪ ಭಭಕಿ, ಸುಬಾನಪ್ಪ ಅಸುಂಡಿ, ವಾಸುದೇವರಾವ ಹೊಂಬಳ, ನೀಲಕಂಠ ಮಾಸ್ತರ ಮರೋಳ, ಆರ್. ನಾಗೇಂದ್ರರಾವ, ವಾಸುದೇವರಾವ ಹನುಮಸಾಗರ, ತಮ್ಮಯ್ಯ ಹಲಗೇರಿ, ತುಕಾರಾಮಬುವಾ ಗೋಕಾಕ, ಸಿದ್ಲಿಂಗಪ್ಪ ಆಲಗಿಲವಾಡ, ಅಮೀನಗಡ ಬಾಡಸಾಬ, ಬಾಳಪ್ಪ ಲೋಕಾಪೂರ, ಸಖಾರಾಮ ನಾಂದಣೀಕರ,

* ಡಾ. ರಾಮಕೃಷ್ಣ ಮರಾಠೆ, ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿ ಪುಟ ೭೫.

ನೀಲಕಂಠ ಶಾಸ್ತ್ರೀ ಕೊಪ್ಪಳ, ಸಣ್ಣಬಸಪ್ಪ ತಿಮ್ಮಸಕಟ್ಟಿ, ಗದಗ ತುಳಜಪ್ಪ, ಯಲ್ಲಪ್ಪ ಹುಬ್ಬಳ್ಳಿ, ಗುರುಸ್ವಾಮಿ ನಾಯಡು, ಗೋವಿಂದಪ್ಪ ಗುಳೇದಗುಡ್ಡ, ರಾಮಚಂದ್ರ ಕೋಪರ್ಡೆ, ವೀರಪ್ಪ ಹರ್ಲಿ, ಅಪ್ಪಣ್ಣ ಪಾತರದ, ಬಸಯ್ಯ ಮೆಳ್ಳಳ್ಳಿ, ಕಾಳಪ್ಪ ಬಡಿಗೇರ, ಭರತೇಶ ಮಣ್ಣೂರ, ಶಿರಹಟ್ಟಿ ಹುಚ್ಚಪ್ಪ, ದೇವೇಂದ್ರಪ್ಪ ಸರೇಗಲ್ಲ, ಬಸವಣ್ಣೆಪ್ಪ ಪಲ್ಲೇದ, ಫಕೀರಪ್ಪ ಪಲ್ಲೇದ, ಬಸನಗೌಡ ಮಣ್ಣೇರಿ, ಫಕೀರಗೌಡ ಮಣ್ಣೇರಿ, ತಾಜುದ್ದೀನ ಹೆಸರೂರ, ಸತ್ಯಪ್ಪ ಹಾಡಲಗೇರಿ, ಪೀರಸಾಬ ಅಸುಂಡಿ, ದ್ಯಾಮಣ್ಣ ಅಸುಂಡಿ, ಚೆನ್ನಬಸಪ್ಪ ಸೊರಟೂರ, ಹನುಮಂತಪ್ಪ ವೆಂಕಟಾಪೂರ, ಚೆನ್ನಬಸಪ್ಪ ಹಡಗಲಿ, ದ್ಯಾಮಣ್ಣ ಬಿಜಾಪೂರ, ಸಿದ್ಧಲಿಂಗಪ್ಪ ಬ್ಯಾಹಟ್ಟಿ.

**ನಟಿಯರು :** ಶಿರಹಟ್ಟಿ ಇಮ್ಮಾಸಾನಿ, ಲಕ್ಷ್ಮೇಶ್ವರ ಮರ್ದಾನಜಾನ, ಲಕ್ಷ್ಮೇಶ್ವರ ನಜೀರಬೀ, ಬೆಟಗೇರಿ ಆನಂದಸಾನಿ, ಗುಳೇದಗುಡ್ಡ ಹನುಮಂತೆವ್ವ, ಬ್ಯಾಡಗಿ ಸಾವಿತ್ರಮ್ಮ.

ರಾಮಯ್ಯ ಮತ್ತು ಸಾಂಬಪ್ಪ ಶಿರಹಟ್ಟಿ (ರಂಗ ಮಂಟಪದ ವ್ಯವಸ್ಥಾಪಕರು), ಸುಬ್ಬರಾವ (ಟಿಕೇಟ್ ನಿರ್ವಹಣೆ) ಹನುಮಂತರಾವ, ನಾರಾಯಣ ಮಂಗಳೂರ (ಭೋಜನ ಶಾಲೆ ನಿರ್ವಹಣೆ), ಅಣ್ಣಾರಾವ್ ಮಂಡಗಿ (ಸಂಘದ ವ್ಯವಸ್ಥಾಪಕರು).

## ವಾಮನರಾವ್ ಮಾಸ್ತರರ
## ವಿಶ್ವಗುಣಾದರ್ಶ ಸಂಗೀತ ನಾಟಕ ಮಂಡಳಿ

ಶಿರಹಟ್ಟಿ ವೆಂಕೋಬರಾಯರ 'ಶ್ರೀ ಮಹಾಲಕ್ಷ್ಮೀ ಪ್ರಾಸಾದಿಕ ಸಂಗೀತ ನಾಟಕ ಮಂಡಳಿ'ಯಲ್ಲಿ ಸಂಗೀತ ಮಾಸ್ತರರಾಗಿ ಕೆಲಸ ಮಾಡುತ್ತಿದ್ದ ವಾಮನರಾವ ಮಾಸ್ತರರು ೧೯೩೧ ರಲ್ಲಿ ತಮ್ಮದೇ ಸ್ವಂತ ನಾಟಕ ಮಂಡಳಿಯನ್ನು ಹುಟ್ಟುಹಾಕಿದರು. 'ವಿಶ್ವಗುಣಾದರ್ಶ ಸಂಗೀತ ನಾಟಕ ಮಂಡಳಿ' ಎಂದು ಅದನ್ನು ಹೆಸರಿಸಿ ೧೯೧೪ ರ ಜೂನ್ ತಿಂಗಳಲ್ಲಿ ರಾಣೆಬೆನ್ನೂರಿನಲ್ಲಿ 'ಕವಿರತ್ನ ಕಾಳಿದಾಸ' ನಾಟಕದೊಂದಿಗೆ ಆರಂಭಿಸಿದರು. ೧೯೦೭ ರಲ್ಲಿಯೆ ವೆಂಕೋಬರಾಯರ ನಾಟಕ ಮಂಡಳಿಯಲ್ಲಿ ಆಹ್ವಾನಿತರಾಗಿ ಸೇರಿಕೊಂಡಿದ್ದ ವಾಮನರಾಯರು ತಮ್ಮ ಸಂಗೀತದ ಮೇಲ್ಮೆಯಿಂದ ಹೆಸರು ಮಾಡಿದ್ದರು. ಉತ್ತಮ ನಟರೂ, ಗಾಯಕರೂ ಆಗಿದ್ದು ವೆಂಕೋಬರಾಯರ ಮಂಡಳಿಯ ಜನಪ್ರಿಯತೆಗೆ ಬಹುವಾಗಿ ಕಾರಣರಾಗಿದ್ದರು. ತಮ್ಮ ಹೊಸ ಮಂಡಳಿಯನ್ನು ಆರಂಭಿಸುವ ಸಮಯಕ್ಕಾಗಲೆ ಅವರು ಖ್ಯಾತನಾಮರಾಗಿದ್ದರು.

ಮಂಡಳಿಯ ಆರಂಭದಲ್ಲಿ ಮೊದಮೊದಲು ಶಿರಹಟ್ಟಿ ಕಂಪನಿಯ ನಾಟಕಗಳನ್ನೆ ಹೆಸರು ಬದಲಿಸಿ ಪ್ರದರ್ಶಿಸಿದರು. ವಾಮನರಾಯರ

ಹಾಡುಗಾರಿಕೆಯೆ ನಾಟಕಗಳ ಜೀವಾಳವಾಗಿತ್ತು. ಇವರ ಮಂಡಳಿಯಲ್ಲಿದ್ದ ರಾಣೆಬೆನ್ನೂರ ಮಲ್ಲಪ್ಪ, ಗುರುರಾವ ದೇಶಪಾಂಡೆ, ಮಿಶ್ರಿಕೋಟಿ ಕೇಶವಭಟ್ಟ, ಬೇವೂರ ಬಾದಷಾ, ಸಂಗನಬಸಪ್ಪ ಕುಕನೂರ ಮೊದಲಾದವರು ಶಾಸ್ತ್ರೀಯ ಸಂಗೀತಪಟುಗಳಾಗಿದ್ದರು. ವಾಮನರಾಯರ ವಿಶ್ವಗುಣಾದರ್ಶ ಮಂಡಳಿಯ ನಾಟಕಗಳಲ್ಲಿ ಸಂಗೀತವೇ ಪ್ರಧಾನವಾಗಿ ಪ್ರೇಕ್ಷಕರನ್ನು ಆಕರ್ಷಿಸಿತು.

ರಂಗನಾಟಕದಲ್ಲಿ ಸಂಗೀತದ ಅನುಭವವಿದ್ದ ವಾಮನರಾಯರಿಗೆ ಪ್ರೇಕ್ಷಕರ ಅಭಿರುಚಿ ಏನೆಂಬುದು ತಿಳಿದಿತ್ತು. ಮರಾಠಿ ಚಾಲ್ ಮತ್ತು ಹಿಂದಿಯ ಹೊಸ ಚೀಜ್‌ಗಳಾನ್ನಧರಿಸಿ ರಂಗಗೀತೆಗಳನ್ನು ರಚಿಸಿ ಕಲಾತ್ಮಕವಾಗಿ ಹಾಡುತ್ತಿದ್ದರು. 'ಸಾಧ್ವಿ ಸಖೂಬಾಯಿ', 'ಭಕ್ತಪುಂಡಲೀಕ', 'ಸಂದೇಹ ಸಾಮ್ರಾಜ್ಯ' ನಾಟಕಗಳನ್ನು ದೃಶ್ಯಮಾಧ್ಯಮಕ್ಕೆ ತಕ್ಕಂತೆ ರಚಿಸಿ ಪ್ರದರ್ಶಿಸಿದರು. ಸ್ತ್ರೀಪಾತ್ರಗಳನ್ನು ಮೊದಲು ಪುರುಷರೆ ವಹಿಸುತ್ತಿದ್ದರು. ಬಸವನಕೊಪ್ಪದ ಗಿರಿಗೌಡರ ನಾಯಕಿ ಪಾತ್ರ ನಿರ್ವಹಿಸುತ್ತಿದ್ದರು. ಹುಬ್ಬಳ್ಳಿಯ ನಾಗಪ್ಪ ಮತ್ತು ಸಂಗಪ್ಪ ಪೋಷಕ ನಟಿಯರಾಗಿ ಅಭಿನಯಿಸುತ್ತಿದ್ದರು. ಆಡುಮಾತಿನ ಸರಳ ಸಂಭಾಷಣೆಗಳು, ಮೋಹಕವಾದ ಮರಾಠಿ ರಂಗಗೀತೆಗಳ ಧಾಟಿಗಳು ನಾಟಕದ ಯಶಸ್ಸಿಗೆ ಕಾರಣವಾದವು.

"ಆಪ್ಯಾಯಮಾನವಾದ ರಂಗಸಂಗೀತ ಹಾಗೂ ಸರಳವಾದ ಆಡುಮಾತಿನ ಸ್ವಾಭಾವಿಕ ಸಂಭಾಷಣೆಗಳಿಂದಾಗಿ ವಿಶ್ವಗುಣಾದರ್ಶ ನಾಟಕ ಮಂಡಳಿಯು ಉತ್ತರ ಕರ್ನಾಟಕ ರಂಗಭೂಮಿ ಮತ್ತೊಂದು ಹೆಜ್ಜೆ ಮುಂದಿಡುವಂತೆ ಮಾಡಿತು. ಶಿವಮೂರ್ತಿ ಸ್ವಾಮಿಗಳ ಪ್ರದರ್ಶನಗಳಲ್ಲಿದ್ದ ಅದ್ದೂರಿಯ ಆಡಂಬರವೂ, ವೆಂಕೋಬರಾಯರ ನಾಟಕಗಳಲ್ಲಿದ್ದ ಕ್ರಾಂತಿಕಾರವಾದ ಪ್ರಯೋಗಗಳೂ ಇಲ್ಲದಿದ್ದರೂ ವಾಮನರಾಯರ ನಾಟಕವೆಂದರೆ, ಮೆಚ್ಚತಕ್ಕ ಕಥಾವಸ್ತು, ಅತಿಹಿತವಾದ ರಂಗಸಂಗೀತ ಹಾಗೂ ಗಂಭೀರವಾದ ಪ್ರದರ್ಶನದ ನೆಚ್ಚು ಇದ್ದುದರಿಂದ, ಕನ್ನಡ ಜನ, ಅವರ ನಾಟಕಗಳನ್ನು ಮುಗಿಬಿದ್ದು ನೋಡಿದರು."*

ನಾಟಕ ಮಂಡಳಿಗೆ ಭದ್ರ ತಳಪಾಯ ಹಾಕಿದ ನಂತರ ವಾಮನರಾಯರು ಒಳ್ಳೆಯ ನಟ-ನಟಿಯರನ್ನು ಕಲೆಹಾಕಿದರು. ಗಂಗೂಬಾಯಿ ಗುಳೇದಗುಡ್ಡ ಎಂಬ ಕಲಾವಿದೆಯನ್ನು ನಾಯಕಿ ಪಾತ್ರಕ್ಕೆ ಅಣಿಮಾಡಿದರು. ತಾವು ಪ್ರಮುಖ ಪಾತ್ರಗಳನ್ನು ವಹಿಸಿಕೊಂಡು ಜನಪ್ರಿಯನಟ ಎನಿಸಿದರು. ಮಲ್ಲಿಕಾರ್ಜುನ ಮನಸೂರ, ಬಸವರಾಜ ಮನಸೂರ ಇವರ ಮಂಡಳಿಯಲ್ಲಿ ಹೆಸರಾಂತ ಕಲಾವಿದರಾದರು. ಬೆಂಗಳೂರು, ತುಮಕೂರು, ಗದಗ, ಅಥಣಿ,

* ಡಾ. ಎಚ್.ಕೆ. ರಂಗನಾಥ, ಕರ್ನಾಟಕ ರಂಗಭೂಮಿ ಪುಟ ೧೪೧.

ಬಾಗಿಲುಕೋಟೆಯಲ್ಲಿ ನಾಟಕಗಳು ಯಶಸ್ವಿಯಾಗಿ ಪ್ರಯೋಗಗೊಂಡವು. ೧೯೨೧ ರಲ್ಲಿ ಧಾರವಾಡ, ದಾವಣಗೆರೆ, ಬೆಂಗಳೂರಿನಲ್ಲಿ 'ಸಂದೇಹ ಸಾಮ್ರಾಜ್ಯ', 'ಸಾಧ್ವಿ ಸಖೂಬಾಯಿ' ಮತ್ತು 'ಭಕ್ತಪುಂಡಲೀಕ' ನಾಟಕಗಳು ಭರ್ಜರಿಯಾಗಿ ಪ್ರದರ್ಶಿತವಾದವು. ಸಖೂಬಾಯಿಯ ಪತಿ ಮಾಧವನ ಪಾತ್ರದಲ್ಲಿ ವಾಮನರಾಯರು ಹಾಡಿದ ರಮ್ಯಗೀತೆ ಪ್ರೇಕ್ಷಕರನ್ನು ರೋಮಾಂಚನಗೊಳಿಸಿತು. ವಾಮನರಾವ್ ಹಾಗೂ ಗುಳೇದಗುಡ್ಡ ಗಂಗೂಬಾಯಿ ಜೋಡಿ ಹಾಡುಗಾರಿಕೆ, ಅಭಿನಯದಿಂದ ಪ್ರೇಕ್ಷಕರು ಹುಚ್ಚೆದ್ದು ಕುಣಿಯುವಂತೆ ಮಾಡುತ್ತಿತ್ತು. ಭಾರೀ ಕರತಾಡನದಿಂದ ಪ್ರೇಕ್ಷಕರು ತಮ್ಮ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರಂತೆ. ೧೯೨೨ ರಲ್ಲಿ ನಾಲ್ವಡಿ ಕೃಷ್ಣರಾಜರ ಆಮಂತ್ರಣದ ಮೇರೆಗೆ ಅರಮನೆಯ ಜಗನ್ಮೋಹನ ರಂಗಮಂದಿರದಲ್ಲಿ 'ಸಂತಸಖೂಬಾಯಿ', 'ಭಕ್ತಪ್ರಹ್ಲಾದ', 'ಭಕ್ತಪುಂಡಲೀಕ' ನಾಟಕಗಳು ಪ್ರದರ್ಶಿತವಾದವು. ಭಕ್ತಿ ಶೃಂಗಾರ, ಹಾಸ್ಯರಸಗಳಿಂದ ಸಮೃದ್ಧವಾಗಿದ್ದ ನಾಟಕಗಳು ಅರಸು ಪರಿವಾರದ ಮೆಚ್ಚುಗೆಗೆ ಪಾತ್ರವಾದವು. ಮಹಾರಾಜರು ಯಥೇಚ್ಛ ಕಾಣಿಕೆ ನೀಡಿ ಪ್ರಶಸ್ತಿಗಳನ್ನಿತ್ತು ಗೌರವಿಸಿದರು. ಮರು ತಿಂಗಳ ಮತ್ತೇ ಮಹಾರಾಜರು ವಿಶೇಷ ಆಮಂತ್ರಣ ನೀಡಿ ನಾಟಕವನ್ನಾಡಲು ಹೇಳಿದರು. 'ಶ್ರೀನಿವಾಸ ಕಲ್ಯಾಣ' ನಾಟಕವು ರಾಜದರ್ಬಾರನ್ನು ಮೆಚ್ಚಿಸಿತು. ಅನಂತರ ಕೆಲವು ತಿಂಗಳುಗಳ ಕಾಲ ಮಂಡಳಿಯು ಮೈಸೂರಿನಲ್ಲಿ ನಾಟಕಗಳನ್ನಾಡಿ ಉತ್ತರ ಕರ್ನಾಟಕದತ್ತ ಮರಳಿತು.

೧೯೨೩ರಲ್ಲಿ ಗಂಗೂಬಾಯಿ ಗುಳೇದಗುಡ್ಡ ಮಂಡಳಿಯಿಂದ ಹೊರಹೋದರು. ಆಕೆಯ ನಿರ್ಗಮನ ಮಂಡಳಿಗೆ ನಷ್ಟವನ್ನುಂಟು ಮಾಡಿತು. ಗರುಡರ ಮಂಡಳಿಯಿಂದ ಹೊರಬಂದಿದ್ದ ಸಂಜೀವಮ್ಮ ವಾಮನರಾಯರ ಮಂಡಳಿಗೆ ಚೈತನ್ಯ ತಂದಳು. ವಾಮನರಾಯರು ಮರಾಠಿ ನಾಟಕವನ್ನು ಅನುಸರಿಸಿ 'ವೀರ ಅಭಿಮನ್ಯು' ನಾಟಕ ರಚಿಸಿದರು. ೧೯೨೯-೩೦ ರಲ್ಲಿ ಈ ನಾಟಕ ಜಯಭೇರಿ ಬಾರಿಸಿತು. ಆಧುನಿಕ ತಂತ್ರಗಳನ್ನೊಳಗೊಂಡ ರಂಗಸಜ್ಜಿಕೆ, ಹೊಸ ಧಾಟಿಯ ಹಾಡುಗಳು ನಾಟಕದ ಆಕರ್ಷಣೆಗಳಾದವು. "ವಿಶೇಷ ಆಕರ್ಷಣೆಯೆಂದರೆ ಕೊನೆಯ ಸನ್ನಿವೇಶದಲ್ಲಿ ಸುದರ್ಶನ ಚಕ್ರವು ತಿರುಗುತ್ತ ತಿರುಗುತ್ತ ಸೂರ್ಯಮಂಡಲವನ್ನು ಮರೆಮಾಡುವುದು, ಜಯದ್ರಥನ ವಧೆಯ ನಂತರ ಸೂರ್ಯಮಂಡಲ ಮತ್ತೆ ಬೆಳಗುವುದು. ಹಾಗೆಯೇ ವೀರ ಅಭಿಮನ್ಯುವಿನ ಸ್ವರ್ಗಾರೋಹಣ ಇವುಗಳನ್ನು ಆಧುನಿಕ ತಂತ್ರಗಳಿಂದ ಟ್ರಾನ್ಸಫರ್ ಸೀನಿನಲ್ಲಿ ಅಳವಡಿಸಲಾಗಿತ್ತು." * ಹಾಸ್ಯ, ಶೋಕ, ಶೃಂಗಾರ,

---

* ಡಾ. ರಾಮಕೃಷ್ಣ ಮರಾಠೆ, ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿ ಪುಟ ೬೦.

ವೀರರಸಗಳೊಂದಿಗೆ ಸಮೃದ್ಧ ಸಂಗೀತನ್ನೊಳಗೊಂಡ 'ವೀರ ಅಭಿಮನ್ಯು' ಎಲ್ಲ ವಯೋಮಾನದ ಪ್ರೇಕ್ಷಕರನ್ನು ರಂಜಿಸಿ ಯಶಸ್ಸನ್ನು ಬಾಚಿಕೊಂಡಿತು.

ವಾಮನರಾಯರು ಉತ್ತಮ ಕಲಾವಿದರನ್ನು ಗುರುತಿಸಿ, ಅವರಿಗೆ ಉತ್ತಮ ತರಬೇತಿ ನೀಡಿ ತಮ್ಮ ನಾಟಕಮಂಡಳಿಯನ್ನು ಜನಪ್ರಿಯಗೊಳಿಸಿದರು. ಶಿಸ್ತಿನ ಕ್ರಮಬದ್ಧ ಜೀವನ ನಡೆಸುತ್ತಿದ್ದ ಅವರು ಕಲೆಯ ಬಗೆಗೆ ಗೌರವ ಶ್ರದ್ಧೆಯ ಭಾವವನ್ನಿರಿಸಿಕೊಂಡಿದ್ದರು. ರಂಗಪಾವಿತ್ರ್ಯ ಕಾಪಾಡಸೆಗೆ ಅವರು ಆಗ್ರಹಿಸಿದರು. ತಮ್ಮ ನಡೆ-ನುಡಿ, ವ್ಯವಹರಣೆಗಳಲ್ಲಿಯ ಪ್ರಾಮಾಣಿಕತೆಯಿಂದ ಕಲಾವಿದರ ಗೌರವಾದರಗಳಿಗೂ ಪಾತ್ರರಾಗಿದ್ದರು. ೧೯೩೨ ರಲ್ಲಿ ಮಂಡಳಿ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿದ್ದರಿಂದ ಮಂಡಳಿಯನ್ನು ಮುಚ್ಚಿದರು.

**ಕಲಾವಿದರು :**

(ನಟರು) : ವಾಮನರಾವ ಮಾಸ್ತರ, ರಾಣೆಬೆನ್ನೂರ ಮಲ್ಲಪ್ಪ, ಬಸವನಕೊಪ್ಪ ಗಿರಿಗೌಡರು, ಗುರುರಾವ ದೇಶಪಾಂಡೆ, ಹುಬ್ಬಳ್ಳಿ ಸಂಗಪ್ಪ, ಹುಬ್ಬಳ್ಳಿ ನಾಕಪ್ಪ, ಕೇಶವಭಟ್ಟ ಮಿಶ್ರಿಕೋಟಿ, ಬೇವೂರ ಬಾದಶಹಾ, ಸಂಗನಬಸಪ್ಪ ಕುಕನೂರ, ಮಡಿವಾಳಯ್ಯ ಸೀಮಿಕೇರಿ, ಸೀನಪ್ಪ, ಮುದುಕಪ್ಪ ಕಾಕನೂರ, ಬಸವರಾಜ ಮನಸೂರ, ಮಲ್ಲಿಕಾರ್ಜುನ ಮನಸೂರ, ಗುರುಲಿಂಗಪ್ಪ ಗುಳೇದಗುಡ್ಡ, ಡಿ. ಹಣಮಸಂತಪ್ಪ, ಡಿ. ದುರ್ಗಾದಾಸ.

(ನಟಿಯರು) : ಎಲ್ಲೂಬಾಯಿ ಗುಳೇದಗುಡ್ಡ, ಗಾನರತ್ನ ಗಂಗೂಬಾಯಿ, ವಜೀರಾಬಾಯಿ ಲಕ್ಷ್ಮೇಶ್ವರ, ಮದ್ರಾಸಸಾನಿ, ಸಂಜೀವಮ್ಮ ದಾದಮ್ಮನವರ, ರಾಮಕ್ಕ, ಹಣಮಂತವ್ವ.

ವಾದ್ಯಗಾರರು : ಪಾಂಡೋಬಾ ಪವಾರ (ಹಾರ್ಮೋನಿಯಂ)

**ಮಂಡಳಿ ಮೇಲ್ವಿಚಾರಕರು** : ರಾಮಚಂದ್ರಪ್ಪ ಸುಬೇದಾರ ಹಾಗೂ ನರಸಿಂಹರಾವ ದೇಸಾಯಿ.

## ಗರುಡ ಸದಾಶಿವರಾಯರ
## ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿ

ಸದಾಶಿವರಾಯ ಗರುಡ ಚಿಕ್ಕಂದಿನಿಂದಲೇ ನಾಟಕ ಕಲೆಯಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದರು. ತಂದೆ ಗುರುನಾಥ ಶಾಸ್ತ್ರಿಗಳು ಸಂಸ್ಕೃತ ಪಂಡಿತರಾಗಿದ್ದರು, ಕಾವ್ಯರಚನೆ ಮಾಡಿದ್ದರು. ತಂಬೂರಿ ನುಡಿಸುತ್ತ ಪುರಾಣ ಪ್ರವಚನ ಮಾಡುತ್ತಿದ್ದರು. ದೊಡ್ಡಾಟ ಕಲೆಯಲ್ಲಿ ನಿಷ್ಣಾತರಾಗಿದ್ದು ಶಿಷ್ಯರಿಗೆ ನಾಟಕಾಭಿನಯ ತರಬೇತಿ ನೀಡುತ್ತಿದ್ದರು. ಹಾಗಾಗಿ ಸದಾಶಿವರಾಯರಿಗೆ ಬಾಲ್ಯದಲ್ಲಿಯೆ ಈ ಎಲ್ಲ ವಿದ್ಯೆಗಳು ಕರತಲಾಮಲಕವಾದವು. ಉಪನಯನದ ನಂತರ ವೈದಿಕ ವಿದ್ಯಾಭ್ಯಾಸ ನಡೆಯಿತು. ಪೂಜೆ-ಪುರಸ್ಕಾರ, ಮಂತ್ರಪಠಣ, ಅಧ್ಯಯನ, ಸಂಸ್ಕೃತ ಭಾಷಾಭ್ಯಾಸ ಅವರ ಮುಂದಿನ ಸಾಧನೆಗಳಿಗೆ ಭದ್ರನೆಲೆಗಟ್ಟನ್ನು ಒದಗಿಸಿದವು. ಮಾಧ್ಯಮಿಕ ಶಾಲಾ ಅಭ್ಯಾಸಕ್ಕಾಗಿ ಸದಾಶಿವರಾಯರು ತಮ್ಮ ಸೋದರಮಾವ ಭೀಮಸೇನರಾಯರ ಬಳಿ ಇದ್ದರು. ರಾಯಚೂರು, ಕಲಬುರ್ಗಿಗಳಲ್ಲಿ ಅವರ ಮಾಧ್ಯಮಿಕ ಶಿಕ್ಷಣ ನಡೆಯಿತು. ಕಲಬುರ್ಗಿಯಲ್ಲಿರುವಾಗಲೇ 'ಪಾಂಡುರಂಗ ಕೃಷ್ಣ ಮಂಡಳಿ' ಎಂಬ ಒಂದೂ ಸಂಘಟನೆಯ ಸದಸ್ಯರಾಗಿದ್ದರು. ಭಾರತವನ್ನು ದಾಸ್ಯಮುಕ್ತವನ್ನಾಗಿ ಮಾಡುವುದು ಈ ಸಂಘದ ಧ್ಯೇಯವಾಗಿತ್ತು. ಲೋಕಮಾನ್ಯ ಟಿಳಕರನ್ನು ಕಾರಾಗೃಹಕ್ಕೆ ತಳ್ಳಿದ ವಿಷಯವಸ್ತುವನ್ನಾಧರಿಸಿದ 'ಬಂಧ ವಿಮೋಚನ' ನಾಟಕವನ್ನು ಈ ಸಂಘ ಪ್ರದರ್ಶಿಸಿತು. ಬಾಲಕ ಸದಾಶಿವರಾಯರು ನ್ಯಾಯಮೂರ್ತಿಯ ಪಾತ್ರವನ್ನು ಮಾಡಿ ಸೈ ಎನಿಸಿಕೊಂಡರು. ೧೯೦೯ ರಲ್ಲಿ ತರುಣ ಕನ್ನಡಿಗರು ಸಂಘಟಿಸಿದ ಶಿವಸುತ ನಾಟಕ ಮಂಡಳಿಯು ಸದಾಶಿವರಾಯರನ್ನು ಸೇರಿಸಿಕೊಂಡಿತು. ಬಿಜಾಪುರ ಕನ್ನಡ ಮಂಡಳಿಯು ಪ್ರದರ್ಶಿಸಿದ **'ಕೀಚಕವಧ'** ನಾಟಕದಿಂದ ಪ್ರಭಾವಿತರಾದ ಸದಾಶಿವರಾಯರು ತಾವೇ ಒಂದು ನಾಟಕ ರಚಿಸಿದರು. ಕೀಚಕನ ಕೈಯಲ್ಲಿ ಸಿಕ್ಕ ದ್ರೌಪತಿಯ ಸ್ಥಿತಿಯನ್ನು ಬ್ರಿಟಿಷರ ಮುಷ್ಠಿಯಲ್ಲಿ ಸಿಕ್ಕಿದ ಭಾರತಾಂಬೆಯ ಸ್ಥಿತಿಯಂತೆ ಎಂಬರ್ಥ ಬರುವ ಮಾತುಗಳ ರಚನೆ ಮಾಡಿ ಆಡಿದ ನಾಟಕವನ್ನು ಊರವರೆಲ್ಲ ಹೊಗಳಿದರು. ತಾವೇ ಬರೆದ ನಾಟಕ, ತಾವೇ ಪ್ರಧಾನ ಪಾತ್ರಧಾರಿಯಾಗಿದ್ದ ನಾಟಕದ ಯಶಸ್ಸು ಸದಾಶಿವರಾಯರಲ್ಲಿ ನಾಟಕ ಬರೆಯಬೇಕು, ಆಡಬೇಕು ಎಂಬ ಮಹತ್ವಾಕಾಂಕ್ಷೆಯನ್ನು ಗರಿಗೆದರಿಸಿತು. ೧೯೧೧ ರಲ್ಲಿ 'ಮಾರ್ಕಂಡೇಯ' ಎಂಬ ಗೀತ ಪ್ರಧಾನ ನಾಟಕ ರಚಿಸಿ, ಪ್ರಧಾನ ಭೂಮಿಕೆ ನಿರ್ವಹಿಸಿ ಜನಮನ್ನಣೆ ಪಡೆದರು.

ಮ್ಯಾಟ್ರಿಕ್ ಪರೀಕ್ಷೆ ಪಾಸು ಮಾಡಿದ ನಂತರ ನೌಕರಿ ಸೇರಲು ಅವರು ಇಷ್ಟಪಡಲಿಲ್ಲ. ೧೯೦೯ರಲ್ಲಿ 'ಶಿವಸುತ ಪ್ರಾಸಾದಿಕ ನಾಟಕ ಮಂಡಳಿ'ಯನ್ನು ಹುಟ್ಟು ಹಾಕಿ 'ಬಲಸಿಂಹ ತಾರಾ', 'ಶರಣಬಸವ', 'ವಿಕ್ರಮ ಶಶಿಕಲಾ' ನಾಟಕಗಳನ್ನು ಬರೆದು ಯಾದಗಿರಿ, ರಾಯಚೂರು, ಬಳ್ಳಾರಿ, ಕಲಬುರ್ಗಿ, ಗದಗ ಸೇರಿದಂತೆ ಹಲವೆಡೆಗಳಲ್ಲಿ

ಪ್ರದರ್ಶಿಸಿದರು. ಅನಂತರ ರಾಮರಾಯರ 'ಕೊಪ್ಪಳ ಮಂಡಳಿ', ಹೊಂಬಳದ ಶಂಕರಗೌಡರ 'ಉಪಾಸಕ ಮಂಡಳಿ' ಹಾಗೂ ಶಿವಮೂರ್ತಿಸ್ವಾಮಿ ಕಣಬರ್ಗಿಮಠರ 'ಶ್ರೀ ಕಾಡಸಿದ್ಧೇಶ್ವರ ಸಂಗೀತ ನಾಟಕ ಮಂಡಳಿ (ಕೊಣ್ಣೂರ)'ಯಲ್ಲಿ ನಾಟ್ಯಾಚಾರ್ಯರಾಗಿ ಕೆಲವು ವರ್ಷಗಳವರೆಗೆ ಸೇವೆ ಸಲ್ಲಿಸಿದರು.

ಗದುಗಿನಲ್ಲಿ ನೆಲೆನಿಂತ ಮೇಲೆ ತಮ್ಮ ೩೦ನೆಯ ಪ್ರಾಯದಲ್ಲಿ ೧೬ ನವೆಂಬರ್, ೧೯೧೯ರಲ್ಲಿ 'ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿ'ಯನ್ನು ಹುಟ್ಟುಹಾಕಿದರು. ಪತ್ನಿಯ ಚಿನ್ನಾಭರಣಗಳನ್ನು ಮಾರಿ, ಆಗ ತಾನೇ ಸ್ಥಗಿತಗೊಂಡಿದ್ದ ಕೊಣ್ಣೂರ ಮಂಡಳಿಯ ರಂಗಸಾಧನಸಾಮಗ್ರಿಗಳನ್ನು ಖರೀದಿಸಿ, ತಾವು ಆ ಮೊದಲೇ ಪ್ರದರ್ಶಿಸಿದ್ದ 'ಬಲಸಿಂಹ ತಾರಾ', 'ಶರಣಬಸವ', 'ವಿಕ್ರಮ ಶಶಿಕಲಾ', 'ದುರಾತ್ಮಾ ರಾವಣ' ನಾಟಕಗಳನ್ನು ಗದುಗಿನಲ್ಲಿ ಆಡಿದರು. ಅನಂತರ ಸಂಚಾರ ಆರಂಭವಾಯಿತು. ದಾವಣಗೆರೆ, ಅರಸಿಕೆರೆಗಳಲ್ಲಿ ಪ್ರದರ್ಶನಗಳಾದವು. ಅರಸಿಕೆರೆಯಲ್ಲಿ ಗುಬ್ಬಿ ಕಂಪನಿಯವರು ನಾಟಕಗಳನ್ನು ಆಡುತ್ತಿದ್ದ ಥಿಯೇಟರ್‌ನಲ್ಲಿಯೆ ನಾಟಕಗಳನ್ನಾಡಿದರು. 'ವಿಷಮ ವಿವಾಹ' ನಾಟಕ ಪ್ರೇಕ್ಷಕರ ಮೆಚ್ಚುಗೆ ಸಂಪಾದಿಸಿತು. ನಾಟಕ ನೋಡಲು ಬಂದಿದ್ದ ದಕ್ಷಿಣರೇಲ್ವೆಯ ಜನರಲ್ ಮ್ಯಾನೇಜರ್ ರಂಗದ ಮೇಲೇರಿ ಗರುಡರ ಅಶೋಕನ ಪಾತ್ರವನ್ನು ಹಾಗೂ ಹಮ್ಮಿಗಿ ನೀಲಕಂಠಪ್ಪನವರ ಶರಾವತಿ ಪಾತ್ರವನ್ನು ಕೊಂಡಾಡಿ ಸನ್ಮಾನಿಸಿದ್ದರಂತೆ.

ಅರಸಿಕೆರೆಯಿಂದ ಹೊರಟ ಮಂಡಳಿ ತಿಪಟೂರಿನಲ್ಲಿ ಕ್ಯಾಂಪ್ ಮಾಡಿತು. ಅಲ್ಲಿ ಹೆಚ್ಚಿನ ಪ್ರೋತ್ಸಾಹನ ಸಿಕ್ಕಲಿಲ್ಲವಾದ್ದರಿಂದ ಚಿಕ್ಕನಾಯಕನಹಳ್ಳಿಗೆ ತೆರಳಿತು. ಮಂಡಳಿಯ ಮ್ಯಾನೇಜರ್‌ನ ವಂಚನೆಯಿಂದ ನಷ್ಟವಾಗಿ, ಸದಾಶಿವರಾಯರು ತಮ್ಮ ಬಳಿ ಇದ್ದ ವಸ್ತುಗಳನ್ನು ಅಡವಿಟ್ಟು ಬೆಂಗಳೂರಿಗೆ ನಡೆದರು. ಶಿರಹಟ್ಟಿ ವೆಂಕೋಬರಾಯರ ನಾಟಕ ಮಂದಿರದಲ್ಲಿ 'ವಿಷಮ ವಿವಾಹ' ನಾಟಕ ಆಡಿದರು. ಗುಬ್ಬಿ ಕಂಪನಿಯ ಜನಪ್ರಿಯ ನಟ ಎಂ. ಎನ್. ಗಂಗಾಧರರಾಯರು ಗರುಡರ ನಾಟಕಗಳ ಪ್ರೌಢಿಮೆ ಮತ್ತು ಮಂಡಳಿಯ ನಟರ ಅಭಿನಯ ಕೌಶಲಗಳನ್ನು ಮುಕ್ತವಾಗಿ ಪ್ರಶಂಸಿಸಿ ಸದಾಶಿವರಾಯರನ್ನು 'ಅಭಿನಯ ಕಲಾಗುರುಗಳು' ಎಂದು ಸಂಬೋಧಿಸಿ ಗೌರವಿಸಿದರು.

ಶಿವಮೊಗ್ಗೆಯಲ್ಲಿ ಗರುಡರ ನಾಟಕಗಳು ಜಯಭೇರಿ ಬಾರಿಸಿದವು. ಗರುಡರ ಅಭಿನಯ ಪ್ರೇಕ್ಷಕರನ್ನು ಸೂರೆಗೊಂಡಿತು. ಅಲ್ಲಿ ವೆಂಕೋಬರಾಯರ ಮಂಡಳಿಯೊಂದಿಗೆ ಸ್ಪರ್ಧೆ ನಡೆಯಿತು. ಮುಂದೆ ತೀರ್ಥಹಳ್ಳಿಯಲ್ಲೂ ವೆಂಕೋಬರಾಯರ ಮಂಡಳಿಯೊಂದಿಗೆ ಸ್ಪರ್ಧೆ ನಡೆಯಿತು. ಸದಾಶಿವರಾಯರ ನಾಟಕಗಳು ಜನರಿಗೆ ಹೆಚ್ಚು ಇಷ್ಟವಾಗಿದ್ದರಿಂದ ಸ್ಪರ್ಧೆ ಅಸೂಯೆ ರೂಪ ತಳೆದು ಗರುಡರ ಮಂಡಳಿಯ ಸ್ತ್ರೀ ಪಾತ್ರಧಾರಿಯ ಅಪಹರಣವಾಯಿತು. ಆದರೆ ಗರುಡರು ಎದೆಗುಂದಲಿಲ್ಲ. ನೀಲಕಂಠಪ್ಪನನ್ನು ಸ್ತ್ರೀ ಪಾತ್ರಕ್ಕೆ ಅಣಿಗೊಳಿಸಿ ನಾಟಕ ಪ್ರದರ್ಶನ ಮಾಡಿದರು. ಆಗುಂಬೆ, ಕಾರ್ಕಳ, ಉಡುಪಿಗಳಲ್ಲೂ ಮಂಡಳಿಯ ನಾಟಕಗಳು ಜನಮನವನ್ನು ಸೂರೆಗೊಂಡವು.

ದೇಶದಲ್ಲಿ ರಾಷ್ಟ್ರೀಯತೆಯ ಭಾವನೆ ಗಾಢವಾಗಿದ್ದ ಸಮಯವದು. ಸ್ವಾತಂತ್ರ್ಯಾಂದೋಲನ ತೀವ್ರ ಸ್ವರೂಪ ಪಡೆಯುತ್ತಲಿತ್ತು. ಗರುಡರು ಶಾಲಾ ಜೀವನದಲ್ಲಿಯೆ ರಾಷ್ಟ್ರೀಯತೆಯನ್ನು ಬೆಂಬಲಿಸುವ ಗುಪ್ತಸಂಘಟನೆಯ ಸದಸ್ಯರಾಗಿದ್ದರು. ೧೯೨೨ ರಲ್ಲಿ ಉಡುಪಿಯಲ್ಲಿ ಕ್ಯಾಂಪ್ ಮಾಡಿದಾಗ, ಮಂಡಳಿಯ ಸದಸ್ಯರು ಊರಿನುದ್ದಕ್ಕೂ ತಿರುಗಿ ವಿದೇಶಿ ವಸ್ತ್ರಗಳನ್ನು ಸಂಗ್ರಹಿಸಿ ನಾಟಕದ ಪ್ರಾರಂಭಕ್ಕೆ ಮೊದಲು ಅವುಗಳನ್ನು ಸುಡುವುದರ ಮೂಲಕ ಜನಜಾಗೃತಿಗೆ ಕರೆನೀಡಿದರು.

ಪೌರಾಣಿಕ ನಾಟಕಗಳಲ್ಲಿಯ ಸಂಭಾಷಣೆಗಳಲ್ಲಿಯೆ ಬ್ರಿಟಿಷ್‌ಸತ್ತೆಯ ದೌರ್ಜನ್ಯ, ಕ್ರೌರ್ಯಗಳನ್ನು ಬಿಂಬಿಸುವಂತೆ ಚಮತ್ಕಾರಿಕವಾಗಿ ಮಾತನಾಡುವುದು, ಸಂಗೀತದ ಧಾಟಿಗಳ ಮೂಲಕ ಪಾಶ್ಚಾತ್ಯರನ್ನು ವಿಡಂಬನೆ ಮಾಡುವುದು ಮೊದಲಾಗಿ ನಾಟಕ ಮಾಧ್ಯಮವನ್ನು ಸದಾಶಿವರಾಯರು ರಾಷ್ಟ್ರೀಯತೆಯ ಜಾಗೃತಿಗೆ ಪರಿಣಾಮಕಾರಿಯಾಗಿ ಬಳಸಿಕೊಂಡರು. 'ಶ್ರೀರಾಮ ಪಾದುಕಾ ಪಟ್ಟಾಭಿಷೇಕ', 'ಚಪತಿಯ ಚಂದ್ರ', 'ಲಂಕಾದಹನ', 'ಕೀಚಕವಧೆ', 'ಕಂಸವಧೆ' ಮೊದಲಾದ ಪೌರಾಣಿಕ ನಾಟಕಗಳಲ್ಲಿಯ ಸಂಭಾಷಣೆಗಳು ಕಥಾವಸ್ತುವಿಗೆ ಅಪಚಾರವಾಗದಂತೆ ಸಮಕಾಲೀನ ಪ್ರೇಕ್ಷಕರನ್ನುದ್ದೇಶಿಯೆ ಮಾತನಾಡುತ್ತಿದ್ದುದು ಒಂದು ವಿಶಿಷ್ಟ ಬೆಳವಣಿಗೆಯನ್ನು ಸಂಕೇತಿಸಿತು. ಜನರಲ್ಲಿ ರಾಷ್ಟ್ರಾಭಿಮಾನವನ್ನು ಕೆರಳಿಸುವ ಸನ್ನಿವೇಶಗಳನ್ನು ನಾಟಕಗಳಲ್ಲಿ ಸಹಜವಾಗಿಯೆ ಅಳವಡಿಸಲಾಯಿತು. ಹೀಗೆ ಗರುಡರು ಪೌರಾಣಿಕ ನಾಟಕಗಳಿಗೆ ಹೊಸ ಸಿಟ್ಟನ್ನು ತೋರಿದರು. ಹಲವು ಆವೇಶಪರ ಭಾಷಣಗಳು ಮಾಡುವ ಪರಿಣಾಮವನ್ನು ಗರುಡರ ಒಂದು ನಾಟಕ ಮಾಡುತ್ತಿತ್ತು. ಅವರ ನಾಟಕಗಳಲ್ಲಿಯ ಸಂಭಾಷಣೆಗಳು ಸಾಂಕೇತಿಕವಾಗಿದ್ದಂತೆ ಧ್ವನಿಪೂರ್ಣವೂ ಆಗಿದ್ದವು. ಆಗತ್ಯಕ್ಕೆ ತಕ್ಕಷ್ಟೇ ಸಂಗೀತ, ಸಹಜ ಅಭಿನಯ ಅವರ ನಾಟಕಗಳ ವಿಶೇಷ

ಅಂಶಗಳಾಗಿದ್ದವು. ನಾಟಕ ಎಂದರೆನೆ ಕೃತ್ರಿಮ ಎನಿಸುವ ಅಭಿನಯ, ಆರ್ಭಟದ ಮಾತು, ಅತಿಯಾದ ಸಂಗೀತ ಎಂಬಂತಿದ್ದ ಅಂದಿನ ಸನ್ನಿವೇಶದಲ್ಲಿ ಭಾವಮಿಡಿಯಲು ಬೇಕಾದಷ್ಟೇ ಸಂಗೀತ, ಅತ್ಯಂತ ಸಹಜಾಭಿನಯವನ್ನುಳ್ಳ ಗರುಡರ ನಾಟಕಗಳು ಪ್ರೇಕ್ಷಕರಿಗೆ ಇಷ್ಟವಾದವು.

೧೯೨೭ ರಲ್ಲಿ ಗರುಡರ ಮಂಡಳಿ ಕುಂದಾಪುರದಲ್ಲಿತ್ತು. 'ಪಾದುಕಾ ಪಟ್ಟಾಭಿಷೇಕ' ಅಲ್ಲಿನ ಜನಕ್ಕೆ ಬಹುವಾಗಿ ಒಡಿಸಿತು. ಮಂಗಳೂರಲ್ಲಿ ವೆಚ್ಚದಾಯಕ ರಂಗಸಜ್ಜಿಕೆಯಲ್ಲಿ 'ಸಂಪೂರ್ಣ ಕೃಷ್ಣಲೀಲೆ'ಯನ್ನು ಪ್ರದರ್ಶಿಸಲಾಯಿತು. ಇದು ಮಂಡಳಿಗೆ ಲಾಭವನ್ನು ತಂದಿತು. 'ಭಗವಾನ ಏಸುಕ್ರಿಸ್ತ' ಎಂಬ ನಾಟಕವನ್ನು ಬರೆದು ರಂಗಕ್ಕೇರಿಸಲು ಸಿದ್ಧತೆ ಮಾಡಿ ಪ್ರಚಾರ ಮಾಡಲಾಯಿತು. ಟಿಕೇಟುಗಳು ಮುಂಗಡವಾಗಿಯೇ ಮಾರಾಟವಾದವು. ಇನ್ನೇನು ನಾಟಕ ಆರಂಭವಾಗುತ್ತದೆ ಎನ್ನುವಾಗ ಅಲ್ಲಿನ ಕಲೆಕ್ಟರ್‌ರು ನಾಟಕ ಪ್ರದರ್ಶನಕ್ಕೆ ತಡೆಯೊಡ್ಡಿದರು. 'ಕ್ರಿಶ್ಚಿಯನ್‌ರಲ್ಲದವರು ಏಸೂನ ನಾಟಕವಾಡಬಾರದು' ಎಂದು ತುರ್ತು ಆದೇಶ ಹೊರಡಿಸಿದ್ದರು. ಗರುಡರು ಆ ಅಧಿಕಾರಿಯ ನಿಲುವನ್ನು ಪ್ರತಿಭಟಿಸಿ ಯಶಸ್ವಿಯಾದರು.

೧೯೨೮ ರಲ್ಲಿ ದತ್ತಾತ್ರೇಯ ನಾಟಕ ಮಂಡಳಿ ಬಿಜಾಪುರದಲ್ಲಿ 'ಲಂಕಾದಹನ' ನಾಟಕ ಪ್ರದರ್ಶಿಸಿತು. ಈ ಹಿಂದೆ ರಾವಣನ ಪಾತ್ರವನ್ನು ಮಾಡುತ್ತಿದ್ದ ಸದಾಶಿವರಾಯರು ಮಾರುತಿ ಪಾತ್ರವನ್ನು ವಹಿಸಿದರು. ಮಾರುತಿ ರಾವಣನ ನೀಚತನವನ್ನು ಜರೆಯುವ ಗೀತೆ ಪರೋಕ್ಷವಾಗಿ ಬ್ರಿಟಿಷ್ ಸತ್ತೆಯ ವಿರುದ್ಧ ತೋರುವ ಆಕ್ರೋಶವಾಗಿತ್ತು. ಮಾರುತಿ ಪಾತ್ರಧಾರಿ ಸದಾಶಿವರಾಯರು ಸೌಮ್ಯರೀತಿಯಲ್ಲೇ ಹಾಡಿದ ಈ ಗೀತೆ ಪ್ರೇಕ್ಷಕರ ಮೇಲೆ ಭಾರೀ ಪರಿಣಾಮವನ್ನೆ ಬೀರಿತು. ಓರ್ವ ಪ್ರೇಕ್ಷಕ ತೀವ್ರತರ ಭಾವುಕತೆಯಿಂದ ರಂಗಸಜ್ಜಿಕೆಯನ್ನೇರಿ ಮಾರುತಿ ಪಾತ್ರಧಾರಿ ಗರುಡರ ತಲೆಗೆ ಗಾಂಧಿ ಟೊಪ್ಪಿಗೆ ತೊಡಿಸಿದನಂತೆ!

ಗರುಡರ ಮಂಡಳಿಯು ಮಂಗಳೂರು, ಪುತ್ತೂರು, ಮಡಿಕೇರಿ, ಕೊಡಗಿನ ಕೊಡ್ಲಿಪೇಟೆ, ಸೋಮವಾರಪೇಟೆ, ವಿರಾಜಪೇಟೆ ಮೊದಲಾಗಿ ಮೈಸೂರು, ಬೆಂಗಳೂರು ಹಾಗೂ ಅನಂತರ ಧಾರವಾಡ, ಹುಬ್ಬಳ್ಳಿಗಳಲ್ಲಿ ನಾಟಕಗಳನ್ನು ಪ್ರದರ್ಶಿಸಿತು. ಬೆಳಗಾವಿ ಕ್ಯಾಂಪಿನಲ್ಲಿರುವಾಗ ನವೆಂಬರ್ ೧೬, ೧೯೨೪ ರಂದು ಮಂಡಳಿಯ ಐದನೆಯ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ೧೯೨೯ ರಲ್ಲಿ ಬೆಳಗಾವಿಯಲ್ಲಿ ೧೫ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಸಮ್ಮೇಳನದಲ್ಲಿ ಸದಾಶಿವರಾಯರಿಗೆ 'ಕರ್ನಾಟಕ ನಾಟಕಾಲಂಕಾರ' ಬಿರುದನ್ನಿತ್ತು ಸತ್ಕರಿಸಲಾಯಿತು.

೧೯೨೯ ರಿಂದ ೧೯೪೦ ರ ವರೆಗಿನ ಅವಧಿ ದತ್ತಾತ್ರೇಯ ಮಂಡಳಿಗೆ ಶುಭಪ್ರದವಾಗಿತ್ತು. ನಾಟಕ ಪ್ರದರ್ಶನಗಳು ಲಾಭದಾಯಕವಾಗಿದ್ದವು.

೧೯೨೬ ರಲ್ಲಿ ಕಾಸರಗೋಡು, ಅನಂತರ ೧೯೩೦ ರವರೆಗೆ ಕಲಬುರ್ಗಿಯಲ್ಲಿ ಕ್ಯಾಂಪು, ಆದಾದ ನಂತರ ಹೈದರಾಬಾದ, ಮುಂಬೈ, ಪುಣೆ, ಬಿಜಾಪುರ, ಕೊಲ್ಲಾಪುರ, ಸಾಂಗ್ಲಿಗಳಲ್ಲಿ ಪ್ರದರ್ಶನಗಳು ಫಲಪ್ರದವಾದವು. ೧೯೪೨ ರಲ್ಲಿ ರಾಣೆಬೆನ್ನೂರಿನಲ್ಲಿ ಕ್ಯಾಂಪು ಮಾಡಿದ ಸನ್ನಿವೇಶದಲ್ಲಿ ಸದಾಶಿವರಾಯರು ತಮ್ಮ ಮಂಡಳಿಯನ್ನು ಸ್ಥಗಿತಗೊಳಿಸಿದರು.

ಔಚಿತ್ಯಪೂರ್ಣ ಅಸ್ಖಲಿತ ಮಾತುಗಾರಿಕೆ, ಜಾಣ್ಮೆಯಿಂದ ಕೂಡಿದ ಸಮಯಪ್ರಜ್ಞೆ, ಭಾವವನ್ನು ಯಥಾವತ್ತಾಗಿ ಅಭಿವ್ಯಕ್ತಗೊಳಿಸಬಲ್ಲ ಧ್ವನಿಯ ಏರಿಳಿತ, ಪಾತ್ರದೊಡನೆಯ ಅನನ್ಯ ತಾದಾತ್ಮ್ಯ, ಸಹಜಾಭಿನಯ ಗರುಡರ ನಾಟಕ ಕಲಾಪ್ರೌಢಿಮೆಯ ವಿಶೇಷಗಳಾಗಿದ್ದವು. ಕರುಣ, ವೀರ, ಭಕ್ತಿ ರಸಗಳ ಅದ್ಭುತ ಅಭಿವ್ಯಕ್ತಿ ಅವರ ನಟನಾ ಸಾಮರ್ಥ್ಯದ ನಿದರ್ಶನವಾಗಿತ್ತು. ದಶರಥ, ಕೃಷ್ಣ, ಜಾಂಬವಂತ, ಮಾರುತಿ, ನಾರದ, ಕಂಸ, ಭಸ್ಮಾಸುರ, ರಾವಣ, ಕೀಚಕ, ಮೊದಲಾದ ಪೌರಾಣಿಕ ಪಾತ್ರಗಳಲ್ಲಿ, ಅಶೋಕ, ಎಚ್ಚಮನಾಯಕ, ಪದ್ಮನಾಭ, ಕಬೀರ, ಶರಣಬಸವ, ಸಿದ್ಧರಾಮೇಶ್ವರ ಮೊದಲಾದ ಸಾಮಾಜಿಕ ಪಾತ್ರಗಳಲ್ಲಿ ಏಕಪ್ರಕಾರವಾಗಿ ಮಿಂಚಿದ ಸದಾಶಿವರಾಯರು ಅಭಿನಯವನ್ನೇ ಸಿದ್ಧಿಸಿದ್ದ ರಂಗನಟಶ್ರೇಷ್ಠರಾಗಿದ್ದರು.

ರಾಷ್ಟ್ರೀಯತೆಯ ಭಾವನೆಗಳನ್ನು ಸಂದೇಶಿಸುವಲ್ಲಿ ತೋರಿದ ನಿರ್ಭೀತಿ, ಅಪಾಯಗಳಿಗೆ ಅಂಜದ ಸೈದ್ಧಾಂತಿಕ ಬದ್ಧತೆ ಅವರ ಸಾರ್ವಜನಿಕ ಬದುಕಿನ ಹೆಗ್ಗಳಿಕೆಯನ್ನು ಮೆರೆಯುತ್ತದೆ. ನಾಟಕಗಳ ಪ್ರಸ್ತುತಿಯಲ್ಲಿ ಅವರು ನಿರಂತರ ಪ್ರಯೋಗಶೀಲತೆಯನ್ನು ತೋರಿದರು. ಸಮಾಜವನ್ನು ತಿದ್ದುವುದು ಅವರ ಪ್ರವೃತ್ತಿಯನ್ನಾಧರಿಸಿದ ಅಂತರ್ಯದ ತುಡಿತವಾಗಿತ್ತು. ನಟವರ್ಗದ ಪ್ರತಿಭೆಯನ್ನು ಗಮನಿಸಿಕೊಂಡೆ ನಾಟಕಗಳನ್ನು ರಚಿಸಿದರೂ, ನಾಟಕದ ಶಿಷ್ಟಾಚಾರಕ್ಕೆ ಎಲ್ಲಿಯೂ ಏನೊಂದೂ ಎರವಾಗದಂತೆ ನೋಡಿಕೊಂಡರು. ಬದಲಾಗುತ್ತಿರುವ ಸಮಾಜದಲ್ಲಿ ಪೀಡೆಗಳಾಗಿ ಮಾರ್ಪಟ್ಟ ಹಳತು ಸಂಪ್ರದಾಯಗಳನ್ನು ಚಿವುಟಿ ಹಾಕಬೇಕೆಂಬ ಸುಧಾರಣಾ ಒಲವು ಅವರ ನಾಟಕಗಳಲ್ಲಿ ಪ್ರಕಟಗೊಂಡಿತು. ಬಾಲವಿವಾಹ, ಅಸ್ಪೃಶ್ಯತೆ, ವರದಕ್ಷಿಣೆ ಮೊದಲಾದ ಸಾಮಾಜಿಕ ಅನಿಷ್ಟಗಳ ವಿರುದ್ಧ ನಾಟಕ ಮಾಧ್ಯಮದಿಂದ ಸಮರವನ್ನೇ ಸಾರಿದರು. ಬಡತನ, ಮೇಲು-ಕೀಳು ಎಂಬ ತಾರತಮ್ಯ, ಕೌಟುಂಬಿಕ ವಿಘಟನೆ, ವಿಷಮವಿವಾಹ ಮೊದಲಾದ ಪೀಡೆಗಳತ್ತ ಜನರ ಗಮನವನ್ನು ಸೆಳೆದರು.

ಕನ್ನಡ ರಂಗಭೂಮಿಯ ಗುಣಮಟ್ಟವನ್ನು ವರ್ಧಿಸಿದರು. ಕನ್ನಡ ನಾಟಕ ಕಲೆಯ ಹೆಗ್ಗಳಿಕೆಯನ್ನು ಹೊರನಾಡುಗಳಲ್ಲಿಯೂ ಪ್ರಸರಿಸಿದರು. ಅಭಿನಯವೇ ನಾಟಕದ ಜೀವಾಳ ಎಂದು ತಮ್ಮ ಅಭಿನಯ ಕಲೆಯ ಸಾಮರ್ಥ್ಯದಿಂದಲೇ ತೋರಿಸಿಕೊಟ್ಟರು. ಹೀಗೆ, ರಂಗಭೂಮಿಯಲ್ಲೊಂದು ಮಹತ್ತರ ಕ್ರಾಂತಿಯನ್ನು ಮಾಡಿ, ಮಹೋನ್ನತವಾದ ಹೊಸ ಅಧ್ಯಾಯವನ್ನು ಆರಂಭಿಸಿದ ಹಿರಿಮೆ ಗರುಡರದು. ಉತ್ತಮ ನಾಟಕಗಳನ್ನು ರಚಿಸಿ 'ನಾಟಕಾಲಂಕಾರ'ರಾದರು ; ಅಭಿನಯ ಚಾತುರ್ಯದಿಂದ 'ಅಭಿನಯ ಕೇಸರಿ'ಯಾದರು ; ನಾಟಕಕಲೆಯ ಶಿಕ್ಷಣ ತರಬೇತಿಯಿಂದ ಹಲವು ಕಲಾವಿದರನ್ನು ರೂಪಿಸಿ 'ನಾಟ್ಯಾಚಾರ್ಯ'ರಾದರು.

## ದತ್ತಾತ್ರೇಯ ನಾಟಕ ಮಂಡಳಿಯ ಪ್ರಮುಖ ಕಲಾವಿದರು

| | |
|---|---|
| ಸೀತಾರಾಮಭಟ್ಟ ಗುಡಿ | - ಅಭಿನಯದಲ್ಲಿ ಗರುಡರ ನಂತರದ ಸ್ಥಾನ ; ಪ್ರತಿಭಾಸಂಪನ್ನ ನಟ, ಹಾಡುಗಾರ. |
| ನೀಲಕಂಠಬುವಾ ಗಾಡಗೋಳಿ | - ಸಂಗೀತಗಾರ, ನಟ ; ಸ್ತ್ರೀ ಪಾತ್ರಗಳನ್ನು ಸೊಗಸಾಗಿ ನಿರ್ವಹಿಸುತ್ತಿದ್ದರು. ರಾಗಪ್ರಸ್ತಾರಗಳಲ್ಲಿ ನಿಪುಣರು ದಕ್ಷಿಣಾದಿ-ಉತ್ತರಾದಿಗಳೆರಡರಲ್ಲೂ ಸಾಧನೆ ಮಾಡಿದ್ದರು. |
| ತುಕಾರಾಮಪ್ಪ ಹೊಸಮನಿ | - ಸಂಗೀತಜ್ಞರು, ನಟ. |
| ದೇವಗಿರಿ ಶಿವಮೂರ್ತಯ್ಯ | - ಪಾತ್ರಕ್ಕೆ ಕಳೆಕಟ್ಟುತ್ತಿದ್ದ ಅಭಿನಯ ಚತುರ ನಟ. |
| ಬೆಟದೂರು ಚೆನ್ನಯ್ಯ | - ಸಂಗೀತ ಪ್ರಧಾನ ಪಾತ್ರಗಳ ಅಭಿನಯ |
| ಮಧ್ವರಾಜ ಉಮರ್ಜಿ | - ಪ್ರತಿಭಾನ್ವಿತ ನಟ ('ನಟರಾಜ' ಬಿರುದಾಂಕಿತರು) |
| ಮೊರಬ ಹನುಮಂತಪ್ಪ ಯಕ್ಕುಂಡಿ | - ಪ್ರತಿನಾಯಕನ ಪಾತ್ರ ; ಸಹಜಾಭಿನಯ ನಟ, ಜನಪದ ಕಲಾವಿದರು. |
| ರಾಮಭಟ್ಟರು | - ಕಂಸಪಾತ್ರ ಪ್ರಸಿದ್ಧಿಯ ನಟ |

| | |
|---|---|
| ಭೀಮರಾವ ಕಾಳೆ | - ಮರಾಠಿ ರಂಗ ನಟ ; ಗರುಡರ ಗರಡಿಯಲ್ಲಿ ಕನ್ನಡ ಕಲಿತು ಪಾತ್ರ ಮಾಡಿ ಕನ್ನಡಿಗರ ಹೃದಯವನ್ನು ಗೆದ್ದವರು. |
| ಬಸಲಿಂಗಯ್ಯ ಹಿರೇಮಠ | - ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಕಡಕೋಳದವರು. ರಂಗಭೂಮಿಯನ್ನು ಹವ್ಯಾಸವಾಗಿಸಿಕೊಂಡು ಮಂಡಳಿಯಲ್ಲಿ ಕೆಲಸ. ಗರುಡರ ಗೈರು ಹಾಜರಿಯಲ್ಲಿ ರಾವಣ, ಕಂಸನ ಪಾತ್ರಗಳನ್ನು ಅಮೋಘವಾಗಿ ಮಾಡುತ್ತಿದ್ದರು; ಹಾಸ್ಯನಟ ಕೂಡ. |
| ಕಡಪಟ್ಟಿ ಬಸಲಿಂಗಯ್ಯ | - ವಿವಿಧ ಪಾತ್ರಗಳನ್ನು ನಿರ್ವಹಿಸುವ ಉತ್ತಮ ನಟ. |
| ಹಮ್ಮಿಗಿ ನೀಲಕಂಠಪ್ಪನವರು | - ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಹಮ್ಮಿಗಿಯವರು, ಸ್ತ್ರೀ ಪಾತ್ರಧಾರಿ ('ಸ್ತ್ರೀ ಪಾತ್ರ ರತ್ನ' ಬಿರುದಾಂಕಿತರು). |
| ಮುರಗೋಡ ಗಂಗಾಧರಪ್ಪ | - ಸ್ತ್ರೀ-ಪುರುಷ ಪಾತ್ರಗಳೆರಡರಲ್ಲಿಯೂ ಅಭಿನಯ ಚತುರರು (ಕರ್ನಾಟಕ ಗಂಧರ್ವ ಎಂಬ ಪ್ರಖ್ಯಾತಿ). |
| ಜಾಲವಾದಿ ಗುರಪ್ಪ<br>ಬೆಟದೂರು ಶಂಕ್ರಯ್ಯ | - ಸ್ತ್ರೀ ಪಾತ್ರ ಅಭಿನಯ ಚತುರರು. |
| ತೋನ್ಸೆ ವಿಠ್ಠಲರಾವ | - ಮಂಡಳಿಯ ಪ್ರಮುಖ ಕಲಾವಿದರು, ಘಟೋದ್ಗಜ, ಕಂಸ, ರಾವಣ ಪಾತ್ರಗಳಲ್ಲಿ ಅಮೋಘ ನಟನೆ. |
| ಹಳ್ಳಿಗುಡಿ ಸದಾಶಿವಪ್ಪ | - ಗದಗ ಜಿಲ್ಲೆಯ ಮುಂಡರಗಿ ತಾಲೂಕಿನವರು. ಬಾಲನಟರಾಗಿ ಹೆಸರು ಮಾಡಿ, ಪ್ರಬುದ್ಧ ನಟರಾಗಿ 'ಶ್ರೇಷ್ಠನಟ' ಎನಿಸಿಕೊಂಡವರು. |
| ಗರುಡ ಶ್ರೀಪಾದರಾಯರು | - ಗರುಡ ಸದಾಶಿವರಾಯರ ಎರಡನೆಯ ಪುತ್ರರು. |

ಚಿಕ್ಕಂದಿನಿಂದಲೂ ನಾಟಕ, ಅಭಿನಯ, ನಿರ್ದೇಶನಗಳಲ್ಲಿ ಆಸಕ್ತಿ. ಅಧ್ಯಯನ, ತರಬೇತಿಯಿಂದ ನಾಟಕ, ರಂಗಕಲೆಯ ಮರ್ಮವನ್ನು ಅರಿತುಕೊಂಡವರು. ವಿವಿಧ ಪಾತ್ರಗಳನ್ನು ಮಾಡುತ್ತ ಅಭಿನಯ ಕಲೆಯನ್ನು ಅಂತರ್ಗತಿಸಿಕೊಂಡರು. ೧೯೩೨ ರಲ್ಲಿ ಒಂಬತ್ತು ವರ್ಷ ಪ್ರಾಯದ ಬಾಲಕ ಶ್ರೀಪಾದರಾಯರು ಕುಂದಾಪುರದಲ್ಲಿ 'ಸತ್ಯ ಸಂಕಲ್ಪ'

ನಾಟಕದಲ್ಲಿ ಕುಮಾರ ಪಾತ್ರದಲ್ಲಿ ಅಭಿನಯ ಕೌಶಲದಿಂದ ಪ್ರೇಕ್ಷಕರನ್ನು ಮೆಚ್ಚಿಸಿದರು. ಕುಂದಾಪುರಕ್ಕೆ ಬಂದಿದ್ದ ಗಾಂಧೀಜಿ ಇವರ ಪಾತ್ರವನ್ನು ನೋಡಿ ಮೆಚ್ಚಿ ಆಶೀರ್ವದಿಸಿದ್ದರು. ಚಿಕ್ಕಮಗಳೂರು ಕ್ಯಾಂಪಿನಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರರು 'ಬಾಲ ಅಭಿನಯ ಕೇಸರಿ' ಎಂದು ಗೌರವಿಸಿದ್ದರು. 'ವಿಷಮ ವಿವಾಹ' ನಾಟಕದಲ್ಲಿ ಸದಾಶಿವರಾಯರೆದುರು ಯುವರಾಜ ಕಮಲಾಕರನ ಪಾತ್ರವನ್ನು ಅಮೋಘವಾಗಿ ನಟಿಸಿ ಪ್ರೇಕ್ಷಕರ ಮೆಚ್ಚುಗೆ ಪಡೆದು ಉತ್ತಮ ನಟರಾಗಿ ಹೊರಹೊಮ್ಮಿದರು. ಭರತ, ಸುಗ್ರೀವ, ಜಾಂಬವಂತ ಪಾತ್ರಗಳ ಅಭಿನಯದಿಂದ ಸ್ವಂತಿಕೆಯನ್ನು ಪ್ರದರ್ಶಿಸಿದರು. ಸ್ತ್ರೀ ಪಾತ್ರಗಳಲ್ಲಿಯೂ ತಮ್ಮ ಅಭಿನಯ ಚಾತುರ್ಯ-ಕೌಶಲವನ್ನು ಮೆರೆದರು. 'ಮಾಯಾಬಜಾರ'ದ ವತ್ಸಲೆಯ ಪಾತ್ರದಲ್ಲಿ ಪ್ರೇಕ್ಷಕರನ್ನು ಚಂಚಲಗೊಳಿಸುವಂತೆ ಅಭಿನಯಿಸಿ, ಅವರು ಹುಚ್ಚೆದ್ದು ಕುಣಿಯುವಂತೆ ಮಾಡಿದರು. ಹಾಗೆಯೆ ಕರುಣ ರಸದ ಅಭಿನಯದಿಂದ ಪ್ರೇಕ್ಷಕರನ್ನು ಅಳಿಸಿದರು. ಸುಭದ್ರೆ, ರಾಧೆ, ರುಕ್ಮಿಣಿ ಪಾತ್ರಗಳಲ್ಲಿ ಮಿಂಚಿದರು.

ಹಾಸ್ಯ ಹಾಗೂ ಗಂಭೀರ ಭಾವಗಳ ಸಮ್ಮಿಶ್ರಣದಿಂದ ಕೂಡಿದ ಕರಿಜೆಟ್ಟಿಯ ಪಾತ್ರ (ಎಚ್ಚಮ ನಾಯಕ ನಾಟಕದಲ್ಲಿ) ವನ್ನು ಸಮರ್ಥವಾಗಿ ನಟಿಸಿ ತಾವು ಓರ್ವ ಶ್ರೇಷ್ಠ ನಟ ಎಂಬುದನ್ನು ಸಾಬೀತು ಮಾಡಿದರು.

ದತ್ತಾತ್ರೇಯ ಮಂಡಳಿ ಮುಚ್ಚಿದ ನಂತರ ಹಲವು ಮಂಡಳಿಗಳಲ್ಲಿ ಅಭಿನಯಿಸಿದರು. ರಂಗಭೂಮಿಯಲ್ಲಿ ಅಪಾರ ಅನುಭವ ಪಡೆದಿದ್ದ ಶ್ರೀಪಾದರಾಯರು 'ನಾಟಕ' ಕುರಿತಂತೆ ಅಧಿಕಾರಯುತವಾಗಿ ಮಾತಾಡಬಲ್ಲವರಾಗಿದ್ದರು. ಗದುಗಿನಲ್ಲಿ 'ಗರುಡ ನಾಟ್ಯಸಂಘ'ವನ್ನು ಸ್ಥಾಪಿಸಿ ಹವ್ಯಾಸಿ ಕಲಾವಿದರನ್ನು ಸಂಘಟಿಸಿ, ತರಬೇತಿ ನೀಡಿ ಹಲವು ನಾಟಕಗಳನ್ನು ಪ್ರದರ್ಶಿಸಿದರು.

ಯಶೋಧರಾ ಗರುಡ - ಗರುಡ ಸದಾಶಿವರಾಯರ ಕೊನೆಯ ಪುತ್ರಿ. ಬಾಲಪಾತ್ರಗಳನ್ನು ಮಾಡಿ, ಮುದ್ದುಮುದ್ದಾದ ಮಾತು, ಸಹಜಾಭಿನಯದಿಂದ ಆರು ವರ್ಷದ ಈ ಬಾಲೆ ಪ್ರೇಕ್ಷಕರಿಗೆ ಮೋಡಿ ಮಾಡಿದ್ದಳು. ಬಾಲ ಕೃಷ್ಣನ ಪಾತ್ರದಲ್ಲಿ ಪ್ರೇಕ್ಷಕರು ಸಾಕ್ಷಾತ್ ಕೃಷ್ಣನನ್ನೇ ಕಂಡಂತೆ ಭಾವಪರವಶರಾಗುತ್ತಿದ್ದರು. ಯಶೋಧರಾ ಚಿಕ್ಕವಯಸ್ಸಿನಲ್ಲಿಯೇ ಕಾಯಿಲೆಗೆ ತುತ್ತಾಗಿ ವಿಧಿವಶಳಾದಳು.

ವಾದ್ಯಗಾರರು : ಹಾರ್ಮೋನಿಯಂ - ಜಗನ್ನಾಥರಾವ್ ಕುಲಕರ್ಣಿ, ವಿಠ್ಠಲಸಾ ಕಬಾಡಿ, ಕಿನ್ನಾಳ ಶಿವರುದ್ರಪ್ಪ, ಮರತೋರಾ ಶಂಕರರಾಯರು.

ತಬಲಾ : ಶ್ಯಾಮರಾವ ಭಾಡಕರ, ಗರುಡ ದತ್ತಾತ್ರೇಯ.

ವ್ಯವಸ್ಥಾಪಕರು : ಗರುಡ ಸಂಬಾಜಿರಾಯರು (ಮುಖ್ಯ ವ್ಯವಸ್ಥಾಪಕರು), ಕೊಪ್ಪಳ ಲಿಂಗಪ್ಪನವರು, ಕಲಕೋಟಿ. ಶ್ರೀನಿವಾಸರಾವ್.

## ಹೊಂಬಳದ ಶಂಕರಗೌಡರ

## ಶ್ರೀ ಶಂಕರಲಿಂಗೇಶ್ವರ ಸಂಗೀತ ನಾಟಕ ಮಂಡಳಿ (೧೯೧೨)

ಹೊಂಬಳದ ಶಂಕರಗೌಡರು ೧೯೧೨ ರಲ್ಲಿ 'ಶ್ರೀ ಶಂಕರಲಿಂಗೇಶ್ವರ ಸಂಗೀತ ನಾಟಕ ಮಂಡಳಿ' ಯನ್ನು ಹುಟ್ಟುಹಾಕಿದ್ದರು. ಈ ಮಂಡಳಿ ಹೆಚ್ಚಿನದೇನನ್ನೂ ಸಾಧಿಸಲಿಲ್ಲ. ಶಂಕರಗೌಡರು ಮೊದಲಿಗೆ 'ಉಪಾಸಕ ಮಂಡಳಿ' ಯನ್ನು ಆರಂಭಿಸಿದ್ದರು. ಮಂಡಳಿಯ ಸದಸ್ಯರು ಪೈಲವಾನರಾಗಿದ್ದರು. ಇವರಿಗೆಲ್ಲ ನಾಟ್ಯ ಶಿಕ್ಷಣ-ತರಬೇತಿ ಕೊಡಿಸುವ ಏರ್ಪಾಟು ಮಾಡಲಾಗಿತ್ತು. ಸದಾಶಿವರಾವ ಗರುಡರು ಕೊಪ್ಪಳ ಮಂಡಳಿಯಲ್ಲಿ ನಾಟ್ಯಾಚಾರ್ಯರಾಗಿದ್ದಾಗ ಹೊಂಬಳದ ಶಂಕರಗೌಡರು ಅವರನ್ನು 'ಉಪಾಸಕ ಮಂಡಳಿ'ಗೆ ನಾಟ್ಯಾಚಾರ್ಯರಾಗಿ ಬರಲು ಆಮಂತ್ರಿಸಿದ್ದರು. 'ಉಪಾಸಕ ಮಂಡಳಿ'ಯ ನಾಟ್ಯಾಚಾರ್ಯರಾಗಿ ಗರುಡರು ಒಂದೆರಡು ವರ್ಷ ಕೆಲಸ ಮಾಡಿರಬೇಕು. ಈ ಮಂಡಳಿಯಿಂದ 'ಸಂತ ತುಕಾರಾಮ', 'ಪದ್ಮಾವತಿ', 'ಕಾಳಿದಾಸ' ನಾಟಕಗಳನ್ನು ಪ್ರದರ್ಶಿಸಲಾಯಿತು.

## ಬಚ್ಚಾಸಾನಿ ದೊಡ್ಡಮನಿಯವರ

## ಸ್ತ್ರೀ ನಾಟಕ ಮಂಡಳಿ, ಲಕ್ಷ್ಮೇಶ್ವರ (೧೯೧೬)

ಗದಗ ಜಿಲ್ಲೆಯ ಲಕ್ಷ್ಮೇಶ್ವರದ ಬಚ್ಚಾಸಾನಿ ದೊಡ್ಡಮನಿ ಗ್ವಾಲಿಯರ್ ಘರಾಣೆಯ ಪ್ರಸಿದ್ಧ ಗಾಯಕಿಯಾಗಿದ್ದರು. ರಂಗಕಲಾವಿದೆಯಾಗಿದ್ದ ಇವರು 'ರಂಗಭೂಮಿಯ ದೊರೆಸಾನಿ' ಎನಿಸಿಕೊಂಡಿದ್ದರು. ೧೯೧೬ ರಲ್ಲಿ ಇವರು 'ಸ್ತ್ರೀ ನಾಟಕ ಮಂಡಳಿ' ಯನ್ನು ಆರಂಭಿಸಿದ್ದು, ಅಂದಿನ ದಿನಗಳಲ್ಲಿ ಅದ್ಭುತ ರಂಗಸಾಹಸವೇ ಆಗಿತ್ತು. "ಸ್ತ್ರೀ ಕಲಾವಿದರೆ ಒಟ್ಟಾಗಿ ವೃತ್ತಿಸಂಸ್ಥೆಗಳನ್ನು ಕಟ್ಟಿ ಪುರುಷ ಪಾತ್ರಗಳನ್ನು ನಿರ್ವಹಿಸಿದ ನಾಲ್ಕಾರು ಉದಾಹರಣೆಗಳು ಕನ್ನಡ ನಾಡಿನಲ್ಲಿ ಇವೆ. ಲಕ್ಷ್ಮೇಶ್ವರದ 'ಸ್ತ್ರೀ ನಾಟಕ ಮಂಡಳಿ' ಈ ಸಾಲಿನಲ್ಲಿ ಮೊದಲಿನದು".* ಸ್ತ್ರೀ ಪಾತ್ರಗಳನ್ನು ಪುರುಷರೆ ವಹಿಸುತ್ತಿದ್ದ ಅಂದಿನ ದಿನಗಳಲ್ಲಿ ಬಚ್ಚಾಸಾನಿಯವರ ಕಲಾವಿದೆಯರ ಸಂಘಟನೆ ವಿಶೇಷವೆನಿಸಿತ್ತು. ಈ ಮಂಡಳಿಯಲ್ಲಿ ಪುರುಷಪಾತ್ರಗಳನ್ನು ಸ್ತ್ರೀಯರೆ ಅಭಿನಯಿಸುತ್ತಿದ್ದರು. ಮಂಡಳಿಯ ಎಲ್ಲ ಕೆಲಸ ಕಾರ್ಯಗಳು ದ್ವಾರಪಾಲಕನವರೆಗೆ ಸ್ತ್ರೀಯರವೇ ಆಗಿದ್ದವು. ಕರ್ನಾಟಕದಲ್ಲಿ ಮೊದಲ ಸ್ತ್ರೀ ನಾಟಕ ಮಂಡಳಿ ಕಟ್ಟಿದ ಕೀರ್ತಿ ಬಚ್ಚಾಸಾನಿಗೆ ಸಲ್ಲುತ್ತದೆ. ಉತ್ತರ ಕರ್ನಾಟಕ ರಂಗಭೂಮಿಯ ಇತಿಹಾಸದಲ್ಲಿ ಈ ಪ್ರಯೋಗವೊಂದು ದಾಖಲೆ. ಹಲವು ಕಲಾವಿದೆಯರನ್ನು, ನಟಿಯರನ್ನು ರೂಪಿಸಿದ ಈ ಮಂಡಳಿ ವೃತ್ತಿನಾಟಕ ರಂಗಕ್ಕೆ ಪೋಷಕವಾಯಿತು.

---

* ಎಚ್.ಕೆ. ರಂಗನಾಥ, ಕರ್ನಾಟಕ ರಂಗಭೂಮಿ, ಪುಟ ೨೮೬.

## ಅಬ್ಬಿಗೇರಿ ಬಸನಗೌಡರ
## ಕನ್ನಡ ಸಾಹಿತ್ಯ ಸೇವಾ ಸಂಗೀತ ನಾಟಕ ಮಂಡಳಿ, ಅಬ್ಬಿಗೇರಿ (೧೯೨೮)

ಗದಗ ಜಿಲ್ಲೆಯ ರೋಣ ತಾಲೂಕಿನ ಅಬ್ಬಿಗೇರಿಯ ಬಸನಗೌಡರು ೧೯೨೮ ರಲ್ಲಿ 'ಕನ್ನಡ ಸಾಹಿತ್ಯ ಸೇವಾ ಸಂಗೀತ ನಾಟಕ ಮಂಡಳಿ'ಯನ್ನು ಅಸ್ತಿತ್ವಕ್ಕೆ ತಂದರು. ಬಸನಗೌಡರು ನಾಟಕ ಪ್ರೇಮಿಗಳಾಗಿದ್ದರು. ಸಾಕಷ್ಟು ಹಣವನ್ನು ತೊಡಗಿಸಿ ಅದ್ದೂರಿ ರಂಗಸಜ್ಜಿಕೆ ನಿರ್ಮಿಸಿ, ಪ್ರತಿಭಾಸಂಪನ್ನ ಕಲಾವಿದರನ್ನು ಕಲೆಹಾಕಿ ತಮ್ಮ ಮಂಡಳಿಯನ್ನು ವಿಜೃಂಭಣೆಯಿಂದಲೆ ಪ್ರಾರಂಭಿಸಿದರು. ಅವರು ಅಂದಿನ ಕಾಲದಲ್ಲಿ ನಾಟಕ ಮಂಡಳಿಗೆ ತೊಡಗಿಸಿದ ಮೊತ್ತ ಅರವತ್ತು ಸಾವಿರಕ್ಕೂ ಅಧಿಕವಾಗಿತ್ತು. ಚಿಕ್ಕೋಡಿ ಶಿವಲಿಂಗಶಾಸ್ತ್ರಿಗಳು ರಚಿಸಿದ 'ಕಿತ್ತೂರ ಚೆನ್ನಮ್ಮ' ಈ ಮಂಡಳಿ ಪ್ರದರ್ಶಿಸಿದ ಮೊದಲ ನಾಟಕವಾಗಿತ್ತು.

ಕರ್ನಾಟಕ ಗಂಧರ್ವ ಮುರಗೋಡ ಗಂಗಾಧರಪ್ಪ, ಪೈಲವಾನ ನಟ ಹಳ್ಳಿಗುಡಿ ಸದಾಶಿವಪ್ಪ, ಹಾಸ್ಯ ಚಕ್ರವರ್ತಿ ಶಿವಾಜಿ ಸಾಳುಂಕೆ (ಮಲ್ಲೂರಪ್ಪ), ಲಕ್ಷ್ಮಣರಾವ ಸೊಂಡೂರ, ಗದಗ ರತ್ನಾ ಮೊದಲಾದ ಪ್ರತಿಭಾಸಂಪನ್ನ ಕಲಾವಿದರನ್ನು ಈ ಮಂಡಳಿ ಒಳಗೊಂಡಿತ್ತು. ಗುರುರಾವ ದೇಶಪಾಂಡೆ ಸಂಗೀತ ಶಿಕ್ಷಕರಾಗಿದ್ದರು ಹಾಗೂ ಕುಂದಗೋಳ ಫಕೀರಪ್ಪ ಸಂಗೀತ ನಿರ್ದೇಶಕರಾಗಿದ್ದರು.

ಸ್ವಾತಂತ್ರ್ಯ ಚಳುವಳಿ ತೀವ್ರತರ ತಿರುವುಗಳನ್ನು ಪಡೆಯುತ್ತಿದ್ದ ಅಂದಿನ ಸನ್ನಿವೇಶದಲ್ಲಿ 'ಕಿತ್ತೂರ ಚೆನ್ನಮ್ಮ', 'ಝಾನ್ಸಿ ಲಕ್ಷ್ಮೀಬಾಯಿ', 'ನರಗುಂದ ಬಂಡಾಯ' ನಾಟಕಗಳನ್ನು ಅಬ್ಬಿಗೇರಿ ಸೇರಿದಂತೆ ಗದಗ, ಹುಬ್ಬಳ್ಳಿ, ಧಾರವಾಡ, ಕಿತ್ತೂರು, ಗೋಕಾಕ, ಬಿಜಾಪುರಗಳಲ್ಲಿ ಪ್ರದರ್ಶಿಸಿದ ಈ ಮಂಡಳಿ ನಾಡಿನ ಗಮನ ಸೆಳೆದು ಮನೆಮನೆ ಮಾತಾಯಿತು.

'ಕಿತ್ತೂರ ಚೆನ್ನಮ್ಮ' ನಾಟಕ ನೋಡಿ ಹೊರಬಂದಾಗ ಪ್ರೇಕ್ಷಕರು ನಾಟಕ ಗೃಹದೆದುರೆ ವಿದೇಶಿ ವಸ್ತುಗಳನ್ನು ಸುಟ್ಟು ಹಾಕಿದ್ದರಂತೆ. ಹಾಗೆಯೇ ತಮ್ಮ ಊರುಗಳಿಗೆ ಹೋಗುವಾಗ ರಸ್ತೆ ಬದಿಯಲ್ಲಿಯ ಸೇಂದಿ ಗಿಡಗಳನ್ನು ಕಡಿದು ಹಾಕುತ್ತಿದ್ದರಂತೆ.

೧೯೩೦ ರಲ್ಲಿ ದೇಶದಲ್ಲಿ ಅಸಹಕಾರ ಆಂದೋಲನ ನಡೆಯಿತು. ಆಗ ಬ್ರಿಟಿಷ ಸರಕಾರ ಚಳುವಳಿಯನ್ನು ಹತ್ತಿಕ್ಕಲು ಬಿಗಿ ಕ್ರಮಗಳನ್ನು ಅನುಸರಿಸಿತು. ಈ ಮಂಡಳಿಯ ಪ್ರದರ್ಶನವನ್ನು ನಿಷೇಧಿಸಲಾಯಿತು. ಅನಂತರದಲ್ಲಿ ಈ ಮಂಡಳಿ ಸ್ಥಗಿತಗೊಂಡಿತು.

**ಕಲಾವಿದರು :**

**ನಟರು :** ಮುರಗೋಡ ಗಂಗಾಧರಪ್ಪ, ಶಿವಾಜಿ ಮಲ್ಲೂರ, ಗುರುರಾವ ದೇಶಪಾಂಡೆ, ಹಳ್ಳಿಗುಡಿ ಸದಾಶಿವಪ್ಪ, ಲಕ್ಷ್ಮಣರಾವ ಸೊಂಡೂರು, ಏಣಗಿ ಬಾಳಪ್ಪ.

**ನಟಿಯರು :** ಗದಗ ರತ್ನಾ, ಹುಬ್ಬಳ್ಳಿ ಭಾಗೀರಥಿಬಾಯಿ, ಸೋನುಬಾಯಿ ದೊಡ್ಡಮನಿ.

**ವ್ಯವಸ್ಥಾಪಕರು :** ಸಕ್ಕನಗೌಡರು, ಗುರುನಗೌಡರು, ಶಿವನಗೌಡರು (ಅಬ್ಬಿಗೇರಿ ಬಸನಗೌಡರ ಸೋದರರು).

## ಏರಾಸಿ ಭರಮಪ್ಪನವರ
## ಶ್ರೀವಾಣಿ ವಿಲಾಸ ಸಂಗೀತ ನಾಟಕ ಮಂಡಳಿ, ಗದಗ (೧೯೨೯)

ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಡಂಬಳ ಗ್ರಾಮದ ಸಿರಿವಂತ ವ್ಯಾಪಾರಿ ನಾಟಕಪ್ರಿಯ ಏರಾಸಿ ಭರಮಪ್ಪನವರು ೧೯೨೯ ರಲ್ಲಿ 'ಶ್ರೀ ವಾಣಿ ವಿಲಾಸ ಸಂಗೀತ ನಾಟಕ ಮಂಡಳಿ'ಯನ್ನು ಆರಂಭಿಸಿದರು. **'ಕಿತ್ತೂರ ಚೆನ್ನಮ್ಮ'** ನಾಟಕದ ಖ್ಯಾತಿಯ ನಾಟಕಕಾರ ಚಿಕ್ಕೋಡಿಯ ಶಿವಲಿಂಗ ಶಾಸ್ತ್ರಿಗಳನ್ನು ಡಂಬಳಕ್ಕೆ ಕರೆದುಕೊಂಡು ಬಂದು, ಅಲ್ಲಿಯೇ ಅವರ ವಾಸ್ತವ್ಯಕ್ಕೆ ಅನುಕೂಲ ಮಾಡಿಕೊಟ್ಟು ಹೊಸ ನಾಟಕವನ್ನು ಬರೆಸಿದರು. 'ರಾಣಿ ರುದ್ರಮ್ಮ' ನಾಟಕ ರಚಿಸಿದ ಶಿವಲಿಂಗ ಶಾಸ್ತ್ರಿಗಳು ಮಂಡಳಿಯ ಕಲಾವಿದರಿಗೆ ಅಭಿನಯ ತರಬೇತಿ ನೀಡಿದರು.

ಏರಾಸಿ ಭರಮಪ್ಪನವರು ಬೃಹತ್ ಪ್ರಮಾಣದ ಬಂಡವಾಳವನ್ನು ತೊಡಗಿಸಿ ವೈಭವಪೇರಿತ ರಂಗಸಜ್ಜಿಕೆಯನ್ನು ಸಿದ್ಧಪಡಿಸಿದರು. ಉತ್ತಮ ಕಲಾವಿದರನ್ನು ಸಂಘಟಿಸಿದರು. ಬಸವರಾಜ ಮನಸೂರ, ಮಲ್ಲಿಕಾರ್ಜುನ ಮನಸೂರ, ಹಂದಿಗನೂರ ಸಿದ್ರಾಮಪ್ಪ, ಮಂಕಣಿ ಮಾನಪ್ಪ, ನಟಿ ಗೋಹರಜಾನ್ ಮೊದಲಾದವರು ಕಲಾವಿದರು. ನೀಲಕಂಠಬುವಾ ರಂಗಸಂಗೀತ ನಿರ್ದೇಶಕರು. ವಿಠ್ಠಲಸಾ ಕಬಾಡಿ, ಭೀಮದಾಸ ಹೂಗಾರ, ಹಟೇಲಸಾಬ ಬಿಜಾಪೂರ ವಾದ್ಯ ನುಡಿಸುವವರು - ಹೀಗೆ ಈ ಕಲಾವೃಂದವು ಡಂಬಳದ ಶ್ರೀ ತೋಂಟದಾರ್ಯ ಮಠದಲ್ಲಿ **'ಕಿತ್ತೂರ ರುದ್ರಮ್ಮ'** ನಾಟಕದ ತಾಲೀಮನ್ನು ನಾಲ್ಕು ತಿಂಗಳವರೆಗೆ ಮಾಡಿತು. ನಾಟಕದ ಮೊದಲ ಪ್ರದರ್ಶನ ಹುಬ್ಬಳ್ಳಿಯ ಮಲ್ಲಿಕಾರ್ಜುನ ಥಿಯೇಟರ್‌ನಲ್ಲಿ ನಡೆಯಿತು.

ವಾಣಿ ವಿಲಾಸ ಮಂಡಳಿಯ ವೈಭವಯುತ ರಂಗಸಜ್ಜಿಕೆಯನ್ನು ನೋಡಲು ದೂರದ ಊರುಗಳಿಂದ ಜನ ಹುಬ್ಬಳ್ಳಿಗೆ ಬಂದು ಮೆಚ್ಚುಗೆ ವ್ಯಕ್ತಪಡಿಸಿದರು. ನಾಟಕದ ಪ್ರದರ್ಶನಗಳು ಜನದಟ್ಟಣೆಯಲ್ಲಿ ನಡೆದವು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಕಥಾವಸ್ತುವನ್ನಾಧರಿಸಿ ಕಂದಗಲ್ ಹನುಮಂತರಾಯರು ಬರೆದ 'ವರಪ್ರದಾನ' ನಾಟಕವನ್ನು ಮಂಡಳಿಯು ಗದುಗಿನಲ್ಲಿ ಪ್ರಥಮವಾಗಿ ಪ್ರದರ್ಶಿಸಿತು. ಅದ್ಭುತ ಯಶಸ್ಸನ್ನು ಸಂಪಾದಿಸುತ್ತ ನಡೆದ ಮಂಡಳಿಯು ಬೆಳಗಾವಿ, ಬೈಲಹೊಂಗಲ, ರಬಕವಿ, ಬಿಜಾಪುರ, ಕಲಬುರ್ಗಿ, ರಾಯಚೂರಿನಲ್ಲಿ ನಾಟಕಗಳನ್ನು ಪ್ರದರ್ಶಿಸಿತು. ರಾಯಚೂರಿನಲ್ಲಿ ಈ ಮಂಡಳಿ ನಾಟಕ ಪ್ರದರ್ಶಿಸುತ್ತಿರುವಾಗ ಗರುಡರ ಮಂಡಳಿಯ ಕ್ಯಾಂಪು ಅಲ್ಲಿಯೇ ಇದ್ದಿತು. ವಾಣಿ ವಿಲಾಸಮಂಡಳಿಯ 'ಕಿತ್ತೂರ ರುದ್ರವ್ವ' 'ವರಪ್ರದಾನ' ನಾಟಕಗಳು ಗರುಡರ ನಾಟಕಗಳಿಗಿಂತಲೂ ಹೆಚ್ಚು ದಟ್ಟಣೆಯಲ್ಲಿ ನಡೆದವು. ರಾಯಚೂರಿನಿಂದ ಬಳ್ಳಾರಿ, ಅನಂತರ ಬೆಂಗಳೂರು ಹೀಗೆಯೇ ಸಂಚಾರ ಮುಂದುವರೆಯಿತು. ಬೆಂಗಳೂರಿನಲ್ಲಿ ನಿರೀಕ್ಷಿತ ಪ್ರೋತ್ಸಾಹ ಸಿಕ್ಕಲಿಲ್ಲ. ತದನಂತರದಲ್ಲಿ ಸಂಕಷ್ಟಕ್ಕೆ ಸಿಲುಕಿದ ಮಂಡಳಿ ಮುಚ್ಚಿ ಹೋಯಿತು.

ರಂಗ ಪರಿಕರ, ಸಂಗೀತ ಸಲಕರಣೆಗಳು, ವೇಷ-ಭೂಷಣಗಳು ಮೊದಲಾದ ವಿಷಯಗಳಲ್ಲಿ ಭರಮಪ್ಪನವರು ಹೊಸತನವನ್ನು ತಂದಿದ್ದರು. ಭವ್ಯ ದೃಶ್ಯಾವಳಿಗಳು, ಬೃಹತ್ ಅಂಕ ಪರದೆ, ಅಂಕ ಪರದೆಯ ಮೇಲೆ ಭಾರತದ ನಕ್ಷೆ, ರಾಷ್ಟ್ರ ನಾಯಕರ ಭಾವಚಿತ್ರಗಳು, ಭಾರತಾಂಬೆಯ ಕೈಯಲ್ಲಿ ರಾಷ್ಟ್ರೀಯ ತ್ರಿವರ್ಣಧ್ವಜ ಮೊದಲಾದವುಗಳಿಂದ ಅಲಂಕೃತವಾದ ಭವ್ಯ ರಂಗಸಜ್ಜಿಕೆ ಅತ್ಯಾಕರ್ಷಕವಾಗಿತ್ತು. ಮಂಡಳಿಯು ನೂರಕ್ಕೂ ಅಧಿಕ ಕಲಾವಿದರಿಗೆ ನಿತ್ಯ ಸುಗ್ರಾಸ ಉಪಾಹಾರ-ಭೋಜನ ವ್ಯವಸ್ಥೆ ಮಾಡಿತ್ತು. ಮಂಡಳಿಯ ಆಯುಷ್ಯ ಐದೇ ವರ್ಷಗಳಾಗಿದ್ದರೂ ಸಾಧನೆ ಅದ್ಭುತವಾಗಿತ್ತು.

ವಾಮನರಾಯರ ವಿಶ್ವಗುಣಾದರ್ಶ ಮಂಡಳಿ ಹಾಗೂ ಗರುಡರ ದತ್ತಾತ್ರೇಯ ನಾಟಕ ಮಂಡಳಿಗಳ ವಿಶೇಷತೆಗಳನ್ನು ಒಳಗೊಂಡಂತೆ ರೂಪುಗೊಂಡಿದ್ದ ಈ ಮಂಡಳಿ ಕಲಾವಿದರಿಗೆ ನಿತ್ಯ ಶಿಕ್ಷಣ-ತರಬೇತಿ ವ್ಯವಸ್ಥೆ ಮಾಡಿತ್ತು. ವೈಭವಪೇರಿತ ರಂಗಸಜ್ಜಿಕೆಯಲ್ಲಿ ಅದ್ದೂರಿ ಪ್ರದರ್ಶನಗಳನ್ನು ನೀಡಿದ್ದ ಈ ಮಂಡಳಿ ರಂಗಭೂಮಿಯ ಪ್ರಗತಿಯಲ್ಲಿ ಬಲವಾದ ಕೊಂಡಿಯಂತೆ ಕಾರ್ಯನಿರ್ವಹಿಸಿತು.

## ಕಲಾವಿದರು :

ನಟರು : ಬಸವರಾಜ ಮನಸೂರ, ಹಂದಿಗನೂರ ಸಿದ್ರಾಮಪ್ಪ, ಮಲ್ಲಿಕಾರ್ಜುನ ಮನಸೂರ, ಬೇವೂರ ಬಾದರಶಹ, ಹಕ್ಕಂಡಿ ವೀರಪ್ಪ, ಮಡಿವಾಳಯ್ಯ ಸೀಮಿಕೇರಿ, ಗೋಪಾಲರಾವ ಕುಂಭಾರೆ, ಮಂಕಣಿ ಮೌನಪ್ಪ, ಸಿದ್ಧಲಿಂಗಪ್ಪ ಬೀಳಗಿ, ಫಕೀರಯ್ಯ ಸೊರಟೂರ, ಬಾಳಪ್ಪ ತೇರದಾಳ, ಶಂಕ್ರಪ್ಪ ಹೂಗಾರ, ದಾವಲಸಾಹೇಬ ಹಂಪಸಾಗರ.

ನಟಿಯರು : ಗೋಹರಜಾನ್ ಕರ್ನಾಟಕಿ, ಅಮೀರಜಾನ್ ಕರ್ನಾಟಕಿ, ಮುನ್ನುಜಾನ್ ಬೀಳಗಿ.

ಬಾಲ ಕಲಾವಿದರು : ಲಿಂಗರಾಜ ಯರಗುಪ್ಪಿ, ಹೂವಿನಹಡಗಲಿ ವೀರಭದ್ರಪ್ಪ, ಶಾಂತೇಶ ಡಂಬಳ, ಲಿಂಗಪ್ಪ ಮನಸೂರ, ಬಸಪ್ಪ ಮನಸೂರ.

ವಾದ್ಯಗಾರರು : ವಿಠ್ಠಲಸಾ ಕಬಾಡಿ, ಭೀಮದಾಸ ಹೂಗಾರ, ವೀರಭದ್ರಪ್ಪ ಶಿರಗುಪ್ಪಿ (ಆರ್ಗನ್).

ತಬಲಾ : ಹಟೇಲಸಾಬ ಬಿಜಾಪೂರ, ಚೆನ್ನಪ್ಪ ಗೊಳಸಂಗಿ.

ಸಾರಂಗಿ : ಅಲ್ಲಾಭಕ್ಷ, ಇಮಾಮಭಕ್ಷ.

ವ್ಯವಸ್ಥಾಪಕರು : ಕಂದಗಲ್ ಹನುಮಂತರಾಯರು, ಎಸ್. ವಾಯ್. ಪಾಟೀಲ ಮತ್ತು ವಿರಕ್ತಮಠ.

## ಲಕ್ಷ್ಮಣರಾವ ಅಸುಂಡಿಯವರ
## ಶಿವಾನಂದ ಸಂಗೀತ ನಾಟಕ ಮಂಡಳಿ, ಗದಗ (೧೯೩೬)

ಲಕ್ಷ್ಮಣರಾವ ಅಸುಂಡಿ ಸ್ತ್ರೀ ಪಾತ್ರಧಾರಿ ಕಲಾವಿದರು. ಇವರ ಸ್ತ್ರೀಪಾತ್ರಾಭಿನಯ ಅಮೋಘವಾಗಿತ್ತು. ಇವರು ಗಾಯಕ ನಟರು, ಶಿರಹಟ್ಟಿ ವೆಂಕೋಬರಾಯರ ಮಂಡಳಿಯಲ್ಲಿ ಕೆಲಸ ಮಾಡಿದವರು. ಪದ್ಮಾವತಿ, ಅನಸೂಯಾ, ಸುಶೀಲಾ ಪಾತ್ರಗಳಲ್ಲಿ ತಮ್ಮ ಸೊಗಸುಗಾರಿಕೆಯನ್ನು ಮೆರೆದವರು. ಸೋದರ ಸುಭಾನಸಪ್ಪನೊಡನೆ ಹದಿನೈದನೆಯ ವಯಸ್ಸಿನಲ್ಲಿಯೇ ರಂಗಭೂಮಿಯನ್ನು ಸೇರಿದವರು. ತುಕಾರಾಮಬುವಾ ಮತ್ತು ನೀಲಕಂಠಪ್ಪ ಮರೋಳರಿಂದ ಸಂಗೀತ ತರಬೇತಿ ಪಡೆದು ಬಣ್ಣ ಬಳಿದುಕೊಂಡವರು. ಇವರು ಮಾಡಿದ್ದ ಮಹಾನಂದಾ, ಆಲೋರಿಕೆ ಮತ್ತು ಅನಸೂಯಾ ಪಾತ್ರಗಳನ್ನು ವೆಂಕೋಬರಾಯರು ವಿಶೇಷವಾಗಿ ಹೊಗಳಿ ಬೆನ್ನು ತಟ್ಟಿದ್ದರಂತೆ. ವೆಂಕೋಬರಾಯರ ಮಂಡಳಿ ಮುಚ್ಚಿದ ನಂತರ ಲಕ್ಷ್ಮಣರಾವ ಅಸುಂಡಿಯವರು ತಮ್ಮ ಸ್ವಂತ ಮಂಡಳಿಯನ್ನು ಕಟ್ಟಿದರು.

ಗದಗ, ಹುಬ್ಬಳ್ಳಿ, ಧಾರವಾಡ, ಬೆಳಗಾವಿಗಳಲ್ಲಿ ಶಿವಾನಂದ ಸಂಗೀತ ನಾಟಕ ಮಂಡಳಿ ನಾಟಕಗಳನ್ನು ಪ್ರದರ್ಶಿಸಿತು. 'ಹೇಮರಡ್ಡಿ ಮಲ್ಲಮ್ಮ', 'ನರಗುಂದ ಮುತ್ತಿಗೆ', 'ರಾಜಾ ಹರಿಶ್ಚಂದ್ರ' ಹಾಗೂ ಇನ್ನಿತರ ನಾಟಕಗಳನ್ನು ಮಂಡಳಿಯು ಒಂದು ದಶಕಕಾಲ ನಿರಾತಂಕವಾಗಿ ಪ್ರದರ್ಶಿಸಿತು. ಗ್ರಾಮೀಣ ಪ್ರದೇಶಗಳಲ್ಲಿ ಈ ಮಂಡಳಿ ಹೆಚ್ಚು ಸಂಚರಿಸಿತು. ಸಾದಾ ರಂಗಸಜ್ಜಿಕೆಯಲ್ಲಿ ಅಭಿನಯದ ಬಲದ ಮೇಲೆಯೇ ಸಂಪಾದನೆಯನ್ನು ಮಾಡಿದ ಹೆಗ್ಗಳಿಕೆ ಈ ಮಂಡಳಿಯದು. ಮಲ್ಲಮ್ಮ,

ತಾರಾಮತಿ, ಸಾವಿತ್ರಿ ಪಾತ್ರಗಳಲ್ಲಿ ಜೀವಕಳೆ ತುಂಬಿದ ಲಕ್ಷ್ಮಣರಾವ ಅಸುಂಡಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾಗಿದ್ದರು. ಲಕ್ಷ್ಮಣರಾವ ಅಸುಂಡಿಯವರ ರಂಗಸೇವೆಗೆ ಕರ್ನಾಟಕ ನಾಟಕ ಅಕಾಡೆಮಿ ರಾಜ್ಯಪ್ರಶಸ್ತಿ ನೀಡಿ ಗೌರವಿಸಿದೆ.

### ಪಂಡಿತ ಡಾ. ಪುಟ್ಟರಾಜ ಕವಿ ಗವಾಯಿಗಳವರ

## ಶ್ರೀ ಕುಮಾರೇಶ್ವರ ಕೃಪಾಪೋಷಿತ ಲಿಂ. ಪಂಚಾಕ್ಷರ ಗವಾಯಿಗಳ ನಾಟಕ ಮಂಡಳಿ, ಗದಗ (೧೯೪೦)

ಪಂಡಿತ ಪಂಚಾಕ್ಷರ ಗವಾಯಿಗಳು ಹುಟ್ಟಿನಿಂದ ಅಂಧತ್ವ ಪಡೆದಿದ್ದರೂ, ಅಂಧತ್ವವು ವೈಕಲ್ಯವೆ ಅಲ್ಲ ಎಂಬುದನ್ನು ತೋರಿಸಿಕೊಟ್ಟ ಸಾಧಕರು, ದಿವ್ಯಾತ್ಮರು. ತಮ್ಮ ಸತತ ಪರಿಶ್ರಮ-ಶ್ರದ್ಧೆಯ ಸಾಧನೆಯಿಂದ ಉಭಯ ಗಾಯನಾಚಾರ್ಯರಾಗಿ ಹಾನಗಲ್ ಶಿವಯೋಗಿ ಶ್ರೀ ಕುಮಾರಸ್ವಾಮಿಗಳ ಪ್ರೇರಣೆ-ಆಶೀರ್ವಾದದಿಂದ ಸಂಚಾರಿ ಸಂಗೀತ ಪಾಠಶಾಲೆಯನ್ನು ತೆರೆದು ಶಿಷ್ಯರನ್ನು ಸಾಕಿ ಸಲುಹುತ್ತ ಸಂಗೀತ ನೀಡಲು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ೧೯೪೦ ರ ಸುಮಾರಿಗೆ ತೀವ್ರ ಆರ್ಥಿಕ ಮುಗ್ಗಟ್ಟನ್ನು ಎದುರಿಸಿದಾಗಲೂ ಶಿಷ್ಯರನ್ನು ತೊರೆಯಲು ಸಿದ್ಧರಾಗಲಿಲ್ಲ. ರಸ್ತೆಯಲ್ಲಿ ನಿಂತು ಹಾಡುಗಳನ್ನು ಹಾಡಿ ಹಣ ಸಂಗ್ರಹಿಸಿದರು. ಸಾಲದಿಂದ ಮುಕ್ತರಾಗಲು ಶಿಷ್ಯ ಪುಟ್ಟರಾಜರ ಸಲಹೆಯಂತೆ ನಾಟಕ ಮಂಡಳಿಯನ್ನು ಆರಂಭಿಸಲು ಒಪ್ಪಿಗೆ ನೀಡಿದರು (ಸ್ವಪ್ನದಲ್ಲಿ ಕುಮಾರ ಸ್ವಾಮಿಗಳು ಕಾಣಿಸಿಕೊಂಡು ಅಸ್ತು ಎಂದಿದ್ದರು). ನಾಟಕಗಳ ಬಗೆಗೆ ಚಿಕ್ಕಂದಿನಿಂದಲೂ ಆಸಕ್ತಿಯಿದ್ದ ಪುಟ್ಟರಾಜರು 'ಸಿದ್ಧರಾಮ ಸಂವಾದ' ನಾಟಕ ಬರೆದರು. ವಿಶೇಷ ರಂಗಪರಿಕರಗಳಿಲ್ಲದೆ ಹೊಂಬಳದಲ್ಲಿ ಆಡಿದ ಹತ್ತು ಪ್ರದರ್ಶನಗಳು ಯಶಸ್ವಿಯಾದವು. ನರಗುಂದದಲ್ಲಿ ಫಕೀರಪ್ಪ ಹಸಬಿ ರಂಗಮಂಟಪ ನಿರ್ಮಿಸಿಕೊಟ್ಟರು. ಪಂಚಾಕ್ಷರ ಗವಾಯಿಗಳ ತಬಲಾವಾದನ, ಪುಟ್ಟರಾಜರ ಹಾರ್ಮೋನಿಯಂ ಮೇಳದಲ್ಲಿ ಸರಳ ಸಂಭಾಷಣೆಗಳಿಂದ ಕೂಡಿದ 'ಸಿದ್ಧರಾಮ ಸಂವಾದ' ನಾಟಕವು ಪ್ರೇಕ್ಷಕರನ್ನು ಸೂರೆಗೊಂಡಿತು. ಬಸವರಾಜ ರಾಜಗುರು ಸಿದ್ಧರಾಮನಾಗಿ, ಚೆನ್ನಬಸಯ್ಯ ನರೇಗಲ್ ಅಲ್ಲಮಪ್ರಭುವಾಗಿ, ಜಾಲಿಬೆಂಚಿ ದೊಡ್ಡಬಸಯ್ಯ ಮುಖ್ಯ ಸ್ತ್ರೀ ಪಾತ್ರಧಾರಿಯಾಗಿ, ಪಂಚಾಕ್ಷರ ಸ್ವಾಮಿ ಮತ್ತೀಕಟ್ಟಿ ಹಾಸ್ಯ ಸ್ತ್ರೀ ಪಾತ್ರ ವಹಿಸಿದ್ದರು. ನಾಟಕ ಹಲವು ಪ್ರಯೋಗಗಳನ್ನು ಕಂಡಿತು. 'ಕುಮಾರೇಶ್ವರ ಕೃಪಾಪೋಷಿತ ನಾಟಕ ಮಂಡಳಿ' ಎಂದು ಹೆಸರಿಟ್ಟು, ಅದಕ್ಕೊಂದು ವ್ಯವಸ್ಥಿತ ರೂಪ ಕೊಡಲಾಯಿತು. ಶರಣರ ಜೀವನವನ್ನಾಧರಿಸಿದಂತೆ ಪುಟ್ಟರಾಜರು ನಾಟಕ ರಚನೆಯಲ್ಲಿ ತೊಡಗಿದರು. 'ಸತಿಸುಕನ್ಯಾ', 'ರಾಜಶೇಖರ

ವಿಲಾಸ', 'ಶ್ರೀಕೃಷ್ಣ ಗಾರುಡಿ', 'ನವಯುಗದ ನಗೆ', 'ರತ್ನಹಾರ', 'ಸವತಿ ಮತ್ಸರ', 'ಅಸ್ಪೃಶ್ಯೋದ್ಧಾರಿ ಚೆನ್ನಯ್ಯ', 'ದೇವರ ಮುಡ್ಡು', 'ನೆಲ್ಲೂರ ನಂಬಿಕ್ಕೆ' ನಾಟಕಗಳು ರಂಗಕ್ಕೇರಿದವು. ರೋಣ, ಮಲ್ಲಾಪೂರ, ಬಾದಾಮಿ, ಮುದ್ದೇಬಿಹಾಳ, ಸಿಂದಗಿ ಮೊದಲಾದ ಊರುಗಳಲ್ಲಿ ಮಂಡಲಿ ಸಂಚರಿಸಿತು.

೧೯೪೧ ರಲ್ಲಿ ಚಿತ್ತರಗಿ ಗಂಗಾಧರ ಶಾಸ್ತ್ರಿಗಳ ನೆರವಿನಿಂದ ಸಿಂದಗಿಯಲ್ಲಿ ವರ್ಣಮಯ ದೃಶ್ಯಾವಳಿಗಳು, ಹೊಸ ವೇಷ-ಭೂಷಣಗಳೊಂದಿಗೆ ನಾಟಕಗಳು ಪ್ರದರ್ಶನಗೊಂಡವು. ಬಿಜಾಪುರ, ಕಲಬುರ್ಗಿ, ಬಳ್ಳಾರಿ ಜಿಲ್ಲೆಗಳಲ್ಲಿ ಮಂಡಳಿ ಯಶಸ್ವಿ ಪ್ರಯೋಗಗಳನ್ನು ಮಾಡಿತು.

೧೯೪೨-೪೩ ರಲ್ಲಿ ಕಾಣಿಸಿಕೊಂಡ ಬರಗಾಲವು ಭೀಕರ ಸ್ವರೂಪದ್ದಾಗಿತ್ತು. ನಾಟಕ ಪ್ರದರ್ಶನಗಳು ಕುಂಠಿತವಾದವು. ೧೯೪೪ ರಲ್ಲಿ ಪಂ. ಪಂಚಾಕ್ಷರ ಗವಾಯಿಗಳು ಲಿಂಗೈಕ್ಯರಾದರು. ಅನಂತರದಲ್ಲಿ ಪುಟ್ಟರಾಜರು ನಾಟಕ ಮಂಡಳಿಯ ಹೆಸರಿನಲ್ಲಿ 'ಲಿಂ. ಪಂಚಾಕ್ಷರ ಗವಾಯಿಗಳ' ಎಂಬುದನ್ನು ಸೇರ್ಪಡೆ ಮಾಡಿದರು. ಆಗ ಅದು 'ಶ್ರೀ ಕುಮಾರೇಶ್ವರ ಕೃಪಾಪೋಷಿತ ಲಿಂ. ಪಂಚಾಕ್ಷರ ಗವಾಯಿಗಳ ನಾಟಕ ಮಂಡಳಿ, ಗದಗ' ಎಂದಾಯಿತು.

ನಾಟಕ ಮಂಡಳಿಯು ಸಂಚಾರವನ್ನಾರಂಭಿಸಿ ಗೋಕಾಕ, ಬ್ಯಾಡಗಿ, ರೋಣಗಳಲ್ಲಿ ಪ್ರದರ್ಶನಗಳನ್ನು ನೀಡಿತು. ಗದುಗಿನ ಡಬ್ಬಾ ಥಿಯೇಟರ್‌ನಲ್ಲಿ 'ಹೇಮರೆಡ್ಡಿ ಮಲ್ಲಮ್ಮ' ನಾಟಕ ಪ್ರದರ್ಶನಗೊಳ್ಳತೊಡಗಿತು. ಆ ಥಿಯೇಟರ್‌ನಲ್ಲಿ ಚಲನಚಿತ್ರ ನಡೆಯಲಾರಂಭಿಸಿದ್ದರಿಂದ ಬೇರೊಂದು ರಂಗಮಂದಿರವನ್ನು ನಿರ್ಮಿಸಬೇಕಾಯಿತು. ನಾಲ್ವಾಡ ಅವರ ಜಾಗೆಯಲ್ಲಿಯೇ ಒಂದು ರಂಗಮಂದಿರ ಸಜ್ಜಾಯಿತು. ಕಿಕ್ಕಿರಿದ ಜನದಟ್ಟಣೆಯಲ್ಲಿ ನಾಟಕ ಅದ್ಧೂರಿಯಾಗಿಯೇ ನಡೆದು ೩೦೦ ಪ್ರಯೋಗಗಳನ್ನು ಕಂಡು ದಾಖಲೆಯನ್ನೆ ಮಾಡಿತು. ನಾಟಕದ ಆ ಥಿಯೇಟರ್ 'ಮಲ್ಲಮ್ಮನ ಥಿಯೇಟರ್' ಎಂದು ಚಿರಪರಿಚಿತವಾಗಿತ್ತು. ಬಳ್ಳಾರಿ, ಹೊಸಪೇಟೆ, ದಾವಣಗೆರೆ, ಹಾವೇರಿ ಮೊದಲಾದ ಊರುಗಳಲ್ಲಿ 'ಹೇಮರೆಡ್ಡಿ ಮಲ್ಲಮ್ಮ' ಹಲವಾರು ಪ್ರಯೋಗಗಳನ್ನು ಕಂಡಿತು. ಈಗಲೂ ಈ ಮಂಡಳಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ವಿಶೇಷ ಸಂದರ್ಭಗಳಲ್ಲಿ ನಾಟಕಗಳನ್ನು ಪ್ರದರ್ಶಿಸಲಾಗುತ್ತಿದೆ.

ನೀತಿ ಬೋಧಕ, ಸಾಂಸ್ಕೃತಿಕ ಮಹತಿಯ, ವೈಚಾರಿಕತೆಯನ್ನೊಳಗೊಂಡ ಸಾಮಾಜಿಕ ನಾಟಕಗಳನ್ನು ಮಾತ್ರವೇ ಆಡುವ ಪರಿಪಾಠವನ್ನಿರಿಸಿಕೊಳ್ಳಲಾಗಿದೆ. ಪುರುಷರೇ ಸ್ತ್ರೀ ಪಾತ್ರಗಳನ್ನು ನಿರ್ವಹಿಸುತ್ತಾರೆ. ಸಂಗೀತ ಶಾಲೆಯ ಶಿಷ್ಯರಲ್ಲಿ ಅಭಿನಯಾಸಕ್ತರನ್ನು ರಂಗಕ್ಕೆ ಬಳಸಲಾಗುತ್ತದೆ. ಶಿಸ್ತು, ಸದಾಚಾರದ ವರ್ತನೆಗೆ ಕಟ್ಟುನಿಟ್ಟಿನ ಆಗ್ರಹವಿದೆ.

**ಮಂಡಳಿಯ ಪ್ರಮುಖ ಕಲಾವಿದರು :**

ಬಸವಂತಪ್ಪ ಮಾಸ್ತರ ಹುಸಿಕೇರಿ (ಕಲಾದಿಗ್ದರ್ಶಕ) ; ಶಿವಮೂರ್ತಿಸ್ವಾಮಿ ದೇವಗಿರಿ (ನಟ, ಕಲಾದಿಗ್ದರ್ಶಕ) ; ಸಿದ್ಧರಾಮಯ್ಯ ಕಣವಿ (ನಟ) ; ಗಂಗಾಧರಯ್ಯ ಜುಕ್ತಿಮಠ, ಹಳ್ಳೂರ (ಸಂಗೀತ ಕಲಾವಿದ) ; ಅಂಕಲಯ್ಯಸ್ವಾಮಿ ಹಂಚಿನಾಳ (ನಟ) ; ಶಂಕರಯ್ಯಸ್ವಾಮಿ ಬೀರಿಗಿ (ಉಗ್ರನಟ) ; ಪಂಚಾಕ್ಷರಯ್ಯ ಸ್ವಾಮಿ ಮತ್ತೀಕಟ್ಟಿ (ಗಾಯಕ, ನಟ) ; ಮರಿಯಪ್ಪ ರೋಣ (ಶಹನಾಯಿ, ಕೊಳಲುವಾದಕ, ಹಾಸ್ಯ ನಟ) ; ವೆಂಕಟಪ್ಪ ರೋಣ (ನಟ) ; ರುದ್ರಪ್ಪ ಮಾಸ್ತರ ಮತ್ತೀಕಟ್ಟಿ (ನಟ) ; ಮುರದೇವ ಗವಾಯಿ, ಹೊಸಳ್ಳಿ (ಸಂಗೀತಗಾರ, ನಟ) ; ಚೆನ್ನಬಸವಾಚಾರ್ಯ ನರೇಗಲ್ (ಸಂಗೀತ ಕಲಾವಿದ, ನಟ) ; ಅರ್ಜುನಸಾ ನಾಕೋಡ (ಸಂಗೀತವಾದಕ, ನಟ) ; ಭಾಲಚಂದ್ರ ಶಾಸ್ತ್ರಿಗಳು (ನಟ).

**ಸ್ತ್ರೀ ಪಾತ್ರ ಕಲಾವಿದರು (ಎಲ್ಲರೂ ಪುರುಷರೇ) :**

ದತ್ತಾತ್ರೇಯ ಧಾರವಾಡ ('ರಂಗಭೂಮಿ ರಾಣಿ' ಬಿರುದು), ನಾಗಬಸವಯ್ಯ ದಾಸಿಬಾಳ, ವಾಲಪ್ಪಯ್ಯಸ್ವಾಮಿ ಚಿತ್ತರಗಿ, ಚಿದಂಬರ ಕುಲಕರ್ಣಿ ವಣಗೇರಿ, ಗುರುಸಂಗಯ್ಯಸ್ವಾಮಿ ಸೂಡಿ (ಪ್ರಮುಖ ಸ್ತ್ರೀ ಪಾತ್ರಧಾರಿ), ಶಿವಯ್ಯಸ್ವಾಮಿ ಮುದೇನಗುಡಿ, ತಾಳಕೇರಿ ಬಸವರಾಜ (ಹಾಸ್ಯ, ಪ್ರಮುಖ ಪಾತ್ರಧಾರಿ), ಶಿವಣ್ಣ ಹೆರಂಗಳಗಿ (ನೃತ್ಯ ಕಲಾವಿದ) ಮೊದಲಾದವರು ಪ್ರಮುಖರಾಗಿದ್ದರು.

**ಮೊದಲ ನಾಟಕ** - 'ಶ್ರೀ ಸಿದ್ಧರಾಮ ಸಂವಾದ', ಪಂ. ಪುಟ್ಟರಾಜ ಕವಿ ಗವಾಯಿಗಳು (ನಾಟಕಕಾರರು, ಸಂಗೀತ ನಿರ್ದೇಶಕರು), ಪಂ. ಪಂಚಾಕ್ಷರಿ ಗವಾಯಿಗಳು (ತಬಲಾ ವಾದಕರು), ಪಂ. ಪುಟ್ಟರಾಜ ಕವಿ ಗವಾಯಿಗಳು (ಹಾರ್ಮೋನಿಯಂ), ಬಸವಂತಪ್ಪ ಉಡಿಕೇರಿ (ನಾಟಕ ಮಾಸ್ತರ).

**ನಟರು :** ಬೀಳಗಿ ಗದಿಗಯ್ಯ (ಬಾಲ ಸಿದ್ಧರಾಮ), ಬಸವರಾಜ ರಾಜಗುರು, ಚೆನ್ನಬಸಯ್ಯ ನರೇಗಲ್, ಜಾಲಿಬೆಂಚಿ ದೊಡ್ಡಬಸಯ್ಯ (ಸ್ತ್ರೀ ಪಾತ್ರಧಾರಿ), ಪಂಚಾಕ್ಷರಿಸ್ವಾಮಿ ಮತ್ತೀಕಟ್ಟಿ (ಹಾಸ್ಯ ಸ್ತ್ರೀ ಪಾತ್ರಧಾರಿ), ಹಮ್ಮಿಗಿ ನೀಲಕಂಠಪ್ಪ (ಸ್ತ್ರೀ ಪಾತ್ರಧಾರಿ ಹಾಗೂ ನಾಟಕ ಮಾಸ್ತರ), ಶಿವಮೂರ್ತಿಸ್ವಾಮಿ ದೇವಗಿರಿ (೧೯೪೭ ರಲ್ಲಿ ನಾಯಕ ನಟರು ಮತ್ತು ನಾಟಕ ಮಾಸ್ತರರಾದರು), ಮೃತ್ಯುಂದೇವ ಗವಾಯಿಗಳು, ತಾಳಕೇರಿ ಬಸವರಾಜ ಗವಾಯಿಗಳು, ಮುದೇನಗುಡಿ ಶಿವಯ್ಯ (ಸ್ತ್ರೀ ಪಾತ್ರಧಾರಿ) ದಾಸವಾಳ ನಾಗಬಸಯ್ಯ (ಸ್ತ್ರೀ ಪಾತ್ರಧಾರಿ), ಧಾರವಾಡ ದತ್ತು (ಸ್ತ್ರೀ ಪಾತ್ರಧಾರಿ 'ರಂಗಭೂಮಿ ರಾಣಿ'), ಮರಿಯಪ್ಪ ರೋಣ, ವೆಂಕಟಪ್ಪ ರೋಣ, ತುರುವೀಹಾಳ ವೀರಯ್ಯಾ, ಚಿತ್ತರಗಿ ಗಂಗಾಧರ ಶಾಸ್ತ್ರೀಗಳು, ಮುಪ್ಪಯ್ಯಸ್ವಾಮಿ ಚಿತ್ತರಗಿ, ಸಿದ್ಧರಾಮಯ್ಯ ಕಣವಿ, ಬಳ್ಳಾರಿ ಪಂಚಯ್ಯ,

ವಿರೂಪಾಕ್ಷಯ್ಯ ಬಿನ್ನಾಳ, ರೇವಣಸಿದ್ಧಯ್ಯ, ಸಿಬಾರಗಟ್ಟಿ, ದ್ಯಾಮನಗೌಡ ಪಾಟೀಲ (ಸ್ತ್ರೀ ಪಾತ್ರಧಾರಿ), ದುರ್ಗಪ್ಪ ಭಜಂತ್ರಿ (ಸ್ತ್ರೀ ಪಾತ್ರಧಾರಿ), ಸಂಜೀವಪ್ಪ ಗಬ್ಬೂರ, ರಾಚಯ್ಯ ಬಡ್ನಿ, ಸೋಮಲಿಂಗಯ್ಯ ಬೆಳವುಣಕಿ, ಗಂಗಾಧರಯ್ಯ ಜುಕ್ತಿಮಠ (ಹಳ್ಳೂರು), ಅಂಕಲಯ್ಯಸ್ವಾಮಿ ಹಂಚಿನಾಳ, ಶಂಕ್ರಯ್ಯಸ್ವಾಮಿ ಬೀರಗಿ, ರುದ್ರಪ್ಪ ಮಾಸ್ತರ ಮತ್ತೀಗಟ್ಟಿ, ಸಿದ್ಧರಾಜ ಉಜ್ಜಯನಿಮಠ, ಅರ್ಜುನಸಾ ನಾಕೋಡ (ಸಂಗೀತಗಾರ, ಸ್ತ್ರೀ ಪಾತ್ರ, ಪುರುಷ ಪಾತ್ರ), ಶ್ರೀ ಬಾಲಚಂದ್ರ ಶಾಸ್ತ್ರಿಗಳು (ಸ್ತ್ರೀ ಪಾತ್ರ), ಚಿದಂಬರ ಕುಲಕರ್ಣಿ (ವಣಗೇರಿ), ಶಿವಯೋಗಿಶಾಸ್ತ್ರೀ ದೇವಗಿರಿ, ಸಿದ್ಧರಾಮಸ್ವಾಮಿ ಕೊರವಾರ, ಲಿಂಗರಾಜ ಅಂಬಲಿ, ದೇವರಾಜ ಅಂಬಲಿ, ವೀರಭದ್ರಪ್ಪ ತಿಮ್ಮಾಪೂರ, ಧೀರೇಂದ್ರಾಚಾರ್ಯ ಕಣೇಗಲ, ಮೃತ್ಯುಂಜಯ ಪುರಾಣಿಕ, ಮುರದೇವ ಗವಾಯಿ ಹೊಸಳ್ಳಿ, ವಾಲಪ್ಪಯ್ಯ ಸ್ವಾಮಿ ಚಿತ್ತರಗಿ (ಸ್ತ್ರೀ ಪಾತ್ರಧಾರಿ), ಗುರುಸಂಗಯ್ಯಸ್ವಾಮಿ ಸೂಡಿ, ಶಿವಣ್ಣಯರಂಗಳಗಿ (ನೃತ್ಯ ಕಲಾವಿದ - ಸ್ತ್ರೀ ಪಾತ್ರಧಾರಿ), ಬಸವಣ್ಣೆಯ್ಯಶಾಸ್ತ್ರೀ ಬಸವನಕಟ್ಟಿ.

ಸಂಗೀತ ಸಂಯೋಜನೆ - ನಿರ್ದೇಶನ - ಸಿದ್ಧರಾಮ ಜಂಬಲದಿನ್ನಿ, ಸಂಗಮೇಶ ಹೊನ್ನಿಗನೂರ, ರಾಜಗುರು ಗುರುಸ್ವಾಮಿ ಕಲಕೇರಿ.

## ಹೂವಿನ ಹಡಗಲಿ ವೀರಭದ್ರಪ್ಪನವರ

## ಶಾಂತಿಕಲಾ ನಾಟ್ಯಸಂಘ, ಗದಗ (೧೯೪೯)

ಹೂವಿನಹಡಗಲಿ ವೀರಭದ್ರಪ್ಪ ಬಾಲಕಲಾವಿದರಾಗಿ ವಿರಾಸಿ ಭರಮಪ್ಪನವರ ವಾಣಿವಿಲಾಸ ಸಂಗೀತ ನಾಟಕ ಮಂಡಳಿಯಲ್ಲಿ ಸೇರಿಕೊಂಡಿದ್ದರು. ಅನಂತರ ಕಂದಗಲ್ ಹನುಮಂತರಾಯರ ಮಂಡಳಿಯೂ ಸೇರಿದಂತೆ ಇತರ ಮಂಡಳಿಗಳಲ್ಲಿ ದುಡಿದು ಅಭಿನಯ ಕೌಶಲವನ್ನು ಬೆಳೆಸಿಕೊಂಡರು. ನಾಟಕ ಮಂಡಳಿಯೊಂದನ್ನು ಕಟ್ಟುವ ಮಹತ್ವಾಕಾಂಕ್ಷೆ ಅವರ ಮನವನ್ನಾವರಿಸಿತ್ತು. ಕಿತ್ತೂರು ಚೆನ್ನಮ್ಮ ನಾಟಕದಲ್ಲಿ ಕಮೀಷನರನ ಪಾತ್ರವನ್ನು ಅಪ್ಪಟವಾಗಿ ಮಾಡಿ ಪ್ರಶಂಸೆ ಗಿಟ್ಟಿಸಿದರು. ಟಿಪ್ಪು ಸುಲ್ತಾನ ನಾಟಕದಲ್ಲಿ ಮೀರಸಾದಕ ಮತ್ತು ಲಾರ್ಡ್ ಕಾರ್ನವಾಲೀಸ್ ಪಾತ್ರಗಳನ್ನು ಅಭಿನಯಿಸಿದರು.

೧೯೪೯ ರಲ್ಲಿ 'ಶಾಂತಿ ಕಲಾ ನಾಟ್ಯ ಸಂಘ'ವನ್ನು ಹುಟ್ಟುಹಾಕಿ ಮಾಲಿಕರಾದರು. ಇವರ ನಾಟ್ಯ ಸಂಘವು ರಾಯಚೂರು, ಬಳ್ಳಾರಿ ಜಿಲ್ಲೆಗಳಲ್ಲಿ ಹಲವು ನಾಟಕಗಳನ್ನು ಪ್ರದರ್ಶಿಸಿತು.

## ಸಂಗಪ್ಪಾ ಬೆಳವಣಿಕಿಯವರ
## ಶ್ರೀ ವೀರಭದ್ರೇಶ್ವರ ನಾಟ್ಯ ಸಂಘ, ಬೆಳವಣಿಕಿ (೧೯೫೯)

ಗದಗ ಜಿಲ್ಲೆಯ ರೋಣ ತಾಲೂಕಿನ ಬೆಳವಣಿಕಿ ಗ್ರಾಮದ ಸಂಗಪ್ಪನವರು ನಾಟಕಪ್ರಿಯರಾಗಿದ್ದರು. ಜಾತ್ರೆ-ಉತ್ಸವಗಳ ಸಂದರ್ಭದಲ್ಲಿ ಗ್ರಾಮದಲ್ಲಿ ಭವ್ಯ ರಂಗಮಂಟಪ ಹಾಕಿಸಿ ನಾಟಕಗಳನ್ನು ಆಡಿಸುತ್ತಿದ್ದರು. ಕಂಪನಿ ನಾಟಕಗಳನ್ನು ಆಹ್ವಾನಿಸಿ ನಾಟಕಗಳನ್ನು ಆಡಿಸುತ್ತಿದ್ದರು. ಈ ವೆಚ್ಚದಾಯಕ ಹವ್ಯಾಸಕ್ಕಾಗಿ ಅವರು ಕಳೆದುಕೊಂಡದ್ದೂ ಸಾಕಷ್ಟಾಗಿತ್ತು. ಅವರ ಈ ಆಸಕ್ತಿಯನ್ನು ಗಮನಿಸಿ ನಾಟಕಕಾರ ಎಚ್.ಟಿ. ಮಹಾಂತೇಶಶಾಸ್ತ್ರಿ ಮತ್ತು ಎಚ್.ಎನ್. ಹೂಗಾರರು ನಾಟಕ ಮಂಡಳಿಯನ್ನು ಕಟ್ಟಲು ಪ್ರೇರೇಪಿಸಿದರು. ಸಂಗಪ್ಪನವರು ಉತ್ಸುಕತೆಯಿಂದ ಒಪ್ಪಿಕೊಂಡು ಕಾರ್ಯಪ್ರವೃತ್ತರಾದರು.

'ಶ್ರೀ ವೀರಭದ್ರೇಶ್ವರ ನಾಟ್ಯ ಸಂಘ'ವನ್ನು ಕಟ್ಟಿ ಕಲಾವಿದರನ್ನು ಸಂಘಟಿಸಿದರು. ಆರಂಭದ ಪ್ರದರ್ಶನಕ್ಕಾಗಿ ಕಂದಗಲ್ ಹನುಮಂತರಾಯರ 'ಜಗಜ್ಯೋತಿ' ನಾಟಕವನ್ನು ಆಯ್ಕೆಮಾಡಿಕೊಂಡರು. ಅನಂತರದಲ್ಲಿ ಎಚ್.ಎನ್. ಹೂಗಾರ ಕೃತ 'ಸುವರ್ಣಾ' ನಾಟಕವನ್ನು ಪ್ರದರ್ಶಿಸಿದರು. ನರ್ಸ್ ಪಾತ್ರದಲ್ಲಿ ಸುಮಿತ್ರಾ ಕುಂದಾಪೂರ ಅವರ ಮುಕ್ತ ಅಭಿನಯ, ಕೆ.ಎಸ್.ರಾವ್ ಅವರ ಹಾಸ್ಯ ನಾಟಕವನ್ನು ಜನಪ್ರಿಯಗೊಳಿಸಿತು. ಗದಗ, ಗಜೇಂದ್ರಗಡ, ಹುಬ್ಬಳ್ಳಿ-ಧಾರವಾಡಗಳಲ್ಲಿ ಈ ನಾಟಕ ಪ್ರದರ್ಶನ ಶತಕ ಬಾರಿಸಿತು. ಚಲನಚಿತ್ರ ಥರದ ನಟನೆ ಪ್ರೇಕ್ಷಕರಿಗೆ ಹೊಸತೆನಿಸಿತು.

ಪ್ರತಿಭಾಸಂಪನ್ನ ಕಲಾವಿದರನ್ನು ಸಂಘಟಿಸಿದ್ದು, ಅವರಿಗೆ ಒಳ್ಳೆಯ ಸಂಭಾವನೆ ನೀಡುತ್ತಿದ್ದುದು, ನಾಟಕಕಾರರಿಗೆ ನಿರ್ದೇಶನ ಮಾಡಲು ಅವಕಾಶವಿತ್ತಿದ್ದು, ಕಲಾಕಾರರ ಆಯ್ಕೆಯ ಸ್ವಾತಂತ್ರ್ಯವನ್ನು ಅವರಿಗೆ ಕೊಟ್ಟಿದ್ದು ಈ ನಾಟ್ಯಸಂಘದ ನಾಟಕಗಳು ಜನಪ್ರಿಯವಾಗಲು ನೆರವಾದ ಅಂಶಗಳಾಗಿದ್ದವು.

ನಾಟ್ಯಸಂಘದ ಕಲಾವಿದರಲ್ಲಿಯ ಸಹಕಾರ-ಸೌಹಾರ್ದತೆ ಗಾಢವಾಗಿತ್ತು. ೧೯೭೦ ರಲ್ಲಿ ಬಿಜಾಪುರದಲ್ಲಿ ಸಂಘವು ಕ್ಯಾಂಪು ಮಾಡಿದಾಗಿನ ಒಂದು ಸನ್ನಿವೇಶವು ಇದನ್ನು ಸ್ಪಷ್ಟವಾಗಿ ನಿದರ್ಶಿಸಿತು. ಮೃಡದೇವ ಗವಾಯಿಗಳ ಸಹಾಯಾರ್ಥ ನಿಧಿ ಸಂಗ್ರಹಿಸಲು ಡಾ. ರಾಜಕುಮಾರ ಬೇಡರ ಕಣ್ಣಪ್ಪ, ಎಚ್ಚಮನಾಯಕ ನಾಟಕಗಳನ್ನು ಆಡಲು ಅಲ್ಲಿಗೆ ಆಗಮಿಸಿದ್ದರು. ಪ್ರಸಿದ್ಧ ಚಿತ್ರನಟ ರಾಜಕುಮಾರರ ಎದುರು ತಾವು ನಾಟಕಗಳನ್ನು ಆಡುವುದು ಸರಿಯಲ್ಲವೆಂದು ಭಾವಿಸಿದ ಸಂಗಪ್ಪನವರು ಬೇರೆಡೆಗೆ ಕ್ಯಾಂಪ ಮಾಡುವ ಯೋಚನೆ ಮಾಡಿದರು.

ಆದರೆ ಕಲಾವಿದರು ಅಲ್ಲಿಯೇ ಇದ್ದು ನಾಟಕ ಆಡುವುದೆಂದೇ ತೀರ್ಮಾನಿಸಿದರು. 'ಸುವರ್ಣಾ' ನಾಟಕ ಪ್ರದರ್ಶನಗೊಳ್ಳುವುದೆಂದು ಶ್ರೀ ವೀರಭದ್ರೇಶ್ವರ ನಾಟ್ಯಸಂಘವು ಭಿತ್ತಿಪತ್ರ, ಹಂಚಿ ಪ್ರಚಾರ ಮಾಡಿತು. ಸಂಗಪ್ಪನವರಿಗೆ ಅಚ್ಚರಿ ಎನಿಸಿತು. ಅವರ ನಾಟಕಕ್ಕೂ ಜನರು ಬಂದರು. ಅತ್ತ ಟಿಕೇಟ್ ಸಿಗದವರೂ ಬಂದರು. ರಂಗಮಂದಿರ ತುಂಬಿಹೋಗಿ ನಾಟಕ ಯಶಸ್ವಿಯಾಯಿತು.

ನಾಟಕದ ರಂಗಸಜ್ಜಿಕೆ, ರಂಗಮಂದಿರದ ವ್ಯವಸ್ಥೆಗೆ ಸಂಗಪ್ಪನವರು ಧಾರಾಳವಾಗಿ ಹಣ ಖರ್ಚು ಮಾಡುತ್ತಿದ್ದರು. ಒಂದು ಊರಿನಲ್ಲಿ ಎರಡು ಮೂರು ತಿಂಗಳು ಕಾಲ ನಾಟಕಗಳು ಜನದಟ್ಟಣೆಯಲ್ಲಿ ನಡೆಯುತ್ತಿದ್ದವು. ಜಾತ್ರೆಗಳಲ್ಲಿ ಈ ನಾಟ್ಯಸಂಘದ ನಾಟಕಗಳು ಚೆನ್ನಾಗಿ ಓಡುತ್ತಿದ್ದವು. ಬಾದಾಮಿ, ಸಿರ್ಸಿ, ಸಂಕೇಶ್ವರ ಜಾತ್ರೆಗಳಲ್ಲಿ ಸಂಘಕ್ಕೆ ಒಳ್ಳೆಯ ಆದಾಯವಾಗುತ್ತಿತ್ತು. ರಂಗುರಂಗಿನ ದೃಶ್ಯಾವಳಿಗಳು, ಉತ್ತಮ ನಟವರ್ಗದಿಂದ ಈ ನಾಟ್ಯ ಸಂಘವು ಜನರನ್ನು ಆಕರ್ಷಿಸುತ್ತಿತ್ತು. 'ಪುತ್ಥಳಿ', 'ಹೆಣ್ಣಿನ ಜೀವನ' ಮೊದಲಾದ ಸಾಮಾಜಿಕ ನಾಟಕಗಳೊಂದಿಗೆ ಪೌರಾಣಿಕ ನಾಟಕಗಳೂ ಯಶಸ್ವಿಯಾಗಿ ಪ್ರದರ್ಶನಗೊಂಡವು. 'ರಕ್ತರಾತ್ರಿ', 'ಚಿತ್ರಾಂಗದಾ' ನಾಟಕಗಳನ್ನಾಡಿ ಹೆಸರು ಮಾಡಿದ್ದ ಕಲಾವಿದರು ಸಂಘದಲ್ಲಿದ್ದುದರಿಂದ ಆ ನಾಟಕಗಳನ್ನು ಯಶಸ್ವಿಯಾಗಿ ಪ್ರಯೋಗಿಸಲಾಯಿತು. ಜಮಖಂಡಿ, ತಾಳಿಕೋಟೆ, ರಬಕವಿ, ಬನಹಟ್ಟಿ, ಹೊಸಪೇಟೆಗಳಲ್ಲಿ ನಾಟಕಗಳನ್ನು ಪ್ರದರ್ಶಿಸಿದ ನಂತರ ಸಂಘವು ಕೊಟ್ಟೂರು ಜಾತ್ರೆಯತ್ತ ಪಯಣಿಸಿತು. 'ರಕ್ತರಾತ್ರಿ' ಕಿಕ್ಕಿರಿದ ಜನದಟ್ಟಣೆಯಲ್ಲಿ ಪ್ರದರ್ಶನಗೊಳ್ಳುತ್ತಿತ್ತು. ಮಾಲಿಕ ಸಂಗಪ್ಪನವರು ಹಠಾತ್ತಾಗಿ ಅಸ್ವಸ್ಥರಾಗಿ ವಿಧಿವಶರಾದ್ದರಿಂದ ನಾಟ್ಯಸಂಘ ಮುಚ್ಚಿತು.

ಕಲಾವಿದರ ಸಂಬಳದಲ್ಲಿ ಗಣನೀಯ ಹೆಚ್ಚಳವನ್ನು ಮಾಡಿದ ಹೆಗ್ಗಳಿಕೆ ಸಂಗಪ್ಪನವರದು. ಒಳ್ಳೆಯ ಕಲಾವಿದರು ಅವರ ನಾಟ್ಯಸಂಘದತ್ತ ಒಲಿದು ಬರತೊಡಗಿದರು. ಎಲಿವಾಳ ಸಿದ್ಧಯ್ಯ, ಡಿ.ದುರ್ಗಾದಾಸ, ಚಿನ್ನಪ್ಪ ಬೆಳವಣಿಕಿ ಮತ್ತು ಅನಸೂಯಾ ಬೆಂಗಳೂರು, ಸುಮಿತ್ರಾ ಕುಂದಾಪೂರ, ಸುಮತಿ ಮೈಸೂರು, ಸುಶೀಲಾ ಬಾಗಿಲುಕೋಟೆ ಮೊದಲಾದ ಹೆಸರಾಂತ ನಟ-ನಟಿಯರು, ಸಿದ್ಧರಾಮ ಜಂಬಲದಿನ್ನಿ, ಪಂಚಾಕ್ಷರಿ ಮತ್ತಿಗಟ್ಟಿ, ಪುರಂಧರೆ, ವೀರಭದ್ರಪ್ಪ ಪಟ್ಟಣಶೆಟ್ಟಿ ಮೊದಲಾದ ಸಂಗೀತಗಾರರು ಈ ನಾಟ್ಯಸಂಘದ ಯಶಸ್ಸಿಗೆ ಕಾರಣರಾಗಿದ್ದರು.

**ಕಲಾವಿದರು :**

ನಟರು : ಎಲಿವಾಳ ಸಿದ್ಧಯ್ಯಸ್ವಾಮಿ, ಅಪ್ಪುರಾಜ ಮುಧೋಳ, ದಂಡಪ್ಪ ದೇಸಾಯಿ, ಲಾರಿ ಗುಂಡಪ್ಪ, ವರವಿ ಫಕೀರಪ್ಪ, ಆರೂರ ರಘುರಾಮಯ್ಯ, ಲಕ್ಷ್ಮೇಶ್ವರ ಶಿವಯ್ಯ, ಡಂಬಳ ಸಂಕಣ್ಣ, ಬಿ.ಕೆ. ಶಂಕರ, ಧರಣಿ ಬಸಪ್ಪ,

ಹಾಲಭಾವಿ ಚೆನ್ನಪ್ಪ, ಷಣ್ಮುಖಪ್ಪ ಇಳಕಲ, ಶಂಕ್ರಪ್ಪ ನರಗುಂದ, ವಂದಾಲ ಶಂಕ್ರಪ್ಪ, ಬಸವಲಿಂಗಶಾಸ್ತ್ರಿ.

**ನಟಿಯರು** : ಸುಮಿತ್ರಾ ಕುಂದಾಪೂರ, ಸುಶೀಲಾ ಕುಂದಾಪೂರ, ಅನಸೂಯಾ ಬೆಂಗಳೂರು, ಬಸವಣ್ಣೆವ್ವ ಗದಗ, ಪಾರ್ವತಿ ಬೆಂಗಳೂರು, ರಮಾ ಮತ್ತು ಇಂದ್ರಾಣಿ ಬೆಂಗಳೂರು, ಶಚಿದೇವಿ ಬೆಂಗಳೂರು.

**ಸ್ತ್ರೀ ಪಾತ್ರಧಾರಿಗಳು** : ಬಳ್ಳೊಳ್ಳಿ ಬಸಪ್ಪ, ಸಂಜೀವಪ್ಪ ತಾಳಿ, ಶಿವಪ್ಪ ಸಜ್ಜನ.

**ವಾದ್ಯಗಾರರು** : ಕುರ್ಲಗೇರಿ ಗುರುಲಿಂಗಯ್ಯ (ಹಾರ್ಮೋನಿಯಂ), ತೋಟಪ್ಪ ಭಜಂತ್ರಿ (ಆರ್ಗನ್ ವಾದ್ಯ), ಬಶೆಟ್ಟೆಪ್ಪ ಶಿವಸಿಂಪಿ (ತಬಲಾ).

## ಚೆನ್ನಬಸಯ್ಯ ನರೇಗಲ್ ಇವರ
## ಶ್ರೀ ವಿಜಯಕುಮಾರ ನಾಟ್ಯ ಸಂಘ, ನರೇಗಲ್ (೧೯೬೦)

ನರೇಗಲ್ ಚೆನ್ನಬಸಯ್ಯನವರು ಕೋರಧಾನ್ಯಮಠ ಮನೆತನದವರು. ಹತ್ತನೆಯ ವಯಸ್ಸಿನಲ್ಲಿ ಹುಬ್ಬಳ್ಳಿಯ ಮೂರುಸಾವಿರ ಮಠದ ಸಂಸ್ಕೃತ ಶಾಲೆಯನ್ನು ಸೇರಿಕೊಂಡರು. ಅನಂತರ ಪಂಚಾಕ್ಷರಿ ಗವಾಯಿಗಳ ಸಂಚಾರಿ ಶಾಲೆಯಲ್ಲಿ ಪ್ರವೇಶ ಪಡೆದರು. ಗವಾಯಿಗಳ ನಾಟಕ ಮಂಡಳಿಯಲ್ಲಿ 'ಸಿದ್ಧರಾಮ ಸಂವಾದ' ನಾಟಕದಲ್ಲಿ ಅಲ್ಲಮಪ್ರಭುವಿನ ಪಾತ್ರ ಮಾಡಿದರು. ವಚನಗಳನ್ನು ಸುಶ್ರಾವ್ಯವಾಗಿ ಹಾಡುವ ತಮ್ಮ ಕಲೆಗಾರಿಕೆಯಿಂದ ಎಲ್ಲರ ಮೆಚ್ಚುಗೆ ಪಡೆದರು. ವೈವಿಧ್ಯಮಯ ಪಾತ್ರಗಳನ್ನು ಚೆನ್ನಾಗಿ ನಿರ್ವಹಿಸಿದರು. 'ಭೀಷ್ಮ ಪ್ರತಿಜ್ಞೆ'ಯಲ್ಲಿ ಭೀಷ್ಮನ ಪಾತ್ರ, 'ಪ್ರಪಂಚ ಪರೀಕ್ಷೆ'ಯಲ್ಲಿ ಕುದುರೆ ಸವಾರನ ಪಾತ್ರ, 'ರತ್ನಹಾರ'ದಲ್ಲಿ ಸೇಡಜಿಯ ಪಾತ್ರ, 'ಹೇಮರೆಡ್ಡಿ ಮಲ್ಲಮ್ಮ'ದಲ್ಲಿ ವೇಮಣ್ಣ ಪಾತ್ರಗಳನ್ನಾಡಿ ಸೈ ಎನಿಸಿಕೊಂಡರು. ಮಾತುಗಾರಿಕೆ, ಹಾಡುಗಾರಿಕೆ, ಅಭಿನಯ ಕೌಶಲದಿಂದ ಹೆಸರು ಮಾಡಿದರು. ಚಿತ್ತರಗಿ ಮಂಡಳಿಯಲ್ಲಿಯೂ ಸೇವೆ ಸಲ್ಲಿಸಿದರು. ಅನಂತರ ಮೃಡದೇವ ಗವಾಯಿಗಳೊಂದಿಗೆ ಒಂದು ಮಂಡಳಿಯನ್ನು ಕಟ್ಟಿದರು. ಮುಂದೆ ಎರಡು ವರ್ಷಗಳಲ್ಲಿಯೇ ಅದನ್ನು ಬಿಟ್ಟು ಗರುಡರ ಮಂಡಳಿ ಸೇರಿದರು. ಅದಾದನಂತರ ಎರಡು ಮಂಡಳಿಗಳಲ್ಲಿ ಕೆಲಸ ಮಾಡಿ, ತಮ್ಮದೇ ಆದ 'ಶ್ರೀ ವಿಜಯಕುಮಾರ ನಾಟ್ಯಸಂಘ'ವನ್ನು ಹುಟ್ಟು ಹಾಕಿದರು. ಅದು ಬಹಳ ದಿನಗಳ ವರೆಗೆ ನಡೆಯದೆ ಮುಚ್ಚಿಹೋಯಿತು.

## ಶೇಖರಯ್ಯ ಸೂಡಿ ಅವರ
## ಶ್ರೀ ಭಾರತಿ ನಾಟ್ಯ ಸಂಘ (೧೯೬೯)

ಗದಗ ಜಿಲ್ಲೆಯ ರೋಣ ತಾಲೂಕಿನ ಸೂಡಿಯ ಶೇಖರಯ್ಯನವರು ೧೯೬೯ ರಲ್ಲಿ ಶ್ರೀ ಭಾರತಿ ನಾಟ್ಯಸಂಘವನ್ನು ಆರಂಭಿಸಿದರು. 'ರೇಣುಕ ಮಹಾತ್ಮೆ', 'ಬಸ್ ಹಮಾಲ', 'ತಾಳಿ ತಕರಾರು', 'ದೇಸಾಯರ ದರ್ಬಾರ', 'ಇಳಕಲ ಮಹಾಂತ ಶಿವಯೋಗಿ' ಮೊದಲಾದ ನಾಟಕಗಳನ್ನು ಈ ಮಂಡಳಿ ಪ್ರದರ್ಶಿಸಿತು.

ಕಲಾವಿದರು :

ನಟರು : ಚೆನ್ನಬಸಯ್ಯ ನರೇಗಲ್ಲ, ಹಾವೇರಿ ಬಸವಲಿಂಗ ಶಾಸ್ತ್ರೀಗಳು, ನೀಲಕಂಠ ಗರಗ, ಶಹಾಬುದ್ದೀನ ದೊಡ್ಡಮನಿ, ಶಂಕರಣ್ಣ ಸಂದಾಲ, ಶ್ರೀಪತಿ ಹೆಗಡೆ, ಉಮೇಶ ಕುಕನೂರ, ವೀರಯ್ಯ ಹಿರೇಮಠ.

ನಟಿಯರು : ಲಕ್ಷ್ಮೀಬಾಯಿ ದಾವಣಗೆರೆ, ಲಲಿತಾ ಗರಗ, ಪ್ರೇಮಾ ಗುಳೇದಗುಡ್ಡ, ಜಿ.ಎಸ್. ಅಂಜಲಿದೇವಿ, ವಿಜಯಲಕ್ಷ್ಮೀ ರೇವೂರ.

ಕಳಕಪ್ಪ ಅಂಗಡಿ - (ತಬಲಾ, ಹಾರ್ಮೋನಿಯಂ), ಜಮ್ಮಣ್ಣ ಭಜಂತ್ರಿ (ತಬಲಾ).

## ಬಿ.ಎಸ್. ಪಟ್ಟಣಶೆಟ್ಟಿ ಸಾರಥ್ಯದ
## ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯಸಂಘ, ಸೂಡಿ (೧೯೭೫)

ಸುಳ್ಳದ ದೇಸಾಯಿಯವರ ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯಸಂಘದಲ್ಲಿ ನಿರ್ವಹಣೆಯನ್ನು ಮಾಡುತ್ತಿದ್ದ ಸೂಡಿಯ ಬಿ.ಎಸ್. ಪಟ್ಟಣಶೆಟ್ಟಿಯವರು, ಆ ಸಂಘದ ಅಂಗ ಸಂಸ್ಥೆಯೊಂದನ್ನು ಖರೀದಿಸಿ, ಅದನ್ನು 'ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯಸಂಘ ಸೂಡಿ' ಎಂಬ ಹೆಸರಿನಲ್ಲಿ ೧೯೭೫ ರಲ್ಲಿ ಆರಂಭಿಸಿದರು. ಒಂದು ದಶಕದ ಕಾಲ ಈ ಸಂಘವು ನಾಡಿನಾದ್ಯಂತ ಸಂಚರಿಸಿ ನಾಟಕಗಳನ್ನು ಪ್ರದರ್ಶಿಸಿತು. 'ವರ ನೋಡಿ ಹೆಣ್ಣು ಕೊಡು' ಎಂಬ ನಾಟಕದಿಂದ ಈ ಸಂಘ ಆರಂಭಗೊಂಡಿತು. ಮಾರುತೇಶ ಮಾಂಡ್ರೆ ವಿರಚಿತ 'ಶ್ರೀ ಗವಿಸಿದ್ಧೇಶ್ವರ ಮಹಾತ್ಮೆ' ನಾಟಕ ಜಯಭೇರಿ ಹೊಡೆಯಿತು.

## ಮಾರುತೇಶ ಮಾಂಡ್ರೆಯವರ
## ಶ್ರೀ ಎಚ್ಚರೇಶ್ವರ ನಾಟ್ಯಸಂಘ, ಹೊಳೆ-ಆಲೂರು (೧೯೮೪)

ಮಾರುತೇಶ ಮಾಂಡ್ರೆ, ಗದಗ ಜಿಲ್ಲೆಯ ರೋಣ ತಾಲೂಕಿನ ಹೊಳೆ-ಆಲೂರಿನವರು. ಹಲವು ಯಶಸ್ವಿ ರಂಗ ನಾಟಕಗಳನ್ನು ಬರೆದು ಹೆಸರು

ಮಾಡಿದವರು. ಇವರು ಓದಿದ್ದು ಕೇವಲ ಐದು ಇಯತ್ತೆ. ನಾಟಕಗಳನ್ನು ನೋಡುವ ಒಲವು ಬಾಲ್ಯದಿಂದಲೇ ಮೂಡಿ ಬಂದಿತ್ತು. ದೂರದ ಊರುಗಳಿಗೆ ನಡೆದುಹೋಗಿ ನಾಟಕಗಳನ್ನು ನೋಡುವ ಖಯಾಲು. ಕಂದಗಲ್ ಹನುಮಂತರಾಯರು, ಶ್ರೀಕಂಠಶಾಸ್ತ್ರೀ, ಪಂಡಿತ ಪುಟ್ಟರಾಜ ಗವಾಯಿಗಳ ನಾಟಕಗಳನ್ನು ನೋಡಿ ಪ್ರಭಾವಿತರಾದರು. ತಾವೂ ನಾಟಕ ಬರೆಯಲಾರಂಭಿಸಿದರು. ಮೊದಲ ನಾಟಕವನ್ನು ಓದಿದ ಚಿತ್ತರಗಿ ಗಂಗಾಧರ ಶಾಸ್ತ್ರಿಗಳು ಬರವಣಿಗೆಗೆ ಹಸಿರು ನಿಶಾನೆ ತೋರಿದರು. ಆ ಮೊದಲ ನಾಟಕ 'ಸೌಭಾಗ್ಯಲಕ್ಷ್ಮೀ'ಯಲ್ಲಿ ಹಲವು ಮಾರ್ಪಾಡುಗಳನ್ನು ಮಾಡಲು ಸೂಚಿಸಿದರು. ಹಲವು ನಾಟಕಮಂಡಳಿಗಳು ಈ ನಾಟಕವನ್ನು ಲಾಭದಾಯಕವಾಗಿ ಪ್ರದರ್ಶಿಸಿದವು. ಮೊದಲ ನಾಟಕದ ನಿರೀಕ್ಷೆ ಮೀರಿದ ಯಶಸ್ಸು ಮಾಂಡ್ರ್ರ ಅವರ ಲೇಖನಿಯನ್ನು ಚುರುಕಾಗಿಸಿತು. ಸಾಮಾಜಿಕ, ಪೌರಾಣಿಕ, ಐತಿಹಾಸಿಕ ಹಾಗೂ ಭಕ್ತಿಪ್ರಧಾನ ನಾಟಕಗಳನ್ನು ರಚಿಸುತ್ತಲೇ ಮುನ್ನಡೆದರು. ೩೦ ಕ್ಕೂ ಅಧಿಕ ನಾಟಕಗಳನ್ನು ರಚಿಸಿದರು. ಹಲವಾರು ನಾಟಕ ಮಂಡಳಿಗಳು ಇವರ ನಾಟಕಗಳನ್ನು ಯಶಸ್ವಿಯಾಗಿ ಪ್ರಯೋಗಿಸಿದವು. 'ಗವಿಸಿದ್ಧೇಶ್ವರ ಮಹಾತ್ಮೆ' ರಂಗದ ಮೇಲೆ ಅದ್ಭುತ ಯಶಸ್ಸನ್ನು ಸಾಧಿಸಿತು. ಕೊಪ್ಪಳದ ಸ್ವಾಮಿಗಳು ಇವರಿಗೆ 'ಶರಣ ಸಾಹಿತ್ಯ ರತ್ನ', ಬಿರುದನ್ನು ನೀಡಿ ಗೌರವಿಸಿದರು. ಇವರು ರಚಿಸಿದ 'ಸ್ತ್ರೀರತ್ನ', 'ಧರ್ಮದೇವತೆ' ನಾಟಕಗಳನ್ನು ಇಂದು ಕೂಡ ಆಡಲಾಗುತ್ತಿದೆ. 'ಧರ್ಮದೇವತೆ' ಇತ್ತೀಚೆಗೆ ಚಲನಚಿತ್ರವಾಗಿಯೂ ಪ್ರದರ್ಶನಗೊಂಡಿದೆ. ೧೯೯೨ ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿತು. ಮಹಾಸತಿ ಅನಸೂಯ, ಭೂ ಕೈಲಾಸ, ಪಾಶುಪತಾಸ್ತ್ರ ಸಮರಕೇಸರಿ, ನರಗುಂದ ಬಂಡಾಯ, ವೀರಮಾತೆ ಬೆಳವಡಿ ಮಲ್ಲಮ್ಮ, ತವರುಮನೆ, ಗಾಂಧಿ ಟೊಪ್ಪಿಗೆ, ಗರೀಬಿ ಹಟಾವೊ ಇವರ ಇತರ ಕೆಲವು ಪ್ರಮುಖ ನಾಟಕಗಳು.

## ಇತರ ಮಂಡಳಿಗಳು

ವೃತ್ತಿರಂಗ ನಾಟಕಕಾರ ಎಚ್.ಟಿ. ಮಹಾಂತೇಶ ಶಾಸ್ತ್ರಿಗಳು ೧೯೬೨ ರಲ್ಲಿ ಕಟ್ಟಿದ 'ಮಹಾಂತೇಶ ಮಿತ್ರ ಮಂಡಳಿ' ಹಲವು ನಾಟಕಗಳನ್ನು ಪ್ರದರ್ಶಿಸಿತು.

ರಂಗ ನಾಟಕಕಾರ ಗದುಗಿನ ಎಚ್.ಎನ್. ಹೂಗಾರ ಕಟ್ಟಿದ 'ಬಸವೇಶ್ವರ ನಾಟ್ಯಸಂಘ' (೧೯೩೮) ವು ಸಿರಗುಪ್ಪ, ಜಾಲಿಹಾಳ, ಜೇವರ್ಗಿ, ಲಿಂಗಸುಗೂರು, ದೇವದುರ್ಗಗಳಲ್ಲಿ ಮುಕ್ಕಾಮು ಮಾಡಿ ಹಲವು ನಾಟಕಗಳನು ಯಶಸ್ವಿಯಾಗಿ

ಪ್ರಯೋಗಿಸಿತು. ಗದುಗಿನ ವೀರೇಶ್ವರ ಹಿರೇಮಠ ಹಾಗೂ ಕೆ. ಬ್ರಹ್ಮಾವರರೊಡನೆ ಸೇರಿ ಕಟ್ಟಿದ 'ಶ್ರೀ ವೀರೇಶ್ವರ ನಾಟ್ಯಸಂಘ'ವು ಸೊಲ್ಲಾಪೂರ, ಕಲಬುರ್ಗಿ, ಹುಬ್ಬಳ್ಳಿ, ಬ್ಯಾಡಗಿ, ಹಾವೇರಿಗಳಲ್ಲಿ ಹಲವು ನಾಟಕಗಳನ್ನು ಪ್ರದರ್ಶಿಸಿತು. ಎಚ್.ಎನ್. ಹೂಗಾರ ಕೃತ 'ತಾಳ ತಪ್ಪಿದ ಬಾಳು' ಅನೇಕ ಪ್ರಯೋಗಗಳನ್ನು ಕಂಡು ಯಶಸ್ವಿ ಎನಿಸಿತು. ಈ ನಾಟಕವು 'ಪಟ್ಟಣಕ್ಕೆ ಬಂದ ಪತ್ನಿಯರು' ಎಂಬ ಚಲನಚಿತ್ರವಾಗಿ ಗಲ್ಲಾಪೆಟ್ಟಿಗೆ ಯಶಸ್ಸು ಕಂಡಿತು.

ರೋಣದ 'ಮಹಾಕೂಟೇಶ್ವರ ನಾಟ್ಯಸಂಘ' ವಿಶೇಷವಾಗಿ ಎಚ್.ಎನ್. ಹೂಗಾರರ ನಾಟಕಗಳನ್ನೇ ಪ್ರದರ್ಶಿಸಿತು. ಲಕ್ಷ್ಮೇಶ್ವರದ ರುದ್ರಯ್ಯ ಪುರಾಣಿಕಮಠ ಅವರ 'ರವಿ ಕಲಾ ನಾಟ್ಯಸಂಘ'ವು ಹಲವೆಡೆಗಳಲ್ಲಿ ಸಂಚರಿಸಿ ಹಲವಾರು ನಾಟಕಗಳನ್ನು ಪ್ರದರ್ಶಿಸಿತು.

ವಿರುಪಾಕ್ಷಯ್ಯ ಬೇಲೇರಿಯವರ "ಶುಭೋದಯ ನಾಟ್ಯ ಸಂಘ, ಗದಗ" (೧೯೪೯) ಕೆಲವು ವರ್ಷಗಳ ಕಾಲ ರಾಜ್ಯದ ಕೆಲವೆಡೆಗಳಲ್ಲಿ ಕೆಲವು ನಾಟಕಗಳ ಹಲವು ಪ್ರಯೋಗಗಳನ್ನು ಪ್ರದರ್ಶಿಸಿತು.

ಬೆಳವಣಿಕೆಯ ಹದ್ಲಿ ಶಿವಪ್ಪ (ಆರಟ್ಟಿ), ಹದ್ಲಿ ಮಲ್ಲಪ್ಪ ಹಾಗೂ ಚಿಕರೆಡ್ಡಿ ಶಿವಪ್ಪ ಇವರ ನೇತೃತ್ವದ 'ಶ್ರೀ ಅಮರೇಶ್ವರ ನಾಟ್ಯ ಸಂಘ'ವು ಎನ್.ಎಸ್. ಜೋಷಿ ರಚಿಸಿದ 'ರತ್ನ ಮಾಂಗಲ್ಯ' ನಾಟಕದ ನೂರು ಪ್ರಯೋಗಗಳನ್ನು ಪ್ರದರ್ಶಿಸಿತು. 'ಸೋತುಗೆದ್ದ ಸಾಧ್ವಿ' (ಚೆನ್ನಪ್ಪ ಚೆನ್ನಗೌಡ) ಹಾಗೂ 'ಹುಚ್ಚರ ರಾಜ್ಯ' ರಾಜ್ಯಾದ್ಯಂತ ಹಲವೆಡೆಗಳಲ್ಲಿ ನಾಟಕ ಪ್ರದರ್ಶನಗಳನ್ನು ಮಾಡಿದ ಸಂಘದಲ್ಲಿ ಸುರೇಶಬಾಬು ಕುಟ್ಟು, ನಿಂಗಪ್ಪ ಪಡೇಸೂರ, ಪರಮೇಶಿ ಪಡೇಸೂರ, ಮಲ್ಲಣ್ಣ ಹದ್ಲಿ, ಸಂಕಣ್ಣ ಡಂಬಳ, ಸುನಂದಾ ಹರಿಹರ, ಹಾಲಭಾವಿ ಚೆನ್ನಪ್ಪ ಶೆಟ್ರು, ರಾಚಯ್ಯಸ್ವಾಮಿ ಬಳಗಾನೂರಮಠ, ಶಿವಪುತ್ರಯ್ಯ ಚೊಳಚಗುಡ್ಡ ಪ್ರತಿಭಾ ಸಂಪನ್ನ ಕಲಾವಿದರಾಗಿದ್ದರು. ಬಶೆಟ್ಟೆಪ್ಪಾ ಶಿವಸಿಂಪಿ (ತಬಲಾ), ಬಸಣ್ಣಾ ಮಾಸ್ತರ ಹದ್ಲಿ (ಹಾರ್ಮೋನಿಯಂ) ಹಾಗೂ ತೋಟಪ್ಪ ಭಜಂತ್ರಿ (ಆರ್ಗನ್ ವಾದ್ಯ) ಸಂಗೀತ ಕಲಾವಿದರಾಗಿದ್ದರು.

ರೋಣ ತಾಲೂಕಿನ ಹಾಲಕೆರೆಯ ಸೊಪ್ಪಯ್ಯ ಅಡವಿಬಸಯ್ಯ ಸೊಪ್ಪಿಹಿರೇಮಠ ಇವರ 'ಶರಣ ಬಸವೇಶ್ವರ ನಾಟ್ಯಸಂಘ'ವು ೧೯೭೬ ರಿಂದ ೭೮ ರ ವರೆಗೆ ಹಲವಾರು ನಾಟಕಗಳನ್ನು ಪ್ರದರ್ಶಿಸಿತು.

ಶ್ರೀಮತಿ ಭಾರತಿ ಶಿರಹಟ್ಟಿ (೭೮ ವರ್ಷಗಳು) ವೃತ್ತಿ ನಾಟಕದ ಹಿರಿಯ ಕಲಾವಿದೆ. ಬಾಲನಟಿಯಾಗಿ ಅಭಿನಯವನ್ನು ಆರಂಭಿಸಿದ ಇವರು ಏಳು ದಶಕಗಳ

ಕಾಲ ವಿವಿಧ ಕಂಪನಿಗಳಲ್ಲಿ ವೈವಿಧ್ಯಮಯ ಪಾತ್ರಗಳನ್ನು ಮಾಡಿದವರು. ಇವರ ಒಡೆತನದಲ್ಲಿ ಸ್ಥಾಪಿಸಲಾಗಿರುವ 'ಪಂ. ನಟರಾಜ ನಾಟ್ಯಸಂಘ, ಹೊಳೆಹಡಗಲಿ', 'ಶ್ರೀ ಉಮಾ ಮಹೇಶ್ವರ ನಾಟ್ಯ ಸಂಘ, ಶಿರಹಟ್ಟಿ', 'ಶ್ರೀ ಪಂಚಾಕ್ಷರಿ ಗವಾಯಿಗಳ ವೃತ್ತಿ ಕಲಾವಿದರ ಸ್ತ್ರೀ ನಾಟ್ಯ ಮಂಡಳಿ, ಗದಗ', 'ಶ್ರೀ ರಾಘವೇಂದ್ರ ಕೃಪಾಪೋಷಿತ ಸ್ತ್ರೀ ನಾಟಕ ಮಂಡಳಿ, ಹುಬ್ಬಳ್ಳಿ' ಇಂದಿಗೂ ನಾಟಕ ಪ್ರದರ್ಶನಗಳಲ್ಲಿ ತೊಡಗಿವೆ. 'ಶ್ರೀ ರಾಘವೇಂದ್ರ ಕೃಪಾಪೋಷಿತ ಸ್ತ್ರೀ ನಾಟಕ ಮಂಡಳಿ'ಯು ಕಳೆದ ೩೦ ವರ್ಷಗಳಿಂದ ನಾಟಕಗಳನ್ನು ಪ್ರದರ್ಶಿಸುತ್ತಿದ್ದು, ಅವುಗಳಲ್ಲಿ 'ಗೌಡರ ಗದ್ದಲ', 'ರೊಚ್ಚಿಗೆದ್ದ ರೈತ', 'ರೇಣುಕಾ ಯಲ್ಲಮ್ಮ', 'ಹೇಮರಡ್ಡಿ ಮಲ್ಲಮ್ಮ', 'ರಕ್ತ ರಾತ್ರಿ', 'ಹಸಿರು ಬಳೆ', 'ಕಾಳಿಂಗ ಸರ್ಪ', 'ಧರ್ಮದೇವತೆ', 'ಕೈಲಾಗದ ಗಂಡ ಕೈಲಾಸ ಕಂಡ', 'ಹಡೆದವ್ವ' ಅತ್ಯಂತ ಯಶಸ್ವಿ ಪ್ರಯೋಗಗಳೆನಿಸಿವೆ.

ಶಿರಹಟ್ಟಿಯ ವೃತ್ತಿನಾಟಕ ಕಲಾವಿದ ಸಿದ್ಧರಾಮಪ್ಪ ಪುಟ್ಟಪ್ಪ ಅಕ್ಕಿಯವರು 'ಶ್ರೀ ಫಕೀರೇಶ್ವರ ನಾಟಕ ಕಂಪನಿ' ಯನ್ನು ೧೯೪೬ ರಲ್ಲಿ ಆರಂಭಿಸಿದರು. ಕಂದಗಲ್ಲ ಹನುಮಂತರಾಯರ 'ಬಡತನದ ಭೂತ', ಮಾರುತೇಶ ಮಾಂಡ್ರೆ ಅವರ 'ಸೌಭಾಗ್ಯ ಲಕ್ಷ್ಮೀ', ಪಂ. ಪುಟ್ಟರಾಜ ಕವಿಗವಾಯಿಗಳವರ 'ದೇವರ ದುಡ್ಡು', ಎನ್.ಎಸ್. ಜೋಷಿಯವರ 'ಸಿಂಧೂರ ಲಕ್ಷ್ಮಣ' ಹಾಗೂ 'ಅಮರ ಗಾಂಧೀಜಿ' ನಾಟಕಗಳ ನೂರಾರು ಪ್ರಯೋಗಗಳನ್ನು ಶಿರಹಟ್ಟಿ, ಲಕ್ಷ್ಮೇಶ್ವರ ಹಾಗೂ ಬೆಳ್ಳಟ್ಟಿಗಳಲ್ಲಿ ಪ್ರದರ್ಶಿಸಿದ ಈ ಕಂಪನಿ ಐದು ವರ್ಷಗಳ ಕಾಲ ಅಸ್ತಿತ್ವದಲ್ಲಿತ್ತು. ಈಗ ೮೮ ವರ್ಷ ಪ್ರಾಯದ ಸಿದ್ಧರಾಮಪ್ಪ ಅಕ್ಕಿಯವರು ತಮ್ಮ ೨೦ ನೆಯ ಪ್ರಾಯದಲ್ಲಿ ಶಿರಹಟ್ಟಿ ವೆಂಕೋಬರಾಯರ 'ಶ್ರೀ ಮಹಾಲಕ್ಷ್ಮೀ ಪ್ರಾಸಾದಿತ ನಾಟಕ ಮಂಡಳಿ'ಯಲ್ಲಿ 'ಅದ್ಭುತ ರಾಮಾಯಣ' ನಾಟಕದಲ್ಲಿ ಕುಶನ ಪಾತ್ರದೊಂದಿಗೆ ವೃತ್ತಿ ಜೀವನ ಆರಂಭಿಸಿದರು. ೧೯೫೦ ರಲ್ಲಿ ತಮ್ಮ ಕಂಪನಿಯ 'ಸೌಭಾಗ್ಯಲಕ್ಷ್ಮಿ' ನಾಟಕವನ್ನು ಮುಂಬೈಯಲ್ಲಿ ಪ್ರದರ್ಶಿಸಿ ಪ್ರಶಂಸೆಯನ್ನು ಪಡೆದರು. ಮರಿಯಪ್ಪ ತಳವಾರ, ಕುಂಬಾರ ಗುಂಡಪ್ಪ, ಸುಲೋಚನಾ ಕಲಾವಂತ, ಗದುಗಿನ ಲಕ್ಷ್ಮೀಬಾಯಿ ನಟ-ನಟಿಯರಾಗಿದ್ದರು. ಬಸವಣ್ಣೆಪ್ಪ ಪಲ್ಲೇದ ಹಾರ್ಮೋನಿಯಂ, ರಮೇಶ ಚಾಕಲಬ್ಬಿ ತಬಲಾ ಪಟು ಆಗಿದ್ದರು. ರಮೇಶ ಬೆಟದೂರ ನಾಟಕ ನಿರ್ದೇಶಕರಾಗಿದ್ದರು.

# ವೃತ್ತಿರಂಗ ಕಲಾವಿದರು

**ದಿ. ಗುರುಬಸಪ್ಪ ರಾಚಪ್ಪ ಶಿರೂರ, ಗದಗ :**

ವೃತ್ತಿರಂಗ ಕಲಾವಿದರಾಗಿ ಪೌರಾಣಿಕ ನಾಟಕಗಳಲ್ಲಿ, ದೊಡ್ಡಾಟಗಳಲ್ಲಿ ಧರ್ಮರಾಯ, ಭೀಷ್ಮರ ಪಾತ್ರಗಳನ್ನಾಡಿ, ಇತರ ನಾಟಕಗಳಲ್ಲಿ ಹಾಸ್ಯ ಪಾತ್ರಗಳಲ್ಲಿ ಹೆಸರು ಮಾಡಿದ್ದ ಗುರುಬಸಪ್ಪ ರಾಚಪ್ಪ ಶಿರೂರ ೮೫ ವರ್ಷಗಳಷ್ಟು ಸುದೀರ್ಘ ಬದುಕನ್ನು ಬದುಕಿದವರು. ತಮ್ಮ ಜೀವಿತದ ಅಂತ್ಯದವರೆಗೂ ಯುವ ಕಲಾವಿದರಿಗೆ ರಂಗತರಬೇತಿ ನೀಡುವುದರೊಂದಿಗೆ ಮಾದರಿಯಾಗಿ ಬದುಕಿದ ಇವರು ಜನಾನುರಾಗಿಯಾಗಿದ್ದರು.

**ಶ್ರೀಮತಿ ಭಾರತಿ ಶಿರಹಟ್ಟಿ, ಗದಗ :**

೭೮ ವರ್ಷ ಪ್ರಾಯದ ಶ್ರೀಮತಿ ಭಾರತಿ ಶಿರಹಟ್ಟಿ ತಮ್ಮ ಆರನೆಯ ವರ್ಷದಲ್ಲಿಯೇ ಬಾಲಕಲಾವಿದೆಯಾಗಿ ರಂಗಭೂಮಿಗೆ ಪಾದಾರ್ಪಣೆ ಮಾಡಿದವರು. 'ಶ್ರೀ ನಟರಾಜ ನಾಟ್ಯ ಸಂಘ ಹೊಳೆಆಲೂರು', 'ಶ್ರೀ ಉಮಾಮಹೇಶ್ವರ ನಾಟ್ಯಸಂಘ, ಶಿರಹಟ್ಟಿ', 'ಶ್ರೀ ಸಂಗಮೇಶ್ವರ ನಾಟ್ಯಸಂಘ, ಗುಡಗೇರಿ', 'ಶ್ರೀ ಕುಮಾರಸ್ವಾಮಿ ನಾಟ್ಯಸಂಘ, ಚಿತ್ರದುರ್ಗ', 'ಶ್ರೀ ಹೊಳೆ ಹುಚ್ಚೇಶ್ವರ ನಾಟ್ಯಸಂಘ, ಕಮತಗಿ', 'ಶ್ರೀ ಗುರು ತೋಂಟದಾರ್ಯ ನಾಟ್ಯಸಂಘ, ಮಂಡಲಗೇರಿ', 'ಹಾನಗಲ ಕುಮಾರಸ್ವಾಮಿ ನಾಟ್ಯಸಂಘ, ಚಿತ್ತರಗಿ', 'ಶ್ರೀ ಶಾರದಾ ಸಂಗೀತ ನಾಟಕ ಮಂಡಳಿ, ಗೋಕಾಕ', 'ಏಣಗಿ ಬಾಳಪ್ಪನವರ ಕಂಪನಿ' ಮೊದಲಾದ ವೃತ್ತಿ ನಾಟಕ ಮಂಡಳಿಗಳಲ್ಲಿ ಕಳೆದ ೭೦ ವರ್ಷಗಳಿಂದ ರಂಗಸೇವೆ ಸಲ್ಲಿಸಿದ್ದಾರೆ. 'ಮಾತಂಗ ಕನ್ಯಾ' ನಾಟಕದ ದ್ಯುಮನಾ, 'ಕುರುಕ್ಷೇತ್ರ'ದ ದುಶ್ಶೀಲೆ, 'ರಕ್ತರಾತ್ರಿ'ಯ ಉತ್ತರೆ, 'ಹೇಮರೆಡ್ಡಿ ಮಲ್ಲಮ್ಮ' ನಾಟಕದ ಮಲ್ಲಮ್ಮ, 'ಶ್ರೀ ರೇಣುಕಾದೇವಿ ಮಹಾತ್ಮೆ'ಯ ರೇಣುಕಳ ಪಾತ್ರ, 'ಸತ್ಯ ಹರಿಶ್ಚಂದ್ರ'ದಲ್ಲಿ ತಾರಾಮತಿ - ಹೀಗೆ ಹಲವು ಬಗೆಯ ಪಾತ್ರಗಳನ್ನಾಡಿ ಪ್ರೇಕ್ಷಕರಿಂದ ಮನ್ನಣೆಗಿಟ್ಟಿಸಿಕೊಂಡವರು.

ಮಹಿಳೆಯರಿಂದಲೇ ಸಂಘಟಿತವಾದ 'ಶ್ರೀ ರಾಘವೇಂದ್ರ ಕೃಪಾಪೋಷಿತ ಸ್ತ್ರೀ ನಾಟಕ ಮಂಡಳಿ' ಯನ್ನು ಹುಟ್ಟು ಹಾಕಿ, ಮೂವತ್ತು ವರ್ಷಗಳಿಂದ ಹಲವು ನಾಟಕಗಳನ್ನು ಪ್ರದರ್ಶಿಸಿದ ಸಾಧನೆ ಇವರದು. ಗೌಡರ ಗದ್ದಲ, ರೊಚ್ಚಿದ್ದ ರೈತ, ರೇಣುಕಾ ಯಲ್ಲಮ್ಮ, ಹೇಮರಡ್ಡಿ ಮಲ್ಲಮ್ಮ, ರಕ್ತರಾತ್ರಿ, ಹಸಿರು ಬಳೆ, ಕಾಳಿಂಗ ಸರ್ಪ, ಧರ್ಮದೇವತೆ, ಕೈಲಾಗದ ಗಂಡ ಕೈಲಾಸ ಕಂಡ, ಹಡೆದವ್ವ ಮೊದಲಾಗಿ ಹಲವು ನಾಟಕಗಳನ್ನು ಇವರ ಸ್ತ್ರೀ ಮಂಡಳಿ ರಾಜ್ಯದ ವಿವಿಧೆಡೆಗಳಲ್ಲಿ ಪ್ರದರ್ಶಿಸಿದೆ.

'ಇವರ ಒಡೆತನದಲ್ಲಿ ಸ್ಥಾಪಿಸಲಾದ 'ಶ್ರೀ ನಟರಾಜ ನಾಟ್ಯಸಂಘ, ಹೊಳೆ ಹಡಗಲಿ', 'ಶ್ರೀ ಉಮಾಮಹೇಶ್ವರಿ ನಾಟ್ಯಸಂಘ, ಶಿರಹಟ್ಟಿ', 'ಶ್ರೀ ಪಂಚಾಕ್ಷರಿ

ಗವಾಯಿಗಳ ವೃತ್ತಿ ಕಲಾವಿದರ 'ಸ್ತ್ರೀ ನಾಟ್ಯ ಮಂಡಳಿ, ಗದಗ' ನಿರಂತರವಾಗಿ ನಾಟಕಗಳನ್ನು ಪ್ರದರ್ಶಿಸುತ್ತಿವೆ. ವೃತ್ತಿ ನಾಟಕ ರಂಗಭೂಮಿಯನ್ನು ಜೀವಂತವಾಗಿರಿಸಿ, ಜನಮೆಚ್ಚುಗೆಗೆ ಪಾತ್ರವಾಗಿರುವ ಇವರ ರಂಗಸೇವೆ ನಿಜಕ್ಕೂ ಮೆಚ್ಚುವಂತಹದು. ಈಗಲೂ ಚಟುವಟಿಕೆಯಿಂದ ನಾಟಕಗಳನ್ನು ರಂಗಕ್ಕೇರಿಸುತ್ತ ಹಾಡುಗಾರಿಕೆ, ನಿರ್ದೇಶನ ಸೇರಿದಂತೆ ಅಭಿನಯ ಮಾಡುತ್ತಿರುವ ಶ್ರೀಮತಿ ಭಾರತಿಯವರ ಸಾಧನೆ ಅವರ ಪರಿಶ್ರಮ, ದಿಟ್ಟತನ, ಸಂಕಲ್ಪ ಶಕ್ತಿಗೆ ಹಿಡಿದ ಕನ್ನಡಿಯಾಗಿದೆ. ಹಲವಾರು ಸಂಘ-ಸಂಸ್ಥೆಗಳು ಇವರನ್ನು ಸನ್ಮಾನಿಸಿ ಗೌರವಿಸಿವೆ. ಸಪ್ಟೆಂಬರ್ ೨೦೧೦ ರಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿಯ ವೃತ್ತಿರಂಗಭೂಮಿ ಕಲಾವಿದೆಯರನ್ನು ಹಾಗೂ ಉದಯೋನ್ಮುಖ ಕಲಾವಿದೆಯರನ್ನು ಸಂಘಟಿಸಿ 'ಅಖಿಲ ಕರ್ನಾಟಕ ಶ್ರೀದೇವಿ ಮಹಿಳಾ ರಂಗಭೂಮಿ ಕಲಾವಿದೆಯರ ಸಂಸ್ಥೆ' ಯನ್ನು ಹುಟ್ಟುಹಾಕಿ, ಗದುಗಿನಲ್ಲಿ 'ಕಿತ್ತೂರು ಚೆನ್ನಮ್ಮ' ನಾಟಕ ಪ್ರದರ್ಶಿಸಿದರು. ವೆಂಕಟರಾಯನ ಪಾತ್ರಕ್ಕೆ ಶ್ರೀಮತಿ ಭಾರತಿ ಕಳೆಕಟ್ಟಿದರು. ಅಭಿನಯ, ಸಂಘಟನೆ, ಹಾಡುಗಾರಿಕೆಯಲ್ಲಿ ಅದಮ್ಯ ಸಾಧನೆ ಮಾಡಿರುವ ಈ ಕ್ರಿಯಾಶೀಲ ಕಲಾವಿದೆ ಎಂತಹ ಪ್ರಶಸ್ತಿಗೂ ಅರ್ಹರು.

**ಎಸ್.ಎಸ್. ಸಾರಂಗಮಠ, ಗದಗ :**

ಗದುಗಿನ ಸಾರಂಗಯ್ಯ ಸಂಗಯ್ಯ ಸಾರಂಗಮಠರು ವೃತ್ತಿ ರಂಗಭೂಮಿ ಕಲಾವಿದರು. ೬೪ ವರ್ಷ ಪ್ರಾಯದ ಇವರು ನಾಲ್ಕು ದಶಕಗಳ ಕಾಲ ಕರ್ನಾಟಕದ ಹತ್ತಾರು ನಾಟಕ ಕಂಪನಿಗಳಲ್ಲಿ ಅಭಿನಯಸಿದ್ದಾರೆ. ಶ್ರೀ ಹುಚ್ಚೇಶ್ವರ ನಾಟ್ಯ ಸಂಘ (ಕಮತಗಿ)ದ 'ಗರೀಬಿ ಹಟಾವೋ', 'ಬಸ್ ಕಂಡಕ್ಟರ್', 'ಲಂಚಸಾಮ್ರಾಜ್ಯ', 'ಹೆಣ್ಣು ಮಗಳು', 'ಸೈನಿಕನ ಸಹೋದರಿ', 'ಎಲ್ಲಿಗೆ ಬಂತೋ ಸಂಗಯ್ಯ' ಮೊದಲಾದ ನಾಟಕಗಳಲ್ಲಿ ಖಳನಾಯಕನ ಪಾತ್ರವನ್ನು ಮಾಡಿದ್ದಾರೆ. 'ನಟಭಯಂಕರ', 'ಅಭಿನಯ ಚತುರ' ಮೊದಲಾಗಿ ಹಲವು ಪ್ರಶಸ್ತಿ - ಸನ್ಮಾನಗಳನ್ನು ಪಡೆದಿರುವ ಸಾರಂಗಮಠರು ಎಲ್ಲ ವಿಧವಾದ ಪಾತ್ರಗಳನ್ನು ಮಾಡಿ 'ಆಲ್‌ರೌಂಡರ್' ಎನಿಸಿಕೊಂಡಿದ್ದಾರೆ. ೧೬ ಸಾಮಾಜಿಕ ನಾಟಕಗಳು, ೮ ಐತಿಹಾಸಿಕ ನಾಟಕಗಳು, ೧೨ ಪೌರಾಣಿಕ ನಾಟಕಗಳು ಮತ್ತು ಏಳು ಶರಣರ ನಾಟಕಗಳನ್ನು ರಚಿಸಿರುವ ಇವರು ಸದಾ ನಾಟಕ ಕುರಿತೇ ಯೋಚಿಸುತ್ತಾರೆ. ನಿಯತ್ತಿನ ಶಿಸ್ತಿನ ಬದುಕನ್ನು ನಡೆಸುತ್ತ ಸಂತೃಪ್ತ ಭಾವನೆಯಿಂದ ಉತ್ಸಾಹ-ಲವಲವಿಕೆಯಿಂದಲೇ ಈಗಲೂ ನಾಟಕ ನಿರ್ದೇಶನ, ರಂಗ ತಾಲೀಮಿನ ತರಬೇತಿಯಲ್ಲಿ ತೊಡಗಿದ್ದಾರೆ. ಇತ್ತೀಚೆಗೆ ಇವರೇ ಬರೆದ 'ಕಿತ್ತೂರು ರಾಣಿ ಚೆನ್ನಮ್ಮ' ನಾಟಕವನ್ನು ೨೦೧೦ ಸಪ್ಟೆಂಬರ್ ತಿಂಗಳಲ್ಲಿ ವೃತ್ತಿರಂಗಭೂಮಿ ಕಲಾವಿದೆ ಭಾರತಿ ಶಿರಹಟ್ಟಿಯವರ 'ಅಖಿಲ ಕರ್ನಾಟಕ ಶ್ರೀದೇವಿ ಮಹಿಳಾ ರಂಗಭೂಮಿ ಕಲಾವಿದೆಯರ ಸಂಸ್ಥೆ'ಯು ಶ್ರೀ ತೋಂಟದಾರ್ಯ ಕಲ್ಯಾಣ ಮಂಟಪದಲ್ಲಿ ಪ್ರಸ್ತುತಿ ಮಾಡಿತು.

**ಗದುಗಿನ ಶ್ರೀಮತಿ ಸುಶೀಲಮ್ಮ ಬಳ್ಳಾರಿ :**

೬೩ ವರ್ಷ ಪ್ರಾಯದ ಸುಶೀಲಮ್ಮ ಬಳ್ಳಾರಿಯವರು ಕೋಲಾಟ, ದೊಡ್ಡಾಟಗಳಲ್ಲಿ ಹೆಸರು ಮಾಡಿದ ವೃತ್ತಿ ನಾಟಕರಂಗ ಕಲಾವಿದೆ. ಗ್ರಾಮೋಫೋನ್ ಸಂಗೀತಕ್ಕೆ ತಕ್ಕಂತೆ ನರ್ತನ ಮಾಡಿ, ನರ್ತನ ಕಲೆಯಲ್ಲಿ ಪ್ರಾವೀಣ್ಯತೆ ಪಡೆದವರು. ರಂಗಗೀತೆಗಳನ್ನು ಹಾಡುವುದು, ನರ್ತಿಸುವುದರ ಮೂಲಕ ವೃತ್ತಿರಂಗಭೂಮಿಯನ್ನು ಪ್ರವೇಶಿಸಿದ್ದ ಇವರು ಆರ್ಥಿಕ ಸಂಕಷ್ಟಗಳನ್ನು ಎದುರಿಸುತ್ತಲೇ ರಂಗಸೇವೆ ಮಾಡಿದವರು.

**ಶ್ರೀಮತಿ ಶ್ರೀದೇವಿ, ಗದಗ :**

ಬಾಲನಟಿಯಾಗಿ ರಂಗಭೂಮಿಗೆ ಪಾದಾರ್ಪಣೆ ಮಾಡಿದ ಶ್ರೀಮತಿ ಶ್ರೀದೇವಿಯವರು ವೃತ್ತಿರಂಗ ಕಲಾವಿದೆ ಶ್ರೀಮತಿ ಭಾರತಿ ಶಿರಹಟ್ಟಿಯವರ ಪುತ್ರಿ. ಹಾಗಾಗಿ ಇವರಿಗೆ ಅಭಿನಯ ಕಲೆ ಮುತ್ತಜ್ಜ, ಅಜ್ಜ-ಅಜ್ಜಿ-ತಾಯಿ-ತಂದೆಯಿಂದ ರಕ್ತಗತವಾಗಿ ಬಂದ ಬಳುವಳಿಯಾಗಿದೆ. ತಾಯಿಯವರೇ ಆರಂಭಿಸಿದ 'ಶ್ರೀ ಉಮಾಮಹೇಶ್ವರಿ ನಾಟ್ಯಸಂಘ' ಹಾಗೂ ಉತ್ತರ ಕರ್ನಾಟಕದ ಅಪ್ಪಟ ಮಹಿಳಾ ತಂಡವಾದ 'ಶ್ರೀ ರಾಘವೇಂದ್ರ ಕೃಪಾಪೋಷಿತ ನಾಟ್ಯ ಸಂಘ' ಸೇರಿದಂತೆ 'ಶ್ರೀ ಕುಮಾರೇಶ್ವರ ನಾಟ್ಯ ಸಂಘ' ಚಿತ್ರದುರ್ಗ, 'ಕೆ.ಬಿ.ಆರ್. ಡ್ರಾಮಾ ಕಂಪನಿ', 'ಶ್ರೀ ಹೊಳೆಮಚ್ಚೇಶ್ವರ ನಾಟ್ಯ ಸಂಘ' ಕಮತಗಿ, 'ಶ್ರೀ ಗುರು ತೋಂಟದಾರ್ಯ ನಾಟ್ಯ ಸಂಘ' ಮಂಡಲಗೇರಿ, 'ಹಾನಗಲ್ ಕುಮಾರಸ್ವಾಮಿ ನಾಟ್ಯ ಸಂಘ' ಚಿತ್ತರಗಿ ಹಾಗೂ 'ಶ್ರೀ ಗುರು ಕುಮಾರೇಶ್ವರ ನಾಟ್ಯಸಂಘ' ಹಾನಗಲ್ ಮೊದಲಾದ ವೃತ್ತಿ ನಿರತ ಮಂಡಳಿಗಳಲ್ಲಿ ಕಳೆದ ಮೂರು ದಶಕಗಳಿಂದ ಪಾತ್ರವಾಡುತ್ತ ಬಂದಿದ್ದಾರೆ.

'ಕುರುಕ್ಷೇತ್ರ' ನಾಟಕದಲ್ಲಿ ದ್ರೌಪತಿಯಾಗಿ, 'ರಕ್ತರಾತ್ರಿ'ನಾಟಕದಲ್ಲಿ ಉತ್ತರೆ, ಮದಹಂಸಿ ಮತ್ತು ಅನಂಗ ಪುಷ್ಪಾ ಪಾತ್ರಧಾರಿಯಾಗಿ, 'ಬಾರೋ ಬಸವಣ್ಣ' ನಾಟಕದಲ್ಲಿ ನೀಲಾಂಬಿಕೆಯಾಗಿ, 'ಬದುಕು ಬಂಗಾರವಾಯಿತು' ನಾಟಕದಲ್ಲಿ ಮಹಾದೇವಿಯಾಗಿ, 'ತಾಳಿ ತಕರಾರು' ನಾಟಕದಲ್ಲಿ ಗೀತಾ, 'ರೇಣುಕ ಮಹಾತ್ಮೆ'ಯಲ್ಲಿ ವೃಂದಾ, 'ತಾರೆಗಳು' ನಾಟಕದಲ್ಲಿ ತಾರಾ, 'ಹರಿಶ್ಚಂದ್ರ' ನಾಟಕದಲ್ಲಿ ತಾರಾಮತಿಯಾಗಿ, 'ವೀರಸಿಂಧೂರ ಲಕ್ಷ್ಮಣ' ನಾಟಕದಲ್ಲಿ ಲಕ್ಷ್ಮಣನ ತಾಯಿಯಾಗಿ ತಮ್ಮ ಸಹಜಾಭಿನಯ ಕಲೆಯನ್ನು ಪ್ರಕಟಿಸಿದ್ದಾರೆ. 'ಮಾತಂಗಕನ್ಯಾ', 'ಬಡತನದ ಭೂತ', 'ಹೇಮರೆಡ್ಡಿ ಮಲ್ಲಮ್ಮ', 'ಮಾನವತಿ ರೂಪವತಿ', 'ಅಣ್ಣ ತಮ್ಮ', 'ಅಣ್ಣಾ-ತಂಗಿ', 'ಗುಲಾಮ ಗಂಡ', 'ಪುತ್ಥಳಿ', 'ದಸರಾ', 'ದೀಪಾವಳಿ' - ಹೀಗೆ ಹಲವಾರು ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳಲ್ಲಿ ವೈವಿಧ್ಯಮಯ ಪಾತ್ರಗಳನ್ನು ಮಾಡಿದ ಸಾಧನೆ ಇವರದು. ವೃತ್ತಿರಂಗ ಕಲಾವಿದೆಯರನ್ನು ಸಂಘಟಿಸಿ 'ಅಖಿಲ ಕರ್ನಾಟಕ ಶ್ರೀದೇವಿ

ಮಹಿಳಾ ರಂಗಭೂಮಿ ಕಲಾವಿದೆಯರ ಸಂಸ್ಥೆಯನ್ನು ಹುಟ್ಟುಹಾಕಿರುವ ಶ್ರೀಮತಿ ಶ್ರೀದೇವಿ ೨೦೧೦ರ ಸಪ್ಟೆಂಬರ್ ತಿಂಗಳಲ್ಲಿ ಗದುಗಿನ ತೋಂಟದಾರ್ಯ ಕಲ್ಯಾಣ ಮಂಟಪದಲ್ಲಿ ಮಹಿಳೆಯರೇ ಆಡಿದ 'ವೀರರಾಣಿ ಕಿತ್ತೂರ ಚೆನ್ನಮ್ಮಾ', ನಾಟಕದಲ್ಲಿ ಕಿತ್ತೂರ ಚೆನ್ನಮ್ಮನ ಪಾತ್ರವಾಡಿ ಪ್ರೇಕ್ಷಕರಲ್ಲಿ ಹೊಸದೊಂದು ರೀತಿಯ ಸಂಚಲನೆಯನ್ನುಂಟು ಮಾಡಿದರು.

## ಗದುಗಿನ ರಾಚಯ್ಯಸ್ವಾಮಿ ಬೆಳಧಡಿ ಮತ್ತು ಶ್ರೀಮತಿ ಶಾಂತಾಬಾಯಿ ರಾಚಯ್ಯಸ್ವಾಮಿ ಬೆಳಧಡಿ :

ವೃತ್ತಿರಂಗಭೂಮಿ ಕಂಡ ಈ ಅಪರೂಪದ ದಂಪತಿ ಕಲಾವಿದರು ಕಲೆಗಾಗಿ ತಮ್ಮ ಬದುಕನ್ನು ಸಮರ್ಪಿಸಿಕೊಂಡು, ಆರ್ಥಿಕ ಸಂಕಷ್ಟಗಳಿಗೀಡಾಗಿಕೊಂಡೆ ಬದುಕಿದವರು. ವೃತ್ತಿ ಬದುಕಿನಲ್ಲಿ ಸಂತಸವನ್ನು ಅನುಭವಿಸಿದವರು ಶ್ರೀಮತಿ ಶಾಂತಾಬಾಯಿ ಗದಗಕರ್ ೧೯೪೭ ರಲ್ಲಿ ರಂಗಭೂಮಿಯನ್ನು ಪ್ರವೇಶಿಸಿದರು. ಕಂದಗಲ್ ಹನುಮಂತರಾಯರ 'ಅದ್ಭುತ ರಾಮಾಯಣ' ಡಂಬಳದಲ್ಲಿ ಪ್ರದರ್ಶನಗೊಂಡಾಗ ಶಶಿಯ ಪಾತ್ರದಲ್ಲಿ ಶಾಂತಾಬಾಯಿ ಸತ್ವಯುತ ಕಲಾವಿದೆ ಎನಿಸಿಕೊಂಡರು. ಕೊಟ್ಟೂರು ಬಸಪ್ಪನವರ ಕಂಪನಿಯ 'ಲಂಕಾದಹನ', 'ಕಾಳಿಂದೀ' ನಾಟಕಗಳಲ್ಲಿ ತಳಕಲ್ಲ ವೆಂಕರಡ್ಡೆಪ್ಪನವರ ಕಂಪನಿಯ 'ದತ್ತುಪುತ್ರ', 'ಹರಿಶ್ಚಂದ್ರ' ನಾಟಕಗಳಲ್ಲಿ, ವೆಂಕಂಚಿ ಚಟ್ಟೆಪ್ಪನವರ ಕಂಪನಿಯ 'ಹೇಮರೆಡ್ಡಿ ಮಲ್ಲಮ್ಮ', 'ಚಿತ್ರಾಂಗದ' ನಾಟಕಗಳಲ್ಲಿ ಪ್ರಮುಖ ಪಾತ್ರಗಳನ್ನು ಸಹಜಾಭಿನಯ, ಹಾಡುಗಾರಿಕೆಯ ಮೋಡಿಯಿಂದ ನಿರ್ವಹಿಸಿ ಈ ದಂಪತಿಗಳು ತಮ್ಮ ಪ್ರತಿಭೆ, ಕಲಾಕೌಶಲವನ್ನು ಮೆರೆದರು. ರಾಚಯ್ಯಸ್ವಾಮಿಯವರ ಸಂಭಾಷಣಾ ಶೈಲಿ, ಮಾತಿನ ಹರಿತ-ಓಘ ಪ್ರೇಕ್ಷಕರಲ್ಲಿ ಭಾವುಕ ಸಂಚಲನೆಯನ್ನುಂಟು ಮಾಡುತ್ತಿದ್ದವು. ಮಾರುತೇಶ ಮಾಂಡ್ರೆ ರಚನೆಯ 'ಮೋಳಿಗೆ ಮಾರಯ್ಯ' ನಾಟಕದಲ್ಲಿಯ ಮಹದೇವ ಭೂಪಾಲ ಮತ್ತು ಮಹದೇವಮ್ಮನ ಪಾತ್ರಗಳು ಈ ದಂಪತಿಗಳಿಗೆ ಹೆಸರನ್ನು ತಂದುಕೊಟ್ಟವು. ನಾಟಕಗಳ ಭಿತ್ತಿಪತ್ರಗಳಲ್ಲಿ ಗಾನಕೋಗಿಲೆ ಶಾಂತಾಬಾಯಿ ಗದಗಕರ್ ಎಂದು ಪ್ರಸಿದ್ಧಿಸಲಾಗುತ್ತಿತ್ತು. ಎಚ್.ಎನ್. ಹೂಗಾರ ಕೃತ 'ದಸರಾ', 'ಪುತ್ಥಳಿ', ಪಿ.ಬಿ. ಧುತ್ತರಗಿ ರಚನೆಯ 'ತಾಯಿಯ ಕರುಳು', ಮಾರುತೇಶ ಮಾಂಡ್ರೆಯವರ 'ಸ್ತ್ರೀರತ್ನ', ಮಹಾಂತೇಶ ಶಾಸ್ತ್ರಿಗಳ 'ರೂಪಾಯಿ' ನಾಟಕಗಳಲ್ಲಿ ಈ ಕಲಾವಿದ ದಂಪತಿಗಳು ಅಭಿನಯದ ಸೊಗಸುಗಾರಿಕೆಯನ್ನು ಪ್ರದರ್ಶಿಸಿದರು. ರಂಗಭೂಮಿಯಲ್ಲಿ ಜೊತೆ ಜೊತೆಯಾಗಿಯೇ ಅಭಿನಯಿಸಿದ ಈ ಕಲಾವಿದ ದಂಪತಿಗಳು ಸುದೀರ್ಘ ಬದುಕಿನುದ್ದಕ್ಕೂ ಆರ್ಥಿಕ ತೊಂದರೆಯನ್ನು ಅನುಭವಿಸಿದರೂ ನಾಟಕಾಸಕ್ತಿಯನ್ನು ಕಳೆದುಕೊಂಡಿರಲಿಲ್ಲ.

ಫ್ಲೋರಿನಾಬಾಯಿ ಕೊಟ್ರಪ್ಪ ಲಕ್ಕುಂಡಿ (ಎಚ್. ಫ್ಲೋರಿನಾ) :

ವೃತ್ತಿ ರಂಗಭೂಮಿಯಲ್ಲಿ ವಿಶಿಷ್ಟ ಛಾಪನ್ನು ಮೂಡಿಸಿದ ಎಚ್. ಫ್ಲೋರಿನಾ ಹಾಸ್ಯ ಪಾತ್ರದಿಂದಲೇ ಗುರುತಿಸಿಕೊಂಡವರು. 'ಕೊರವಂಜಿ' ನಾಟಕದಲ್ಲಿ ಕೊರವಂಜಿಯಾಗಿ ಪ್ರೇಕ್ಷಕರನ್ನು ಮೋಡಿ ಮಾಡಿದವರು. 'ಹೆಜ್ಜೆ ತಪ್ಪಿದ ಹೆಣ್ಣು', 'ಬಂಜೆ ತೊಟ್ಟಿಲು', 'ದಸರಾ' ನಾಟಕಗಳಲ್ಲಿ ಹಾಸ್ಯ ಪಾತ್ರಗಳಲ್ಲಿ ಮಿಂಚಿದ ಫ್ಲೋರಿನಾಬಾಯಿ ಈಗ ೭೦ ವರ್ಷ ಪ್ರಾಯದವರು.

ಅಂಬುಜಾ ಕುಮಟಾ :

ವೃತ್ತಿ ರಂಗಭೂಮಿಯ ಮಹಾನ್ ಕಲಾವಿದೆ ಅಂಬುಜಾ ಕುಮಟಾ (೬೫ ವರ್ಷ) 'ಚಿತ್ರಾಂಗದ', 'ಕುರುಕ್ಷೇತ್ರ' ಪೌರಾಣಿಕ ನಾಟಕಗಳಲ್ಲಿ ಹಾಗೂ ಹಲವಾರು ಸಾಮಾಜಿಕ ನಾಟಕಗಳಲ್ಲಿ ಪ್ರಮುಖ ಪಾತ್ರಗಳನ್ನು ವಹಿಸಿದವರು. ತಂದೆ ದಿ. ರಾಮಣ್ಣ ಕುಮಟಾ ವೃತ್ತಿರಂಗಭೂಮಿಯಲ್ಲಿ ನುರಿತ ನಟರಾಗಿದ್ದರು.

ಶಿವಶಂಕರ ಬ್ಯಾಳಿ ಮಾಸ್ತರ :

'ಶ್ರೀ ನಾಗಲಿಂಗಲೀಲೆ', 'ಎಷ್ಟು ನಗ್ತಿ ನಗು', 'ಲಂಚ್ಯಾನಮಗ ಕೆಂಚಯ್ಯ', 'ತರಕಾರಿ ತಾರಾಬಾಯಿ', 'ಹೆಣ್ಣಿನ ಫಲ ಗಂಡಿನ ಬಲ' ಮೊದಲಾದ ಜನಪ್ರಿಯ ನಾಟಕಗಳನ್ನು ರಚಿಸಿದ ಬ್ಯಾಳಿ ಮಾಸ್ತರು ಉತ್ತಮ ನಟರು ಕೂಡ ಅಹುದು.

ದಿ. ಬಲರಾಜ ಜಮಖಿಂಡಿ (ಸವಡಿ) :

ಅಭಿನಯ, ನಾಟಕ ರಚನಾಕಾರರಾಗಿದ್ದ ಬಲರಾಜ ಜಮಖಿಂಡಿ ವೃತ್ತಿ ರಂಗಭೂಮಿಯಲ್ಲಿ ಹೆಸರುವಾಸಿಯಾಗಿದ್ದರು. 'ಮಂಗಳಾ ನನ್ನ ಅತ್ತಿಗೆ' ಇವರ ಜನಪ್ರಿಯ ಕೃತಿ. ಹಲವು ಊರುಗಳಲ್ಲಿ ತಮ್ಮ ತಂಡದಿಂದ ಈ ನಾಟಕದ ಹಲವಾರು ಪ್ರಯೋಗಗಳನ್ನು ಪ್ರದರ್ಶಿಸಿದರು.

ಸಂಕಣ್ಣಾ ಡಂಬಳ :

ಡಂಬಳದ ಸಂಕಣ್ಣ ಅಭಿನಯ ಚತುರ ವೃತ್ತಿ ರಂಗ ಕಲಾವಿದರು. 'ರೈತನ ಮಕ್ಕಳು', 'ಸೂಳೆಮಗ' ನಾಟಕಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಪ್ರೇಕ್ಷಕರನ್ನು ರಂಜಿಸಿದವರು 'ದುಡ್ಡಿನ ದರ್ಪ'ದಲ್ಲಿ ಎರಡು ವಿಭಿನ್ನ ಬಗೆಯ ಪಾತ್ರಗಳಲ್ಲಿ ಕಾಣಿಸಿಕೊಂಡರೂ, ಎರಡೂ ಪಾತ್ರಧಾರಿಗಳು ಓರ್ವನೇ ವ್ಯಕ್ತಿ ಎಂದು ಪ್ರೇಕ್ಷಕರು ಗುರುತಿಸಲಾರದಂತೆ ಅಭಿನಯ ಮಾಡಿದ್ದು ಇವರ ಹೆಗ್ಗಳಿಕೆ.

**ಅನ್ನಪೂರ್ಣಾ ಬೆಳಧಡಿ, ಗದಗ :**

೬೨ ವರ್ಷ ಪ್ರಾಯದ ಶ್ರೀಮತಿ ಅನ್ನಪೂರ್ಣಾ ಬೆಳದಡಿ ವೃತ್ತಿ ರಂಗಭೂಮಿಯ ಅಪ್ಪಟ ಕಲಾವಿದೆ. ಹೆಸರಾಂತ ಕಲಾವಿದರಾಗಿದ್ದ ರಾಚಯ್ಯಸ್ವಾಮಿ ಬೆಳಧಡಿ ಹಾಗೂ ಶ್ರೀಮತಿ ಶಾಂತಾಬಾಯಿ ಗದಗಕರ್ ದಂಪತಿಗಳ ಪುತ್ರಿ. ಬಾಲ ಕಲಾವಿದೆಯಾಗಿ ರಂಗಭೂಮಿಯನ್ನು ಪ್ರವೇಶಿಸಿ ತಮ್ಮ ನೈಜ ನಟನೆಯಿಂದ ಹಾಗೂ ವೈವಿಧ್ಯಮಯ ಪಾತ್ರಗಳಿಗೆ ಜೀವ ತುಂಬುವ ಅಭಿನಯದಿಂದ ಪ್ರೇಕ್ಷಕರನ್ನು ರಂಜಿಸಿದವರು. ಗದುಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಸಂಗೀತಾಭ್ಯಾಸವನ್ನು ಮಾಡಿದ ಇವರು ಹಲವು ವೃತ್ತಿ ಸಂಸ್ಥೆಗಳಲ್ಲಿ ಹಾಗೂ ಹವ್ಯಾಸಿ ಸಂಸ್ಥೆಗಳಲ್ಲಿ ಕಲಾಸೇವೆ ಮಾಡುತ್ತ ಬಂದವರು.

ಧುತ್ತರಗಿ ಕಂಪನಿಯ 'ತಾಯಿಯ ಕರುಳು' ನಾಟಕದಲ್ಲಿ ಖಳನಾಯಕಿಯ ಪಾತ್ರ ಹಾಗೂ ಕಂದಗಲ್ ಹನುಮಂತರಾಯರ 'ಬಡತನದ ಭೂತ'ದಲ್ಲಿ, ರಾಮರಾವ ದೇಸಾಯಿಯವರ 'ಗೌಡ್ರಗದ್ಲ'ದಲ್ಲಿ ಗಂಗಾ ಪಾತ್ರದಲ್ಲಿ ಕಲಾವಿದೆಯಾಗಿ ಹೊರಹೊಮ್ಮಿ ಯಲಬುರ್ಗಾ ತಾಲೂಕಿನ ತಿಪ್ಪನಾಳದ ಶ್ರೀ ಗುರು ನಿರುಪಾದೇಶ್ವರ ಕೃಪಾಪೋಷಿತ ನಾಟ್ಯ ಸಂಘದ 'ಶ್ರೀ ನಿರುಪಾಧೀಶ್ವರ ಮಹಾತ್ಮೆ', ನ್ಯಾಮತಿಯ ಶ್ರೀಮಹೇಶ ನಾಟ್ಯಸಂಘದಲ್ಲಿ, ಕೋರ್ಲಹಳ್ಳಿಯ ಶ್ರೀ ಗಂಗಾದೇವಿ ನಾಟ್ಯಕಲಾ ಬಳಗದ 'ಸತ್ಯಕ್ಕೆ ಸೋತಿತು ಸರಕಾರ' ನಾಟಕ, ಚಿತ್ತಾಪೂರದ ಶ್ರೀ ಯೋಗೇಶ್ವರಿ ನಾಟ್ಯಸಂಘದ 'ನವಭಾರತ ವೀರಪುತ್ರ', ಡಂಬಳದ ಶ್ರೀ ತರುಣ ಯುವಕ ನಾಟ್ಯ ಸಂಘದ 'ಧನಿಕರ ದೌರ್ಜನ್ಯ', ಸವಣೂರು ತಾಲೂಕಿನ ಭೈರಾಪೂರದ ಶ್ರೀ ಮಾರುತಿ ಸೇವಾ ನಾಟ್ಯಸಂಘದ 'ದೊಡ್ಡಪ್ಪನ ದರ್ಬಾರ', ಡಂಬಳದ ಶ್ರೀ ಹಾಲೇಶ್ವರ ಸೇವಾ ನಾಟ್ಯಸಂಘದ 'ಬಡವ ಬದುಕಲೇಬೇಕು', ಬಂಡಿಹಾಳದ ಶ್ರೀ ಕೆರಿಬಸವೇಶ್ವರ ತರುಣ ಕಲಾ ನಾಟ್ಯ ಸಂಘದ 'ತಾಳಿಯಿಲ್ಲದೆ ತಾಯಿಯಾದೆ', ಉಪ್ಪಾರ ಹೊಸಳ್ಳಿಯ ತರುಣ ನಾಟ್ಯ ಕಲಾಸಂಘದ 'ಅಣ್ಣ-ತಂಗಿ' ನಾಟಕ, ಗದುಗಿನ ಫ.ಶಿ. ಭಾಂಡಗೆಯವರ ನಾಟಕಗಳಲ್ಲಿ ವೈವಿಧ್ಯಮಯ ಪಾತ್ರಾಭಿನಯ ಮಾಡಿದವರು.

**ಗಾಯತ್ರಿ, ಬಳ್ಳಾರಿ :**

ಗದುಗಿನ ಬಸವೇಶ್ವರ ನಗರ (ಶಹಪೂರಪೇಟೆ)ಯಲ್ಲಿ ವಾಸವಾಗಿರುವ ೬೦ ವರ್ಷ ಪ್ರಾಯದ ಇವರು ಕಂಪನಿ ನಾಟಕಗಳಲ್ಲಿ ವಿವಿಧ ಪಾತ್ರಗಳನ್ನು ಮಾಡಿದ ವೃತ್ತಿರಂಗ ಕಲಾವಿದೆ.

ಸಾವಿತ್ರಿ ಬಳ್ಳಾರಿ :

ಗದುಗಿನ ಶಹಪೂರ ಪೇಟೆಯ ನಿವಾಸಿ ಸಾವಿತ್ರಿ ಬಳ್ಳಾರಿ ಹಲವಾರು ಕಂಪನಿ ನಾಟಕಗಳಲ್ಲಿ ನಟಿಸಿದ ವೃತ್ತಿರಂಗ ಕಲಾವಿದೆ.

ದಿ. ಚಂಪವ್ವ ಪಟ್ಟಣಶೆಟ್ಟಿ ವೃತ್ತಿರಂಗ ಕಲಾವಿದೆಯಾಗಿ ಹೆಸರು ಮಾಡಿದ್ದರು.

ದಿ. ವೀರಭದ್ರಪ್ಪ ಪಟ್ಟಣಶೆಟ್ಟಿ - ಹಾರ್ಮೋನಿಯಂ ಮಾಸ್ತರರಾಗಿ ನಾಟಕಾಸಕ್ತರ ನೆನಪಿನ ಭಿತ್ತಿಗಳಲ್ಲಿ ಹಸಿರಾಗಿರುವ ವೃತ್ತಿರಂಗ ಕಲಾವಿದರು.

ಪ್ರೇಮಾ ಪಟ್ಟಣಶೆಟ್ಟಿ : ಗದುಗಿನ ಸಿದ್ಧಲಿಂಗೇಶ್ವರ ನಗರದಲ್ಲಿ ವಾಸವಾಗಿರುವ ೫೫ ಪ್ರಾಯದ ಪ್ರೇಮಾ ಪಟ್ಟಣಶೆಟ್ಟಿ ವೃತ್ತಿರಂಗ ಹಾಗೂ ಹವ್ಯಾಸಿ ಕಲಾವಿದೆ.

ಶ್ರೀಮತಿ ಅರುಣಾ ಪಾಟೀಲ (೫೭) :

ಅಡವಿಸೋಮಾಪೂರದಲ್ಲಿ ವಾಸವಾಗಿರುವ ಅರುಣಾ ಪಾಟೀಲ ೧೨ ವರ್ಷಗಳ ಕಾಲ ವಿವಿಧ ನಾಟಕ ಕಂಪನಿಗಳಲ್ಲಿ ಹಾಸ್ಯ ಪಾತ್ರಗಳಲ್ಲಿ ಮಿಂಚಿದ ಕಲಾವಿದೆ. 'ಪ್ರೇಮ ಪಂಜರ', 'ಮಾತು ತಪ್ಪದ ಮಗ', 'ತಾಳ ತಪ್ಪಿದ ಬಾಳು', 'ಧನಿಕರ ದೌರ್ಜನ್ಯ' ನಾಟಕಗಳಲ್ಲಿ ಅದ್ಭುತ ಅಭಿನಯ ನೀಡಿದವರು.

* ಸುಶೀಲಮ್ಮ ನೀಲಕಂಠಯ್ಯ ಹಿರೇಮಠ, ಗದಗ
  ಬಾಲಕಲಾವಿದೆಯಾಗಿ, ಅನಂತರ ಎಲ್ಲ ಕಂಪನಿಗಳಲ್ಲಿ ಪಾತ್ರ ಮಾಡಿದ ಕಲಾವಿದೆ.
* ವಜೀರವ್ವ ಹೊಂಬಳ, ಗದಗ
* ಶಾರದಾ ಹೊಂಬಳ, ಗದಗ
* ಕುಸುಮಾ ಬಾಗಿಲುಕೋಟೆ, ಗದಗ.

ರೋಣ ತಾಲೂಕು ವೃತ್ತಿ ಕಲಾವಿದರು

* ಅಯ್ಯಪ್ಪ ಅರಮಣಿಸಿ, ಜಕ್ಕಲಿ (ಪೌರಾಣಿಕ ರಂಗಗೀತೆ)
* ಮಾಬೂಸಾಬ ಮುಲ್ಲಾ, ಜಕ್ಕಲಿ (ರಂಗಕಲಾವಿದ)
* ಶೇಕಣ್ಣ ಸಂಕನೂರ, ಜಕ್ಕಲಿ (ಅಭಿನಯ)
* ಅಶೋಕಪ್ಪ ಯಾವಗಲ್ಲ, ಜಕ್ಕಲಿ (ಅಭಿನಯ)
* ಶಂಕರಯ್ಯ ರಕ್ಕಸಗಿ, ಹಾಲಕೆರೆ (ಅಭಿನಯ)
* ಮಲ್ಲಪ್ಪ ಮಾಸ್ತರ ಅಬ್ಬಿಗೇರಿ, ಹಾಲಕೆರೆ (ಹಾರ್ಮೋನಿಯಂ)
* ಸಂಗನಗೌಡರ ಬಂಡಿ, ಹಾಲಕೆರೆ (ತಬಲಾ)

# ಗದಗ ಜಿಲ್ಲೆಯ ರಂಗ ನಾಟಕಕಾರರು

## ಶಾಂತಕವಿ (ಸಕ್ಕರಿ ಬಾಳಾಚಾರ್ಯ)

ಕನ್ನಡ ನಾಡಿನಲ್ಲಿ ಕನ್ನಡದಲ್ಲಿ ಸ್ವತಂತ್ರ ನಾಟಕಗಳನ್ನು ರಚಿಸಿ, ವೃತ್ತಿರಂಗದ ಥರವೇ ಅವುಗಳನ್ನು ಕನ್ನಡ ನಾಡಿನಲ್ಲಿ ಆಡಿದ ಶ್ರೇಯಸ್ಸು ಶಾಂತಕವಿಗಳಿಗೆ ಸಲ್ಲುತ್ತದೆ. 'ಕರ್ನಾಟಕ ನಾಟಕದ ಪಿತಾಮಹ', 'ಕರ್ನಾಟಕ ನಾಟಕದ ಪ್ರಥಮ ಗುರು' ಶಾಂತಕವಿಗಳು ಕನ್ನಡ ನಾಡಿನಲ್ಲೇ ಅನಾಥವಾಗಿದ್ದ ಕನ್ನಡ ನುಡಿಯನ್ನು ಪೋಷಿಸಿ ಬೆಳೆಸಲು, (ಕನ್ನಡ ನಾಡಲ್ಲೇ ಮರಾಠಿ ನಾಟಕಗಳು ಜನಪ್ರಿಯವಾಗಿ ತಲೆದೋರಿದ್ದ ಸನ್ನಿವೇಶದಲ್ಲಿ) ಕನ್ನಡಿಗರ ಅಭಿಮಾನ ಶೂನ್ಯತೆಯನ್ನು ತೊಡೆದು ಹಾಕಲು ಕನ್ನಡ ನಾಟಕಗಳನ್ನು ರಚಿಸಿ, ಅವುಗಳನ್ನು ಪ್ರದರ್ಶಿಸಲು ಬಹುವಾಗಿ ಶ್ರಮಿಸಿದರು. 'ಶ್ರೀ ವೀರನಾರಾಯಣ ಪ್ರಾಸಾದಿಕ ಕೃತಪುರ ನಾಟಕ ಮಂಡಳಿ'ಯನ್ನು ಸಂಘಟಿಸಿ, ತಾವು ಬರೆದ 'ಉಷಾಹರಣ' ನಾಟಕವನ್ನು ಪ್ರದರ್ಶಿಸಿ, ಕರ್ನಾಟಕ ವೃತ್ತಿರಂಗ ಭೂಮಿಗೆ ಭದ್ರವಾದ ಬುನಾದಿ ಹಾಕಿಕೊಟ್ಟು, ಅದು ಹರವಾಗಿ ಬೆಳೆಯಲು ಚಾಲನೆ ನೀಡಿದರು. 'ಉಷಾಹರಣ', 'ಶ್ರೀಯಾಳಸತ್ವ', 'ಸುಂದೋಪಸುಂದವಧಾ', 'ವತ್ಸಲಾಹರಣ', 'ವಿರಾಟಪರ್ವ', 'ಕೀಚಕವಧಾ', 'ಸುರಥ-ಸುಧನ್ವ ಕಾಳಗ', 'ಸೀತಾರಣ್ಯ ಪ್ರವೇಶ', 'ಶಾಕುಂತಲೋತ್ಪತ್ತಿ', 'ಚಂದ್ರಾವಳಿ ಚರಿತ್ರೆ', 'ಪಾರ್ವತಿ ಪರಿಣಯ' ಇವರು ರಚಿಸಿದ ನಾಟಕಗಳು.

## ಗರುಡ ಸದಾಶಿವರಾಯರು

ಗರುಡ ಸದಾಶಿವ ರಾಯರು ಪುರಾಣ, ಇತಿಹಾಸ ಹಾಗೂ ಸಮಕಾಲೀನ ಜ್ವಲಂತ ಸಾಮಾಜಿಕ ಸಮಸ್ಯೆಗಳನ್ನಾಧರಿಸಿ ಐವತ್ತೆಂಟು ನಾಟಕಗಳನ್ನು ರಚಿಸಿದರು. 'ಏಚ್ಚಮ ನಾಯಕ', 'ಪಾದುಕಾಪಟ್ಟಾಭಿಷೇಕ', 'ಕಂಸವಧ', 'ಕೃಷ್ಣ ಲೀಲೆ', 'ವಿಷಮ ವಿವಾಹ', 'ಕಬೀರದಾಸ', 'ಶರಣಬಸವ' ಮೊದಲಾದವು ಅತ್ಯಂತ ಜನಪ್ರಿಯವಾದವುಗಳು. ಈ ನಾಟಕಗಳು ರಾಜ್ಯದ ಒಳ-ಹೊರಗೆ ಹಲವು ಯಶಸ್ವಿ ಪ್ರಯೋಗಗಳನ್ನು ಕಂಡವು. 'ಉಗ್ರಕಲ್ಯಾಣ', 'ವಿದ್ಯಾರಣ್ಯ ವಿಜಯ' ಸೇರಿದಂತೆ ಐದು ಐತಿಹಾಸಿಕ ನಾಟಕಗಳನ್ನು ಬರೆದರು. 'ಕಾಲಚಕ್ರ', 'ಕ್ರಾಂತಿ', 'ನಾನು ಕನ್ನಡಿಗ', 'ಸತ್ಯ ಸಂಕಲ್ಪ', 'ಬಲಸಿಂಹತಾರಾ' ಮೊದಲಾಗಿ ಹದಿನಾಲ್ಕು ನಾಟಕಗಳನ್ನು, ಸಾಧು ಸಂತರನ್ನು ಕುರಿತ ಹನ್ನೊಂದು ನಾಟಕಗಳನ್ನು ಬರೆದರು. 'ಪ್ರೇಮವಿವಾಹ' ಎಂಬುದು ಮಕ್ಕಳ ನಾಟಕ.

## ಅಚ್ಯುತರಾವ್ ಹುಯಿಲಗೋಳ

ಲೋಕಮಾನ್ಯ ಟಿಳಕರ ಸ್ವರಾಜ್ಯ ಚಳುವಳಿಯಿಂದ ಪ್ರಭಾವಿತರಾಗಿದ್ದ ಗದುಗಿನ ಅಚ್ಯುತರಾವ ಹುಯಿಲಗೋಳ ದೇಶಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡವರು. ಸಾಹಿತ್ಯಾಸಕ್ತಿಯೊಂದಿಗೆ ಸಂಗೀತದಲ್ಲೂ ಪರಿಣಿತಿ ಸಾಧಿಸಿದ್ದರು. ಸ್ವಾತಂತ್ರ್ಯ ಆಂದೋಲನದ ಸನ್ನಿವೇಶದಲ್ಲಿ ಜನತೆಯಲ್ಲಿ ರಾಷ್ಟ್ರಾಭಿಮಾನವನ್ನು ಬಡಿದೆಬ್ಬಿಸಲು ಪ್ರೇರಣಾತ್ಮಕ ನಾಟಕಗಳನ್ನು ರಚಿಸಿದರು. ಇವರು ರಚಿಸಿದ **'ನರಗುಂದ ಮುತ್ತಿಗೆ'** ಕನ್ನಡ ರಂಗಭೂಮಿಯಲ್ಲಿ ಪ್ರದರ್ಶನಗೊಳ್ಳುತ್ತಿದ್ದಂತೆಯೇ ಕ್ರಾಂತಿಯ ಜ್ವಾಲೆಗಳು ಭುಗಿಲೆದ್ದವು. ಈ ನಾಟಕ ಪ್ರದರ್ಶನಕ್ಕೆ ಬ್ರಿಟಿಷ ಸರಕಾರವು ಅನುಮತಿ ನಿರಾಕರಿಸಿ ತಡೆಯೊಡ್ಡಿತು. ಅನಂತರದಲ್ಲಿ ಕೆಲವು ಮಾರ್ಪಾಡುಗಳೊಂದಿಗೆ ಅನುಮತಿ ನೀಡಲಾಯಿತು. ಕೆಲವು ನಾಟಕಮಂಡಳಿಗಳು ಈ ನಾಟಕವನ್ನು ರಾಜ್ಯಾದ್ಯಂತ ಪ್ರದರ್ಶಿಸಿ ಪ್ರಸಿದ್ಧಿ ಪಡೆದವು. ರಾಮದುರ್ಗದ ದೊರೆಗಳು ಈ ನಾಟಕವನ್ನು ಬಹುವಾಗಿ ಮೆಚ್ಚಿಕೊಂಡು ಅಚ್ಯುತರಾಯರಿಗೆ **'ಕನ್ನಡ ಗಡಕರಿ'** ಎಂಬ ಬಿರುದನ್ನು ನೀಡಿ ಗೌರವಿಸಿದರು.

ಅಚ್ಯುತರಾಯರು ಹಣ ಗಳಿಕೆಗಾಗಿ ನಾಟಕ ಬರೆಯಲಿಲ್ಲ. ತಮ್ಮ ಅಭಿವ್ಯಕ್ತಿ ತುಡಿತದಲ್ಲಿ ಅವರಿಗೆ ಶ್ರದ್ಧೆಯ ಭಾವವಿತ್ತು. ರಾಷ್ಟ್ರೀಯತೆಯ ಭಾವವನ್ನು ಪ್ರಸರಿಸಲು ನಾಟಕ ಮಾಧ್ಯಮವನ್ನು ಸಮರ್ಥವಾಗಿ ಬಳಸಿಕೊಂಡರು. **'ಮಹಾರಥಿ ಕರ್ಣ'**, **'ಮಹಾರಥಿ ಭೀಷ್ಮ'**, **'ಶಸ್ತ್ರ ಸನ್ಯಾಸ'** ಅವರ ಶ್ರೇಷ್ಠ ನಾಟಕಗಳಾಗಿವೆ. **'ಬ್ರಹ್ಮಕುಮಾರಿ'**, **'ಸ್ವಾತಂತ್ರ್ಯ ಸಂಗ್ರಾಮ'**, **'ಅಭೂತ ಕನ್ಯಾ'**, **'ಗುಣಶೋಧನಾ'**, **'ಮೇಟಿಯ ಬಂಟ'**, ಸಾಮಾಜಿಕ ನಾಟಕಗಳು. **'ವೈಕುಂಠಕ್ಕೆ ಮುತ್ತಿಗೆ'**, **'ಸಂಭಾಜಿಯ ಚರಿತ್ರೆ'**, **'ನರಗುಂದ ಮುತ್ತಿಗೆ'**, **'ಕಿತ್ತೂರು ಚೆನ್ನಮ್ಮ'**, **'ಬೆಳವಡಿ ಮಲ್ಲಮ್ಮ'**, **'ಅಕ್ಕಮಹಾದೇವಿ'** ಇತರ ಜನಪ್ರಿಯ ನಾಟಕಗಳು.

ಇವರು ಬರೆದ ಹಾಡುಗಳು, ಗಂಡುಮೆಟ್ಟಿನ ನಾಡಿನ ಖಡಕ್ ಧ್ವನಿಯ ಆಡುನುಡಿಯ ಸಂಭಾಷಣೆಗಳು ಜನರ ಹೃದಯವನ್ನು ತಟ್ಟಿದವು. ಅದಕ್ಕೆಂದೇ ಇವರನ್ನು **'ಕೃತಪುರದ ಕೈಲಾಸಂ'** ಎಂದು ಕರೆಯಲಾಗಿದೆ. ರಂಗಸೇವೆ ಇವರಿಗೆ ಆದಾಯವನ್ನು ತರಲಿಲ್ಲ. ಅಷ್ಟೇ ಏಕೆ, ಇದ್ದ ಆಸ್ತಿಯನ್ನೇ ಕಳೆದುಕೊಳ್ಳುವಂತಾಯಿತು.

## ಪಂಡಿತ ಡಾ. ಪುಟ್ಟರಾಜ ಕವಿ ಗವಾಯಿಗಳು

ಕನ್ನಡ ವೃತ್ತಿರಂಗಭೂಮಿ ಉಚ್ಛ್ರಾಯದ ಸ್ಥಿತಿಯನ್ನು ತಲುಪಿದಾಗ ಸಾಮಾಜಿಕ ಹಾಗೂ ಐತಿಹಾಸಿಕ ನಾಟಕಗಳತ್ತ ರಂಗನಾಟಕ ಕಲಾವಿದರು ಹಾಗೂ ರಂಗಕರ್ಮಿಗಳು ಹೆಚ್ಚಿನ ಒಲವು ತೋರಿದರು. ಗದುಗಿನ ಪಂಡಿತ ಪುಟ್ಟರಾಜ ಕವಿ ಗವಾಯಿಗಳು ೧೯೪೦ ರ ಸುಮಾರಿಗೆ ನಾಟಕ ರಚನೆಗೆ ತೊಡಗಿದರು.

ಶಿವಶರಣೆಯರ ಬಗೆಗೆ ನಾಟಕಗಳು ವಿರಳವಿದ್ದವು. ಆಗ ಅಷ್ಟೊಂದು ಸುಪರಿಚಿತವಾಗಿರದ 'ನೆಲ್ಲೂರ ನಂಬೆಕ್ಕ' ಶಿವಶರಣೆಯ ಹಿರಿಮೆಯನ್ನು ಅರುಹುವ ನಾಟಕ ಬರೆದರು. ನಾಟಕ ಮಂಡಳಿಯನ್ನು ಹುಟ್ಟು ಹಾಕಿದರು. ಧಾರ್ಮಿಕ, ಆಧ್ಯಾತ್ಮಿಕ ವಿಷಯಗಳಿಗೆ ಸೀಮಿತವಾದ ನಾಟಕಗಳನ್ನಷ್ಟೇ ಪ್ರದರ್ಶಿಸುವುದು ಹಾಗೂ ಪುರುಷರೇ ಸ್ತ್ರೀ ಪಾತ್ರಗಳನ್ನು ವಹಿಸಬೇಕು ಎಂಬ ಕಟ್ಟು ಪಾಡುಗಳೊಂದಿಗೆ 'ಶ್ರೀ ಕುಮಾರೇಶ್ವರ ಕೃಪಾಪೋಷಿತ ನಾಟಕ ಮಂಡಳಿ'ಯನ್ನು ಆರಂಭಿಸಿದರು. ಅಂಧ - ಅನಾಥರನ್ನು ಪೋಷಿಸಲು ಹುಟ್ಟಿಕೊಂಡಿದ್ದ ಈ ಮಂಡಳಿಯ ಮೊದಲ ನಾಟಕವಾಗಿ 'ಸಿದ್ಧರಾಮ ಸಂವಾದ' ಪ್ರದರ್ಶನಗೊಂಡಿತು. 'ಸತಿ ಸುಕನ್ಯಾ', 'ದೇವರ ದುಡ್ಡು', 'ಮಹಾರಥಿ ಭೀಷ್ಮ', 'ನೆಲ್ಲೂರ ನಂಬೆಕ್ಕ', 'ಅಸ್ಪೃಶ್ಯೋದ್ಧಾರ', 'ಶಿವಶರಣ ಚೆನ್ನಯ್ಯ', 'ಭಗವಾನ ಬಸವೇಶ್ವರ', 'ಅಕ್ಕಮಹಾದೇವಿ', 'ಶಿವಶರಣ ಮೋಳಿಗೆಯ ಮಾರಯ್ಯ', 'ಶಿರಹಟ್ಟಿ ಜಗದ್ಗುರು ಫಕೀರೇಶ್ವರ', 'ಶ್ರೀ ಕೋಟ್ಟೂರು ಬಸವೇಶ್ವರ', 'ಶ್ರೀ ಕುಮಾರೇಶ್ವರ', 'ದಾನವೀರ ಶಿರಸಂಗಿ ಲಿಂಗರಾಜರು', 'ಮಗನ ಪ್ರೇಮ', 'ಸವತಿ ಮತ್ಸರ', 'ಸ್ತ್ರೀಧರ್ಮ' ಮೊದಲಾದ ಭಕ್ತಿಪ್ರಧಾನ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳನ್ನು ರಚಿಸಿದರು.

## ಎಚ್.ಟಿ. ಮಹಾಂತೇಶಶಾಸ್ತ್ರಿ

ಎಚ್.ಟಿ. ಮಹಾಂತೇಶಶಾಸ್ತ್ರಿಗಳು ರಂಗನಾಟಕಕಾರರಾಗಿ ವೃತ್ತಿರಂಗವನ್ನು ಸೇರಿದ್ದು ೧೯೫೦ ರಲ್ಲಿ. ಒಟ್ಟು ೪೯ ನಾಟಕಗಳನ್ನು ರಚಿಸಿದ್ದಾರೆ. ಕೆಲವು ನಾಟಕಗಳನ್ನು ನಿರ್ದೇಶಿಸಿದರು ಹಾಗೂ ಹಲವಾರು ನಾಟಕಗಳಲ್ಲಿ ಪಾತ್ರಗಳನ್ನು ನಿರ್ವಹಿಸಿದರು. 'ನರರಾಕ್ಷಸಿ' ಎಂಬ ಕೌಟುಂಬಿಕ ನಾಟಕ ಅವರ ಮೊದಲ ಕೃತಿ. 'ಕುಂಕುಮ' ಒಂದೇ ದೃಶ್ಯದ ನಾಟಕವಾಗಿ ವಿಶೇಷ ಎನಿಸಿತು. 'ಮಾನವತಿ', 'ರೂಪವತಿ', 'ವಧುವರ', 'ಆತ್ಮಾಹುತಿ', 'ಕುಲ-ಛಲ', 'ಬಿಡುಗಡೆ', 'ಜ್ವಾಲಾಮುಖಿ', 'ಅಣ್ಣ-ತಮ್ಮ', 'ಸಾಧ್ವೀಮಣಿ', 'ಅಕ್ಕ-ತಂಗಿ', 'ಹೆಣ್ಣುಗೊಂಬೆ', 'ಸತಿಪತಿ', 'ಇವನೆಂಥ ಗಂಡ', 'ಪೋಸ್ಟ್‌ಮನ್', 'ಸ್ವರ್ಗವಿದು ಸಂಸಾರ', 'ಭವ್ಯಭಾರತಿ', 'ಕಲಿತ ಕತ್ತೆ' ಮೊದಲಾದ ಸಾಮಾಜಿಕ ನಾಟಕಗಳನ್ನು ಬರೆದರು.

'ಆದರ್ಶಪುತ್ರ, ವೀರ ಅಭಿಮನ್ಯು', 'ವೆಂಕಟೇಶ ಮಹಾತ್ಮೆ', 'ಶ್ರೀಬನಶಂಕರಿ ಮಹಾತ್ಮೆ', 'ಮಾರುತಿ ಮಾತೃಭಕ್ತಿ' ಮೊದಲಾದ ಪೌರಾಣಿಕ ನಾಟಕಗಳನ್ನೂ, 'ನೇತಾಜಿ ಸುಭಾಷ', 'ಹೈದರ ಅಲಿ', 'ಮಹಾತ್ಮಾ ಬಸವೇಶ್ವರ', 'ಸಂಗೊಳ್ಳಿ ರಾಯಣ್ಣ', 'ನಿಜಗಲ್ಲಿನ ಗಿರಿರಾಣಿ' ಮೊದಲಾದ ಐತಿಹಾಸಿಕ ನಾಟಕಗಳನ್ನು ರಚಿಸಿದರು. 'ರೂಪಾಯಿ', 'ಮುನಸಿಪಾಲಿಟಿ', 'ಪೋಲೀಸ', 'ಎಲ್ಲಿದೆ ಸರಕಾರ', 'ಭ್ರಷ್ಟಾಚಾರ', 'ಪುಢಾರಿ ಪುಟ್ಟಣ್ಣ' ರಾಜಕೀಯ ನಾಟಕಗಳು.

'ರೂಪವತಿ', 'ಮಾನವತಿ' ನಾಟಕಗಳನ್ನು ಗೋಕಾಕ ಮಂಡಳಿಯು ರಾಜ್ಯಾದ್ಯಂತ ಪ್ರದರ್ಶಿಸಿತು. 'ಅಣ್ಣ ತಮ್ಮ' ಗುಬ್ಬಿ ವೀರಣ್ಣನವರ ಮಂಡಳಿಯಿಂದ ನೂರಾರು ಪ್ರಯೋಗಗಳನ್ನು ಕಂಡಿತು. ೧೯೬೭ ರಲ್ಲಿ ಮಹಾಂತೇಶಶಾಸ್ತ್ರಿಗಳು 'ಮಹಾಂತೇಶ ಮಿತ್ರಮಂಡಳಿ'ಯನ್ನು ಕಟ್ಟಿ ನಾಟಕಗಳನ್ನು ಪ್ರದರ್ಶಿಸಿದರು.

## ಮಾರುತೇಶ ಮಾಂಡ್ರೆ

ಗದಗ ಜಿಲ್ಲೆ ರೋಣ ತಾಲೂಕಿನ ಹೊಳೆಆಲೂರಿನ ಮಾರುತೇಶ ಮಾಂಡ್ರೆ ಮೂವತ್ತಕ್ಕೂ ಅಧಿಕ ರಂಗನಾಟಕಗಳನ್ನು ರಚಿಸಿದ್ದಾರೆ. ಅವರು ಬರೆದ 'ಗವಿಸಿದ್ಧೇಶ್ವರ ಮಹಾತ್ಮೆ' ನೂರಾರು ಪ್ರಯೋಗಗಳನ್ನು ಕಂಡ ಜನಪ್ರಿಯ ನಾಟಕವಾಗಿತ್ತು. ಹಲವು ವೃತ್ತಿ ಮಂಡಳಿಗಳು ಇವರ ನಾಟಕಗಳನ್ನು ಯಶಸ್ವಿಯಾಗಿ ರಂಗದ ಮೇಲೆ ಪ್ರದರ್ಶಿಸಿದವು. 'ಸ್ತ್ರೀ ರತ್ನ', 'ಧರ್ಮದೇವತೆ' ಅಧಿಕ ಪ್ರದರ್ಶನಗಳನ್ನು ಕಂಡಿವೆ. 'ಶರಣಸಾಹಿತ್ಯರತ್ನ', 'ಕವಿರತ್ನ' ಬಿರುದುಗಳನ್ನು ಪಡೆದ ಮಾರುತೇಶ ಮಾಂಡ್ರೆ ವೃತ್ತಿ ನಾಟಕ ರಂಗದಲ್ಲಿ ಹೆಸರಾಂತ ನಾಟಕಕಾರರೆನಿಸಿದರು.

**ಶಿವಶರಣರನ್ನು ಕುರಿತು ಬರೆದ ನಾಟಕಗಳು :** ಮೋಳಿಗೆಯ ಮಾರಯ್ಯ, ಶ್ರೀ ಸಿದ್ಧಾರೂಢರ ಮಹಾತ್ಮೆ, ಕಲಬುರ್ಗಿ ಶರಣಬಸವೇಶ್ವರ, ಸೊಲ್ಲಾಪೂರ ಸಿದ್ಧರಾಮೇಶ್ವರ, ಕೋಡಿಕೊಪ್ಪದ ಹುಚ್ಚೀರೇಶ್ವರ ಮಹಾತ್ಮೆ, ಹಾನಗಲ್ ಕುಮಾರೇಶ್ವರ ಮಹಾತ್ಮೆ, ಇಲಕಲ ವಿಜಯ ಮಹಾಂತೇಶ ಮಹಾತ್ಮೆ, ಮೂರುಸಾವಿರ ಮಠದ ಗುರುಸಿದ್ಧೇಶ್ವರ ಮಹಾತ್ಮೆ, ಗುಡಗುಂಟಿಯ ಅಮರೇಶ್ವರ ಮಹಾತ್ಮೆ.

**ಪೌರಾಣಿಕ ನಾಟಕಗಳು :** ಮಹಾಸತಿ ಅನಸೂಯ, ಭೂ ಕೈಲಾಸ, ಪಾಶುಪತಾಸ್ತ್ರ ಸಮರಕೇಸರಿ.

**ಐತಿಹಾಸಿಕ ನಾಟಕಗಳು :** ನರಗುಂದ ಬಂಡಾಯ, ವೀರಮಾತೆ ಬೆಳವಡಿ ಮಲ್ಲಮ್ಮ.

**ಸಾಮಾಜಿಕ ನಾಟಕಗಳು :** ಸೌಭಾಗ್ಯಲಕ್ಷ್ಮೀ, ಸ್ತ್ರೀ ರತ್ನ, ತವರು ಮನೆ, ಗಂಡನ ಮನೆ, ಸಂಸಾರ, ಕಟ್ಟಿದ ತಾಳಿ, ಸತಿ ಸರಸ್ವತಿ, ಮುಠ್ಠಾಳ ಮಾವ, ದೇಸಾಯರ ದರ್ಬಾರ, ಮಡದಿ ಕೊಟ್ಟ ಮಾತು, ಅಮೃತಾ.

**ರಾಜಕೀಯ ನಾಟಕಗಳು :** ಗಾಂಧಿ ಟೊಪ್ಪಿಗೆ, ಹಿಂದೂ-ಮುಸಲ್ಮಾನ ಭಾಯಿ ಭಾಯಿ, ಪುಣ್ಯಭೂಮಿ, ಗರೀಬಿ ಹಟಾವೋ, ಬೆಂಗಳೂರು ಮಹಾತ್ಮೆ.

## ಎಚ್.ಎನ್. ಹೂಗಾರ

ಗದುಗಿನ ಹುಚ್ಚಪ್ಪ ನಾಗಪ್ಪ ಹೂಗಾರ ೧೯೬೦ ರ ದಶಕದಲ್ಲಿ ವೃತ್ತಿ ನಾಟಕರಂಗದಲ್ಲಿ ಹೆಸರು ಮಾಡಿದ್ದ ರಂಗನಾಟಕಕಾರರು. ರಂಗಗೀತೆಗಳ ರಚನೆಯೂ ಸೇರಿದಂತೆ ಹೂಗಾರರು ಹಲವು ಮಂಡಳಿಗಳಿಗೆ ಪ್ರೇರಕರಾಗಿ,

ನಟನೆ-ನಿರ್ದೇಶನಗಳಲ್ಲೂ ಖ್ಯಾತಿ ಹೊಂದಿದರು. ಇವರ ಹಲವಾರು ನಾಟಕಗಳು ವೃತ್ತಿರಂಗಭೂಮಿಯಲ್ಲಿ ಗಲ್ಲಾಪೆಟ್ಟಿಗೆ ಯಶಸ್ಸು ಪಡೆದವು. **'ಬಸವೇಶ್ವರ ನಾಟ್ಯಸಂಘ'**ವನ್ನು ಕಟ್ಟಿ ಹಲವು ಊರುಗಳಲ್ಲಿ ಹಲವು ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿದರು. ಇವರ ರಂಗನಾಟಕ **'ತಾಳು ತಪ್ಪಿದ ಬಾಳು'** ಯಶಸ್ವಿಯಾಗಿ ಪ್ರದರ್ಶಿತಗೊಂಡು **'ಪಟ್ಟಣಕ್ಕೆ ಬಂದ ಪತ್ನಿಯರು'** ಎಂಬ ಚಲನಚಿತ್ರವಾಗಿಯೂ ಜನಪ್ರಿಯತೆ ಪಡೆಯಿತು. ಐವತ್ತಕ್ಕೂ ಅಧಿಕ ರಂಗನಾಟಕಗಳನ್ನು ರಚಿಸಿದ ಖ್ಯಾತಿ ಇವರದು. **'ದಸರಾ'**, **'ಸಹೋದರ'**, **'ನಾಟ್ಯರಾಣಿ'**, **'ಹಡದವ್ವ'**, **'ಪುತ್ಥಳಿ'**, **'ಸತಿಯೇ ಸೌಭಾಗ್ಯ'**, **'ಸುನಂದಾ'**, **'ಕುಲಪುತ್ರ'**, **'ಬೂದಿ ಮುಚ್ಚಿದ ಕೆಂಡ'**, **'ಕೊಂಡು ತಂದ ಗಂಡ'**, **'ತಂಗಿ ತಂದ ಅತ್ತಿಗೆ'**, **'ಕೊರವಂಜಿ'**, **'ವರಕನ್ಯೆಯಾರು'** ಇವರ ಜನಪ್ರಿಯ ನಾಟಕಗಳು.

## ಉಪಸಂಹಾರ

೧೮೮೦ ರಿಂದ ಸ್ವಾತಂತ್ರ್ಯಾನಂತರದ ಕೆಲವು ದಶಕಗಳ ವರೆಗಿನ ಉತ್ತರ ಕರ್ನಾಟಕದ ಹಾಗೂ ಗಡುಗಿನ ಪರಿಸರದ ವೃತ್ತಿರಂಗಭೂಮಿಯ ವಿದ್ಯಮಾನಗಳನ್ನು ಇದುವರೆಗೆ ವಿವರಿಸಿದ್ದಾಗಿದೆ. ಕರ್ನಾಟಕ ರಂಗಭೂಮಿ ಬೆಳೆದು, ಉಚ್ಛ್ರಾಯದ ಸ್ಥಿತಿಯನ್ನು ತಲುಪಿ ಅವನತಿಯ ಹಾದಿ ಹಿಡಿದದ್ದನ್ನು ಕಂಡಾಗಿದೆ. ಚಲನಚಿತ್ರಗಳ ಆಗಮನ, ಜನರ ಮನರಂಜನೆಯ ಪ್ರಮುಖ ಮಾಧ್ಯಮವಾಗಿ ವ್ಯಾಪಕವಾಗಿ ಪ್ರಸರಣಗೊಂಡದ್ದು ಹಾಗೂ ಸುಲಭವಾಗಿ ಕೈಗೆಟಕುವ ಸುಖಪ್ರದ ಮನರಂಜನೆ ನೀಡುವ ಅದರ ರೀತಿಗಳಿಂದಾಗಿ ರಂಗಭೂಮಿಯು ಜನರ ಆಶ್ರಯವನ್ನು ಕ್ರಮೇಣ ಕಳೆದುಕೊಂಡು ಬಡವಾಗುತ್ತಿದೆ. ಇದರೊಟ್ಟಿಗೆ ಹವ್ಯಾಸಿ ರಂಗಭೂಮಿಯ ಬೆಳವಣಿಗೆಯು ವೃತ್ತಿರಂಗಕ್ಕೆ ಸ್ಪರ್ಧೆಯನ್ನೊಡ್ಡಿದೆ. ಬೌದ್ಧಿಕ ನಾಟಕಗಳಲ್ಲಿಯ ಪ್ರಸ್ತುತಿ ತಂತ್ರಗಳಲ್ಲಿಯ ಹೊಸತನವು ವೃತ್ತಿರಂಗದ ನಾಟಕಗಳಲ್ಲಿನ ಕಳಪೆತನವನ್ನು ತೋರಿಸಿಕೊಟ್ಟಿವೆ. ವೃತ್ತಿರಂಗಭೂಮಿಯು ಪ್ರೇಕ್ಷಕರ ಅಭಿರುಚಿಗಳಲ್ಲಾದ ಬದಲಾವಣೆಗಳನ್ನು ಗಮನಿಸದೆ ಇದ್ದುದು ಅದರ ಹಿನ್ನಡೆಗೆ ಕಾರಣವಾಯಿತು. ವೃತ್ತಿರಂಗ ಮಂಡಳಿಗಳ ಬಹುತೇಕ ಮಾಲಿಕರು ಇದಾವುದಕ್ಕೂ ತಲೆಕೆಡಿಸಿಕೊಳ್ಳದೆ ನಾಟಕಗಳ ವ್ಯಾಪಾರೀಕರಣವನ್ನು ಮುಂದುವರೆಸಿದ್ದು, ಸಮರ್ಥ ಹಾಗೂ ಧೀಮಂತ ಕಲೋಪಾಸಕ ನಾಯಕರ ಕೊರತೆಯೂ ವೃತ್ತಿರಂಗದ ಇಂದಿನ ದುಸ್ಥಿತಿಗೆ ಕಾರಣವಾಯಿತು.

ಆಧುನಿಕ ನಾಟಕಕಾರರು ಹೊಸಗನ್ನಡದಲ್ಲಿ ಗದ್ಯನಾಟಕಗಳನ್ನು ಬರೆದು ನಾಟಕ ಪ್ರದರ್ಶನಕ್ಕೆ ತೊಡಗಿದ್ದು ಒಳ್ಳೆಯ ಬೆಳವಣಿಗೆಯಾಗಿದೆ. ಆದರೆ ಅವರು ವೃತ್ತಿರಂಗಭೂಮಿಯನ್ನು ಹೀಗಳೆದು, ವ್ಯಂಗ್ಯ-ಅಣಕ ಮಾಡತೊಡಗಿದ್ದು ವೃತ್ತಿರಂಗಭೂಮಿಯ ಶೋಚನೀಯ ಸ್ಥಿತಿಗೆ ಕಾರಣವಾದ ಪ್ರಮುಖ

ಅಂಶಗಳಲ್ಲೊಂದಾಗಿದೆ. ಪಾಶ್ಚಾತ್ಯ ಸಂಸ್ಕೃತಿಯ ವಿಚಾರಧಾರೆಗಳಿಂದ ಪ್ರಭಾವಿತರಾದ ಹೊಸ ಪೀಳಿಗೆಯ ಜನರು ನಮ್ಮ ಸಂಸ್ಕೃತಿಯ ಬಗೆಗೆ ತಿರಸ್ಕಾರ-ತಾತ್ಸಾರದ ಭಾವವನ್ನು ಬೆಳೆಸಿಕೊಂಡರು. ರಂಗನಾಟಕಗಳು, ರಂಗಭೂಮಿ ಕಲಾವಿದರ ಬಗೆಗೂ ಅಸಡ್ಡೆಯ ಭಾವನೆ ಮೂಡಿತು. ವೃತ್ತಿರಂಗಭೂಮಿಯ ಅಬ್ಬರದ ಸಂಗೀತ, ಕೃತಕ ಭಾಷೆ, ಒರಟಾದ ರಂಗತಂತ್ರಗಳನ್ನು ಜರೆದರು. ಕೈಲಾಸಂ ಬರೆದ 'ನಂಕಂಪ್ನಿ' ಮತ್ತು ಈ ಥರದ ಹೊಸ ನಾಟಕಗಳು ವೃತ್ತಿರಂಗ ಭೂಮಿಯನ್ನು ಗೇಲಿಮಾಡಿ ಅಣಕ-ವ್ಯಂಗ್ಯೋಕ್ತಿಗಳಲ್ಲಿ ಮನರಂಜನೆ ಮಾಡಿದರು. ಪಾಶ್ಚಾತ್ತೀಕರಣದ ಪ್ರಭಾವ ಜನಸಾಮಾನ್ಯರ ಮೇಲೂ ಆದದ್ದು ಹಾಗೂ ವೃತ್ತಿ ರಂಗಭೂಮಿ ಪ್ರೇಕ್ಷಕರನ್ನು ಸಾರಾಸಗಟವಾಗಿ ದಡ್ಡರೆಂದು ಹೇಳುವ ವಿದ್ಯಾವಂತರ ಅಸ್ವಸ್ಥ ಮನಸ್ಸಿನ ಯೋಚನೆಗಳು ಇಂತಹ ಅಭಿಪ್ರಾಯವನ್ನು ಸಾರ್ವತ್ರಿಕಗೊಳಿಸುತ್ತಿವೆ.

ಸಮಾಜದ ಏಳ್ಗೆಗೆ ಮತ್ತು ಮನರಂಜನೆಗೆ ವೃತ್ತಿರಂಗ ಅವಶ್ಯ. ಅದನ್ನು ಉಳಿಸಿ ಬೆಳೆಸುವುದು ಅಗತ್ಯ. ಹವ್ಯಾಸಿ ಮತ್ತು ವೃತ್ತಿರಂಗ ಭೂಮಿಗಳು ಪರಸ್ಪರ '**ಕೊಟ್ಟು ತೆಗೆದುಕೊಂಡು**' ಬೆಳೆಯಬೇಕು. ಉಚ್ಛ್ರಾಯ ಸ್ಥಿತಿಯನ್ನು ತಲುಪಿ ಕೆಳಗುರುಳಿದ ವೃತ್ತಿರಂಗಭೂಮಿ ಕಾಲನಗರ್ಭದಲ್ಲಿ ಸ್ಮರಣೀಯ ಅಧ್ಯಾಯ ಮಾತ್ರವಾಗಿ ಉಳಿಯದೆ, ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿಯೆ ಉಳಿಯಬೇಕು.

"ನಮ್ಮ ರಂಗಭೂಮಿ ಜೀವಂತವಾಗಿ ಉಳಿಯಬೇಕಾದರೆ, ಅದು ಜನತೆಯನ್ನು ತಲುಪಬೇಕು. ಅದಕ್ಕಾಗಿ ಮನರಂಜನೆಯ ಅಂಶಗಳನ್ನು ಒಳಗೊಂಡ, ಎಲ್ಲರನ್ನೂ ಮುಟ್ಟಬಲ್ಲ ಕಥಾವಸ್ತುವನ್ನು ಬಳಸಿ, ಪಾಶ್ಯಾತ್ಯರಿಂದ ನಾವು ಪಡೆದಿರುವ ರಂಗತಂತ್ರಗಳನ್ನು ಅಳವಡಿಸಿದ ಪ್ರಯೋಗಗಳು ವ್ಯಾಪಕವಾಗಿ ನಡೆಯಬೇಕು. ಅದಕ್ಕೆ ವೃತ್ತಿರಂಗಭೂಮಿಯ ಪುನರುಜ್ಜೀವನವಾಗಬೇಕು. ಹವ್ಯಾಸೀ ರಂಗಭೂಮಿ ಈ ರಂಗಕ್ರಿಯೆಗೆ ಪ್ರಯೋಗಾಲಯವಾಗಬೇಕು. ಇವೆರಡರ ಸಹಕಾರದಿಂದ ಮಾತ್ರ ಕನ್ನಡರಂಗಭೂಮಿಯು ಉಳಿಯಬಲ್ಲುದೆಂದು ನನ್ನ ದೃಢವಾದ ನಂಬಿಕೆ." *

ಕನ್ನಡ ರಂಗಭೂಮಿಯ ಪರಂಪರೆಯನ್ನು ನಿರಂತರವಾಗಿರಿಸಲು ವೃತ್ತಿರಂಗಭೂಮಿ ಮಾತ್ರವೇ ಸಾಧನವಾಗಬಲ್ಲುದು. ಅದು ಮೊದಲಿನಂತೆಯೆ ಕ್ರಿಯಾಶೀಲವಾಗಬೇಕು. ಅದರ ಪುನರುಜ್ಜೀವನದ ಕಾರ್ಯವು ಕಲಾವಿದರಿಂದಲೂ ಆಗಬೇಕು, ಪ್ರೇಕ್ಷಕರಿಂದಲೂ ಆಗಬೇಕು ಹಾಗೂ ಸರಕಾರ ಈ ಪ್ರಕ್ರಿಯೆಗೆ ಚೇತೋಹಾರಿಯಾಗಬಲ್ಲ ಇನ್ನಷ್ಟೂ ಕ್ರಮಗಳನ್ನು ಜಾರಿಗೊಳಿಸಬೇಕು.

---

* ಆರ್. ಗುರುರಾಜರಾವ್ (ಕನ್ನಡ ರಂಗಭೂಮಿಯ ಮೇಲೆ ಪಾಶ್ಚಾತ್ಯ ಪ್ರಭಾವ) ಕರ್ನಾಟಕ ರಂಗಭೂಮಿ-ನೆನ್ನೆ, ಇಂದು, ನಾಳೆ, ಸಂಪಾದಕರು ಡಾ. ಸಿಂಧುವಳ್ಳಿ ಅನಂತಮೂರ್ತಿ, ಎಚ್.ಕೆ. ರಾಮನಾಥ ಪುಟ ೧೧೩.

# ೩. ಗದಗ ಜಿಲ್ಲೆ ಹವ್ಯಾಸಿ ರಂಗಭೂಮಿ

**ಹಿನ್ನೆಲೆ :**

ಕನ್ನಡ ವೃತ್ತಿನಾಟಕ ರಂಗಕ್ಕೆ ಪರ್ಯಾಯವಾಗಿ ಹವ್ಯಾಸಿ ರಂಗಭೂಮಿ ಹುಟ್ಟಿಕೊಂಡಿದ್ದು ೧೯೩೦ ರ ದಶಕದಲ್ಲಿ. ವೃತ್ತಿ ರಂಗಭೂಮಿಯಲ್ಲಿ ಕಾಣಿಸಿಕೊಂಡ ನಾಟಕಾಂಗಗಳಲ್ಲಿಯ ಅತಿರೇಕಗಳು, ಕಲಾತ್ಮಕತೆಯನ್ನು ವ್ಯಾಪಾರೀಕರಿಸಿದ ಪ್ರವೃತ್ತಿ ವೈವಿಧ್ಯತೆಯ ಅಭಾವ, ಅಂಧಾನುಕರಣೆ ಮೊದಲಾದವುಗಳನ್ನು ಪ್ರತಿಭಟಿಸಿದ ಪ್ರತಿಕ್ರಿಯೆಯಾಗಿ ಹಾಗೂ ಪಾಶ್ಚಾತ್ಯ ನಾಟಕಗಳ ಪ್ರಭಾವ, ನಾಟಕವನ್ನು ಆಧುನೀಕರಿಸುವ ಪ್ರಯೋಗಶೀಲತೆಯ ಪ್ರವೃತ್ತಿ, ಬೌದ್ಧಿಕತೆಗೆ ಆದ್ಯತೆ ನೀಡುವ ಆಧುನಿಕ ಚಿಂತನೆ ಹವ್ಯಾಸಿ ರಂಗಭೂಮಿಯ ಉದಯಕ್ಕೆ ಕಾರಣವಾದ ಅಂಶಗಳು.

ಜನಪದ ರಂಗ, ವೃತ್ತಿರಂಗಗಳೊಟ್ಟಿಗೆ ಹೊಸದಾಗಿ ತಲೆಎತ್ತಿದ ವಿಭಿನ್ನ ಸ್ವರೂಪದ ಹವ್ಯಾಸಿ ರಂಗಭೂಮಿಯು ತನ್ನ ಹೊಸಬಗೆಯ ಶೈಲಿ-ತಂತ್ರದ ನಾಟಕ ಪ್ರಸ್ತುತಿಯಿಂದ 'ಸುಶಿಕ್ಷಿತರ ರಂಗಭೂಮಿ'ಯಾಗಿ ಬೆಳೆಯಲಾರಂಭಿಸಿತು. ಟಿ.ಪಿ. ಕೈಲಾಸಂರವರ 'ನಂಕಂಪ್ನಿ', ಶ್ರೀರಂಗರ 'ಸಂಪೂರ್ಣ ರಾಮಾಯಣ', ಶಿವರಾಮ ಕಾರಂತರ 'ನಾಟಕವೆಂಬ ನಾಟಕ', ವೃತ್ತಿರಂಗದ ನಾಟಕಗಳ ವೈಪರಿತ್ಯಗಳನ್ನು, ದೋಷಗಳನ್ನು ವಿಡಂಬನೆ ಮಾಡಿದವು. ರಂಗಭೂಮಿ ಕಲಾಭಿವೃದ್ಧಿಯ ಸಾಧನವಾಗಬೇಕು; ಕಲೆಯು ವ್ಯಾಪಾರೀಕರಣದ ಸರಕಾಗಬಾರದು ಎಂಬ ಧ್ಯೇಯ-ಸಿದ್ಧಾಂತದಿಂದ ಹವ್ಯಾಸಿ ರಂಗಭೂಮಿಯು ವೃತ್ತಿನಾಟಕ ರಂಗಭೂಮಿಯೊಂದಿಗೆ ಏರಾಟಕ್ಕಿಳಿಯಿತು. ಧರ್ಮಾಂಧತೆ, ಸಾಂಪ್ರದಾಯಿಕ ಮೌಢ್ಯಗಳನ್ನು ಕಳಚಿಹಾಕಿ ಹೊಸ ಸಮಾಜವನ್ನು ಕಟ್ಟಲು ಜನಜಾಗೃತಿ ಮಾಡುವುದು, ಸಮಾಜದ ಎಲ್ಲ ಆಗುಹೋಗುಗಳ ಬಗೆಗೆ ಸ್ವಸ್ಥ ಪ್ರಜಾಭಿಪ್ರಾಯ ಮೂಡಲು ಪೋಷಕವಾಗುವಂತೆ ಜನರಲ್ಲಿ ಚಿಕಿತ್ಸಕ ಬುದ್ಧಿಯನ್ನು ತೀಕ್ಷ್ಣಗೊಳಿಸುವುದು ಮೊದಲಾದ ವಿಚಾರಧಾರೆಗಳಿಂದ ಪ್ರೇರಿತವಾಗಿದ್ದ ಹವ್ಯಾಸಿ ರಂಗಭೂಮಿ ಹೊಸತನಕ್ಕೆ, ಬೌದ್ಧಿಕ ಪ್ರಸ್ತಾವಕ್ಕೆ ಆಗ್ರಹಿಸಿತು.

ಹವ್ಯಾಸಿ ರಂಗಭೂಮಿಯ ನಾಟಕ ವೈಚಾರಿಕ ಅಥವಾ ಬುದ್ಧಿಯ ನಾಟಕ. ಸಂಪ್ರದಾಯಗಳ ವಿರುದ್ಧ ಸಿಡಿದೆದ್ದ ನಾಟಕಕಾರರು, ರಂಗ ಸಂಪ್ರದಾಯಗಳಲ್ಲಿಯೂ ಕ್ರಾಂತಿಕಾರಿ ಬದಲಾವಣೆಗಳನ್ನು ಮಾಡಿದರು. ನಾಟಕ ಪ್ರದರ್ಶನದ ಅವಧಿ ಎರಡರಿಂದ ಮೂರು ಗಂಟೆಯಷ್ಟೇ ಇರುವಂತಹ ಕಿರು ನಾಟಕಗಳ ರಚನೆಯಾಗತೊಡಗಿತು. ಸಾಮಾಜಿಕ ಸಮಸ್ಯೆಯನ್ನು ಕೇಂದ್ರೀಕರಿಸಿದ

ಕಥಾವಸ್ತುವಿನೊಂದಿಗೆ ಪ್ರೇಕ್ಷಕರ ಬುದ್ಧಿಯನ್ನು ಕೆಣಕುವ, ಬುದ್ಧಿಯನ್ನು ತಿದ್ದುವ ವಿಚಾರ ಪ್ರಚೋದಕ ನಾಟಕಗಳು ರಚನೆಗೊಂಡವು. ಕಲಾಸಕ್ತ ಹವ್ಯಾಸಿಗಳು ತಮ್ಮ ಬಿಡುವಿನ ವೇಳೆಯಲ್ಲಿ ಒಟ್ಟಾಗಿ ಸೇರಿ ನಾಟಕದ ತಾಲೀಮು ಮಾಡಿ, ನಾಟಕಗಳನ್ನು ಪ್ರದರ್ಶಿಸಿದರು.

## ಹವ್ಯಾಸಿ ರಂಗಭೂಮಿಯ ಹುಟ್ಟು-ಬೆಳವಣಿಗೆ

೧೮೭೭ ರಲ್ಲಿಯೆ ಪ್ರಕಟಗೊಂಡ ಉತ್ತರ ಕನ್ನಡ ಜಿಲ್ಲೆಯ ಕರ್ಕಿಯ ಸೂರಿ ವೆಂಕಟರಮಣ ಶಾಸ್ತ್ರಿಗಳು ಬರೆದ 'ಇಗ್ಗಪ್ಪ ಹೆಗ್ಡೆಯ ವಿವಾಹ ಪ್ರಹಸನ' ನಾಟಕವು ರಂಗಹವ್ಯಾಸಿಗಳಿಗಾಗಿ ಬರೆದ ಮೊದಲ ನಾಟಕವೆಂಬುದು ಸಂಶೋಧಕರ ಅಭಿಮತ. ಕನ್ಯಾದಾನ ಕುರಿತ ಪದ್ಧತಿಯ ದೋಷಗಳನ್ನು ಎತ್ತಿ ತೋರಿಸುವ ಈ ನಾಟಕವು ಪ್ರಯೋಗ ತಂತ್ರ, ಮನೆಮಾತಿನ ಸಂಭಾಷಣಾ ಶೈಲಿಯಿಂದಾಗಿ ಹೊಸತೆನಿಸಿತ್ತು. ಅಲ್ಲಿಂದ ಆರಂಭವಾದ ಹವ್ಯಾಸಿ ರಂಗಭೂಮಿಯ ಅಭಿಯಾನ ೧೯೪೦ ರ ವರೆಗೆ ನಿಧಾನವಾಗಿ ಸಾಂಗವಾಯಿತು. ೧೯೪೦ ರ ಸುಮಾರಿಗೆ ಕನ್ನಡ ಏಕಾಂಕ ನಾಟಕಗಳ ಸಂಖ್ಯೆ ಮುನ್ನೂರಕ್ಕೂ ಅಧಿಕವಾಗಿತ್ತು.

ಬೆಂಗಳೂರಿನ ಅಮೆಚ್ಯೂರ್ ಡ್ರಮ್ಯಾಟಿಕ್ ಅಸೋಸಿಯೇಷನ್, ಮೈಸೂರಿನ ಎಲ್.ಡಿ.ಎ. ಕಲಾವಿದರ ತಂಡ, ಧಾರವಾಡದ 'ಕಲಾಮಂಡಳಿ'ಗಳು ವೃತ್ತಿ ನಾಟಕ ಮಂಡಳಿಗಳ ಥರವೇ ರಾಜ್ಯಾದ್ಯಂತ ಹಾಗೂ ಹೊರರಾಜ್ಯಗಳಲ್ಲಿ ಸಂಚರಿಸಿ ಪ್ರದರ್ಶನ ನೀಡಲಾರಂಭಿಸಿದವು. ಈ ಹೊಸ ಬೆಳವಣಿಗೆಯ ಪರಿಣಾಮವಾಗಿ ರಾಜ್ಯದಲ್ಲಿ ಹಲವಾರು ಹವ್ಯಾಸಿ ತಂಡಗಳು ಹುಟ್ಟಿಕೊಂಡವು. ರಂಗನಾಟಕವು ಸಭೆ-ಸಮಾರಂಭ-ಸಮ್ಮೇಳನಗಳ ಒಂದು ಅಂಗವಾಗಿ ಬೆಳೆಯಲಾರಂಭಿಸಿತು.

ಧಾರವಾಡದ 'ಪ್ರಾಚ್ಯ ಕ್ರೀಡಾ ಸಂವರ್ಧನ ಮಂಡಳಿ' ೧೮೯೯ ರಿಂದ ಪ್ರತಿವರ್ಷ ಗಜಾನನೋತ್ಸವದಲ್ಲಿ ಒಂದು ಪೌರಾಣಿಕ ನಾಟಕವನ್ನಾಡುತ್ತಿತ್ತು. ೧೯೦೪ ರಲ್ಲಿ ಈ ಮಂಡಳಿಯ ಅಡಿಯಲ್ಲಿ 'ಭಾರತ ಕಲೋತ್ತೇಜಕ ಸಂಗೀತ ಸಂಸ್ಥೆ' ಎಂಬ ಹವ್ಯಾಸಿ ಮಂಡಳಿ ಹುಟ್ಟಿಕೊಂಡು 'ಕನ್ನಡ ಶಾಕುಂತಲ' ನಾಟಕವನ್ನು ಪ್ರದರ್ಶಿಸಿತು. ಬಾದಾಮಿಯ 'ಅಮೆಚ್ಯೂರ್ ತಂಡ'ವು ಚುರಮುರಿಯವರ 'ಶಾಕುಂತಲ' ನಾಟಕವನ್ನು ಬಾಗಿಲುಕೋಟೆ, ಬಿಜಾಪುರಗಳಲ್ಲಿ ಪ್ರದರ್ಶಿಸಿತು. ಬಾಗಿಲುಕೋಟೆಯ 'ದಿ ವಾಸುದೇವ ಅಮೆಚ್ಯೂರ್ಸ್', 'ಕನ್ನಡ ನಾಟ್ಯ ವಿಲಾಸಿಗಳ ಸಂಘ', 'ಕರ್ನಾಟಕ ಮಂಡಳಿ' ಹಾಗೂ ಗದುಗಿನ 'ಯಂಗಮೆನ್ಸ್ ಫುಟ್‌ಬಾಲ್ ಕ್ಲಬ್ ಅಮೆಚ್ಯೂರ್ಸ್' ಬಹುಸಮಯದವರೆಗೆ ಕ್ರಿಯಾಶೀಲವಾಗಿದ್ದುಕೊಂಡು ರಂಗಭೂಮಿಯ ಬೆಳವಣಿಗೆಗೆ ಶ್ರಮಿಸಿದವು.

ಧಾರವಾಡ, ಗದಗ, ಬಾಗಿಲುಕೋಟೆ, ಬಿಜಾಪುರಗಳ ಹವ್ಯಾಸಿ ಮಂಡಳಿಗಳು ಹೊಸ ನಾಟಕಗಳನ್ನು ರಂಗದ ಮೇಲೆ ತಂದವು. ಜನರಿಂದ ಒಳ್ಳೆಯ ಪ್ರತಿಕ್ರಿಯೆಯೂ ಲಭಿಸಿತು. ಬೆಂಗಳೂರಿನ 'ಅಮೆಚೂರ್ ಡ್ರಮ್ಯಾಟಿಕ್ ಅಸೋಸಿಯೇಷನ್' ಷೇಕ್ಸ್‌ಪಿಯರ್‌ನ 'ಒಥೆಲೊ' ನಾಟಕ ಸೇರಿದಂತೆ ಮಾಸ್ತಿ ವೆಂಕಟೇಶ ಅಯ್ಯಂಗಾರ, ಸಿ.ಕೆ. ವೆಂಕಟರಾಮಯ್ಯ, ಪಂಡಿತ ತಾರಾನಾಥ, ಬೆಳ್ಳಾವೆ ನರಹರಿಶಾಸ್ತ್ರಿ, ಅ.ನ. ಕೃಷ್ಣರಾವ್, ಟಿ.ಪಿ. ಕೈಲಾಸಂರಿಂದ ರಂಗನಾಟಕಗಳನ್ನು ಬರೆಯಿಸಿ ಅಭಿನಯಿಸಿತು. ೧೯೧೯ ರಲ್ಲಿ ಜನ್ಮತಳೆದ ಮೈಸೂರಿನ ಲಿಟರರಿ ಡ್ರಾಮ್ಯಾಟಿಕ್ ಅಸೋಸಿಯೇಷನ್, ೧೯೪೧ ರಲ್ಲಿ ನಾಟಕಕಾರ ನಂಜನಗೂಡು ಶ್ರೀಕಂಠಶಾಸ್ತ್ರಿಗಳ ನೇತೃತ್ವದ 'ಮೈಸೂರು ನಾಟಕ ತಂಡ', 'ಮಹಾರಾಜಾ ಕಾಲೇಜಿನ ಅಧ್ಯಾಪಕ ಕಲಾವಿದರ ತಂಡ', ಮೈಸೂರಿನ 'ಸ್ಕ್ಯಾಮ್ಸ್ ಲಿಟಲ್ ಥಿಯೇಟರ್' ಮಂಡಳಿ, ೧೯೬೭ ರಲ್ಲಿ ಅಸ್ತಿತ್ವ ತಳೆದ 'ಸಮತೆಂತೊ' ಹವ್ಯಾಸಿಗಳು (ಸಿಂಧುವಳ್ಳಿ ಅನಂತಮೂರ್ತಿ, ಡಾ.ಎಸ್. ರತ್ನ ನೇತೃತ್ವದ), ಬೆಂಗಳೂರಿನ 'ಛಾಯಾ ಕಲಾವಿದರು', 'ವರದಾಚಾರ ಸ್ಮಾರಕ ಸಂಘ', ಬೆಂಗಳೂರಿನ 'ಯುನೈಟೆಡ್ ಆರ್ಟಿಸ್ಟ್ಸ್' ಮಂಡ್ಯದ 'ಪುಗರ ಟೌನ್ ವಿಲಾಸಿ ಸಂಸ್ಥೆ', ಬಳ್ಳಾರಿ ಜಿಲ್ಲೆಯ 'ಆರ್ಟ್ ಲವರ್ಸ್ ಅಸೋಸಿಯೇಷನ್', 'ಜೋಳದರಾಶಿ ಮಿತ್ರಮಂಡಳಿ', 'ಹರಪನಹಳ್ಳಿಯ ಹವ್ಯಾಸಿ ಸಂಘಗಳು', ಸಾಗರದ 'ಉದಯ ಕಲಾಸಂಘ', ಧಾರವಾಡದ 'ಅಂತರಂಗ' ವಿಲಾಸಿ ಸಂಘ (ಗಿರಡ್ಡಿ ಗೋವಿಂದರಾಜ, ಸಿದ್ಧಲಿಂಗ ಪಟ್ಟಣಶೆಟ್ಟಿ, ಚಂದ್ರಶೇಖರ ಪಾಟೀಲ ನೇತೃತ್ವದ) ಮೊದಲಾದವುಗಳು ಹವ್ಯಾಸಿ ರಂಗಭೂಮಿಗೆ ಕಳೆಕಟ್ಟಿಸಿದ ಪ್ರಮುಖ ಸಂಘಟನೆಗಳಾದವು.

ಶ್ರೀರಂಗ, ಮಾಸ್ತಿ ವೆಂಕಟೇಶ ಅಯ್ಯಂಗಾರ, ಶಿವರಾಮ ಕಾರಂತ, ಬಿ.ಎಂ.ಶ್ರೀ, ಕೈಲಾಸಂ, ಪು.ತಿ.ನರಸಿಂಹಾಚಾರ್ಯ, ಎಂ.ಆರ್. ಶ್ರೀನಿವಾಸ, ವೆಂಬಾರ ವೆಂಕಟಾಚಾರ್, ದ.ರಾ. ಬೇಂದ್ರೆ, ರಂ.ಶ್ರೀ. ಮುಗಳಿ, ಕುವೆಂಪು, ಡಿ.ವಿ.ಜಿ., ಕಸ್ತೂರಿ, ಅ.ನ.ಕೃ., ವೀ. ಸೀತಾರಾಮಯ್ಯ, ಹುಯಿಲಗೋಳ ನಾರಾಯಣರಾಯರು, ಕೆರೂರು ವಾಸುದೇವಾಚಾರ್ಯ, ಕೃಷ್ಣಮೂರ್ತಿ ಪುರಾಣಿಕ, ಅಜ್ಜಂಪುರ ಶೇಷಗಿರಿರಾಯರು, ಸಂಸ, ಎ.ಎಸ್. ಮೂರ್ತಿರಾವ್, ಜಿ.ಬಿ. ಜೋಷಿ, ಪರ್ವತವಾಣಿ, ಸಮೇತನಹಳ್ಳಿ ರಾಮರಾಯರು, ಶ್ರೀನಿವಾಸ ಸಿ.ಕೆ.ವಿ., ಲಂಕೇಶ, ಗಿರೀಶ ಕಾರ್ನಾಡ, ಚಂದ್ರಶೇಖರ ಕಂಬಾರ, ಚಂದ್ರಶೇಖರ ಪಾಟೀಲ, ಬೀಚಿ, ವಸಂತ ಕವಲಿ ಹಾಗೂ ಏಕಾಂಕ ನಾಟಕಗಳ ನಾಟಕಕಾರರಾದ ಎಂ.ಎಸ್. ಕಾಮತ್, ಚಿ. ಸದಾಶಿವಯ್ಯ, ಕ್ಷೀರಸಾಗರ, ದಾಶರಥಿ ದೀಕ್ಷಿತ್, ಎಸ್.ಕೆ. ಕುಲಕರ್ಣಿ, ನರೇಂದ್ರಬಾಬು, ನಾ. ಕಸ್ತೂರಿ, ಎಂ.ವಿ. ಸೀತಾರಾಮಯ್ಯ,

ಟೇಂಗ್ಸೆ ಗೋವಿಂದರಾವ್, ಎಸ್.ಎಮ್. ಕುಲಕರ್ಣಿ, ಎಚ್.ಕೆ. ರಂಗನಾಥ, ಕೆ.ಗುಂಡಣ್ಣ, ಎ.ಎಸ್.ಮೂರ್ತಿ ಮೊದಲಾದವರು ವೈವಿಧ್ಯಮಯ ಕಥಾವಸ್ತುವಿನ ಹೊಸ ಶೈಲಿಯ ನಾಟಕಗಳನ್ನು ರಚಿಸಿ ಹವ್ಯಾಸಿ ರಂಗಭೂಮಿಯ ಬೆಳವಣಿಗೆಗೆ ಹೊಸ ದಿಕ್ಕು, ಆಯಾಮಗಳನ್ನು ತೋರಿಸಿಕೊಟ್ಟರು.

ನಾಟಕಗಳ ಪ್ರಕಾರಗಳಲ್ಲಿಯೂ ವೈವಿಧ್ಯತೆ ಮೂಡಿ ಬಂದಿತು. ಗೀತನಾಟಕ, ನೃತ್ಯನಾಟಕ, ಆಶು ನಾಟಕ, ನಾಟ್ಯಛಟ, ನೆರಳು-ನಾಟಕ, ಶ್ರವ್ಯನಾಟಕ (ಪ್ರಸಾರ ನಾಟಕ), ಮಕ್ಕಳ ನಾಟಕ ಮೊದಲಾದವುಗಳು ಹವ್ಯಾಸಿ ರಂಗಭೂಮಿಯ ಮಹತ್ತರ ಕೊಡುಗೆಗಳು.

ನಾಟಕ ನಿರ್ದೇಶಕರ ವಿಶಿಷ್ಟ ಪ್ರತಿಭೆ-ಕೌಶಲಗಳಿಂದ ನಾಟಕ ಪ್ರಸ್ತುತಿ ಹೆಚ್ಚು ಪರಿಣಾಮಕಾರಿಯಾಗಬಲ್ಲುದು ಎಂದು ನಿದರ್ಶಿಸಿದ ನಿರ್ದೇಶಕ ಬಿ.ವಿ. ಕಾರಂತ, ಬಿ.ಚಂದ್ರಶೇಖರ, ಎಂ.ಎಸ್. ಸತ್ಯು ಮೊದಲಾದವರು ಹವ್ಯಾಸಿ ರಂಗಭೂಮಿಗೆ ವಿಶೇಷ ಕಳೆಕಟ್ಟಿದ್ದಾರೆ. ಕಥಾವಸ್ತುವಿನ ಮಾತುಗಳಿಗೆ ಮಾತ್ರವಲ್ಲದೆ, ಪ್ರಸ್ತುತಿಯ ವಿಧಾನಕ್ಕೂ ಪ್ರಯೋಗಶೀಲತೆಯನ್ನು ಅನ್ವಯಿಸಿದ್ದು, ನಾಟಕ ವೀಕ್ಷಿಸುವ ಪ್ರೇಕ್ಷಕರಿಗೆ ಹೊಸತೊಂದು ಅನುಭವ ನೀಡಿದೆ.

ಒಟ್ಟಾರೆ, ರಂಗಭೂಮಿಯಲ್ಲಿ ಹೊಸತನ್ನು ತಂದು ಹೊಸ ಚೈತನ್ಯವನ್ನು ನೀಡಿ, ಸಮಾಜವನ್ನು ತಿದ್ದುವ ಹಾಗೂ ಮಾನಸಿಕವಾಗಿ, ಬೌದ್ಧಿಕವಾಗಿ ಜನರನ್ನು ಜಾಗೃತಗೊಳಿಸುವ, ಅಂಧಾನುಕರಣೆ-ಮೌಢ್ಯಗಳನ್ನು ಹೊಡೆದೋಡಿಸುವ ಹಾಗೂ ಮಕ್ಕಳಾದಿಯಾಗಿ ಪ್ರಬುದ್ಧರವರೆಗೂ ಬೌದ್ಧಿಕ ಸ್ತರದ ಮನರಂಜನೆಯನ್ನು ನೀಡುವಲ್ಲಿ ಹವ್ಯಾಸಿ ರಂಗಭೂಮಿ ಯಶಸ್ಸನ್ನು ನಿಶ್ಚಿತವಾಗಿ ಸಾಧಿಸಿದೆ. ಹವ್ಯಾಸಿ ರಂಗಭೂಮಿಯಲ್ಲಿ ಮೊದಲಿದ್ದ ಉತ್ಸಾಹ ಈಗಿಲ್ಲದೆ ನಿಷ್ಕ್ರಿಯತೆಯತ್ತ ವಾಲುತ್ತಿದೆ ಎಂಬುದೂ ಎಲ್ಲರ ಗಮನಕ್ಕೆ ವೇದ್ಯವಾದ ಸಂಗತಿ.

ಜನಪದ ಕಲೆಗಳನ್ನು, ವೃತ್ತಿರಂಗಭೂಮಿಯನ್ನು ಹಾಗೂ ಹವ್ಯಾಸಿ ರಂಗಭೂಮಿಯನ್ನು ಉಳಿಸಿ-ಬೆಳೆಸುವ ಕಾರ್ಯ ಇನ್ನಷ್ಟು ಅರ್ಥಪೂರ್ಣವಾಗಿ ಸಾಂಗವಾಗಬೇಕು. ಕಲಾವಿದರನ್ನು ಆರ್ಥಿಕವಾಗಿ ಸಬಲಗೊಳಿಸಬೇಕು. ಆಂದಾಗಲೇ ರಂಗಭೂಮಿ ಸಿರಿವಂತವಾಗಿ ಸಮೃದ್ಧವಾದೀತು.

# ಗದಗ ಜಿಲ್ಲೆ ಹವ್ಯಾಸಿ ರಂಗಚಟುವಟಿಕೆಗಳು

## ಕಲಾಕೂಟಗಳು ಹಾಗೂ ಕಲಾವಿದರು :

ಗದುಗಿನ ಹುಯಿಲಗೋಳ ನಾರಾಯಣರಾಯರು ೧೯೧೫ ರಲ್ಲಿ 'ವಜ್ರಮುಕುಟ' ಎಂಬ ಸಾಮಾಜಿಕ ನಾಟಕ ಬರೆದರು. ಇವರ ಸೋದರ ಶ್ರೀನಿವಾಸರಾವ ಹುಯಿಲಗೋಳರು ಹುಟ್ಟುಹಾಕಿದ್ದ 'ಯಂಗ್‌ಮೆನ್ಸ್ ಫುಟ್‌ಬಾಲ್ ಅಸೋಸಿಯೇಷನ್'ದ ವಾರ್ಷಿಕೋತ್ಸವದಲ್ಲಿ 'ವಜ್ರಮುಕುಟ' ನಾಟಕವನ್ನು ಆಡಲಾಯಿತು. ಪ್ರೇಕ್ಷಕರಿಂದ ದೊರೆತ ಪ್ರತಿಕ್ರಿಯೆ ಪ್ರಶಂಸನಾರ್ಹವಾಗಿದ್ದರಿಂದ ಈ ಆಟಗಾರರ ತಂಡವು, ಆಟದ ಜೊತೆಗೆ ಹವ್ಯಾಸಿ ಕಲಾವಿದರ ತಂಡವಾಗಿ **'ಯಂಗ್‌ಮೆನ್ಸ್ ಅಮೆಚೂರ್ ನಾಟ್ಯಸಂಘ'** ರೂಪುಗೊಂಡು ರಂಗ ಚಟುವಟಿಕೆಗಳನ್ನು ಆರಂಭಿಸಿತು. ಶ್ರೀನಿವಾಸ ಹುಯಿಲಗೋಳ, ಯಲ್ಲಪ್ಪ ಕಂಬಾರ, ಚೆನ್ನಪ್ಪ ಹುರಕಡ್ಲಿ, ಅಲ್ಲಮಪ್ರಭು ಬುಳ್ಳಾ, ಈರಯ್ಯ ಶಿರಹಟ್ಟಿಮಠ, ಶಿವಪ್ಪಾ ಮದ್ದಿ, ಕೃಷ್ಣಾಚಾರ ಪೂಜಾರ ಮೊದಲಾದವರು ಪ್ರಮುಖ ಕಲಾವಿದರಾಗಿದ್ದರು.

'ವಜ್ರಮುಕುಟ' ನಾಟಕ ಪ್ರಯೋಗಗಳ ಯಶಸ್ಸು ನಾರಾಯಣರಾಯರಿಗೆ ಹೊಸ ಸ್ಫೂರ್ತಿ ನೀಡಿದವು. ಶಾಂತಕವಿಗಳು ನಾರಾಯಣರಾಯರಿಗೆ ನೆರವಾದರು. ಅವರ ನಾಟಕಗಳ ನಿರ್ದೇಶನದ ಹೊಣೆ ಹೊತ್ತುಕೊಂಡರು. **'ಪ್ರೇಮಾರ್ಜುನ', 'ಕನಕವಿಲಾಸ', 'ಸ್ತ್ರೀಧರ್ಮ ರಹಸ್ಯ', 'ಶಿಕ್ಷಣ ಸಂಭ್ರಮ', 'ಪತಿತೋದ್ಧಾರ', 'ಪುನರ್ಮಿಲನ' (ಸಾಮಾಜಿಕ ನಾಟಕಗಳು), 'ಮೋಹಲಹರಿ', 'ಅಜ್ಞಾತವಾಸ', 'ಪ್ರೇಮವಿಜಯ', 'ಕುಮಾರ ರಾಮ', 'ವಿದ್ಯಾರಣ್ಯ' (ಐತಿಹಾಸಿಕ ನಾಟಕಗಳು), 'ಇಂದ್ರಜಿತು ವಧೆ', 'ಗರುಡ ಗರ್ವಭಂಗ', 'ಭಾರತ ಸಂಧಾನ', 'ಉತ್ತರ ಗೋಗ್ರಹಣ' (ಪೌರಾಣಿಕ ನಾಟಕಗಳು)** ನಾರಾಯಣರಾಯರು ರಚಿಸಿದ ನಾಟಕಗಳು.

ಉತ್ತರ ಕರ್ನಾಟಕದಲ್ಲಿ ಕನ್ನಡ ಸಾಹಿತ್ಯದ ನವೋದಯ ಕಾಲದ ಆರಂಭದಲ್ಲಿ ಸಾಮಾಜಿಕ ನಾಟಕಗಳನ್ನು ರಂಗಪ್ರದರ್ಶನಕ್ಕೆ ತಂದ ಶ್ರೇಯಸ್ಸು ಗದುಗಿನದು ; ಕನ್ನಡ ನುಡಿಯ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ವಿಶಿಷ್ಟ ಸಾಧನೆ ಮಾಡಿದ ವಿದ್ಯಮಾನವಿದಾಗಿತ್ತು.

ನಾರಾಯಣರಾಯರ ನಾಟಕಗಳು ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಬಳ್ಳಾರಿ, ಬಾಗಿಲುಕೋಟೆ, ಹೊಸಪೇಟೆಗಳಲ್ಲಿ ಪ್ರದರ್ಶನಗೊಂಡು ಪ್ರೇಕ್ಷಕರ ಮೆಚ್ಚುಗೆ ಸಂಪಾದಿಸಿದವು. ತಮ್ಮ ಭವ್ಯ ಸಾಂಸ್ಕೃತಿಕ ಪರಂಪರೆ -ಬಳುವಳಿಗಳನ್ನು ಮರೆತು ಮಂಕಾಗಿ ಕುಳಿತಿದ್ದ ಕನ್ನಡಿಗರನ್ನು 'ವಿದ್ಯಾರಣ್ಯ' ನಾಟಕ ಎಚ್ಚರಿಸಿತು.

ಸಮಕಾಲೀನ ಸಮಸ್ಯೆಗಳಿಗೆ ತಮ್ಮ ಕಥಾವಸ್ತುವನ್ನು ಹೊಂದಿಸಿಕೊಂಡು ಬರೆದ ಅವರ ನಾಟಕಗಳು ಕನ್ನಡ ಅಭಿವೃದ್ಧಿಗೋಸ್ಕರ ನಡೆದ ಸರಣಿಯೋಪಾದಿಯಲ್ಲಿನ ಚಟುವಟಿಕೆಗಳಲ್ಲಿ ಗಟ್ಟಿಯಾದ ಕೊಂಡಿಯಂತೆ ಕಾರ್ಯ ನಿರ್ವಹಿಸಿದ್ದೇ ನಾರಾಯಣರಾಯರ ಸಾಧನೆಯ ಹೆಗ್ಗಳಿಕೆ. ಇಂಗ್ಲೀಷ್ ಭಾಷೆಯ ಬಗೆಗಿನ ಅತಿಯಾದ ಮೋಹ, ಪಾಶ್ಚಾತ್ಯರ ಜೀವನಶೈಲಿಯ ಅಂಧಾನುಕರಣೆಯ ಪ್ರವೃತ್ತಿಯನ್ನು ವಿಡಂಬನೆ ಮಾಡಿದ 'ಸ್ತ್ರೀಧರ್ಮ ರಹಸ್ಯ' ನಾಟಕ ಕನ್ನಡ ಸಾಹಿತ್ಯದ ನವೋದಯ ಕಾಲದ ಮೊದಲಸಾಲಿನಲ್ಲಿ ಸ್ಥಾನಗಿಟ್ಟಿಸಿದ ಸಾಮಾಜಿಕ ನಾಟಕವಾಗಿದೆ. ರಾಷ್ಟ್ರ ನಿರ್ಮಾಣದ ಆರಂಭದ ಹಂತದಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯ ನ್ಯೂನತೆಗಳು ಪ್ರಜ್ಞಾವಂತರನ್ನು ಆತಂಕಕ್ಕೀಡು ಮಾಡಿದ್ದವು. 'ಶಿಕ್ಷಣ ಸಂಭ್ರಮ' ನಾಟಕವು ಪೊಳ್ಳು ಪ್ರತಿಷ್ಠೆಯ ಸೋಗು-ಅಹಮಿಕೆಯಿಂದಾಗುವ ಕೆಡಕುಗಳನ್ನು ವಿಡಂಬನಾತ್ಮಕವಾಗಿ ಬಿಂಬಿಸಿತು. 'ಪತಿತೋದ್ಧಾರ' ನಾಟಕವು ದೀನದಲಿತರಿಗೆ ಸಾಮಾಜಿಕ ಸಮಾನತೆ, ಸಾಮಾಜಿಕ ನ್ಯಾಯ ಒದಗಿಸುವ ಅಗತ್ಯವನ್ನು ಪ್ರತಿಪಾದಿಸಿತು.

ಕೀರ್ತಿನಾಥ ಕುರ್ತಕೋಟಿಯವರ 'ಸ್ವಪ್ನದರ್ಶಿ', 'ಶಬರಿ' ಗೀತನಾಟಕಗಳು, ಗೀತನಾಟಕಗಳ ಪರಂಪರೆಯನ್ನು ಬೆಳೆಸುವಲ್ಲಿ ಮಹತ್ವದ್ದಾದವು. ವೃತ್ತಿರಂಗದ ಪೌರಾಣಿಕ, ಐತಿಹಾಸಿಕ ಕಥಾವಸ್ತುಗಳಿಗೆ ಬದಲಾಗಿ ವಾಸ್ತವ ಜೀವನದ ಪಾತ್ರಗಳನ್ನು ರಂಗದ ಮೇಲೆ ತಂದು ಪ್ರೇಕ್ಷಕನ ಒಲವು, ದೃಷ್ಟಿಕೋನವನ್ನು ಮಾರ್ಪಡಿಸುವ ಹಾಗೂ ಆಡುಮಾತಿನ ಸಹಜಾಭಿನಯದಿಂದ ಬುದ್ಧಿಯನ್ನು ಕೆಣಕಿ ಮನಸನ್ನು ಜಾಗೃತಗೊಳಿಸುವ ಪ್ರಯತ್ನವಿದಾಗಿತ್ತು.

ಎಚ್.ಟಿ. ಮಹಾಂತೇಶಶಾಸ್ತ್ರಿ 'ಗದುಗಿನ ಅಮೆಚೂರ್ ಸಂಘ' ವನ್ನು ಸ್ಥಾಪಿಸಿ 'ನರರಾಕ್ಷಸ' ನಾಟಕದ ೪೪ ಪ್ರಯೋಗಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿದರು. ಇವರ ಸಾಮಾಜಿಕ ನಾಟಕಗಳು ಅಸ್ಪೃಶ್ಯತೆ, ವರದಕ್ಷಿಣೆ, ಸ್ತ್ರೀ ಶೋಷಣೆ, ಮಠಮಾನ್ಯಗಳ ಅವಾಂತರ, ಸಂಘಸಂಸ್ಥೆಗಳ ಆಟೋಪ-ದಬಾವಣೆಗಳನ್ನು ಬಯಲುಮಾಡಿ ಹವ್ಯಾಸಿ ರಂಗದ ಉದ್ದೇಶಗಳನ್ನು ಈಡೇರಿಸಿದವು.

ಪಂಡಿತ ಡಾ. ಪುಟ್ಟರಾಜ ಕವಿ ಗವಾಯಿಗಳವರ ಸಾಮಾಜಿಕ ನಾಟಕಗಳು ಹವ್ಯಾಸಿರಂಗದ ಆಶೋತ್ತರಗಳನ್ನು ಪಡಿನೆಳಸಿದವು. ಪ್ರೇಕ್ಷಕರ ಪ್ರವೃತ್ತಿ, ದೃಷ್ಟಿಕೋನದಲ್ಲಿ ಹೊಸತನವನ್ನು ತರುವಲ್ಲಿ ಆರಂಭಿಕ ಯತ್ನಗಳಾದವು.

೧೯೬೦ರ ದಶಕದಲ್ಲಿ ರಂಗ ಚಟುವಟಿಕೆಗಳು ನೈಪಥ್ಯಕ್ಕೆ ಸರಿದವು. ಅನಂತರದಲ್ಲಿ ಗದುಗಿನ ಹವ್ಯಾಸಿ ರಂಗ ಕಲಾವಿದರ ಅಭಿನಯರಂಗ ಹಾಗೂ ಆರ್.ಎಸ್.ಕೆ. ಮಿತ್ರಮಂಡಳಿ ರಂಗಚಟುವಟಿಕೆಗಳನ್ನು ಜೀವಂತವಾಗಿರಿಸಿದವು.

**ಗದುಗಿನ ಬಾಬಣ್ಣ ಮುಲ್ಲಾ :**

'ಶ್ರೀ ವೀರನಾರಾಯಣ ಕೃಪಾಪೋಷಿತ ನಾಟಕ ಮಂಡಳಿ' ಕಟ್ಟಿ ತಾವೇ ರಚಿಸಿದ 'ಬಾಯಿಗೆ ಬಡೆದ ಬೀಗ', 'ಯಮನ ಸೋಲು' ನಾಟಕಗಳನ್ನಾಡಿದ್ದಾರೆ. ವೆಂಕಪ್ಪ ಮಡಿವಾಳರ, ಬೆಟದಯ್ಯ ಹಿರೇಮಠ, ಬಾಬಣ್ಣ ಮುಲ್ಲಾ, ಕೃಷ್ಣಾಸಾ ಖೋಡೆ, ಬೆಳಧಡಿ ರಾಚಯ್ಯ, ಶಾಂತಾಬಾಯಿ ಗದಗಕರ, ಅನ್ನಪೂರ್ಣಾ ಬೆಳಧಡಿ ಪ್ರಮುಖ ಕಲಾವಿದರಾಗಿದ್ದರು.

**ಕೆ.ವಿ. ಬಾಳಿಕಾಯಿ ಮಾಸ್ತರ ಮತ್ತು ಬಿ.ಜಿ. ಅಣ್ಣಿಗೇರಿ :**

ಗದುಗಿನ ಮಾಡೆಲ್ ಹೈಸ್ಕೂಲಿನಲ್ಲಿ ಸಂಸ್ಕೃತ ಶಿಕ್ಷಕರಾಗಿ ನಿವೃತ್ತರಾಗಿರುವ ಬಾಳಿಕಾಯಿ ಮಾಸ್ತರು ಪ್ರವಚನಕಾರರಾಗಿ ಜನಪ್ರಿಯತೆ ಪಡೆದವರು. ೧೯೭೦ ರಲ್ಲಿ ಮಾಡೆಲ್ ಹೈಸ್ಕೂಲಿನಲ್ಲಿ ಬಾಳಿಕಾಯಿ ಮಾಸ್ತರು ಆರ್.ಡಿ.ಕಾಮತ್ ರಚಿಸಿದ 'ಟಿಪ್ಪು ಸುಲ್ತಾನ' ನಾಟಕವನ್ನು ಪ್ರದರ್ಶಿಸಿದರು. ಬಿ.ಜಿ. ಅಣ್ಣಿಗೇರಿ ಗುರುಗಳ ನಿರ್ದೇಶನದಲ್ಲಿ ನಡೆದ ಈ ನಾಟಕದಲ್ಲಿ ಬಾಳಿಕಾಯಿಯವರು ಟಿಪ್ಪುವಿನ ಪಾತ್ರವನ್ನು, ಸಿ.ಎನ್. ಪಾಟೀಲರು ಪೂರ್ಣಯ್ಯನವರ ಪಾತ್ರವನ್ನು ಹಾಗೂ ಜೆ.ಕೆ. ನಾಗರಕಟ್ಟಿ ಮತ್ತು ಎ.ಎಸ್. ಪಾಟೀಲರು ತಿರುಮಲಶೆಟ್ಟಿ, ಮೀರಸಾದಕರ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸಿದ್ದರು. ೧೯೭೧ ರಲ್ಲಿ 'ವಿಜಯನಗರ ಸಾಮ್ರಾಜ್ಯ' (ವರಪ್ರದಾನ) ನಾಟಕವನ್ನು ಗದುಗಿನ ಮಲ್ಲಮ್ಮ ಥಿಯೇಟರ್‌ನಲ್ಲಿ ಯಶಸ್ವಿಯಾಗಿ ಪ್ರದರ್ಶಿಸಿದರು. ಬಿ.ಜಿ. ಅಣ್ಣಿಗೇರಿ ಗುರುಗಳ ನಿರ್ದೇಶನದಲ್ಲಿ ಆಡಿದ ಈ ನಾಟಕಗಳಲ್ಲಿ ಬಾಳಿಕಾಯಿ ಮಾಸ್ತರು ಖಳನಾಯಕರಾಗಿ, ಚಿತ್ರಕಾರ ಸಿ.ಎನ್.ಪಾಟೀಲರು ವಿದ್ಯಾರಣ್ಯರ ಪಾತ್ರದಲ್ಲಿ ಅಮೋಘ ಅಭಿನಯ ನೀಡಿದ್ದರು.

**ಎಲ್.ಡಿ. ಪಾಟೀಲ, ಬಿ.ಎಂ. ಜಹಗೀರದಾರ :**

ಗದುಗಿನ 'ಕುಮಾರವ್ಯಾಸ ಸಂಘ'ದ ಆಶ್ರಯದಲ್ಲಿ ೧೯೭೪ ರಲ್ಲಿ ಟಿ.ಪಿ. ಕೈಲಾಸಂ ಅವರ 'ಬಂಡ್ವಾಳಿಲ್ಲದ ಬಡಾಯಿ' ನಾಟಕವನ್ನು ಮರಾಠಿ ಮಂಡಳದಲ್ಲಿ ಆಡಲಾಗಿತ್ತು. ಸಮಿತಿ ಹೈಸ್ಕೂಲಿನ ಶಿಕ್ಷಕ ಎಲ್.ಡಿ. ಪಾಟೀಲರು ನಿರ್ದೇಶಿಸಿದ್ದ ಈ ನಾಟಕದಲ್ಲಿ ವೆಂಕಟೇಶ ವೀಣೇಕರ, ಮಾಧವ ಕುಲಕರ್ಣಿ, ರಾಜೂರ ಮೊದಲಾದವರು ಅಭಿನಯಿಸಿದ್ದರು. ಈ ಹವ್ಯಾಸಿ ಕೂಟವು ಎನ್.ಕೆ. ಕುಲಕರ್ಣಿಯವರ 'ಕುರುಕ್ಷೇತ್ರ', ರಂ.ಶ್ರೀ ಮುಗಳಿಯವರ 'ಎತ್ತಿದ ಕೈ', ಕೆ.ಗುಂಡಣ್ಣಾ ವಿರಚಿತ 'ವರವಿಕ್ರಯ', ಬಿ.ಎಂ. ಜಹಗೀರದಾರ ಬರೆದ 'ಕೀಚಕವಧಾ', 'ಮನೆಹಾಳು ವಕೀಲರು' ಮೊದಲಾಗಿ ಹಲವು ನಾಟಕಗಳನ್ನು ಪ್ರದರ್ಶಿಸಿ ಹವ್ಯಾಸಿಗಳಲ್ಲಿ ಹೊಸ ಸಂಚಲನೆಯನ್ನುಂಟು ಮಾಡಿದ್ದರು. ವೆಂಕಟೇಶ

ವೀಣೇಕರ್, ಗೋಪಾಲ ಹುದ್ದಾರ, ಬಿ.ಎಂ. ಜಹಗೀರದಾರ, ಎಸ್.ಆರ್. ಕೊಪ್ಪರ್, ಎಂ.ಆರ್. ಹೂಗಾರ ಅಭಿನಯಿಸಿದ್ದರು ಹಾಗೂ ಎಲ್.ಡಿ. ಪಾಟೀಲರು ನಿರ್ದೇಶನ ಮಾಡಿದ್ದರು.

**ಅಭಿನಯರಂಗ :** ೧೯೭೭ ರಲ್ಲಿ ಸೃಜನಶೀಲ ಹವ್ಯಾಸಿ ರಂಗಕರ್ಮಿ ಸುಶೀಲೇಂದ್ರ ಜೋಷಿ ಅವರಿಂದ ಸ್ಥಾಪಿತ ಅಭಿನಯರಂಗವು ರಂಗಚಟುವಟಿಕೆಗಳಿಗೆ ವಿಶೇಷ ಚಾಲನೆ ನೀಡಿ, ಎರಡು ದಶಕಗಳ ಕಾಲ ಶುದ್ಧ ನಾಟಕ ಕಲೆಯನ್ನು ಸಂವರ್ಧಿಸುವಲ್ಲಿ ಯಶಸ್ವಿಯಾಯಿತು. ದ.ರಾ.ಬೇಂದ್ರೆ, ಧರ್ಮವೀರ ಭಾರತಿ, ಜಡಭರತ, ಮೋಹನ ರಾಕೇಶ, ವಿಜಯ ತೆಂಡೂಲ್ಕರ್, ಪಿ. ಲಂಕೇಶ, ಗಿರೀಶ ಕಾರ್ನಾಡ ಮೊದಲಾದವರ ನಾಟಕಗಳನ್ನು ಸಮರ್ಥವಾಗಿ ಪ್ರದರ್ಶಿಸಿತು. ರಂಗಕಲೆಯ ಬೆಳವಣಿಗೆ, ನಾಟಕ ಸಾಹಿತ್ಯದಲ್ಲಿ ಅಭಿರುಚಿಯನ್ನು ಹೆಚ್ಚಿಸಲು ತಜ್ಞರನ್ನು ಕರೆಸಿ, ಹಲವು ಬೌದ್ಧಿಕ ಕಾರ್ಯಕ್ರಮಗಳನ್ನು ಸಂಘಟಿಸಿತು. ಪಂಡಿತ ಭೀಮಸೇನ ಜೋಷಿ, ಕೀರ್ತಿನಾಥ ಕುರ್ತಕೋಟಿ, ಚಂದ್ರಶೇಖರ ಪಾಟೀಲ, ಗಿರಡ್ಡಿ ಗೋವಿಂದರಾಜ, ಮಾಧವ ಕುಲಕರ್ಣಿ, ಮೈಸೂರು ಅನಂತಸ್ವಾಮಿ, ನಾಗಾಭರಣ, ಟಿ.ಪಿ. ಅಶೋಕ, ನಾಗಭೂಷಣಸ್ವಾಮಿ, ಜಯತೀರ್ಥ ಜೋಷಿ ಮೊದಲಾದ ಗಣ್ಯರನ್ನು ಆಮಂತ್ರಿಸಿ ಬೌದ್ಧಿಕ ಕಾರ್ಯಕ್ರಮ, ಚಿಂತನಗೋಷ್ಠಿಗಳನ್ನು ಸಂಘಟಿಸಿತು. ನಾಡಿನ ಹಲವೆಡೆಗಳಲ್ಲಿ ನಾಟಕ ಪ್ರದರ್ಶನಗಳನ್ನು ಮಾಡಿತು. ನಟರಿಗೆ, ತಂತ್ರಜ್ಞರಿಗೆ, ನಿರ್ದೇಶಕರಿಗೆ, ರಂಗಸಂಗೀತಗಾರರಿಗೆ ವಿಶೇಷ ತರಬೇತಿ ನೀಡಲು ೧೯೮೪ ರಲ್ಲಿ ರಂಗ ತರಬೇತಿ ಶಿಬಿರವನ್ನು ನಡೆಸಿತು. ಕರ್ನಾಟಕ ರಾಜ್ಯದ ವಿವಿಧ ಸ್ಥಳಗಳಿಂದ ಹವ್ಯಾಸಿ ನಾಟಕ ತಂಡಗಳನ್ನು ಬರಮಾಡಿಕೊಂಡು ಹೊಸ ಬಗೆಯ ಆಧುನಿಕ ನಾಟಕಗಳನ್ನು ಪ್ರದರ್ಶಿಸಿತು. 'ಹೆಗ್ಗೋಡಿನ ನಿನಾಸಂ' ದಿಂದ **'ಹೂ-ಹುಡುಗಿ', 'ಸಂಗ್ಯಾ-ಬಾಳ್ಯಾ', 'ತಲೆದಂಡ', 'ಮೈಸೂರು ರಂಗಾಯಣ'** ದಿಂದ **'ಕಿಂದರಜೋಗಿ'** ಹಾಗೂ ಬೆಂಗಳೂರಿನ **'ವೇದಿಕೆ'** ಯಿಂದ **'ಟಿಪಿಕಲ್ ಟಿ.ಪಿ.ಕೈಲಾಸಂ'** ನಾಟಕಗಳು ಹವ್ಯಾಸಿ ರಂಗಭೂಮಿಯ ಆಕರ್ಷಕ ಪ್ರದರ್ಶನಗಳಾದವು. ಈ ಹವ್ಯಾಸಿ ಸಂಘಟನೆಯು ಗದುಗಿನ ರಂಗಭೂಮಿಯ ಚಟುವಟಿಕೆಗಳ ನಿರಂತರತೆಯನ್ನು ಕಾಪಾಡಿಕೊಂಡು ಬಂದಿತು.

ರಂಗದ ಮೇಲೆ ನಾಟಕಗಳನ್ನಾಡುವುದಕ್ಕೆ ಮಾತ್ರವೇ ಅಭಿನಯರಂಗ ಮಹತ್ವ ನೀಡದೆ, ಪ್ರೇಕ್ಷಕರನ್ನು ಸಂಘಟಿಸುವುದಕ್ಕೆ ಹೆಚ್ಚಿನ ಗಮನ ನೀಡಿತು. **'ಸ್ಥಿಗತಿ', 'ಕೀಲು ಜನಮೇಜಯ'** ನಾಟಕಗಳ ಪ್ರದರ್ಶನಗಳಿಂದ ಆರಂಭಗೊಂಡ ಅಭಿನಯರಂಗ, ೫೨ ನಾಟಕಗಳನ್ನು ಪ್ರದರ್ಶನಗೊಳಿಸಿತು. ಜಡಭರತರ

'ಕದಡಿದ ನೀರು', ದ.ರಾ.ಬೇಂದ್ರೆಯವರ 'ಸಾಯೊ ಆಟ', ಧರ್ಮವೀರ ಭಾರತಿಯವರ 'ಅಂಧಯುಗ', ಪಿ.ಲಂಕೇಶರ 'ದೊರೆ ಈಡಿಪಸ್', ಮೋಹನ ರಾಕೇಶರ 'ಆಷಾಢದ ಒಂದು ದಿನ', ವಿಜಯ ತೆಂಡೂಲ್ಕರರ 'ಹಕ್ಕಿ ಹಾರುತಿದೆ ನೋಡಿದಿರಾ', 'ಸದ್ದು, ವಿಚಾರಣೆ ನಡೆಯುತಿದೆ', ಗಿರೀಶ ಕಾರ್ನಾಡರ 'ಹಯವದನ', 'ತಲೆದಂಡ' ಪ್ರಮುಖವಾದವುಗಳು.

ಅಭಿನಯರಂಗ ಏರ್ಪಡಿಸಿದ್ದ ರಂಗ ತರಬೇತಿ ಶಿಬಿರದಲ್ಲಿ ಪಾಲುಗೊಂಡಿದ್ದ ೨೮ ವಿದ್ಯಾರ್ಥಿಗಳು ಗಿರೀಶ ಕಾರ್ನಾಡರ 'ಹಯವದನ' ನಾಟಕವನ್ನು ಯಶಸ್ವಿಯಾಗಿ ಪ್ರದರ್ಶಿಸಿದರು. ೧೯೯೦ ರಲ್ಲಿ ೧೨೦ ಮಕ್ಕಳಿಗೆ ಉಚಿತ ರಂಗ ತರಬೇತಿ ಶಿಬಿರ ನಡೆಸಿತು. ಮಕ್ಕಳೇ ಆಡಿದ ಬಿ.ವಿ. ಕಾರಂತರ 'ಪಂಜರಶಾಲೆ' ಅಭಿನಯರಂಗದ ಸಾಧನೆಗೊಂದು ನಿದರ್ಶನವಾಯಿತು.

'ಅಭಿನಯ ರಂಗ'ವು ೧೯೯೧ ರ ಮಾರ್ಚ್ ೧೫ ರಿಂದ ಏಪ್ರಿಲ್ ೨೮ ರ ವರೆಗೆ ಅಭಿನಯ ಪ್ರಶಿಕ್ಷಣ ಶಿಬಿರವನ್ನು ಏರ್ಪಡಿಸಿ, ವಿಶೇಷವಾಗಿ ಗಿರೀಶ ಕಾರ್ನಾಡರ 'ತಲೆದಂಡ' ನಾಟಕವನ್ನೊಳಗೊಂಡಂತೆ ನಾಟಕದ ಸಾಹಿತ್ಯಿಕ, ಚಾರಿತ್ರಿಕ, ಧಾರ್ಮಿಕ ಹಾಗೂ ಕಲಾತ್ಮಕ ಆಯಾಮಗಳನ್ನು ಪರಿಚಯಿಸಿ ಕೊಟ್ಟಿತು. ಅದೇ ಕಲಾವಿದರಿಂದ 'ತಲೆದಂಡ' ನಾಟಕದ ೧೨ ಪ್ರದರ್ಶನಗಳನ್ನು ಮಾಡಿಸಲಾಯಿತು.

## ರಂಗಸ್ಥಳಕ್ಕೆ ಕೊನೇರಿ ಹೊಂಡದ ಆಯ್ಕೆ – ಒಂದು ವಿಶಿಷ್ಟ ಪ್ರಯೋಗ

'ತಲೆದಂಡ' ನಾಟಕ ಪ್ರದರ್ಶನಕ್ಕೆ ನಿರ್ದೇಶಕ ಜಯತೀರ್ಥ ಜೋಷಿ ಆಯ್ಕೆ ಮಾಡಿಕೊಂಡ 'ರಂಗಸ್ಥಳ' ಕೊನೇರಿ ಹೊಂಡವು ಅರ್ಥಪೂರ್ಣ ರೋಮಾಂಚಕ ಪ್ರಯೋಗವೆನಿಸಿತು. ಒಂದು ಹೊಂಡವನ್ನು ನಾಟಕ ಪ್ರಯೋಗಕ್ಕೆ ಸೂಕ್ತ ರಂಗಪರಿಕಲ್ಪನೆಯೊಂದಿಗೆ ಪರಿವರ್ತಿಸಿಕೊಂಡದ್ದು ರಾಜ್ಯದಲ್ಲಿಯೇ ಮೊದಲ ಪ್ರಯೋಗ ಎಂಬ ಖ್ಯಾತಿಯನ್ನು ಪಡೆಯಿತು.

ಗದುಗಿನ ಶ್ರೀ ವೀರನಾರಾಯಣ ದೇವಸ್ಥಾನದ ಸಮೀಪ ಹನುಮಪ್ಪನ ದೇವಸ್ಥಾನದ ಬದಿಯಲ್ಲಿರುವ ಚೌಕಾಕೃತಿಯ ಬೃಹದಾಕಾರವಾದ ಕೊನೇರಿ ಹೊಂಡ ನೀರಿಲ್ಲದೆ ಬರಿದಾದ ಕಸದ ತೊಟ್ಟಿಯಾಗಿದ್ದ ಕೂಪದಲ್ಲಿ ನಾಟಕ ಪ್ರಸ್ತುತಿ ಮಾಡುವ ಜಯತೀರ್ಥರ ಯೋಜನೆ ಎಲ್ಲ ಕಲಾವಿದರನ್ನು ಆರಂಭದಲ್ಲಿ ದಿಗ್ಭ್ರಮೆಗೊಳಿಸಿತ್ತು. ೧೧ ನೆಯ ಶತಮಾನದಲ್ಲಿ ನಿರ್ಮಾಣಗೊಂಡಿರುವ ಕೊನೇರಿ ಹೊಂಡ ವಿಶಾಲವಾದ ಭವ್ಯ ಜಲಾಗಾರ. ೧೫೦' X ೨೦೦' ಅಡಿ ಆಕಾರದ ಈ ಹೊಂಡದ ನಾಲ್ಕೂ ಬದಿಗಳಲ್ಲಿ ಅಚ್ಚುಕಟ್ಟಾಗಿ ಹೊಂದಿಸಲಾದ

ಕಲ್ಲಿನ ಇಳಿಮೆಟ್ಟಲುಗಳಿವೆ. ಬತ್ತಿ ಹೋಗಿ ಹಾಳು ಬಿದ್ದು ಕಸದ ತೊಟ್ಟಿಯಾಗಿದ್ದ ಈ ಹೊಂಡವನ್ನು ನಾಟಕಕ್ಕೆ ವೇದಿಕೆ ಮತ್ತು ಪ್ರೇಕ್ಷಕಾಂಗಣವಾಗಿ ಬಳಸಿಕೊಳ್ಳಲು ಅದನ್ನು ಸ್ವಚ್ಛ ಮಾಡಿಸಲಾಯಿತು. ತಗ್ಗಿನ ನಡುವೆ ಇದ್ದ ಹಳೆಯ ಮಂಟಪವನ್ನು ವಿಸ್ತರಿಸಿ, ಸುಧಾರಿಸಿ ನಾಟಕಕ್ಕೆ ರಂಗಸಜ್ಜಿಕೆಯನ್ನಾಗಿ ಮಾಡಿಕೊಳ್ಳಲಾಯಿತು. ಎರಡೂ ಬದಿಯ ಮೆಟ್ಟಿಲುಗಳನ್ನು ಅಗ್ರಹಾರದ ನೆಲೆಯನ್ನಾಗಿ ಬಳಸಿಕೊಳ್ಳಲಾಯಿತು. ಈ ರಂಗಸ್ಥಳ 'ತಲೆದಂಡ' ನಾಟಕದ ೧೨ ನೆಯ ಶತಮಾನದ ಕಥಾವಸ್ತುವಿನ ಅನಾವರಣಕ್ಕೆ ಸ್ಸೈಜ ವಾತಾವರಣವನ್ನು ಸೃಷ್ಟಿಸಿತು. ಸನಾತನ ಧರ್ಮದ ಬೇರುಗಳು ಜನಜೀವನದಲ್ಲಿ ಗಾಢವಾಗಿ, ಗಟ್ಟಿಯಾಗಿ ಬೇರೂರಿರುತ್ತವೆ ಎಂಬುದನ್ನು ಸಂದೇಶಿಸಲು ಹೊಂಡದ ಮೆಟ್ಟಿಲುಗಳ ಮೇಲೆ ಕೃತಕ ಬೇರುಗಳನ್ನು ತಗುಲಿಸಿದ್ದು ಅರ್ಥವತ್ತಾಗಿತ್ತು. ಪ್ರೇಕ್ಷಕರ ಮಧ್ಯೆಯೇ ನಡೆದ ನಾಟಕ ಹವ್ಯಾಸಿ ಪರಿಕಲ್ಪನೆಯ ವಿಶಿಷ್ಟತೆಯನ್ನು ಮೆರೆಯಿತು. 'ನಾಟಕಕಾರನಿಗಿಂತ ನಿರ್ದೇಶಕ ಮೇಲಾದ' ಎಂಬಂತೆ ನಾಟಕವನ್ನು ಪ್ರಸ್ತುತಿ ಮಾಡಿದ ನಿರ್ದೇಶಕ ಜಯತೀರ್ಥ ಜೋಷಿ, ನಾಟಕಾಸಕ್ತರ ಮೆಚ್ಚುಗೆ-ಪ್ರಶಂಸೆಗೆ ಪಾತ್ರರಾದರು. ನಾಟಕದ ೧೨ ಪ್ರಯೋಗಗಳು ಕಿಕ್ಕಿರಿದ ಜನಸಂದಣಿಯಲ್ಲಿ ರಂಗುರಂಗಾಗಿ ನಡೆದು ನಾಡಿನಾದ್ಯಂತ ರಂಗಾಸಕ್ತರು, ವಿಮರ್ಶಕರು, ಬರಹಗಾರರು ಬಹುಸಂಖ್ಯೆಯಲ್ಲಿ ಆಗಮಿಸಿ ಪ್ರಶಂಸೆಗಳ ಸುರಿಮಳೆಗೈದರು.

"ವಸ್ತು ಮತ್ತು ಭಾಷೆಯ ದೃಷ್ಟಿಯಿಂದ ತನ್ನ ಪ್ರಾದೇಶಿಕ ಸೊಗಡಿನ ವಿಶೇಷತೆಯನ್ನು ಮೆರೆಯುವ ಈ ನಾಟಕವನ್ನು ಸಿದ್ಧ ರಂಗಮಂದಿರಕ್ಕೆ ಬದಲಾಗಿ ಒಂದು ವಿಶೇಷ 'ಹೊಸ ಆವರಣ'ದಲ್ಲಿ ಅಳವಡಿಸಬೇಕೆಂಬ ಕಲ್ಪನೆ ಕಟ್ಟಿದೆ. ನಾಟಕಕಾರ ತನ್ನ ಬರವಣಿಗೆಗೆ ಒಂದು ವಿಶಿಷ್ಟ (ಪ್ರಾದೇಶಿಕ) ಭಾಷೆಯನ್ನು ಆಯ್ಕೆ ಮಾಡಿಕೊಂಡಂತೆ ನಿರ್ದೇಶಕ ತನ್ನ ದೃಶ್ಯ ಪರಿಕಲ್ಪನೆಗೆ ವಿಶಿಷ್ಟ ಪ್ರದೇಶ (ಆವರಣ)ವನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ತಪ್ಪೇನಿಲ್ಲ ಅನಿಸಿತು. ಗದುಗಿನ ಕೊನೇರಿ ಹೊಂಡ ನನ್ನ ಕಲ್ಪನೆಯನ್ನು ಮೀರಿದ ವಿಶೇಷ ಆಕರ್ಷಕ ವಾತಾವರಣವನ್ನು ಒಳಗಿಟ್ಟುಕೊಂಡ ತಿಪ್ಪೆ, ಕೊಂಪೆಗಳನ್ನು ಹೊದ್ದು ಬಿದ್ದುಕೊಂಡಿರುವುದನ್ನು ಕಂಡು ರೋಮಾಂಚಿತನಾದೆ. ಕೂಡಲೇ ಹೊಂಡವನ್ನು ಸ್ವಚ್ಛಗೊಳಿಸಿ ನೋಡಿದಾಗ ಅದರ ಆಕರ್ಷಕ ನಗ್ನರೂಪ ನಾಟಕದ ಸಫಲತೆಗೆ ನಾಂದಿ ಹಾಡಿ ಕುಣಿಯಿತು" (ಜಯತೀರ್ಥ ಜೋಷಿ).

"ನಾಟಕ ಪ್ರಯೋಗಕ್ಕೆ ಆರಿಸಿಕೊಂಡಿದ್ದ ಕೊನೇರಿ ಹೊಂಡದ ರಂಗಸ್ಥಳವು ನಾಟಕದ ೧೨ ನೆಯ ಶತಮಾನದ ಕಥಾವಸ್ತುವಿಗೆ ತಕ್ಕ ವಾತಾವರಣವನ್ನು

ಕಟ್ಟಿಕೊಟ್ಟು ಪ್ರದರ್ಶನಕ್ಕೆ ಸೃಜತೆಯನ್ನು ತಂದುಕೊಟ್ಟಿತು. ೨೦ ನೇ ಶತಮಾನದ ಪ್ರೇಕ್ಷಕ ಒಡನೆಯೇ ೧೨ ನೇ ಶತಮಾನಕ್ಕೆ ಹೋಗಲು ಇಂಥ ಒಂದು ಪೂರ್ವಸಿದ್ಧತೆ ಯಾವುದೇ ಪ್ರೊಸೀನಿಯಂ ರಂಗಭೂಮಿ ಅಥವಾ ಇನ್ನಾವುದೇ ಬಯಲು ರಂಗಭೂಮಿಯಿಂದ ಸಿಗುತ್ತಿರಲಿಲ್ಲ. ಅಕ್ಷರಮಟ್ಟಿಗೆ ಹೊಂಡದ ನಿಡಿದಾದ ಪ್ರದೇಶ, ಮುರುಕು ಮಂಟಪ, ಪಾತ್ರಗಳ ಮಾತಿಗೆ ಅಥೆಂಟಿಸಿಟಿಯನ್ನು ಒದಗಿಸಿ ಕೊಟ್ಟಿತ್ತು. ಇಂಥ ಒಂದು ವಿಶಾಲ ರಂಗಸ್ಥಳವನ್ನು ಎಳ್ಳಷ್ಟೂ ಬಿಡಬಾರದೆಂಬಂತೆ ಹಿಂಬದಿಯ ಸ್ಥಳವನ್ನು ಬ್ರಾಹ್ಮಣರ ಅಗ್ರಹಾರಕ್ಕೆ ಬಳಸಿಕೊಂಡದ್ದು ಸ್ಪೇಸಿನ ಬಳಕೆಯ ದೃಷ್ಟಿಯಿಂದ ಸೃಜನಾತ್ಮಕ' (ಹಾ.ಸಾ.ಕೃ. ಬೆಂಗಳೂರು).

"ರಂಗಸಜ್ಜಿಕೆಯ ನವೀನತೆ ಪ್ರೇಕ್ಷಕರಿಗೆ ಹೊಸ ಅನುಭವ ತಂದುಕೊಟ್ಟಿತಲ್ಲದೆ, ಪಾತ್ರಗಳಿಗೆ ಹತ್ತಿರವಿದ್ದೇವೆಂಬ ಸಂಭ್ರಮವೂ ಸೇರಿ ನಾಟಕದ ಪ್ರತಿಯೊಂದು ಸನ್ನಿವೇಶಕ್ಕೂ ಪ್ರತಿಕ್ರಿಯಿಸಿದ ರೀತಿ ಉತ್ಸಾಹದಾಯಕವಾಗಿತ್ತು. "ತಲೆದಂಡ" ನಾಟಕಕಾರನಿಗಿಂತ ನಿರ್ದೇಶಕನ ಕೈಯಲ್ಲಿ ಹೆಚ್ಚು ಪ್ರಫುಲ್ಲವಾಗಿ ಅರಳಿನಿಂತಿದೆ" (ಸುಕನ್ಯಾ ಮಾರುತಿ, ಧಾರವಾಡ).

## ನಿರ್ದೇಶಕ ಜಯತೀರ್ಥ ಜೋಷಿ

೧೯೫೬ ರಲ್ಲಿ ಶಿರಹಟ್ಟಿಯಲ್ಲಿ ಜನನ, ಗದುಗಿನಲ್ಲಿ ಶಾಲಾ ಶಿಕ್ಷಣ, ಬೆಂಗಳೂರಿನ ನ್ಯಾಷನಲ್ ಕಾಲೇಜಿನಿಂದ ವಿಜ್ಞಾನ ಪದವೀಧರ. ಕೆಲಕಾಲ ಹವ್ಯಾಸೀ ರಂಗಭೂಮಿಯಲ್ಲಿ ನಿರತರಾಗಿ, ದೆಹಲಿಯ ರಾಷ್ಟ್ರೀಯ ನಾಟಕ ಶಾಲೆ ಸೇರಿ, ಪದವಿ ಪಡೆದು, ಕಲಕತ್ತಾ, ಭೂಪಾಲ, ಧಾರವಾಡ, ಹುಬ್ಬಳ್ಳಿ, ಕಿತ್ತೂರು, ಬೀದರ, ಮಂಡ್ಯ, ಮೈಸೂರು, ಬೆಂಗಳೂರು, ಹೆಗ್ಗೋಡು, ಗದುಗಿನಲ್ಲಿ ನಾಟಕ ನಿರ್ಮಾಣ. ೧೯೮೬ ರಲ್ಲಿ ಕಾಮನವೆಲ್ಥ ವಿದ್ಯಾರ್ಥಿವೇತನ ಪಡೆದು ಇಂಗ್ಲೆಂಡಿಗೆ ಪ್ರಯಾಣ. ಅಲ್ಲಿಯ ಲ್ಯಾಂಕೆಸ್ಟಾರ್ ವಿಶ್ವವಿದ್ಯಾಲಯದಿಂದ ನಾಟ್ಯಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದು ಕರ್ನಾಟಕ ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಸಂಗೀತ ಮತ್ತು ನಾಟಕಾಧಿಕಾರಿಯಾಗಿ ಸೇವೆ. ಮೈಸೂರಿನ ನಾಟಕ ರೆಪರ್ಟರಿ ಕರ್ನಾಟಕ ರಂಗಾಯಣದಲ್ಲಿ ಆಡಳಿತ ಅಧಿಕಾರಿ ಮತ್ತು ಉಪನಿರ್ದೇಶಕರಾಗಿ ಕಾರ್ಯ ನಿರ್ವಹಣೆ. ಈಗಿಲ್ಲವಾದ ಜಯತೀರ್ಥ ಜೋಷಿ ನೆನಪುಗಳ ಕಂತೆಯನ್ನೇ ಬಿಟ್ಟು ಹೋಗಿದ್ದಾರೆ.

## ಶ್ರೀ ಗಿರೀಶ ಕಾರ್ನಾಡರ 'ತಲೆದಂಡ'

### ನಾಟಕದ ಒಟ್ಟು ೧೨ ಪ್ರದರ್ಶನಗಳಲ್ಲಿ ಅಭಿನಯಿಸಿದ ಕಲಾವಿದರು

**ಎಪ್ರಿಲ್ ೨೯, ೧೯೯೧ ರಿಂದ ಮೇ ೨, ೧೯೯೨ ರ ವರೆಗೆ (ನಾಲ್ಕು ಪ್ರದರ್ಶನಗಳು) ಹಾಗೂ ಜನೇವರಿ ೩೦, ೧೯೯೨ ರಿಂದ ಫೆಬ್ರುವರಿ ೭, ೧೯೯೨ ರ ವರೆಗೆ (ಎಂಟು ಪ್ರದರ್ಶನಗಳು)**

| | | |
|---|---|---|
| ಸಾಂಬಶಿವ ಶಾಸ್ತ್ರೀ | : | ಬಿ.ಎಮ್. ನಾಯಕ, ಪ್ರವೀಣ ಯಳಮಲಿ |
| ಅಂಬಕ್ಕ, ಕಲ್ಯಾಣಿ | : | ಶ್ರೀಮತಿ ವಿಜಯಾ ದೀಕ್ಷಿತ |
| ಗಂಗಾಂಬಿಕೆ | : | ಶ್ರೀಮತಿ ಕವಿತಾ ಕಾಶಪ್ಪನವರ, ಮಾಧುರಿ ಅಠವಲೆ |
| ಭಾಗೀರಥಿ, ಶರಣೆ | : | ಹೇಮಲತಾ ಬೇಗೂರ, ಕವಿತಾ |
| ಸಾವಿತ್ರಿ | : | ಕು. ಪದ್ಮಾ ಭಾಸ್ಕರ |
| ಜಗದೇವ | : | ಶಿವು ಮಾಳಿಕೊಪ್ಪಮಠ |
| ಮಲ್ಲಿಬೊಮ್ಮ | : | ಲಿಂಗರಾಜ ಬಗಲಿ |
| ಸೋವಿದೇವ | : | ವಿಶ್ವೇಶ್ವರ ಹಳ್ಳಿಕೇರಿಮಠ |
| ರಂಭಾವತಿ | : | ಶ್ರೀಮತಿ ಕರುಣಾ ಜೋಶಿ, ಶ್ರೀಮತಿ ಕವಿತಾ ಕಾಶಪ್ಪನವರ |
| ದಾಮೋಧರಭಟ್ | : | ಡಾ. ಬಿ. ಭಾಸ್ಕರ |
| ಕಲ್ಲಪ್ಪ | : | ಡಾ. ಸಿ. ಎಮ್. ಸಾರಂಗಮಠ |
| ಬಿಜ್ಜಳ | : | ಗೋಪಾಲ ಹುದ್ದಾರ |
| ಬಸವಣ್ಣ | : | ಸುಶೀಲೇಂದ್ರ ಜೋಶಿ |
| ಮಂಚಣ್ಣಕ್ರಮಿತ | : | ಚಂದ್ರಕಾಂತ ಮಾಸ್ತಿಹೊಳಿಮಠ |
| ಕಾಳಯ್ಯ, ಕೊಟ್ರಪ್ಪ | : | ಸಂಗಮೇಶ ನರೇಗಲ್ |
| ಗುಂಡಣ್ಣ | : | ಮುಕುಂದ ಪೋತ್ನಿಸ್, ಬಿ.ಎಮ್. ನಾಯಕ |
| ಕಕ್ಕಯ್ಯ, ದೂತ | : | ಡಾ. ನಾರಾಯಣ ಹೆಬಸೂರ, ಡಾ. ರಾಜಾ ಅಠವಲೆ |
| ಹರಳಯ್ಯ, ಮುದುಕ, ದೂತ | : | ಬಿ. ಬಿ. ತೋಟಗೇರ, ದೇವ ಪಾಟೀಲ |
| ರಂಗವ್ವ, ಗುಳ್ಳವ, ಈರವ್ವ | : | ಕು. ಜಯಾ ಪೂಜಾರ, ಛಾಯಾ ಗರೂಡ |
| ಶೀಲ, ಬಂಕಣ್ಣ, ದೂತ | : | ದಿಗಂಬರ ಗರುಡ |
| ಮಧುವರಸ | : | ಪ್ರೊ. ಬಿ.ಎಸ್. ಗೊರವರ, ಸಂಗಮೇಶ ಪಾಟೀಲ |

| | | |
|---|---|---|
| ಲಲಿತಾಂಬ | : | ಶ್ರೀಮತಿ ಪುಷ್ಪಾ ಮಾಸ್ತಿಹೊಳಿಮಠ, ಪುಷ್ಪಾ ಮಾಳಿಕೊಪ್ಪಮಠ |
| ಕಲಾವತಿ | : | ಕು. ಶೃತಿ ಖರೆ |
| ಇಂದ್ರಾಣಿ | : | ಕು. ವಾಣೀಶ್ರೀ ಕುಲಕರ್ಣಿ |
| ಹೆಂಗಸು, ಶರಣೆ | : | ಕು. ಶಾಂತಾ ಪೂಜಾರ, ಕು. ಶೃತಿ ಖರೆ |
| ಗುಡ್ಡೆವ್ವ, ಶರಣೆ | : | ಕು. ವಿದ್ಯಾ ಪಾಟೀಲ, ಕು. ತೇಜಶ್ರೀ ಹುಬಳಿಮಠ |
| ಮಾಚಯ್ಯ | : | ಡಾ. ಜಿ.ಬಿ. ಪಾಟೀಲ |
| ಮರಿಯಪ್ಪ, ದೂತ | : | ಮಹಾಂತೇಶ ಬಡಿಗೇರ |
| ಈರವ್ವ, ಹೆಂಗಸು | : | ಕು. ವಿದ್ಯಾ ಪಾಟೀಲ |
| ರಾಚಪ್ಪ, ಕುಕ್ಕೇಶೆಟ್ಟಿ | : | ಪ್ರವೀಣ ಯಳಮಲಿ, ವೆಂಕಟೇಶ ಕುಲಕರ್ಣಿ |
| ಪುರೋಹಿತ | : | ಮುಕುಂದ ಪೋತ್ನಿಸ, ಡಾ. ರಾಜೀವ ಜೋಶಿ. |

**ವಂದಿಮಾಗಧರು, ಶರಣ-ಶರಣೆಯರು, ಅಗ್ರಹಾರದವರು, ಸೈನಿಕರು**

ರಮೇಶ ಕುಲಕರ್ಣಿ, ಕೆ. ವಿ. ಕುಂದಗೋಳ, ಎಸ್. ಶಂಕರಭಟ್, ಡಾ. ಜಿ.ಬಿ. ಪಾಟೀಲ, ಕು. ಶಾಂತಾ, ಕು. ಜಯಾ ಪೂಜಾರ, ಬಿ.ಎಂ. ನಾಯಕ, ಪ್ರವೀಣ ಯಳಮಲಿ, ಕು. ವಾಣೀಶ್ರೀ ನರೇಗಲ್, ಡಾ. ರಾಜೀವ ಜೋಶಿ, ಮುಕುಂದ ಪೋತ್ನಿಸ್, ಡಾ. ಸಾರಂಗಮಠ, ಮಾಲತೇಶ ಬಡಿಗೇರ, ಶೃತಿ ಖರೆ, ಪುಷ್ಪಾ ಮಾಸ್ತಿಹೊಳಿಮಠ, ಪುಷ್ಪಾ ಮಾಳಿಕೊಪ್ಪಮಠ, ವಿದ್ಯಾ ಪಾಟೀಲ, ಹರ್ಷಾ ದಿಕ್ಷಿತ, ಹೇಮಲತಾ ಬೇಗೂರ, ವೆಂಕಟೇಶ ಕುಲಕರ್ಣಿ, ಬಸವರಾಜ ಪೂಜಾರ, ಛಾಯಾ ಗರೂಡ, ದಿಗಂಬರ, ಜಿತೂರಿ, ಶರಣಪ್ಪ, ಜಗದೀಶ ಗದಗ, ನಾಗರಾಜ ಕಂಬಗಾರ, ಸಂತೋಷ, ಶಿವಾಜಿ ನರಗುಂದ, ರಾಘವೇಂದ್ರ, ತಿವಾರಿ, ಡಾ. ರಾಜಾ.

**ರಂಗದ ಹಿಂದೆ**

| | | |
|---|---|---|
| ರಂಗ ವಿನ್ಯಾಸ | : | ಜಯತೀರ್ಥ ಜೋಶಿ, ಇಕ್ಬಾಲ ಅಹಮ್ಮದ |
| ರಂಗ ನಿರ್ಮಾಣ | : | ಪ್ರಮೋದ ಚಿಂತಾಮಣಿ, ಮುಕುಂದ ಪೋತ್ನಿಸ್ |
| ಸಾಹಿತ್ಯ ಸಲಹೆ | : | ಪ್ರೊ. ಶ್ಯಾಮಸುಂದರ ಬಿದರಕುಂದಿ |
| ವಸ್ತ್ರಾಲಂಕರಣ, ರಂಗ | : | ಪ್ರಮೋದ ಶಿಗ್ಗಾಂವ |
| ಪರಿಕರಗಳು, ಸಹಾಯ | : | ದಿಗಂಬರ ಗರುಡ, ಸಂಗಮೇಶ ನರೇಗಲ್, ಶೃತಿ ಖರೆ, ಜಗದೀಶ ಗದಗ, ವಿನೋದ ಅಂಬೇಕರ. |

| | | |
|---|---|---|
| ಪ್ರಸಾಧನ | : | ಗಜಾನನ ಮಹಾಲೆ, ಸಂತೋಷ ಮಹಾಲೆ |
| ಸಹಾಯ | : | ಭೀಮರಾವ ಪುರುಷಪ್ಪನವರ, ಹನುಮಂತಪ್ಪ |
| ಬೆಳಕು ವ್ಯವಸ್ಥೆ | : | ಯೋಗೇಂದ್ರಸಿಂಗ್, ಬಿಜಾಪೂರ, ಕೋಕಿಲವಾಣಿ, ಬಾಗಲಕೋಟ, ಸ್ನೇಹರಂಗ, ಇಳಕಲ್, ಆರ್. ಮುದ್ದಣ್ಣ, ಬೆಂಗಳೂರು. |
| ಸಹಾಯ | : | ಶಿವು ಮಾಳೆಕೊಪ್ಪಮಠ, ಜಿ.ಎಚ್. ಶಿಗ್ಗಾಂವ, ಎಸ್.ಬಿ. ಗೌಡರ, ವೀರೇಶ ಸಾಲಿಮಠ, ಗಣಪತಿ ಪಟವಾಲ, ಎಚ್.ವ್ಹಿ. ಶಾನಭೋಗರ. |
| ರಂಗ ನಿರ್ವಹಣೆ | : | ದೇವ ಪಾಟೀಲ, ಲಿಂಗರಾಜ ಬಗಲಿ |
| ಕಲೆ | : | ದ್ವಾರಕಾನಾಥ, ಮೈಸೂರ |
| ಮೇಳ | : | ಅರವಿಂದ ಹುಯಿಲಗೋಳಕರ, ಪ್ರಭಾ ಹುಬಳಿಮಠ, ಸುಮಾ ಶಿಗ್ಲಿಮಠ, ಮಂಜುಳಾ ಮಠದ, ಅನುಪಮಾ ತಾಡಪತ್ರಿ, ನಾಗರತ್ನಾ ಕಾಳಗಿ, ಅನ್ನಪೂರ್ಣ ಹುಬಳಿ, ವಿದ್ಯಾ ಹುಬಳಿಮಠ, ಸವಿತಾ ಕುಲಕರ್ಣಿ, ವಸುಮತಿ ದೊಡ್ಡಮನಿ, ಸಂಗಮೇಶ ಪಾಟೀಲ. |
| ಕೊಳಲು | : | ಎಚ್. ಆರ್. ರವಿಶಂಕರ, ಎಸ್. ಎಸ್. ಕುಲಕರ್ಣಿ |
| ವಾದ್ಯ ವೃಂದ | : | ವೆಂಕಟೇಶ ಜೋಶಿ, ವೀರೇಶ ಗುಜ್ಜಾಯಿ, ವಾದಿರಾಜ ಜೋಶಿ, ನಾಗಲಿಕ. |
| ಉಡುಪು ತಯಾರಿಕೆ | : | ರಮೇಶ ಪುರುಷಪ್ಪನವರ |
| ಪ್ರಚಾರ | : | ಡಾ. ಬಿ. ಭಾಸ್ಕರ, ಸುಶೀಲೇಂದ್ರ ಜೋಶಿ |
| ಹಣಕಾಸು | : | ಅರವಿಂದ ಹುಯಿಲಗೋಳಕರ, ಶಂಕರಭಟ್ ಎಸ್. |
| ಸಂಘಟನೆ | : | ಡಾ. ಬಿ. ಭಾಸ್ಕರ, ಸುಶೀಲೇಂದ್ರ ಜೋಶಿ, ಮುಕುಂದ ಪೋತ್ನೀಸ್, ಎಚ್. ವ್ಹಿ. ಶಾನಭೋಗರ |
| ವಿನ್ಯಾಸ, ನಿರ್ದೇಶನ | : | ಜಯತೀರ್ಥ ಜೋಶಿ |
| ಸಂಗೀತ | : | ಬಿ.ವಿ. ಕಾರಂತ, ಅರವಿಂದ ಹುಯಿಲಗೋಳಕರ. |

**ಆರ್.ಎನ್.ಕೆ. ಮಿತ್ರಮಂಡಳಿ :** ರಂಗಾಸಕ್ತ ಹಿಂದಿ ಪ್ರಾಧ್ಯಾಪಕ ಆರ್.ಎಸ್.ಕುಲಕರ್ಣಿಯವರು ೧೯೭೪ ರಲ್ಲಿ ಆರ್.ಎನ್.ಕೆ. (ರಾಗ, ನಾದ, ಕಲೆ) ಮಿತ್ರಮಂಡಳಿಯನ್ನು ಹುಟ್ಟುಹಾಕಿ, ನೂರಾರು ನಾಟಕಗಳನ್ನು ಪ್ರದರ್ಶಿಸಿ, ಈಗಲೂ ಸಕ್ರಿಯವಾಗಿ ನಾಟಕವಾಡುತ್ತಲೇ ಇದ್ದಾರೆ. ನವಿರಾದ ತಿಳಿಹಾಸ್ಯದ ಐವತ್ತಕ್ಕೂ ಹೆಚ್ಚು ನಾಟಕಗಳನ್ನು ರಚಿಸಿ, ಮುನ್ನೂರು ನಾಟಕಗಳಲ್ಲಿ ಅಭಿನಯಿಸಿ, ಐದನೂರಕ್ಕೂ ಅಧಿಕ ನಾಟಕಗಳನ್ನು ನಿರ್ದೇಶಿಸಿ ಪ್ರಸ್ತುತಿಪಡಿಸಿದ ಸಾಧನೆ ಮಾಡಿದವರು. ಸಾದಾ ಸರಳ ರಂಗಸಜ್ಜಿಕೆಯಲ್ಲಿ ಸಹಜಾಭಿನಯದಿಂದಲೇ ಮನರಂಜನೆ ನೀಡಿ ಸಮಾಜವನ್ನು ತಿದ್ದುವ ಕಾರ್ಯದಲ್ಲಿ ನಿರತವಾಗಿರುವ ಮಿತ್ರಮಂಡಳಿಯು ರಾಜ್ಯಾದ್ಯಂತ ಪ್ರಮುಖ ನಗರ-ಪಟ್ಟಣ-ಗ್ರಾಮಗಳಲ್ಲಿ, ಮುಂಬೈ, ಪುಣೆ, ಚೆನ್ನೈಗಳಲ್ಲಿ ನಾಟಕಗಳನ್ನು ಪ್ರದರ್ಶಿಸಿದೆ. ಇವರ ನಗೆನಾಟಕಗಳಲ್ಲಿ ನಗೆಯ ಹಿಂದೆ ತೀಕ್ಷ್ಣ ವಿಡಂಬನೆಯಿದೆ, ಬುದ್ಧಿಯನ್ನು ಕೆದುಕುವ ತ್ರಾಣವಿದೆ. 'ಹೆಂಡತಿ ನಿನಗೆ ನಮೋ ನಮೋ', 'ಸತ್ಯವಂತರಿಗಿದು ಕಾಲವಲ್ಲ', 'ನೀನ್ಯಾಕೋ, ನಿನ್ನ ಹಂಗ್ಯಾಕೋ', 'ಆದದ್ದೆಲ್ಲ ಒಳಿತೇ ಆಯಿತು' ಆರ್.ಎನ್.ಕೆ. ಅವರ ಪ್ರಮುಖ ನಾಟಕಗಳು. ಇವರ ಬಹುತೇಕ ನಾಟಕಗಳ ಶೀರ್ಷಿಕೆಗಳು ಪುರಂದರದಾಸರ ಪದಗಳಿಂದ ಆಯ್ದವುಗಳು. 'ಮುನಸಿಪಾಲಿಟಿ ಮೆಂಬರ್', 'ಕಳ್ಳರಿದ್ದಾರೆ ಎಚ್ಚರ', 'ಸಾಷ್ಟಾಂಗ ನಮಸ್ಕಾರ' ದೂರದರ್ಶನದಲ್ಲಿ ಪ್ರಸಾರಗೊಂಡಿವೆ. ಹತ್ತಾರು ನಾಟಕಗಳು ಆಕಾಶವಾಣಿಯಿಂದಲೂ ಬಿತ್ತರವಾಗಿವೆ. ಮಿತ್ರಮಂಡಳಿಯ ಪ್ರಮುಖ ಕಲಾವಿದರು : ಗೋಪಾಲ ಕಟ್ಟಿ, ಶರತಶ್ಚಂದ್ರ ಅಯ್ಯನಗೌಡರ, ಸುರೇಶ ಕಂಗೂರಿ, ವ್ಹಿ.ಎಸ್. ಕುಲಕರ್ಣಿ, ಕೆ.ಆರ್. ಗುಡಿಹಾಳ, ಸುಶೀಲೇಂದ್ರ ಜೋಷಿ, ಜಯತೀರ್ಥ ಜೋಷಿ, ಮುರಳಿಧರ ಸಂಕನೂರ, ವಿಜಯಕುಮಾರ ಜಿತೂರಿ, ಸುಭಾಸ ಮಳಗಿ, ವಿಶ್ವನಾಥ ಬೇಲೇರಿ, ಷಣ್ಮುಖಸಾ ಬದಿ, ಕಿಶೋರ ನಾಗರಕಟ್ಟಿ, ಪ್ರಕಾಶ ಹೇಮಗಿರಿಮಠ, ದತ್ತಪ್ರಸನ್ನ ಪಾಟೀಲ, ಲತಾ ನಾಗರಕಟ್ಟಿ, ಗಾಯತ್ರಿ, ಸುನಂದಾ, ಹನುಮಂತಸಿಂಗ ಬ್ಯಾಳಿ, ರುದ್ರಣ್ಣ ಗುಳಗುಳಿ, ಪ್ರದೀಪ ಹಾದಿಮನಿ, ಎಂ.ಎಸ್. ಕುಲಕರ್ಣಿ, ರವೀಂದ್ರ ಕೊಪ್ಪರ್, ಮೌನೇಶ ಬಡಿಗೇರ ಮೊದಲಾದವರು.

**ಗರುಡ ನಾಟ್ಯ ಸಂಘ :** ಗದುಗಿನ ಶ್ರೀಪಾದರಾವ ಗರುಡರು ೧೯೮೩ ರಲ್ಲಿ ಆರಂಭಿಸಿದ್ದ ಗರುಡ ನಾಟ್ಯಸಂಘವು ಉತ್ಸಾಹಿ ಹವ್ಯಾಸಿಗಳ ಕೂಟವಾಗಿದೆ. ಪ್ರಕಾಶ ಗರುಡರ ನಿರ್ದೇಶನದಲ್ಲಿ ಪ್ರದರ್ಶನಗೊಂಡ 'ಒಥೆಲೊ' ಮತ್ತು 'ಹ್ಯಾಮ್ಲೆಟ್' ನಾಟಕಗಳು ರಂಗಾಸಕ್ತರನ್ನು ಮೆಚ್ಚಿಸಿದ ಪ್ರಯೋಗಗಳಾದವು. 'ಕ್ರಾಂತಿ ಪುರುಷ ಬಸವಣ್ಣ' ಒಂದು ಯಶಸ್ವಿ ಪ್ರಯೋಗವೆನಿಸಿತು. ಸಂಡೂರು, ಸೊಲ್ಲಾಪೂರ, ಲಾತೂರುಗಳಲ್ಲಿಯೂ ನಾಟಕದ ಪ್ರಯೋಗಗಳು ಭರ್ಜರಿಯಾಗಿ ನಡೆದವು.

'ಜಯಿಸಿದ ನಾಯಕ' ನಾಟಕ ಪ್ರದರ್ಶನ ಹವ್ಯಾಸಿ ರಂಗಾಸಕ್ತರಿಗೂ, ಸಾಮಾನ್ಯ ಪ್ರೇಕ್ಷಕರಿಗೂ ಇಷ್ಟವಾಗಿ ಖುಷಿ ಕೊಟ್ಟಿತು. ೧೯೯೧ ರಲ್ಲಿ ಗರುಡ ನಾಟ್ಯ ಸಂಘವು ಒಂದು ತಿಂಗಳ ಅವಧಿಯ ಮಕ್ಕಳ ಶಿಬಿರವನ್ನು ಏರ್ಪಡಿಸಿ ಶಿಬಿರಾರ್ಥಿ ಮಕ್ಕಳಿಂದ 'ಪುಷ್ಪರಾಣಿ' ನಾಟಕವನ್ನು ಆಡಿಸಿತು. ಇದೊಂದು ಅನುಪಮ ಪ್ರಯೋಗವಾಗಿ ಜನರ ಗಮನ ಸೆಳೆಯಿತು. ಒಟ್ಟಾರೆಯಾಗಿ ೫೦೦ ಕ್ಕೂ ಅಧಿಕ ನಾಟಕ ಪ್ರಯೋಗಗಳನ್ನು ಮಾಡಿದ ಗರುಡ ನಾಟ್ಯ ಸಂಘವು ಹವ್ಯಾಸಿ ರಂಗಭೂಮಿಗೆ ಹೊಸ ಚೈತನ್ಯವನ್ನು ನೀಡಿತು.

ಸ್ವಾತಂತ್ರ್ಯ ಪೂರ್ವದ ಹಾಗೂ ಸ್ವಾತಂತ್ರ್ಯಾನಂತರದ ನಾಟಕಗಳ ಸ್ವರೂಪ - ಕೊಡುಗೆಗಳನ್ನು ತಿಳಿಸಲು ಆಯಾ ನಾಟಕಗಳ ದೃಶ್ಯಾವಳಿಗಳನ್ನು ವೇಷಭೂಷಣಗಳೊಂದಿಗೆ ಥಟ್ಟನೆ ಕಂಡು ಹೋಗುವಂತೆ ಪ್ರದರ್ಶಿಸಿ, ನಾಟಕ ರಂಗ ಬೆಳೆದು ಬಂದ ದಾರಿ, ಅವುಗಳಲ್ಲಿಯ ವೈಲಕ್ಷಣ-ವ್ಯತ್ಯಾಸಗಳನ್ನು ತೋರಿಸುವಂತೆ ಮಾಡಿದ ವಿಡಿಯೋ ಚಿತ್ರೀಕರಣ ರೋಚಕವಾಗಿತ್ತು. ೧೯೯೩ ರಲ್ಲಿ ನಗರದ ಪುಷ್ಪಾ ಥಿಯೇಟರ್‌ನಲ್ಲಿ ಎರಡು ಗಂಟೆಗಳ ಕಾಲ ಶ್ರೀಪಾದರಾಯರು ಮಾಡಿದ ಪ್ರಸ್ತುತಿ - ನಿರೂಪಣೆ ನಾಟಕರಂಗ ಕುರಿತು ಪ್ರೇಕ್ಷಕರಿಗೆ ಮೌಲ್ಯಮಾಪನ ಮಾಡಲು, ಅಂದಿನಿಂದ ಇಂದಿನವರೆಗಿನ ವಿದ್ಯಮಾನಗಳನ್ನು ಏಕಕಾಲಕ್ಕೆ ಕಂಡು ಪ್ರತಿಕ್ರಿಯಿಸಲು ಅನುವು ಮಾಡಿಕೊಟ್ಟಿತು.

ಪ್ರಕಾಶ ಗರುಡ, ಶ್ರೀಮತಿ ರಜನಿ ಗರುಡ, ಶಿವು ಮಾಳಿಕೊಪ್ಪಮಠ, ದೇವ ಪಾಟೀಲ, ಆರ್.ಎಸ್.ಕುಲಕರ್ಣಿ, ದಿಗಂಬರ ಗರುಡ, ಶಕುಂತಲಾ ಗರುಡ, ಸುಶೀಲೇಂದ್ರ ಜೋಷಿ, ವಿಶ್ವೇಶ್ವರ ಹಳ್ಳಿಕೇರಿಮಠ, ರಾಜಾ ಆಠವಲೆ, ನೈನಾ ಆಠವಲೆ, ರಾಜಣ್ಣಾ ಹೂಗಾರ, ಗೋಪಾಲ ಹುದ್ದಾರ, ಡಾ. ಬಿ. ಭಾಸ್ಕರ, ಡಾ. ಎಮ್. ಎಮ್. ಮುಳುಗುಂದ, ಡಾ. ಪ್ರದೀಪ ಹಾದಿಮನಿ, ಲಿಂಗರಾಜ ಬಗಲಿ, ರುದ್ರಣ್ಣಾ ಗುಳಗುಳಿ, ವಿಜಯಾ ದೀಕ್ಷಿತ, ಕವಿತಾ ಕಾಶಪ್ಪನವರ ಮೊದಲಾದವರು ಗರುಡ ನಾಟ್ಯ ಸಂಘದ ಪ್ರೌಢ ಅಭಿನಯ ಕಲಾವಿದರಾಗಿದ್ದಾರೆ.

**ಬಸವ ಕಲಾ ತಂಡ :** ಕನ್ನಡ ಪ್ರಾಧ್ಯಾಪಕ ಬಿ.ಎಸ್. ಗೊರವರ ನಾಟಕಗಳನ್ನು ಬರೆದು, ಪ್ರದರ್ಶಿಸಿ, ಅಭಿನಯ, ನಿರ್ದೇಶನಗಳೆರಡರಲ್ಲೂ ಹೆಸರು ಮಾಡಿದವರು. 'ಬಸವ ಕಲಾ ತಂಡ'ವನ್ನು ಸಂಘಟಿಸಿ ಹಲವೆಡೆಗಳಲ್ಲಿ ನಾಟಕಗಳನ್ನು ಆಡಿದ್ದಾರೆ. ಬಸವಣ್ಣನವರ ವಚನಗಳಲ್ಲಿಯ ನುಡಿಗಳನ್ನೇ ಆಧರಿಸಿ (ಕಳಬೇಡ, ಕೊಲಬೇಡ ಇತ್ಯಾದಿ) 'ಬಸವಣ್ಣನ ಸಪ್ತ ಸೂತ್ರಾಂಕಗಳು' ನಾಟಕ ರಚಿಸಿದ್ದಾರೆ. ಈ ನಾಟಕಗಳು ಯಶಸ್ವಿ ಪ್ರಯೋಗಗಳನ್ನು ಕಂಡಿವೆ. ೨೦೦೮ರ ಬಸವ ಜಯಂತಿಯಂದು ಗದುಗಿನ ಶ್ರೀ ಸಿದ್ಧಲಿಂಗೇಶ್ವರ ಕಲ್ಯಾಣ ಕೇಂದ್ರದಲ್ಲಿ ಪ್ರದರ್ಶಿಸಲಾದ 'ಕಳಬೇಡ' ನಾಟಕದಲ್ಲಿ

ರವೀಂದ್ರ ಕೊಪ್ಪರ್, ಸುಜಾತಾ ಬರದೂರ, ಎಂ.ಎಸ್. ಕುಲಕರ್ಣಿ, ಬಸವರಾಜ ಗೊರವರ, ಜಿ.ಎನ್. ತಾರಾ, ಪ್ರದೀಪ ಹಾದಿಮನಿ, ದತ್ತಪ್ರಸನ್ನ ಪಾಟೀಲ, ಆನಂದ ಹಡಪದ, ಶಶಿಕಾಂತ ಕೊರ್ಲಹಳ್ಳಿ, ಬಾಲನಟರಾಗಿ ಅಭಿಷೇಕ ಮತ್ತು ಪ್ರಸಾದ ಕೊರ್ಲಹಳ್ಳಿ ಅಭಿನಯಿಸಿದರು.

ನಾಟಕದ ಗೀಳನ್ನು ಹೊಂದಿದ್ದ ಗದುಗಿನ ಫ.ಶೀ. ಭಾಂಡಗೆ ಸಮಾಜ ಸುಧಾರಣೆಗೆ ಆಗ್ರಹಿಸಲು ದಿಟ್ಟ ಸಾಹಸ ಮಾಡಿದ್ದೇ ಒಂದು ರೋಚಕ ಕಥಾನಕ. ವಿಚಾರ ಪ್ರಚೋದಕ ನಾಟಕಗಳಿಂದ ಸರಳ, ಸಹಜಾಭಿನಯದ ಪ್ರದರ್ಶನದ ಮೂಲಕ ರಂಗಭೂಮಿಗೊಂದು ಮಾದರಿಯನ್ನು ಹಾಕಿಕೊಡಲು ಜೀವನ ಪರ್ಯಂತ ಹೆಣಗಿ, ಸಾಹಸ ಮಾಡಿದ ಭಾಂಡಗೆ ಕಂಪನಿಯೊಂದನ್ನು ಕಟ್ಟಿ ಅದನ್ನು ರಂಗಭೂಮಿಯ ಒಂದು ಕ್ಷಿತಿಜವನ್ನಾಗಿ ಮಾಡುವಲ್ಲಿ ಸಫಲತೆ ಪಡೆದವರು. 'ಹೊಸ ಕಾನೂನು', 'ದೇವದರ್ಶನ', 'ಜೀವಂತ ಜನ', 'ಕನ್ಯಾಬಲಿ', 'ಬೆಳ್ಳಬೆಳತನಕ', 'ದಿಗಿಲೇಶ್ವರ' ಮೊದಲಾದ ನಾಟಕಗಳನ್ನು ರಚಿಸಿ, ಅಭಿನಯಿಸಿ, ನಿರ್ದೇಶಿಸಿದ ಭಾಂಡಗೆ ಹವ್ಯಾಸಿ ರಂಗಭೂಮಿಗೆ ನೆರವಾದರು.

ಗದುಗಿನ ಶಿವಯ್ಯ ವೀರಭದ್ರಯ್ಯ ಶಿರೋಳರು ಶಿಕ್ಷಕ ವೃತ್ತಿಯೊಂದಿಗೆ ನಾಟಕ ರಚನೆ ಮತ್ತು ಅಭಿನಯದಲ್ಲಿ ಆಸಕ್ತಿಯಿದ್ದವರು. ತಾವೇ ಬರೆದ 'ಕೆಂಪಿ ಮಾಡಿದ ಕಿತಾಪತಿ', 'ಸಂಡೆ ಸ್ಪೆಶಲ್', 'ಎಂಥಾ ಕಾಲ ಬಂತರೀ ಇದು', 'ತಪ್ಪು ನನ್ನದಲ್ಲ' ಮೊದಲಾದ ನಾಟಕಗಳನ್ನು ೧೯೯೩ ರಲ್ಲಿ ಹಾಗೂ ಅನಂತರದಲ್ಲಿ ಗದಗ, ಬೆಟಗೇರಿ, ಬಳಗಾನೂರು, ನರೇಗಲ್ಲ, ಜಕ್ಕಲಿಗಳಲ್ಲಿ ಪ್ರದರ್ಶಿಸಿದ್ದಾರೆ. ಬಸವರಾಜ ಜಮಖಂಡಿ ರಚಿಸಿದ 'ಮಂಗಳಾ ನನ್ನ ಅತ್ತಿಗೆ'ಯ ನಾಟಕದ ಹಲವು ಪ್ರದರ್ಶನಗಳನ್ನು ನೀಡಿದ್ದಾರೆ. ೨೦೦೭ ರಲ್ಲಿ ತಾವೇ ಬರೆದ 'ಡಾ. ಅಂಬೇಡ್ಕರ' ನಾಟಕವನ್ನು ಗದುಗಿನಲ್ಲಿ ಆಡಿದ್ದಾರೆ. ಸಾರಂಗಯ್ಯ ಸಾರಂಗಮಠ, ಶಿವಯ್ಯ ಶಿರೋಳ, ಬಸವರಾಜ ಗೊಳರೆಡ್ಡಿ, ಸಿಂಗಟಾಲಕೆರೆ ಶಿವಣ್ಣ, ಸುಶೀಲಾ ಬಳ್ಳಾರಿ, ಅಂಬುಜಾ ಕುಮಟಾ, ಅನ್ನಪೂರ್ಣಾ ಪಾಟೀಲ, ಶೈಲಾ ಗುಳೇದಗುಡ್ಡ ಹಾಗೂ ಹುಬ್ಬಳ್ಳಿಯ ಹೆಲೆನ್, ಚಂದ್ರಶೇಖರ ಹಿರೇಮಠ (ಹಾರ್ಮೋನಿಯಂ) ಹಾಗೂ ಚಂದ್ರಶೇಖರ ಹಿರೇಮಠ (ತಬಲಾ) ಇವರು ತಂಡದ ಕಲಾವಿದರು.

**ಹವ್ಯಾಸಿ ಕಲಾವೃಂದ ಮುಂಡರಗಿ** : ಮುಂಡರಗಿಯ ರಂಗಾಸಕ್ತರು ೧೯೯೧ ರಲ್ಲಿ 'ಹವ್ಯಾಸಿ ಕಲಾವೃಂದ' ವನ್ನು ಕಟ್ಟಿಕೊಂಡು ಸನ್ನಾಟಗಳ ಪ್ರದರ್ಶನದಲ್ಲಿ ಹೆಸರು ಮಾಡಿದ್ದಾರೆ. ಕಂದಗಲ್ ಹನುಮಂತರಾಯರ 'ರಕ್ತರಾತ್ರಿ' ಈ ಹವ್ಯಾಸಿಗಳ ಅನುಪಮ ಪ್ರದರ್ಶನವಾಗಿದೆ. ಗದಗ ಜಿಲ್ಲೆಯಾದ್ಯಂತ ಜನಪ್ರಿಯವಾಗಿರುವ ಇವರ ನಾಟಕಗಳು ಬಾಗಿಲುಕೋಟೆ, ಕೊಪ್ಪಳ, ಬಳ್ಳಾರಿ, ಮೈಸೂರುಗಳಲ್ಲಿಯೂ ಪ್ರದರ್ಶಿತವಾಗಿವೆ. 'ರಕ್ತ-ರಾತ್ರಿ' ಅರವತ್ತೆರಡು ಪ್ರಯೋಗಗಳನ್ನು ಕಂಡಿದೆ. 'ಸತ್ಯ ಹರಿಶ್ಚಂದ್ರ',

'ಜಗಜ್ಯೋತಿ ಬಸವೇಶ್ವರ', 'ಮುಂಡರಗಿ ಅನ್ನದಾನೇಶ್ವರ ಮಹಾತ್ಮೆ' ಇವರ ಇತರ ಸಣ್ಣಾಟಗಳು. ತೋಟಪ್ಪಯ್ಯ ಶಾಸ್ತ್ರಿಗಳ ನಿರ್ದೇಶನದಲ್ಲಿ ನಡೆಯುವ ಈ ಸಣ್ಣಾಟಗಳ ಕಲಾವಿದರಲ್ಲಿ ವಾಯ್.ಎನ್. ಗೌಡರ, ಡಿ.ಜಿ. ಹಿರೇಮಠ, ರಾಮಕೃಷ್ಣ ದೊಡ್ಡಮನಿ, ಎ.ವಾಯ್. ನವಲಗುಂದ, ಶರಣಪ್ಪ ಕುಬಸದ, ಶಿವಕುಮಾರ ಕುಬಸದ, ಬಸವರಾಜ ಹೊಸಮನಿ, ಡಿ.ಜಿ. ಪೂಜಾರ ಪ್ರಮುಖರಾಗಿದ್ದಾರೆ.

**ತೋಂಟದಾರ್ಯ ಕಲಾರಂಗ :** ಗದುಗಿನ ತೋಂಟದಾರ್ಯ ಕಲಾರಂಗವು ಮೈಸೂರಿನ ರಂಗಾಯಣದ ಸಹಯೋಗದೊಂದಿಗೆ ೨೦೦೫ ಜುಲೈನಲ್ಲಿ ಯುವ ರಂಗಕಲಾವಿದರಿಗೆ ಒಂದು ತಿಂಗಳಿನ ರಂಗ ತರಬೇತಿ ಶಿಬಿರವನ್ನು ಏರ್ಪಡಿಸಿತ್ತು. ಅನಂತರ ಆಗಸ್ಟ ತಿಂಗಳಲ್ಲಿ ನಿನಾಸಂ ರೂವಾರಿ ರಂಗತಜ್ಞ ಕೆ.ವಿ. ಸುಬ್ಬಣ್ಣ ಕನ್ನಡದಲ್ಲಿ ಅನುವಾದಿಸಿದ ಜರ್ಮನ್ ನಾಟಕಕಾರ ಯೂಜಿನ್ ಬರ್ಟೋಲ್ಟ್ ಬ್ರೆಖ್ಟ್‌ರ 'ಸೆಜುವಾನ್ ನಗರದ ಸಾಧ್ವಿ' ನಾಟಕವನ್ನು ಗದುಗಿನ ಶ್ರೀ ಸಿದ್ಧಲಿಂಗೇಶ್ವರ ಕಲ್ಯಾಣ ಕೇಂದ್ರದಲ್ಲಿ ಪ್ರದರ್ಶಿಸಿ ಹವ್ಯಾಸಿ ರಂಗಾಸಕ್ತರಲ್ಲಿ ಹೊಸ ಸಂಚಲನವನ್ನುಂಟು ಮಾಡಿತು. ಪ್ರಮೋದ ಶಿಗ್ಗಾಂವ ಅವರ ನಿರ್ದೇಶನ, ರಂಗ ತರಬೇತಿ ಪಡೆದಿದ್ದ ಹವ್ಯಾಸಿಗಳ ಅಭಿನಯ ಪ್ರೇಕ್ಷಕರ ಮನವನ್ನು ಸೂರೆಗೊಂಡಿತು. ದೀಪಾ ವೆರ್ಣೇಕರ, ಸುಚೇತ ಕುಬೇರ, ಶಹಜಹಾನ ಮುದಕವಿ, ಶರಣಯ್ಯ ವಸ್ತ್ರದ, ರವಿ ಶಿಶುವಿನಹಳ್ಳಿ, ಮಾರುತಿ ಮಲ್ಲಾಡದ, ಮಹೇಶ ಸಂದಿಗೋಡ, ವಿಜಯ ಕಿರೆಸೂರ, ಮುತ್ತಪ್ಪ ಹಡಗಲಿ, ಮಂಜುನಾಥ ಹೂವಿನಹಾಳ, ರಮಜಾನ್ ಮುತ್ತಣ್ಣವರ, ಬಸವರಾಜ ಹಡಪದ, ಹುಲ್ಲಪ್ಪಾ ಗೌಡರ, ಬಸವರಾಜ ನೆಲಜೇರಿ, ರಾಚಯ್ಯ ಮುಧೋಳಮಠ, ಸಮೀರ ಸವಣೂರ, ಫಕೀರೇಶ ಕುಳಗೇರಿ, ಶಶಿಕಲಾ ಹೂಗಾರ, ಪುಷ್ಪಾ ಖಿಮಿತ್ಕರ, ಶೇಕವ್ವಾ ಹಾದಿಮನಿ, ಕಾಳಮ್ಮ ಮುದೇನಗುಡಿ, ಅಶ್ವಿನಿ ಕೆರೂರ, ವಿದ್ಯಾ ಮೊರಬ, ಭಾರತಿ ಗುಂಜಾಳ ಮೊದಲಾದ ಯುವ ಕಲಾವಿದರು ಹವ್ಯಾಸಿ ರಂಗ ಭೂಮಿಯಲ್ಲಿ ಸೇರ್ಪಡೆಗೊಂಡವರಾಗಿದ್ದಾರೆ.

೨೦೦೮ ರಲ್ಲಿ 'ಕಲರವ' ಮಕ್ಕಳ ಸಂಸ್ಥೆ, 'ಕನ್ನಡ ಸಾಹಿತ್ಯ ಪರಿಷತ್ತು' ಹಾಗೂ 'ತೋಂಟದಾರ್ಯ ಕಲಾ ರಂಗ'ಗಳು ಗದುಗಿನಲ್ಲಿ ಏರ್ಪಡಿಸಿದ್ದ ಮಕ್ಕಳ ನಾಟಕೋತ್ಸವದಲ್ಲಿ ಶಾಲಾ ಮಕ್ಕಳು ಪ್ರದರ್ಶಿಸಿದ ಎಂಟು ನಾಟಕಗಳು ಜನಮನವನ್ನು ಸೂರೆಗೊಂಡವು. ಶಿಕ್ಷಕ ವಿವೇಕಾನಂದಗೌಡ ಪಾಟೀಲರು ಮಕ್ಕಳ ರಂಗತರಬೇತಿಯಲ್ಲಿ ವಿಶೇಷ ಆಸಕ್ತಿ ವಹಿಸುತ್ತಿರುವುದು ಹವ್ಯಾಸಿ ರಂಗಭೂಮಿಗೆ ಹೊಸ ಭರವಸೆಯನ್ನು ಮೂಡಿಸಿದೆ.

ಶಿರಹಟ್ಟಿಯ 'ಜಿಲ್ಲಾ ಮಕ್ಕಳ ನಾಟಕೋತ್ಸವ ಸಮಿತಿ' ಎಂ.ಡಿ. ಕಡ್ಲಿಕೊಪ್ಪ, ಐ.ಬಿ. ಬೆನಕೊಪ್ಪ ಹಾಗೂ ವಿವೇಕಾನಂದಗೌಡ ಪಾಟೀಲರ ನೇತೃತ್ವದಲ್ಲಿ

ಶಿರಹಟ್ಟಿಯ ರೋಟರಿ ಸಂಸ್ಥೆ ಮತ್ತು ಭಾರತ ಜ್ಞಾನ ವಿಜ್ಞಾನ ಸಮಿತಿಯ ಸಹಯೋಗದಲ್ಲಿ 'ಮಕ್ಕಳ ನಾಟಕೋತ್ಸವ - ೨೦೦೦'ದಲ್ಲಿ ಜಿಲ್ಲೆಯ ವಿವಿಧ ಊರುಗಳ ಪ್ರಾಥಮಿಕ ಶಾಲಾ ಮಕ್ಕಳು ಇಪ್ಪತ್ತು ನಾಟಕಗಳನ್ನು ಪ್ರದರ್ಶಿಸಿ ಭಾರೀ ಸುದ್ದಿಯನ್ನೇ ಮಾಡಿದರು.

ಶಿರಹಟ್ಟಿಯ ಫಕೀರೇಶ್ವರ ನಾಟ್ಯಸಂಘವು ಒಂದು ಹವ್ಯಾಸಿ ಕೂಟವಾಗಿದ್ದು ವರ್ಷಕ್ಕೊಂದು ಬಾರಿ ಸಾಮಾಜಿಕ ನಾಟಕವನ್ನಾಡುವ ಪರಿಪಾಠವನ್ನಿಟ್ಟುಕೊಂಡಿದೆ. **'ಫಕೀರೇಶ್ವರ'** ಸಣ್ಣಾಟ ಸೇರಿದಂತೆ **'ಗುಣಗೆದ್ದ ಗೌರಿ'**, **'ಸ್ನೇಹಬಂಧನ'** ಸಾಮಾಜಿಕ ನಾಟಕಗಳನ್ನು ಆಡುತ್ತ ಬಂದಿದೆ. ಬಸವರಾಜ ಬೋರಶೆಟ್ಟರ ನಿರ್ದೇಶನದಲ್ಲಿ ರವಿ ಹಳ್ಳಿ, ಗದಿಗೆಪ್ಪ ಭಾವಿ, ಶರಣಪ್ಪ ಭಾವಿ, ಶರಣಪ್ಪ ಬಡಿಗೇರ, ಫಕೀರೇಶ ಬಡಿಗೇರ, ಮುತ್ತು ಬಡಿಗೇರ ಅಭಿನಯ ಚತುರರಾಗಿದ್ದಾರೆ.

ಶಿರಹಟ್ಟಿ ತಾಲೂಕಿನ ಪ್ರಮುಖ ಪಟ್ಟಣವಾಗಿರುವ ಬೆಳ್ಳಟ್ಟಿಯಲ್ಲಿ ಶಿವಪ್ರಕಾಶ ಮಹಾಜನಶೆಟ್ಟರು, ವೆಂಕರೆಡ್ಡಿ ಆಳವಂಡಿ ಹಾಗೂ ಜಗದೀಶ ಗಾಂಜಿಯವರು ೨೦೦೪ ರಲ್ಲಿ ಕಟ್ಟಿದ **'ಶ್ರೀ ರಾಮಲಿಂಗೇಶ್ವರ ನಾಟ್ಯಸಂಘ'** ವು **'ಸಿಡಿದೆದ್ದ ಶಿವಶಕ್ತಿ'** (**'ರೈತರ ಬಾಳು, ಕಣ್ಣೀರಿನ ಗೋಳು'**) ನಾಟಕದ ಕೆಲವು ಪ್ರಯೋಗಗಳನ್ನು ಯಶಸ್ವಿಯಾಗಿ ಮಾಡಿದ್ದಾರೆ. ಬಸವರಾಜ ಬೆಳಹುಣಸಿ, ಸೋಮರೆಡ್ಡಿ ಆಳವಂಡಿಯವರ ನಿರ್ದೇಶನದ ಈ ನಾಟಕದಲ್ಲಿ ಸಿದ್ಧರಾಮಪ್ಪ ಮೊರಬದ, ಶಂಭು ಅಕ್ಕಿ, ಅಪ್ಪಣ್ಣ ಮೇಕಳಿ, ಸುರೇಶ ಮರಡ್ಡಿ, ಹನುಮಂತಪ್ಪ ತಳವಾರ, ದೇವಪ್ಪ ಚಕ್ರಸಾಲಿ, ಸಿದ್ಧಪ್ಪ ಕುಂಬಾರ ಮೊದಲಾದ ಹವ್ಯಾಸಿಗಳು ಉತ್ತಮ ಅಭಿನಯ ನೀಡಿ ಸಾರ್ವಜನಿಕರ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಶಿರಹಟ್ಟಿ ತಾಲೂಕಿನ ಚಿಕ್ಕ ಗ್ರಾಮ ಭಾವನೂರಿನ ಬಸನಗೌಡ ಎಸ್. ಪಾಟೀಲರ ನೇತೃತ್ವದಲ್ಲಿ ೨೦೦೮ ರಲ್ಲಿ ಅಸ್ತಿತ್ವಕ್ಕೆ ಬಂದಿರುವ **'ರಾಷ್ಟ್ರಪ್ರೇಮ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ'**ಯು ಭಾವನೂರಿನಲ್ಲಿ ಆಡಿದ **'ತಾಯಿಯ ಆಶೆ'** ಹಾಗೂ ವರವಿಯಲ್ಲಿ ಪ್ರದರ್ಶಿಸಿದ **'ಆದೇ ಕಣ್ಣು'** ನಾಟಕಗಳ ಪ್ರಯೋಗಗಳು ಹವ್ಯಾಸಿ ಚಟುವಟಿಕೆಗಳಾಗಿ ಹೆಸರು ಮಾಡಿವೆ. ಬನ್ನಿಕೊಪ್ಪದ ಪರಮೇಶ್ವರಪ್ಪ ಈಟಿಯವರ ನಿರ್ದೇಶನದಲ್ಲಿ ಆಡುತ್ತಿರುವ ಈ ನಾಟಕಗಳು ಗ್ರಾಮೀಣ ನೆಲೆಯಲ್ಲಿ ಹೊಸ ಸಂಚಲನೆಯನ್ನುಂಟು ಮಾಡಿವೆ.

ಶಿರಹಟ್ಟಿಯ ಎಸ್. ಆರ್. ಕುಲಕರ್ಣಿ ಮಿತ್ರಮಂಡಳಿಯವರ 'ವೆಂಕೋಬರಾವ ಹವ್ಯಾಸಿ ಕಲಾ ಬಳಗ'ವು **'ಹಳ್ಳಿ-ಹದ್ದು'** ನಾಟಕ ಪ್ರದರ್ಶನದ ನಂತರ ವಾರ್ಷಿಕ ಕಾರ್ಯಕ್ರಮಗಳಿಗಷ್ಟೇ ಸೀಮಿತವಾಗಿ, ಮತ್ತೀಗ ನಾಟಕದ ತಾಲೀಮು ಆರಂಭಿಸಿದೆ.

ಬಳಗಾನೂರಿನ ಬಾಳಪ್ಪ ಹುನಗುಂಡಿಯವರು ಹವ್ಯಾಸಿ ತಂಡವನ್ನು ಸಂಘಟಿಸಿದ್ದು ಪ್ರತಿವರ್ಷವೂ ಜಾತ್ರೆಯ ದಿನಗಳಲ್ಲಿ ವಿಚಾರ ಪ್ರಚೋದಕ ನಾಟಕಗಳನ್ನು ಆಡಿಸುತ್ತ ಬಂದಿದ್ದು, ಹನುಮಂತ ಕಲ್ಮನಿ, ಶರಣಪ್ಪ ಚೆಟ್ಟಿ ಮೊದಲಾದವರು ಪ್ರಮುಖ ಪಾತ್ರಗಳನ್ನು ವಹಿಸುತ್ತಿದ್ದಾರೆ.

ರೋಣ ತಾಲೂಕಿನ ಸರೇಗಲ್ಲದ 'ಶರಣ ಬಸವೇಶ್ವರ ನಾಟ್ಯ ಸಂಘ'ದ ಹವ್ಯಾಸಿಗಳು ೧೯೯೦ ರಿಂದ ಜಾತ್ರೆಯ ಸಂದರ್ಭದಲ್ಲಿ ಮೌನೇಶ ಬಡಿಗೇರರ ನಿರ್ದೇಶನದಲ್ಲಿ ಸಣ್ಣಾಟಗಳನ್ನು ಆಡುತ್ತ ಬಂದಿದ್ದಾರೆ.

ಜಕ್ಕಲಿಯ **'ಭುವನೇಶ್ವರಿ ನಾಟ್ಯ ಸಂಘ'** ಸುರೇಶಬಾಬು ಅರಹುಣಸಿ, ಶಿವನಾಗಪ್ಪ ದೊಡ್ಡಮೇಟಿ, ರವೀಂದ್ರನಾಥ ದೊಡ್ಡಮೇಟಿಯವರ ನೇತೃತ್ವದಲ್ಲಿ ಹಾಗೂ **'ಕಲ್ಮೇಶ್ವರ ನಾಟ್ಯಸಂಘ'**ದ ಹವ್ಯಾಸಿಗಳು ಮಲ್ಲಿಕಾರ್ಜುನ ದೊಡ್ಡಮೇಟಿಯವರ ನೇತೃತ್ವದಲ್ಲಿ ಸಣ್ಣಾಟಗಳನ್ನು ಆಡುವ ಕ್ರಿಯಾಶೀಲ ಕಲಾಕೂಟಗಳಾಗಿವೆ.

ಗದುಗಿನ ಕಲಾ ಶಿಕ್ಷಕರಾದ ಬಸವರಾಜ ನೆಲಜೇರಿ ಹಾಗೂ ಬಿ. ಶಿವರಾಂ ಅವರು ೨೦೦೨ ರಲ್ಲಿ ಹುಟ್ಟುಹಾಕಿದ **'ಸಾಹಿತ್ಯ ಕಲಾ ಸಂಸ್ಕೃತಿ ವಿಕಾಸ ಪರಿಷತ್ತು'**, **'ಭಯೋತ್ಪಾದನೆ ನಂತರ'** ಮತ್ತು **'ಸಾಕ್ರೆಟಿಸ್'** ನಾಟಕಗಳನ್ನು ಗದಗ, ಬಳ್ಳಾರಿ, ಶಿಗ್ಗಾವಿಗಳಲ್ಲಿ ಯಶಸ್ವಿಯಾಗಿ ಪ್ರದರ್ಶಿಸಿ ಹವ್ಯಾಸಿ ನಾಟಕ ರಂಗದ ಚೈತನ್ಯವನ್ನು ಹೆಚ್ಚಿಸಿದ್ದಾರೆ. ಈ ಪರಿಷತ್ತು ೨೦೦೮ ರಲ್ಲಿ ಮಕ್ಕಳ ನಾಟಕ ರಂಗ ತರಬೇತಿ ಶಿಬಿರ ನಡೆಸಿ ಮಕ್ಕಳಿಂದ 'ಅದಲು ಬದಲು' ನಾಟಕವನ್ನು ಪ್ರದರ್ಶಿಸಿ ಸಾರ್ವಜನಿಕರಿಂದ ಮೆಚ್ಚುಗೆ ಪಡೆದಿದ್ದಾರೆ.

ಗದಗ ತಾಲೂಕಿನ ಹುಯಿಲಗೋಳ ಗ್ರಾಮದ ಸಿ.ಜಿ.ಬಿ. ಹಿರೇಮಠರ **'ಸಿ.ಜಿ.ಬಿ. ಮಿತ್ರಮಂಡಳಿ'**ಯು ವಿಚಾರ ಪ್ರಚೋದಕ ನಾಟಕಗಳನ್ನು ಪ್ರದರ್ಶಿಸುತ್ತ ಜನರ ಗಮನ ಸೆಳೆದಿದೆ.

ಗದಗ ತಾಲೂಕಿನ **'ಸಂಭಾಪೂರ ಗ್ರಾಮದ ಆಂಜನೇಯ ಸೇವಾ ಸಂಗೀತ ನಾಟ್ಯಸಂಘ'**ವು ಕಳೆದ ಮೂರು ದಶಕಗಳಿಂದ ನಾಟಕ ಪ್ರದರ್ಶನಗಳಲ್ಲಿ ಉತ್ಸುಕವಾಗಿ ತೊಡಗಿಕೊಂಡಿರುವ ಹವ್ಯಾಸಿ ಕೂಟವಾಗಿದೆ. ಗೌಡಪ್ಪಗೌಡ ತಿಮ್ಮನಗೌಡ ಪಾಟೀಲ ಹಾಗೂ ಮಲ್ಲಪ್ಪ ಕರ್ಣೆಯವರ ನೆರವಿನಿಂದ ಹವ್ಯಾಸಿ ಕಲಾವಿದರು ವರ್ಷದಲ್ಲಿ ಎರಡು ಬಾರಿ ನಾಟಕ ಪ್ರದರ್ಶಿಸುತ್ತಿದ್ದಾರೆ. ಮಂಜುನಾಥ ಡೋಣಿ (ಸಂಘಟನೆ, ನಾಟಕ ರಚನೆ, ಅಭಿನಯ), ವಿರುಪಾಕ್ಷಯ್ಯ ಅಬ್ಬಿಗೇರಿ, ಕೃಷ್ಣಪ್ಪ ಪೂಜಾರ, ದೇವಪ್ಪ ಕುರಬರ (ಸ್ತ್ರೀ ಪಾತ್ರ), ಮಂಜುನಾಥ ತಳಗಡಿ (ಸ್ತ್ರೀ ಪಾತ್ರ), ರಾಮಪ್ಪ ಕುರಬರ, ಶರಣಪ್ಪ ತಿಮ್ಮಾಪೂರ (ಸ್ತ್ರೀ ಪಾತ್ರ),

ದೇವರೆಡ್ಡಿ ಬಂಡಿ, ಮರಿಯಪ್ಪ ಕರ್ಣಿ, ಜ್ಯೋತಿ ಬಳ್ಳಾರಿ (ವೃತ್ತಿರಂಗ ಕಲಾವಿದೆ), ಮಲ್ಲಿಕಾರ್ಜುನ ಡೋಣಿ, ಪಾಂಡುರಂಗ ಹೊಸ್ನರೆಡ್ಡಿ, ಕೃಷ್ಣದಾಸರ ದಾಸರ, ಶಶಿಕಾಂತ ಬಂಡಿ, ಪ್ರಶಾಂತ ನಾಗನೂರ, (ವ್ಯವಸ್ಥಾಪಕರು - ಸಂಘಟಕರು), ಆತ್ಮಾನಂದ ಬಂಡಿ, ತಿಮ್ಮನಗೌಡ ಪಾಟೀಲ, ವಸಂತರೆಡ್ಡಿ ಮಳ್ಳೂರು, ಪ್ರಕಾಶ ನಾಗನೂರ, ಗಣೇಶ ಅಬ್ಬಿಗೇರಿ, ಮಾರುತಿ ಪೂಜಾರ, ಲಕ್ಷ್ಮಣ ತಳಗಡಿ, ವೃತ್ತಿರಂಗ ಕಲಾವಿದೆಯರಾದ ಸುವರ್ಣಾ, ಅನುಪಮ, ಸುನಂದಾ (ಗದುಗಿನವರು), ಶ್ರೀನಿವಾಸ ಚಿಕ್ಕರೆಡ್ಡಿ ಮೊದಲಾದವರು ಕಲಾವಿದರು. ಹನುಮೇಶ ಸಿದ್ನೆಕೊಪ್ಪ (ಹಾರ್ಮೋನಿಯಂ) ಹಾಗೂ ವಿಜಯ (ಗಿಟಾರ್ ವಾದನ) ಹಾಗೂ ಯಲ್ಲೇಸಿ (ಕ್ಯಾಸಿಯೋ) ವಾದ್ಯಗಾರರು.

ಗದುಗಿನಲ್ಲಿ ಶಿಕ್ಷಕರಾಗಿದ್ದ ರಾಜಣ್ಣ ಹೂಗಾರ ಹಲವಾರು ನಾಟ್ಯಸಂಘಗಳಲ್ಲಿ ಪಾತ್ರಾಭಿನಯ ಮಾಡಿ, 'ವಿಜಯಶ್ರೀ ಹವ್ಯಾಸಿ ನಾಟಕ ಸಂಘ'ವನ್ನು ರಚಿಸಿ **'ತಾಳಿಕೋಟಿ ಬಲಿದಾನದ ಕಥೆ', 'ವೀರನಾಯಕ ಮುಕ್ಕಲ್ಲು ತಿಮ್ಮಯ್ಯ'** ಮೊದಲಾಗಿ ಹಲವು ನಾಟಕಗಳನ್ನು ಪ್ರದರ್ಶಿಸಿ ಪ್ರಶಸ್ತಿ ಪಡೆದಿದ್ದಾರೆ. ಐವತ್ತು ಏಕಾಂಕ ನಾಟಕಗಳ ರಚನೆ ಮಾಡಿದ್ದ ರಾಜಣ್ಣ ತೀರ ಇತ್ತೀಚೆಗಷ್ಟೇ ವಿಧಿವಶರಾದರು.

ರಾಘವೇಂದ್ರ ಯುವಸೇವಾ ಬಳಗ : ಗದುಗಿನ ಫಣೀಂದ್ರಾಚಾರ್ಯ ದ್ಯಾಮೇನಹಳ್ಳಿಯವರು ೨೦೦೫ ರಲ್ಲಿ ಆರಂಭಿಸಿದ **'ರಾಘವೇಂದ್ರ ಯುವಸೇವಾ ಬಳಗ'**ವು ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಸೇರಿಸಿ ಭಕ್ತಿಪ್ರಧಾನ ಸಂಗೀತರೂಪಕಗಳನ್ನು ಪ್ರದರ್ಶಿಸುತ್ತಿದ್ದಾರೆ. ಬೆಂಗಳೂರಿನ ರಂಗಾಸಕ್ತರ ಸಖ್ಯ ಹಾಗೂ ಸಿ. ಲಕ್ಷ್ಮಣರ ಬಳಿ ನಿರ್ದೇಶನದ ತಾಲೀಮು ಪಡೆದ ಇವರು ಯುವಜನತೆಯಲ್ಲಿ ನಾಟಕಾಸಕ್ತಿಯುನ್ನು ಬೆಳೆಸಲು ಮುಂದಾಗಿರುವುದು ರಂಗಭೂಮಿಯ ಬೆಳವಣಿಗೆಗೆ ಪೋಷಕವಾಗಿದೆ. **'ದಾಸನಮಾಡಿಕೋ ಎನ್ನ', 'ದಶಾವತಾರ', 'ದಾಸೋಹಂ ತವ ದಾಸೋಹಂ', 'ದೇವ ಬಂದಾ ನಮ್ಮ ಸ್ವಾಮಿ ಬಂದಾನೋ', 'ದಯತೋರೋ ದೇವಾ', 'ಧರ್ಮಕ್ಷೇತ್ರೇ-ಕುರುಕ್ಷೇತ್ರೇ', 'ಧರೆಗಿಳಿದ ಧರಣೀಧರ'** ಮೊದಲಾದ ಗೀತರೂಪಕಗಳನ್ನು ನಿರ್ದೇಶಿಸಿ, ಬೆಳಕು ವಿನ್ಯಾಸದ ತಂತ್ರದೊಂದಿಗೆ ಪ್ರದರ್ಶಿಸಿದ್ದಾರೆ. ಸಂಗೀತ, ಬೆಳಕು ಸಂಯೋಜನೆ, ಪ್ರಸಾಧನ ಕ್ಷೇತ್ರಗಳಲ್ಲಿಯ ತಜ್ಞರಂಗಕರ್ಮಿಗಳನ್ನು ಕರೆಸಿ, ನಾಟಕಗಳನ್ನು ಪರಿಣಾಮಕಾರಿಯಾಗಿ ಪ್ರಸ್ತುತಿ ಮಾಡುವ ಫಣೀಂದ್ರಾಚಾರ್ಯ ದ್ಯಾಮೇನಹಳ್ಳಿ ಒರ್ವ ಸಮರ್ಥ ನಿರ್ದೇಶಕರಾಗಿದ್ದಾರೆ.

ರೂಪಕ ನಾಟಕಗಳಲ್ಲಿ ಮಿಂಚುತ್ತಿರುವ ವಿದ್ಯಾರ್ಥಿಗಳಾದ ಕುಮಾರಿ ರಶ್ಮಿ ಕುಲಕರ್ಣಿ, ಸುಪ್ರಿಯಾ ಕುಲಕರ್ಣಿ, ಕುಮಾರಿ ಮಂಜರಿ ಜೋಷಿ, ಕುಮಾರಿ

ಜ್ಯೋತ್ಸ್ನಾ ಜೋಷಿ, ಕುಮಾರಿ ಸುಮನ ವಂದಾಲ, ಕುಮಾರಿ ಭವಾನಿ ದೇಶಪಾಂಡೆ, ಕುಮಾರಿ ಸೀಮಾ ಕುಲಕರ್ಣಿ, ಕುಮಾರಿ ಭಾಗ್ಯಶ್ರೀ ಕುಲಕರ್ಣಿ, ಕುಮಾರಿ ಶುಭಾಂಗಿ ದ್ಯಾಮೇನಹಳ್ಳಿ, ಮಹಾಂತೇಶ ಗೋಟಿ, ಅಕ್ಷಯ ಇನಾಮದಾರ, ಶ್ರೀನಿವಾಸ ಕುಲಕರ್ಣಿ, ವಾದಿರಾಜ ವಡವಿ, ಸಮರ್ಥ್ವ ದ್ಯಾಮೇನಹಳ್ಳಿ ಮೊದಲಾದವರು ಹವ್ಯಾಸಿ ರಂಗಭೂಮಿಯ ಭರವಸೆಗಳಾಗಿದ್ದಾರೆ.

೨೦೦೭ ರಲ್ಲಿ ಗದುಗಿನಲ್ಲಿ ರವೀಂದ್ರ ಕೊಪ್ಪರ್ ಆರಂಭಿಸಿದ 'ರಜನಿ ರಂಗನಿರಂತರ' ರಂಗ ಚಟುವಟಿಕೆಗಳಲ್ಲಿ ತೊಡಗಿದ್ದು, ಬೆಂಗಳೂರಿನ ಗೆಜ್ಜೆ-ಹೆಜ್ಜೆ ರಂಗತಂಡದಿಂದ ವಿಶೇಷವಾಗಿ ಗ್ರಾಮೀಣ ನೆಲೆಗಳಲ್ಲಿ ಜ್ವಲಂತ ಸಮಸ್ಯೆಗಳನ್ನಾಧರಿಸಿದ ನಾಟಕಗಳನ್ನು ಪ್ರದರ್ಶಿಸುತ್ತಿದೆ. ಹುಯಿಲಗೋಳ ನಾರಾಯಣರಾವ ಪ್ರತಿಷ್ಠಾನದ ವೇದಿಕೆಯ ಅಡಿಯಲ್ಲಿ ಗದಗ ಮತ್ತು ಬೆಂಗಳೂರಿನಲ್ಲಿ 'ಪತಿತೋದ್ಧಾರ' ನಾಟಕದ ದೃಶ್ಯಾವಳಿಗಳನ್ನು ಪ್ರಸ್ತುತಿ ಮಾಡಿದೆ.

೨೦೧೦ ರಲ್ಲಿ ಗದುಗಿನಲ್ಲಿ ಸಮಾವೇಶಗೊಂಡಿದ್ದ ಅಖಿಲ ಭಾರತ ೭೭ ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಗದುಗಿನ **'ಕೃತಪುರ ಕಲಾ ತಂಡ'**ವು ಪ್ರದರ್ಶಿಸಿದ ನಾಟಕ 'ರಾವಿ ನದಿಯ ದಂಡೆಯಲ್ಲಿ' ಪ್ರೇಕ್ಷಕರನ್ನು ಹೃದ್ಯವಾಗಿ ತಟ್ಟಿತು. ಕೇಂದ್ರ ಸಂಗೀತ ನಾಟಕ ಅಕಾಡೆಮಿಯ 'ಉಸ್ತಾದ ಬಿಸ್ಮಿಲ್ಲಾಖಾನ ಪ್ರಶಸ್ತಿ' ವಿಜೇತ ಮಾಲತೇಶ ಬಡಿಗೇರ ಅವರ ನಿರ್ದೇಶನ ಚೊಕ್ಕಟವಾಗಿದ್ದು, ನಾಟಕದ ಪ್ರಸ್ತುತಿ ಜನಮನವನ್ನು ಸೂರೆಗೊಂಡಿತು. ಕವಿತಾ ಕಾಶಪ್ಪನವರ, ವೀರೇಶ ಹೊಸಮನಿ, ಗೋಪಾಲ ಹುದ್ದಾರ, ಡಾ. ದತ್ತಮೂರ್ತಿ ಕುಲಕರ್ಣಿ, ಲಿಂಗರಾಜ ಬಗಲಿ, ರುದ್ರಣ್ಣ ಗುಳಗುಳಿ, ವಿದ್ಯಾ ಮೇಘರಾಜ, ಪದ್ಮಾ ಹೊಂಬಳ, ಪತ್ರೇಶ ಮುಂಡರಗಿ, ಎಂ.ಎಸ್. ಕುಲಕರ್ಣಿ, ಪ್ರದೀಪ ಹಾದಿಮನಿ ಅತ್ಯುತ್ತಮವಾಗಿ ಅಭಿನಯಿಸಿದರು.

ವೃತ್ತಿರಂಗಭೂಮಿ ಕಲಾವಿದೆ ಭಾರತಿ ಶಿರಹಟ್ಟಿಯವರು ಕಲಾವಿದೆಯರೊಂದಿಗೆ ಕಟ್ಟಿದ **'ಅಖಿಲ ಕರ್ನಾಟಕ ಶ್ರೀದೇವಿ ಮಹಿಳಾ ರಂಗಭೂಮಿ ಕಲಾವಿದೆಯರ ಸಂಸ್ಥೆ'**ಯು ೨೦೧೦ ಅಕ್ಟೋಬರ್‌ದಲ್ಲಿ ಗದುಗಿನ ತೋಂಟದಾರ್ಯ ಕಲ್ಯಾಣ ಮಂಟಪದಲ್ಲಿ ಕೇವಲ ಸ್ತ್ರೀಯರೆ ಪಾತ್ರ ಮಾಡಿದ ಐತಿಹಾಸಿಕ ನಾಟಕ 'ವೀರರಾಣಿ ಕಿತ್ತೂರು ಚೆನ್ನಮ್ಮ' ನಾಟಕ ಯಶಸ್ವಿಯಾಗಿ ಪ್ರದರ್ಶನಗೊಂಡಿತು.

**ಗದಗ ತಾಲೂಕಿನ ನಾಟಕ ಮಂಡಳಿಗಳು ಮತ್ತು ಕಲಾವಿದರು**

ಶ್ರೀ ಕಲ್ಮೇಶ್ವರ ನಾಟ್ಯಸಂಘ, ಕಿರೀಟಗೇರಿ (ಶಂಕರಪ್ಪ ಕಟಕಟಿ)

ಶ್ರೀ ನಾಗಲಿಂಗೇಶ್ವರ ನಾಟ್ಯಸಂಘ, ಕಿರೀಟಗೇರಿ (ಕಲ್ಲಪ್ಪ ಹಡಪದ)

ಶ್ರೀ ಮಾರುತೇಶ್ವರ ನಾಟ್ಯಸಂಘ, ಬೆಸಕೊಪ್ಪ

ಶ್ರೀ ಜಗಜ್ಯೋತಿ ಬಸವೇಶ್ವರ ನಾಟ್ಯಸಂಘ, ಬೆಸಕೊಪ್ಪ
ಶಂಕರಪ್ಪ ಕಟಕಟಿ, ಕಿರೀಟಗೇರಿ (ಸಂಘಟನೆ, ಅಭಿನಯ)
ಶರಣಪ್ಪ ಬಕನಿಂಗಿ, ಕಿರೀಟಗೇರಿ (ಅಭಿನಯ)
ಕಲ್ಮೇಶ ಲಿಂಗಧಾಳ, ಕಿರೀಟಗೇರಿ (ಅಭಿನಯ)
ಶಂಕರಪ್ಪ ಹಾಲಣ್ಣವರ, ಕಿರೀಟಗೇರಿ (ಅಭಿನಯ)
ಬಸುರಾಜ ಕಟಕಟಿ, ಕಿರೀಟಗೇರಿ (ಅಭಿನಯ)
ಪರಪ್ಪ ಶೇಖರಪ್ಪಾ ಬಿಂಗಿ (ನಾಟಕ ರಚನೆ, ನಿರ್ದೇಶನ)
ರುದ್ರಯ್ಯ ಚೆನಬಸಯ್ಯ ಹಿರೇಮಠ (ಅಭಿನಯ, ಗಾಯನ)
ಕನಕಪ್ಪ ಭೀಮಪ್ಪ ತಳವಾರ, ಕೋಟುಮಚಗಿ (ಅಭಿನಯ)
ಶರಣಪ್ಪಗೌಡ ಮಲ್ಲನಗೌಡ, ಕೋಟುಮಚಗಿ (ಅಭಿನಯ)
ಈಶಪ್ಪ ಚವಡಿ, ಕೋಟುಮಚಗಿ (ಅಭಿನಯ)
ಕರೀಮಸಾಬ ವಡಗೇರಿ, ಕೋಟುಮಚಗಿ (ತಬಲಾ ವಾದನ)
ಖಾದಿರಸಾಬ ಸರಖವಾಸ, ಕೋಟುಮಚಗಿ (ತಬಲಾ ವಾದನ)
ಹುಸೇನಸಾಬ ಅತ್ತಾರ, ಕೋಟುಮಚಗಿ (ತಬಲಾ ವಾದನ)
ಸುಭಾಸ ಯಮನಪ್ಪ ತಳವಾರ, ಕೋಟುಮಚಗಿ (ಹಾರ್ಮೋನಿಯಂ)
ಶಾಂತಪ್ಪ ಮುಂಡರಗಿ, ಕೋಟುಮಚಗಿ (ಹಾರ್ಮೋನಿಯಂ)
ವೀರಪ್ಪ ಜಗ್ಗಲ, ಕೋಟುಮಚಗಿ (ಹಾರ್ಮೋನಿಯಂ)
ಮಹಾದೇವಪ್ಪ ಇ. ಇಟಗಿ, ಕೋಟುಮಚಗಿ (ಹಾರ್ಮೋನಿಯಂ)
ರಮೇಶ ಪುರಷಪ್ಪನವರ, ಗದಗ (ಅಭಿನಯ; ಪ್ರಸಾಧನ).

**ರೋಣ ತಾಲೂಕಿನ ಹವ್ಯಾಸಿ ರಂಗ ಚಟುವಟಿಕೆಗಳು :**

ರೋಣದ ಈಶಣ್ಣ ಹುಚ್ಚಪ್ಪ ಗಡಗಿ ನೇತೃತ್ವದ ಗೆಳೆಯರ ಬಳಗವು ೧೯೭೦ ರ ದಶಕದಿಂದ ನಾಟಕ ಪ್ರದರ್ಶನ ಆರಂಭಿಸಿತು. 'ಗಂಡನ ಮನೆ' ನಾಟಕ ಹಲವು ಪ್ರಯೋಗಗಳನ್ನು ಕಂಡು ಜನಪ್ರಿಯವಾಗಿತ್ತು. ಕನ್ನಡ ಚಲನಚಿತ್ರ ಹಾಸ್ಯ ನಟ ನರಸಿಂಹರಾಜು ಕೆಲವು ಪ್ರಯೋಗಗಳಲ್ಲಿ ಪಾಲುಗೊಂಡಿದ್ದರು. ಬಸಪ್ಪ ಪಲ್ಲೇದ ತಬಲಾ ವಾದಕರಾಗಿದ್ದರು. ಸಿದ್ಧಲಿಂಗಪ್ಪ ಯಲಬುರ್ಗಿ ಹಾಗೂ ಚೆನ್ನಮಲ್ಲಯ್ಯ ಘಂಟಿಮಠ ಹಾರ್ಮೋನಿಯಂ ನುಡಿಸುತ್ತಿದ್ದರು. ವಡ್ಡರ ಮಾಸ್ತರ ರಚಿಸಿದ 'ಪಂಡಿತ ಬಸವರಾಜ ಮಹಾತ್ಮೆ' ಯಶಸ್ವಿ ಪ್ರಯೋಗಗಳನ್ನು ಕಂಡಿತು. 'ಹೇಮರೆಡ್ಡಿ ಮಲ್ಲಮ್ಮ', 'ದುಡ್ಡಿನ ದರ್ಪ', 'ದೇವಿ ಮಹಾತ್ಮೆ' ಇತರ ಯಶಸ್ವಿ

ನಾಟಕಗಳಾಗಿದ್ದವು. ವೆಂಕಣ್ಣ ಹೂಗಾರ ಹಾಸ್ಯ ಪಾತ್ರದಲ್ಲಿ, ಯಲ್ಲಪ್ಪ ಕಿರೇಸೂರ ಖಳನಾಯಕರಾಗಿ, ಬಸಣ್ಣ ಗಡಗಿ, ಮಲ್ಲಯ್ಯ ಹಿರೇಮಠ, ಮರಿಯಪ್ಪ ಭಜಂತ್ರಿ ಪ್ರಮುಖ ಪಾತ್ರಧಾರಿಗಳಾಗಿದ್ದರು. ಈಶಣ್ಣ ಗಡಗಿ, ಜಗದೀಶ ಗಡಗಿ ಇತರ ನಟರಾಗಿದ್ದರು. ಚಲನಚಿತ್ರ ನಟ ಸುದರ್ಶನ ಹಾಗೂ ನಟಿ ಶೈಲಶ್ರೀ 'ಗೆಳೆಯರ ಬಳಗ'ದ ನಾಟಕಗಳಲ್ಲಿ ಅಭಿನಯಿಸಿದ್ದರೆ, ನಟ ಉದಯಕುಮಾರ ಅತಿಥಿಗಳಾಗಿ ಆಗಮಿಸಿದ್ದರು.

ರೋಣ ತಾಲೂಕಿನ ತೋಟಗಂಟಿ ಗ್ರಾಮದ ನೀಲಪ್ಪ ಗೌಡರು ಪಾಟೀಲರ ಸಾರಥ್ಯದ 'ಅನ್ನದಾನೇಶ್ವರ ನಾಟ್ಯಸಂಘ'ವು 'ಟಿಪ್ಪುಸುಲ್ತಾನ', 'ಸ್ತ್ರೀರತ್ನ', 'ಅಣ್ಣ-ತಂಗಿ', 'ಮದುಮಗಳು' ನಾಟಕಗಳನ್ನು ಪ್ರದರ್ಶಿಸಿದೆ. ಜಯಶಂಕ್ರಯ್ಯ ಮಾಸ್ತರ ಹಾರ್ಮೋನಿಯಂ ವಾದ್ಯಗಾರರು.

ತೋಟಗಂಟಿಯ ಆರ್.ಜಿ. ಪಾಟೀಲ ಹಾಗೂ ಎ.ಆರ್. ಮಲ್ಲನಗೌಡರ ನೇತೃತ್ವದ 'ಹೊನಕೇರಿ ಮಲ್ಲಯ್ಯ'ನಾಟ್ಯಸಂಘವು ಧುತ್ತರಗಿ ಕೃತ 'ಮದುಮಗಳು', 'ಸ್ತ್ರೀರತ್ನ' ಹಾಗೂ ಮೋಹನ ಕುರುಡಗಿ ಬರೆದ 'ಎಚ್ಚಿಮ್ ನಾಯಕ' ಹಾಗೂ ಕಂದಗಲ್ ಹನುಮಂತರಾಯರ 'ರಕ್ತರಾತ್ರಿ' ನಾಟಕಗಳನ್ನು ಪ್ರದರ್ಶಿಸುತ್ತ ಬಂದಿದೆ. ದೇವೇಂದ್ರಪ್ಪ ಗಿರಡ್ಡಿ, ಅಶೋಕ ಗಿರಡ್ಡಿ, ಕಿಲ್ಲೇದಾರ, ಪ್ರೊ. ಮಲ್ಲಿಕಾರ್ಜುನ ಮಳ್ಳಿ, ಕಿಲ್ಲೇದಾರ, ಶರಣಯ್ಯ ಹೂಲಿ (ಸ್ತ್ರೀ ಪಾತ್ರ) ಅಭಿನಯ ಚತುರ ನಟರಾಗಿದ್ದಾರೆ. ಕೊಟ್ರಪ್ಪ ವಡ್ಡಿನ ಹಾಗೂ ಅಂದಾನಗೌಡ ದೊಡ್ಡಗೌಡರ ತಬಲಾ ಹಾಗೂ ಆರ್ಗನ್ ವಾದ್ಯಗಾರರು. ದೇವೇಂದ್ರಪ್ಪ ಗಿರಡ್ಡಿ ನಿರ್ದೇಶಕರು.

ತೋಟಗಂಟಿಯ ದುರ್ಗಪ್ಪ ಹಳ್ಳದಮನಿಯವರ 'ದುರ್ಗಾದೇವಿ ನಾಟ್ಯಸಂಘ'ವು, 'ಅಕ್ಕಮಹಾದೇವಿ', 'ಬಸವೇಶ್ವರ' ನಾಟಕಗಳನ್ನು ಯಶಸ್ವಿಯಾಗಿ ಪ್ರಯೋಗಿಸುತ್ತಿದೆ.

ರೋಣ ತಾಲೂಕಿನ ಬೂದಿಹಾಳ ದ ಈಶಪ್ಪಗೌಡ ಪಾಟೀಲರ 'ಶ್ರೀ ಜವುಳ ಬಸವೇಶ್ವರ ನಾಟ್ಯಸಂಘ'ವು 'ಸಿಂಧೂರ ಲಕ್ಷ್ಮಣ' ಹಾಗೂ ಮುಲ್ಲಾ ಕೃತ 'ಚಿತ್ತೂರ ಪದ್ಮಿನಿ' ನಾಟಕಗಳನ್ನು ಪ್ರದರ್ಶಿಸಿದೆ. ಗಂಗನಗೌಡ ಎಲ್ಲಪ್ಪಗೌಡರ ಪ್ರಮುಖ ನಟರು. ಮಡಿವಾಳರ ಮಾಸ್ತರ ಹಾರ್ಮೋನಿಯಂ ವಾದ್ಯಗಾರರು. ಗ್ರಾಮದ ವಿಶೇಷ ದಿನಗಳಲ್ಲಿ ನಾಟಕಗಳನ್ನು ರಂಗಕ್ಕೇರಿಸಲಾಗುತ್ತಿದೆ.

ರೋಣ ತಾಲೂಕಿನ ಬೂದಿಹಾಳದ 'ಶ್ರೀ ಜವುಳ ಬಸವೇಶ್ವರ ನಾಟ್ಯಸಂಘ'ವು ಈಶ್ವರಗೌಡ ಪಾಟೀಲರ ಮಾರ್ಗದರ್ಶನದಲ್ಲಿ ನಾಟಕಗಳನ್ನು

ಪ್ರದರ್ಶಿಸುತ್ತಿದೆ. 'ಸಿಂಧೂರ ಲಕ್ಷ್ಮಣ' ಇವರ ವಿಶೇಷ ಪ್ರದರ್ಶನವಾಗಿದ್ದು ಈಶ್ವರಗೌಡ ಪಾಟೀಲರು ಸಿಂಧೂರ ಲಕ್ಷ್ಮಣನ ಪಾತ್ರವನ್ನು ಅದ್ಭುತವಾಗಿ ಮಾಡುತ್ತಾರೆ. ಕರಬಸಯ್ಯ ಹೊಸಮಠ ಚತುರ ನಟರಾಗಿದ್ದಾರೆ. ಗಂಗನಗೌಡರು ಹಾರ್ಮೋನಿಯಂ ಮಾಸ್ತರರು.

ರೋಣ ತಾಲೂಕಿನ ಕುಂಟೋಜಿ ಗ್ರಾಮದಲ್ಲಿ ಕಳಕಯ್ಯ ನಿರುಪಾದಯ್ಯ ಕಾರಡಗಿಮಠರ ನೇತೃತ್ವದ 'ಶ್ರೀ ಕಾಲಕಾಲೇಶ್ವರ ನಾಟ್ಯ ಸಂಘ', ವೀರಭದ್ರಯ್ಯ ವೀರಬಸಯ್ಯ ಕಾರಡಗಿಮಠರ ನೇತೃತ್ವದ 'ಶ್ರೀ ಶರಣಬಸವೇಶ್ವರ ನಾಟ್ಯಸಂಘ' ಸಕ್ರಿಯ ಸಂಘಟನೆಗಳಾಗಿದ್ದು ಕುಂಟೋಜಿ ಸೇರಿದಂತೆ ಇತರ ಊರುಗಳಲ್ಲಿಯ ಜಾತ್ರಾ, ಮಹೋತ್ಸವಗಳಲ್ಲಿ ನಾಟಕಗಳನ್ನು ಪ್ರದರ್ಶಿಸುತ್ತ ಬಂದಿವೆ. ವೀರಭದ್ರಯ್ಯ ನಂದಿಕೋಲಮಠ ನಿರ್ದೇಶಕರು, ದುರಗಪ್ಪ ತಳವಾರ, ಹಣಮಪ್ಪ ಕಂಡಿ, ಕಳಕಯ್ಯ ಕಾರಡಗಿಮಠ, ರಾಚಯ್ಯ ಕಾರಡಗಿಮಠ, ಮೌನೇಶ ಬಡಿಗೇರ, ಯಲ್ಲಪ್ಪ ಬಡಿಗೇರ, ಬಸಪ್ಪ ಕಡಬಲಕಟ್ಟಿ, ಶಂಕ್ರಯ್ಯ ಕಾರಡಗಿಮಠ, ನಾಗಯ್ಯ ಕಾರಡಗಿಮಠ ಪ್ರಮುಖ ನಟರಾಗಿದ್ದಾರೆ, ದೇವೇಂದ್ರಪ್ಪ ಬಡಿಗೇರ ನಿರ್ದೇಶಕರು. ಗುರುಸಿದ್ದಪ್ಪ ಗಡಾದ ತಬಲಾವಾದಕರು. 'ಹೇಮರೆಡ್ಡಿ ಮಲ್ಲಮ್ಮ', 'ತಾಯಿಗೆ ತಕ್ಕಮಗ', 'ವೀರಅಭಿಮನ್ಯು' ಮೊದಲಾದ ನಾಟಕಗಳನ್ನು ಪ್ರಚಲಿತ ಪ್ರದರ್ಶಿಸುತ್ತಿದ್ದಾರೆ.

ರೋಣ ತಾಲೂಕಿನ ಬೋಪಳಾಪುರದ 'ಮಾರುತಿ ನಾಟ್ಯ ಸಂಘ'ವು ೧೯೭೨ ರಿಂದ ನಾಟಕಗಳನ್ನು ಪ್ರದರ್ಶಿಸುತ್ತ ಬಂದಿದೆ. ಪ್ರಭು ಸಣ್ಣಕ್ಕಿ (ನಾಟಕ ರಚನೆ, ನಿರ್ದೇಶನ, ಅಭಿನಯ), ನಾಗರಾಜ ಸಣ್ಣಕ್ಕಿ, ರವೀಂದ್ರ, ಮೊಳವಾಡ, ಚೆನ್ನಯ್ಯ ಸಾಲಿಮಠ, ಶ್ರೀಕಾಂತ ಮಾಸರೆಡ್ಡಿ ಕಲಾವಿದರು. ನಾಗನಗೌಡ ಪಾಟೀಲ ಹಾರ್ಮೋನಿಯಂ ಹಾಗೂ ರವೀಂದ್ರ, ಬಡಿಗೇರ ತಬಲಾ ವಾದಕರು.

**ರೋಣ ತಾಲೂಕಿನ ನಾಟಕ ಮಂಡಳಿಗಳು ಮತ್ತು ಕಲಾವಿದರು :**

ಶ್ರೀ ಮಾರುತೇಶ್ವರ ನಾಟ್ಯಸಂಘ, ಮಲ್ಲಾಪೂರ

ಶ್ರೀ ಬಸವೇಶ್ವರ ನಾಟ್ಯಸಂಘ, ಮಲ್ಲಾಪೂರ

ಶ್ರೀ ದುರ್ಗಮ್ಮದೇವಿ ನಾಟ್ಯಸಂಘ, ಕೊತಬಾಳ

ಶ್ರೀ ಬಸವೇಶ್ವರ ನಾಟ್ಯಸಂಘ, ಕೊತಬಾಳ

ಶಂಕರಣ್ಣ ಸಂಕಣ್ಣವರ ನೇತೃತ್ವದ

ಅರುಣೋದಯ ಕಲಾ ತಂಡ, ಕೊತಬಾಳ.

ದುರ್ಗಾದೇವಿ ನಾಟ್ಯ ಸಂಘ, ಗಜೇಂದ್ರಗಡ,

ಸೇವಾಲಾಲ ನಾಟ್ಯಸಂಘ, ಗಜೇಂದ್ರಗಡ,
(ಮಾರುತಿ ಯಲಗುಣಚಿ-ಸಂಘಟಿಕರು)

* ಗ್ರಾಮದೇವತಾ ಹವ್ಯಾಸಿ ನಾಟ್ಯ ಸಂಘ, ಮೆಣಸಗಿ
* ಶ್ರೀ ರೇವಣಸಿದ್ದೇಶ್ವರ ನಾಟ್ಯಸಂಘ, ಮೆಣಸಗಿ
* ಶ್ರೀ ವೀರಭದ್ರೇಶ್ವರ ನಾಟ್ಯಸಂಘ, ಮೆಣಸಗಿ
* ಶ್ರೀ ಲಿಂಗಬಸವೇಶ್ವರ ನಾಟ್ಯಸಂಘ, ಮೆಣಸಗಿ
* ಶ್ರೀ ವೀರಭದ್ರೇಶ್ವರ ಹವ್ಯಾಸಿ ನಾಟ್ಯಸಂಘ, ಸೂಡಿ (ಬಿ.ಆರ್.ಮಾರನಬಸರಿ)
* ನಾಗರಾಜ ಲಿಂಗಸೂರ ಅವರ ಶ್ರೀ ಶಿವಶಕ್ತಿ ನಾಟ್ಯಸಂಘ, ಹೊಳೆಆಲೂರು
* ಶ್ರೀ ಶರಣಬಸವೇಶ್ವರ ನಾಟ್ಯ ಸಂಘ, ನಾಗೇಂದ್ರಗಡ
* ಶ್ರೀ ವೀರಭದ್ರೇಶ್ವರ ನಾಟ್ಯಸಂಘ, ನಾಗೇಂದ್ರಗಡ
* ಶ್ರೀ ಸುಬ್ರಮಣ್ಯಂ ಸಿದ್ಧಾರೂಢ ನಾಟ್ಯಸಂಘ, ನಾಗೇಂದ್ರಗಡ
* ಶ್ರೀ ಕಾಲಕಾಲೇಶ್ವರ ನಾಟ್ಯಸಂಘ, ಕುಂಟೋಜಿ
  (ಸಂಚಾಲಕರು-ಕಳಕಯ್ಯ ನಿರುಪಾದಯ್ಯ ಕಾರಡಗಿಮಠ)
* ಶ್ರೀ ತುಳಜಾಭವಾನಿ ನಾಟ್ಯಸಂಘ, ಗೋಗೇರಿ.

'ಸ್ಪಂದನ' ಕಲಾತಂಡ, ರೋಣ : ರುದ್ರಯ್ಯಸ್ವಾಮಿ ಹಿರೇಮಠ ಮತ್ತು ಕೆ.ಎಸ್.ಗಡಿಯಪ್ಪನವರ ಸಂಚಾಲಕತ್ವ

ಶ್ರೀ ಹುಚ್ಚೀರೇಶ್ವರ ನಾಟ್ಯಸಂಘ, ಗೋಗೇರಿ
ಶ್ರೀ ಸಂಗಮೇಶ್ವರ ನಾಟ್ಯಸಂಘ, ಸವಡಿ,
ಶ್ರೀ ಶ್ರೀಶೈಲಮಲ್ಲಿಕಾರ್ಜುನ ನಾಟ್ಯಸಂಘ, ಸವಡಿ
ಶ್ರೀ ಚೌಡೇಶ್ವರಿ ನಾಟ್ಯಸಂಘ, ಸವಡಿ
ಶ್ರೀ ಕೊಡೆಕಲ್ ಬಸವೇಶ್ವರ ನಾಟ್ಯಸಂಘ, ಸವಡಿ
ಶ್ರೀ ತ್ರಿಮೂರ್ತೇಶ್ವರ ನಾಟ್ಯಸಂಘ, ಸವಡಿ
ಶ್ರೀ ವೀರಭದ್ರೇಶ್ವರ ನಾಟ್ಯಸಂಘ, ಸವಡಿ
ಶ್ರೀ ರೇವುಣಸಿದ್ಧೇಶ್ವರ ನಾಟ್ಯಸಂಘ, ಸವಡಿ
ಶ್ರೀ ವೀರಭದ್ರೇಶ್ವರ ನಾಟ್ಯಸಂಘ, ನಿಡಗುಂದಿ
ಶ್ರೀ ಗ್ರಾಮದೇವತಾ ನಾಟ್ಯಸಂಘ, ನಿಡಗುಂದಿ
ಶ್ರೀ ಕಲ್ಮೇಶ್ವರ ನಾಟ್ಯಸಂಘ, ಗುಜಮಾಗಡಿ (ವೀರನಗೌಡ ವೀರಭದ್ರಪ್ಪ ಪಡಿಯಪ್ಪಗೌಡರ ಸಾರಥ್ಯ)

ಶ್ರೀ ದುರ್ಗಾಪರಮೇಶ್ವರಿ ನಾಟ್ಯಸಂಘ, ಗುಜಮಾಗಡಿ (ಸಂಗಣ್ಣ ಕಳಸಾಪೂರ)
ವರವೀರಭದ್ರೇಶ್ವರ ನಾಟ್ಯಸಂಘ, ಕುರುಡಗಿ. (ವಿ.ಕೆ.ಗುರುಮಠರ ಸಾರಥ್ಯ)

---

* ರುದ್ರಗೌಡ ಫಕೀರಗೌಡ ದಾನಪ್ಪನವರ, ಮಲ್ಲಾಪೂರ (ಅಭಿನಯ- 'ಕಲಿಯುಗದ ಭೀಮ' ಎಂಬ ಖ್ಯಾತಿ)
* ಚಂದ್ರಗೌಡ ದಾನಪ್ಪಗೌಡ, ಮಲ್ಲಾಪುರ (ಅಭಿನಯ)
* ಭೀಮಣ್ಣ ಮಾದರ, ಮಲ್ಲಾಪೂರ (ಹಾರ್ಮೋನಿಯಂ)
* ಮಾರುತಿ ಮಾದರ, ಮಲ್ಲಾಪೂರ (ಅಭಿನಯ)
* ಸುಬ್ಬಣ್ಣ ಮಾಸ್ತರ ಮಕಾನದಾರ, ಮಲ್ಲಾಪೂರ (ಹಾರ್ಮೋನಿಯಂ, ಅಭಿನಯ)
* ವಿರುಪಾಕ್ಷಗೌಡ ಅಯ್ಯನಗೌಡ, ಮಲ್ಲಾಪೂರ (ಹಾರ್ಮೋನಿಯಂ)
* ಕರಿಯಪ್ಪ ಹಡಪದ, ಮಲ್ಲಾಪೂರ (ತಬಲಾ, ರಂಗಗೀತೆ, ಹಾಡುಗಾರ)
* ಶಂಕರಣ್ಣ ಸಂಕಣ್ಣವರ, ಕೊತಬಾಳ (ಜಾನಪದ ಕಲಾವಿದ ; ಅಭಿನಯ ; ಸಂಘಟನೆ)
* ಸತ್ಯಪ್ಪ ನಾಗನೂರ, ಕೊತಬಾಳ (ಅಭಿನಯ)
* ಫಕೀರಗೌಡ ಪಾಟೀಲ, ಕೊತಬಾಳ (ಹಾರ್ಮೋನಿಯಂ)
* ಬಸವರಾಜ ಪಾಗದ, ಕೊತಬಾಳ (ಹಾರ್ಮೋನಿಯಂ)
* ಹಂಸಪ್ರಸಾದ ಶಾಸ್ತ್ರಿ ಕೊತಬಾಳ (ಹಾರ್ಮೋನಿಯಂ)
* ಶರಣಪ್ಪ ಹಡಪದ, ಕೊತಬಾಳ (ಹಾರ್ಮೋನಿಯಂ)
* ಶಿವರುದ್ರಪ್ಪ ಬಾಸಲಾಪೂರ, ಕೊತಬಾಳ (ತಬಲಾ)
* ಈಶ್ವರ ಬಡಿಗೇರ, ಕೊತಬಾಳ (ತಬಲಾ)
* ವಿಜಯಕುಮಾರ ಅಂಗಡಿ, ನರೇಗಲ್ಲ (ಅಭಿನಯ)
* ಮಲ್ಲಿಕಾರ್ಜುನ ಕುಲಕರ್ಣಿ, ಕೋಡಿಕೊಪ್ಪ (ಅಭಿನಯ)
* ಶ್ರೀಮತಿ ಅನಸೂಯಾ ಹೊಸೂರಮಠ, ನಿಡಗುಂದಿ (ಅಭಿನಯ)
* ರೇವಣಸಿದ್ಧಯ್ಯ ಹೊಸೂರಮಠ, ನಿಡಗುಂದಿ (ಅಭಿನಯ)
* ನೀಲಪ್ಪ ಡಂಬಳ, ತೋಟಗಂಟಿ. (ಅಭಿನಯ)
* ಶಿವಯ್ಯಸ್ವಾಮಿ ಮುದೇನಗುಡಿ, ರೋಣ. (ಅಭಿನಯ)
* ಹುಚ್ಚೀರಯ್ಯ ಹಿರೇಮಠ, ಇಟಗಿ (ನಾಟಕ ರಚನೆ, ಅಭಿನಯ).

* ಜಿ. ಶೌಕತ್ತಲಿ ಬಸರಕೋಡ - ಬೇಲೇರಿ (ನಾಟಕ ರಚನೆ, ಅಭಿನಯ)
* ಬಿ.ಎಸ್. ಜಗಾಪೂರ (ಅಭಿನಯ-ನಿರ್ದೇಶನ)
* ಶಿವಪುತ್ರಪ್ಪ ಶೀಪರಮಟ್ಟಿ, ಯಾವಗಲ್ಲ (ಅಭಿನಯ)
* ವೆಂಕಟೇಶ ಗಾಣಿಗೇರ, ಮೇಲ್ಮಠ (ಅಭಿನಯ)
* ನಿಂಗಪ್ಪ ಬಾಣದ, ಮೆಣಸಗಿ (ಅಭಿನಯ)
* ಫಕೀರಪ್ಪ ಹುಡೇದ, ಮೆಣಸಗಿ (ಅಭಿನಯ)
* ಸುಭಾಸ ಡೊಂಬರ, ಮೆಣಸಗಿ (ಹಾರ್ಮೋನಿಯಂ)
* ಮಲ್ಲಪ್ಪ ಹಡಪದ, ಮೆಣಸಗಿ (ತಬಲಾ ವಾದನ ಮತ್ತು ಹಾರ್ಮೋನಿಯಂ)
* ಹನುಮಂತಪ್ಪ ಯರಗೊಪ್ಪ, ಮೆಣಸಗಿ, (ಹಾರ್ಮೋನಿಯಂ)
* ನಿಂಗಪ್ಪ ತೊಂಡಿಹಾಳ, ಸೂಡಿ (ಹಾರ್ಮೋನಿಯಂ)
* ಕಳಕಪ್ಪ ಅಂಗಡಿ, ಸೂಡಿ (ತಬಲಾ ವಾದನ)
* ಬಲರಾಜ ಜಮಖಂಡಿ, ಸವಡಿ (ನಾಟಕ ರಚನೆ)
  'ಕುರುಬನಿಂದ ಕುಬೇರನಾದ', 'ಮಂಗಳಾ ನನ್ನ ಅತ್ತಿಗೆ' ಪ್ರಸಿದ್ಧ ನಾಟಕಗಳು.
* ವಜೀರಬಾಬು ಕುರಡಗಿ, ಕುರಡಗಿ (ನಾಟಕ ರಚನೆ ಮತ್ತು ಹಾರ್ಮೋನಿಯಂ)
* ಅನೀಲ ಹೊಸಮನಿ, ಜಕ್ಕಲಿ (ನಾಟಕ ರಚನೆ)
* ಎನ್.ಡಿ. ಬಡಿಗೇರ, ನರೇಗಲ್ಲ (ನಾಟಕ ರಚನೆ)
* ರೇವಣಸಿದ್ಧಪ್ಪ ಮೇಟಿ (ನಾಟಕ ರಚನೆ, ಅಭಿನಯ)
* ಅಯ್ಯಪ್ಪ ದೊಡ್ಡಮೇಟಿ, ಜಕ್ಕಲಿ (ನಾಟಕ ರಚನೆ)
* ರಜಾಕಸಾಬ ಮುಲ್ಲಾ (ನಾಟಕ ರಚನೆ, ಖಳನಾಯಕರು)
* ಮಹಾಲಿಂಗ ಸಂಕನೂರ, ಜಕ್ಕಲಿ (ಅಭಿನಯ)
* ಸಂಗನಗೌಡರ ಬಂಡಿ, ಅಬ್ಬಿಗೇರಿ (ನಿರ್ದೇಶನ)
* ಮಲ್ಲಪ್ಪ ಮಾಸ್ತರ ಹೊಂಬಾಳಿ, ಅಬ್ಬಿಗೇರಿ (ನಿರ್ದೇಶನ, ಸ್ತ್ರೀ ಪಾತ್ರ, ಹಾರ್ಮೋನಿಯಂ)
* ಫಾಲಾಕ್ಷಯ್ಯ ಅರಳೆಲಿಮಠ, ಅಬ್ಬಿಗೇರಿ (ಹಾರ್ಮೋನಿಯಂ)
* ರೇವಣಸಿದ್ಧಯ್ಯ ಅರಳೆಲಿಮಠ, ಅಬ್ಬಿಗೇರಿ (ನಿರ್ದೇಶನ ಮತ್ತು ಹಾರ್ಮೋನಿಯಂ)
* ಬಡೇಸಾಬ ತಹಸೀಲದಾರ, ಅಬ್ಬಿಗೇರಿ (ನಿರ್ದೇಶನ)
* ಪರಪ್ಪ ಮಾಸ್ತರ ಸುಂಕದ, ಅಬ್ಬಿಗೇರಿ (ನಿರ್ದೇಶನ)

* ಶಂಕ್ರಣ್ಣಾ ಮಾಳಶೆಟ್ಟಿ, ಅಬ್ಬಿಗೇರಿ (ಪೌರಾಣಿಕ ನಾಟಕ ಸ್ತ್ರೀ ಪಾತ್ರಧಾರಿ)
* ಬಸಯ್ಯ ಶಿವಪೂಜಿ, ಅಬ್ಬಿಗೇರಿ (ಪೌರಾಣಿಕ ನಾಟಕಗಳಲ್ಲಿ ಅಭಿನಯ)
* ಬಸಪ್ಪ ಬಾರಕೇರ, ಅಬ್ಬಿಗೇರಿ (ಅಭಿನಯ)
* ಬಸಪ್ಪ ಹೂಗಾರ, ಅಬ್ಬಿಗೇರಿ (ತಬಲಾ ವಾದನ)
* ಬಸಯ್ಯ ಕಳ್ಳಿಮಠ, ಅಬ್ಬಿಗೇರಿ (ನಿರ್ದೇಶನ)
* ನಾಗಪ್ಪ ಕಮ್ಮಾರ, ಅಬ್ಬಿಗೇರಿ (ಮೃದಂಗ-ತಬಲಾ)
* ಚಿಕ್ಕಪ್ಪ ಕಮ್ಮಾರ, ಅಬ್ಬಿಗೇರಿ (ಮೃದಂಗ-ತಬಲಾ)
* ಶಿವಣ್ಣಾ ಕಾಳಗಿ, ಅಬ್ಬಿಗೇರಿ (ಸಿದ್ದೇಕೊಪ್ಪ) (ನಿರ್ದೇಶನ)
* ಕನಕಪ್ಪ ಐಹೊಳಿ, ಅಬ್ಬಿಗೇರಿ (ತಬಲಾ ವಾದನ)
* ಕಲ್ಲಪ್ಪ ಹೂಗಾರ, ಎಚ್ಚರಪ್ಪ ಹೂಗಾರ, ಹುಲ್ಲೂರು (ತಬಲಾ ವಾದನ)
* ಈಶ್ವರ ಇಟಗಿ, ಹುಲ್ಲೂರು (ಅಭಿನಯ)
* ಆರ್.ವಿ. ಹೆರಕಲ್ (ರುದ್ರಪ್ಪ ಮಾಸ್ತರ) (ಅಭಿನಯ)
* ವಿ.ಕೆ.ಪಾಟೀಲ, ಹುಲ್ಲೂರು (ನಾಟಕ ರಚನೆ)
  'ಡಬ್ಬಲ ತಾಳಿ', 'ರುದ್ರಭೂಮಿ', 'ಅಣ್ಣನಿಗೆ ಹೆಣ್ಣಿನ, ತಂಗಿಗೆ ತಾಳಿಯ ಹುಚ್ಚು', ಯಶಸ್ವೀ ನಾಟಕಗಳು.
* ಬಸನಗೌಡರ ದಾನಪ್ಪಗೌಡರು, ಹುಲ್ಲೂರು (ಅಭಿನಯ)
* ರಾಚಯ್ಯಸ್ವಾಮಿ ಹಿರೇಮಠ, ಹುಲ್ಲೂರು (ಹಾರ್ಮೋನಿಯಂ- ಗುಡಗೇರಿ ಬಸವರಾಜರ ಕಂಪನಿಯಲ್ಲಿ ಸೇವೆ ಸಲ್ಲಿಸಿದವರು)
* ಸಂಗಪ್ಪ ಹೆರಕಲ್, ಹುಲ್ಲೂರು (ಅಭಿನಯ)
* ಕಲ್ಲಪ್ಪ ಮಡಿವಾಳ, ಹುಲ್ಲೂರು (ಅಭಿನಯ)
* ಕಲ್ಲನಗೌಡ ಸೋಮನಗೌಡರು, ಹುಲ್ಲೂರು (ಅಭಿನಯ)
* ಶಿವಯ್ಯ ಹಿರೇಮಠ, ಮುದೇನಗುಡಿ (ಅಭಿನಯ)
* ಕಟ್ಟಿಬಸಪ್ಪ ಶಾಸ್ತ್ರಿ ಮುದೇನಗುಡಿ (ನಾಟಕ ನಿರ್ದೇಶನ, ಹಾರ್ಮೋನಿಯಂ, ತಬಲಾ ವಾದನ)
* ಮಲ್ಲಪ್ಪ ಗಾಣಿಗೇರ, ಜಕ್ಕಲಿ (ಅಭಿನಯ)
* ಹಸನಸಾಬ ಹೆಗ್ಗುಲಿ, ಜಕ್ಕಲಿ (ನಾಯಕಾಭಿನಯ)
* ಪ್ರಭಣ್ಣಾ ಪಲ್ಲೇದ, ಜಕ್ಕಲಿ (ಅಭಿನಯ)
* ಜಂಬುನಾಥ ಅಂದಾನೆಪ್ಪ ದೊಡ್ಡಮೇಟಿ (ಅಭಿನಯ)
* ಜ್ಞಾನದೇವ ದೊಡ್ಡಮೇಟಿ (ನಾಟಕ ರಚನೆ)
* ಬಾಳಪ್ಪ ಹಿರೇಮನಿ, ನಿಡಗುಂದಿ (ನಾಟಕ ರಚನೆ)

* ದೇವೇಂದ್ರಪ್ಪ ಬಡಿಗೇರ, ನಿಡಗುಂದಿ (ನಿರ್ದೇಶನ)
* ಹೊಗರಿ ತೊಂಬಾಳಿ, ನಾಗೇಂದ್ರಗಡ (ನಾಟಕ ರಚನೆ)
* ಚಂದ್ರಶೇಖರಯ್ಯ ಪುರಾಣಿಕಮಠ, ನಾಗೇಂದ್ರಗಡ (ನಿರ್ದೇಶನ)
* ಗಂಗಾಧರಯ್ಯ ಮಠದ, ನಾಗೇಂದ್ರಗಡ (ನಿರ್ದೇಶನ)
* ಭರಮಪ್ಪ ಹನುಮಪ್ಪ ಹಂಡಿ, ನಾಗೇಂದ್ರಗಡ (ನಿರ್ದೇಶನ)
* ಶರಣಯ್ಯ ಮಠದ, ನಾಗೇಂದ್ರಗಡ (ನಾಟಕ ರಚನೆ)
* ಗಂಗಯ್ಯ ವಸ್ತ್ರದ, ನಾಗೇಂದ್ರಗಡ (ತಬಲಾ ವಾದನ)
* ಬಾಳಪ್ಪ ರಂಗಪ್ಪ ಜಾಲದ, ನಾಗೇಂದ್ರಗಡ (ಅಭಿನಯ)
* ವೀರಭದ್ರಪ್ಪ ನಂದಿಕೋಲಮಠ, ಕುಂಟೋಜಿ (ನಿರ್ದೇಶನ)
* ದುರಗಪ್ಪ ತಳವಾರ, ಕುಂಟೋಜಿ (ಅಭಿನಯ)
* ಹನುಮಪ್ಪ ಕರಡಿ, ಕುಂಟೋಜಿ (ಅಭಿನಯ)
* ದೇವಪ್ಪ ಮಾಸ್ತರ ವಾಲ್ಮೀಕಿ, ಹಾಳಕೇರಿ (ನಿರ್ದೇಶನ)
* ಹನುಮಂತಪ್ಪ ಬ. ದೊಡ್ಡಮನಿ, ಹಾಳಕೇರಿ (ಅಭಿನಯ)
* ಚಿನ್ನಪ್ಪ ಮಾಸ್ತರ ವಲ್ಲೇದ, ಜಕ್ಕಲಿ (ಅಭಿನಯ)
* ವೀರಬಸಯ್ಯ ಸೂಡಿ, ಜಕ್ಕಲಿ (ಅಭಿನಯ, ನಿರ್ದೇಶನ, 'ಹಾಸ್ಯಬ್ರಹ್ಮ')
* ಇಮಾಮಸಾಬ ನಮಾಜಿ, ಜಕ್ಕಲಿ (ಹಾರ್ಮೋನಿಯಂ)
* ರುದ್ರಪ್ಪ ಹೂಗಾರ, ಜಕ್ಕಲಿ (ತಬಲಾ ವಾದನ, ಮೃದಂಗ ವಾದನ)
* ಮರಿಯಪ್ಪ ಭಜಂತ್ರಿ, ರೋಣ (ಕೊಳಲು, 'ಲೆಜೆಂಡ್')
* ಹನುಮಂತಪ್ಪ ಕೆಳಗಡೆ, ಜಕ್ಕಲಿ (ಹಾರ್ಮೋನಿಯಂ)
* ವಿಜಯ ಅಂಗಡಿ, ನರೇಗಲ್ಲ (ನಿರ್ದೇಶನ)

ಶಿವಪ್ರಕಾಶ ಚೆನ್ನಬಸಪ್ಪ ಅಂಗಡಿ, ಗುಜಮಾಗಡಿ (ಅಭಿನಯ)
ವೀರಭದ್ರಗೌಡ ಮಳೇಗೌಡರು, ಗುಜಮಾಗಡಿ (ಅಭಿನಯ)
ಉದ್ದಾನಪ್ಪ ಹೂಗಾರ, ಗುಜಮಾಗಡಿ (ಹಾರ್ಮೋನಿಯಂ)
ಕುಬೇರಗೌಡ ಮಳೇಗೌಡರ (ಹಾರ್ಮೋನಿಯಂ)
ಈರನಗೌಡ ಪಡಿಯಪ್ಪಗೌಡರು, ಗುಜಮಾಗಡಿ (ಅಭಿನಯ)
ಕಲ್ಲೇಶ ತಳವಗೇರಿ, ಗುಜಮಾಗಡಿ (ಸಂಘಟನೆ, ನಿರ್ದೇಶನ)
ವಿಜಯಕುಮಾರ ಅಂಗಡಿ, ಗುಜಮಾಗಡಿ (ಹಾರ್ಮೋನಿಯಂ, ಆರ್ಗನ್)
ರುದ್ರಗೌಡ ಪಡಿಯಪ್ಪನವರ (ನಾಟ್ಯಸಂಘದ ಸಂಚಾಲಕರು, ನಿರ್ದೇಶನ)
ರಾಚಯ್ಯಸ್ವಾಮಿ ಗುರುಮಠ, ಕುರುಡಗಿ (ಹಾರ್ಮೋನಿಯಂ, ಅಭಿನಯ)

ಯಮನೂರುಸಾಬ ನದಾಫ್, ಕುರುಡಗಿ (ತಬಲಾ ವಾದನ)
ಶಿವರಾಯಪ್ಪ ಭಜಂತ್ರಿ, ಕುರುಡಗಿ (ಆರ್ಗನ್)
ತಿಮ್ಮರೆಡ್ಡಿ ಕರಡ್ಡಿ, ಕುರುಡಗಿ (ಅಭಿನಯ, ಖಳನಾಯಕ)
ಶಿವಪ್ಪ ಅಸುಂಡಿ, ಕುರುಡಗಿ (ಅಭಿನಯ, ಹನುಮಂತನ ಪಾತ್ರದ ಖ್ಯಾತಿ)
ಈಶಪ್ಪ ಶಂಭುಗೌಡರ, ಕುರುಡಗಿ (ಅಭಿನಯ)
ಬಸಪ್ಪ ಕಮ್ಮಾರ, ಕುರುಡಗಿ (ಅಭಿನಯ)
ಶಂಕ್ರಪ್ಪ ಬಡಿಗೇರ, ಗೋಗೇರಿ (ಹಾರ್ಮೋನಿಯಂ, ತಬಲಾ ವಾದನ)
ಶಂಕ್ರಪ್ಪ ರೊಳ್ಳಿ (ಹಾರ್ಮೋನಿಯಂ)
ಗಜೇಂದ್ರಗಡದ ಚೋರಗಸ್ತಿ ನಜೀರಸಾಬ್ (ಕ್ಲಾರೊನೆಟ್ ಹಾಗೂ ಬ್ಯಾಂಗೋ)
ಕಳಕಪ್ಪ ಹೊರಪೇಟಿ, ಗೋಗೇರಿ (ಅಭಿನಯ)
ರಾಮಚಂದ್ರಪ್ಪ ಚೋಪಡೆ, ಗೋಗೇರಿ (ಅಭಿನಯ)
ಶಹಬುದ್ದೀನ ದೊಡ್ಡಮನಿ, ಸವಡಿ (ನಾಟಕ ರಚನೆ, ಅಭಿನಯ)
ಅಶೋಕ ಸಂಗಪ್ಪ ಹೂಗಾರ, ಸವಡಿ (ಹಾರ್ಮೋನಿಯಂ)
ಈಶ್ವರಪ್ಪ ಹುನಗುಂಡಿ (ಅಭಿನಯ 'ಕುಂಟಜ್ಜ'ನ ಪಾತ್ರ)
ಸುಭಾಸ ಪರಡ್ಡಿ, ಸವಡಿ (ಅಭಿನಯ - ರಕ್ತರಾತ್ರಿ 'ಅಶ್ವತ್ಥಾಮ'ಪಾತ್ರ)
ಲಕ್ಷ್ಮಣ ಹೂಗಾರ, ಸವಡಿ (ನಾಟಕ ರಚನೆ)
ಬಲರಾಜ ಜಮಖಿಂಡಿ, ಸವಡಿ (ನಾಟಕ ರಚನೆ)
ರೇವಣಸಿದ್ಧಪ್ಪ ಮೇಟಿ, ಸವಡಿ (ಅಭಿನಯ)
ಜೋಗರೆಡ್ಡಿ ಮಲಕಾಜಪ್ಪ, ಸವಡಿ (ಅಭಿನಯ)

★ ಶಿವಪ್ಪ ಮಾಸ್ತರ ಕುಂಬಾರ ಗಜೇಂದ್ರಗಡ (ಹಾರ್ಮೋನಿಯಂ)

★ ಶಂಕರ ಉರುವಕೊಂಡ ಗಜೇಂದ್ರಗಡ (ಹಾರ್ಮೋನಿಯಂ)

★ ಜನಾರ್ಧನ, ಗಜೇಂದ್ರಗಡ (ತಬಲಾ)

★ ಮಾರುತಿ ಯಲಗುಣಚಿ, ಗಜೇಂದ್ರಗಡ (ಕಾಂಗೋ ವಾದ್ಯಗಾರರು, ಸಂಘಟನೆ)

★ ಬಸವರಾಜ ಪಾಗದ, ಕೊತಬಾಳ

★ ಕಳಕಯ್ಯ ಬಸಯ್ಯ ಅಣ್ಣಿಗೇರಿಮಠ, ನರೇಗಲ್ಲ, (ಅಭಿನಯ; ತಬಲಾವಾದನ)

★ ಕೆ.ಎಸ್. ಕುಲಕರ್ಣಿ ಹೊಳೆ ಆಲೂರು (ಹಾರ್ಮೋನಿಯಂ ನಿರ್ದೇಶಕರು)

## ನರಗುಂದ ತಾಲೂಕಿನ ಹವ್ಯಾಸಿ ರಂಗಚಟುವಟಿಕೆಗಳು

### ಶ್ರೀ ಮರಡಿ ಮಾರುತಿ ಕೃಪಾಪೋಷಿತ ನಾಟ್ಯಸಂಘ, ಶಿರೋಳ (ನರಗುಂದ)

೧೯೬೦ ರಿಂದ ಆರಂಭವಾದ ಈ ಹವ್ಯಾಸಿ ಮಂಡಳಿಯು ಈಗಲೂ ಸಕ್ರಿಯವಾಗಿ ವರ್ಷಕ್ಕೊಂದು ಇಲ್ಲವೆ ಎರಡು ಬಾರಿ ನಾಟಕಗಳನ್ನು ರಂಗಕ್ಕೇರಿಸುತ್ತಿದೆ. ದಿ. ಕೃಷ್ಣಪ್ಪ ಶಾಲಗಾರ ಹಾಗೂ ಹೊಳಲಬಸಪ್ಪ ಸಾಂಬ್ರಾಣಿಯವರು ಉತ್ತಮ ಸಂಘಟಕರಾಗಿ, ಕಲಾವಿದರನ್ನು ಬಹುಸಂಖ್ಯೆಯಲ್ಲಿ ರೂಪಿಸಿ, ಅತ್ಯುತ್ತಮ ನಾಟಕ ನಿರ್ದೇಶನದಿಂದ ಹವ್ಯಾಸಿ ರಂಗಭೂಮಿಗೆ ಚಾಲನೆ ನೀಡಿದ್ದಾರೆ. ಶ್ರೀಶೈಲ ಕವಡಿಮಟ್ಟಿ (ನಾಟಕ ರಚನೆ, ನಿರ್ದೇಶನ, ಅಭಿನಯ), ಸಂಗಪ್ಪ ದಾವಣ್ಣವರ, ಸೊಲಬಪ್ಪ ಬಾಗಿಲುಕೋಟೆ, ಗುರುಸಂಗಪ್ಪ ಬಾಗಿಲುಕೋಟೆ, ಶಿವಪ್ಪ ನಾಶಿಪುಡಿ, ರಜಾಕ್ ಮುಲ್ಲಾ, ಮಗತುಮಸಾಬ ನೀಲಗುಂದ ಮೊದಲಾದವರು ಸ್ತ್ರೀ ಪಾತ್ರಗಳನ್ನು ಮಾಡಿದ ಹಿರಿಯ ಕಲಾವಿದರಾಗಿದ್ದಾರೆ ಈರಪ್ಪ ಕಲಹಾಳ, ಗಂಗಪ್ಪ ಅಬ್ಬಿಗೇರಿ, ಮಹಬೂಬಸಾಬ ನೀಲಗುಂದ, ಚೆನ್ನಮಲ್ಲಪ್ಪ ದಿಂಡಿ, ಮಾರುತಿ ಬಾರಕೇರ, ಸಂಗಪ್ಪ ಬಾಗಿಲುಕೋಟೆ, ಶೇಖರಪ್ಪ ದಿಂಡಿ, ಮುದೀರಪ್ಪ ಕಲಾದಿಗಿ, ನಿಂಗಬಸಪ್ಪ ಜೋರ್ಲ, ಈರಪ್ಪ ಮುಚಕಂಡಿ, ಇಮಾಮಸಾಬ ನೀಲಗುಂದ, ಭೀಮಪ್ಪ ದಾಮಣ್ಣವರ, ಅಪ್ಪಣ್ಣಪ್ಪ ನೀಲಗಾರ, ನಾಗಪ್ಪ ಸುಣಗಾರ, ಶಂಕರಪ್ಪ ಹುಣಸೀಮರದ, ನಾಗಪ್ಪ ತಳವಾರ, ಕಾಶಪ್ಪ ಕಲಹಾಳ, ಹುಸೇನ ಮಾಸ್ತರ, ಸೊಲಬಣ್ಣ ಕಲಹಾಳ, ಮಲ್ಲಿಕಾರ್ಜುನ ಶಾಲದಾರ, ಈರಯ್ಯ ಚರಂತಿಮಠ, ನಿಂಗಪ್ಪ ಶಾಂತಗೇರಿ (ಸ್ತ್ರೀ ಪಾತ್ರ), ತಿಪ್ಪಣ್ಣಾ ದಿಂಡಿ (ಸ್ತ್ರೀ ಪಾತ್ರ), ಮಹಾಬಳೇಶ್ವರ ಕೋಡಬಳಿ, ಚಂದ್ರಶೇಖರಗೌಡ ಪಾಟೀಲ, ಶಿವಲಿಂಗಪ್ಪ ಕುಪ್ಪಸ್ಥ, ಮುರಿಯಪ್ಪ ನಾಶಿಪುಡಿ, ಬಸವರಾಜ ನಾಶಿಪುಡಿ, ಸುರೇಶ ಬಡಿಗೇರ, ಮಾಗುಂದಪ್ಪ ಅಬ್ಬಿಗೇರಿ, ಕಲ್ಲಪ್ಪ ಯಲಬಳ್ಳಿ, ಭೀಮಪ್ಪ ರಾಠೋಡ, ಶ್ರೀಶೈಲ ಗಟ್ಟಿ, ಮಲ್ಲಪ್ಪ ಹುಣಸೀಮರದ ಮೊದಲಾದವರು ಅಭಿನಯ ಕಲಾವಿದರಾಗಿದ್ದಾರೆ. ನಾಗಪ್ಪ ಕಲಾದಿಗಿ ತಬಲಾವಾದಕರು ಹಾಗೂ ಈರಣ್ಣ ದಿಂಡಿ ಹಾರ್ಮೋನಿಯಂ ವಾದಕರಾಗಿದ್ದಾರೆ.

ಶಿರೋಳದ ಶ್ರೀದುರ್ಗಾದೇವಿ ನಾಟ್ಯಸಂಘವು ೧೯೭೦ ರಿಂದ ಸಕ್ರಿಯವಾಗಿ ನಾಟಕಗಳನ್ನಾಡುತ್ತಿರುವ ಹವ್ಯಾಸಿ ಕೂಟವಾಗಿದೆ. ಶೇಖರಪ್ಪ ಶಿವಪ್ಪ ಕಿತ್ತಲಿ ನಾಟಕಗಳನ್ನು ರಚಿಸುವುದರೊಂದಿಗೆ ನಿರ್ದೇಶನ, ಅಭಿನಯದಲ್ಲಿ (ಹಾಸ್ಯ, ನಾಯಕ-ಖಳನಾಯಕ ಪಾತ್ರಗಳಲ್ಲಿ ನಟಿಸಿ) ಹೆಸರು ಮಾಡಿದ ಕಲಾವಿದರು. ಇವರೆ ಬರೆದ 'ತಂಗಿಯ ಕಣ್ಣೀರು', 'ಸಾವು ತಂದ ಸಾಲ', 'ದಾರಿದೀಪ' ಹಾಗೂ

ಹಲವು ವೈವಿಧ್ಯಮಯ ಸಾಮಾಜಿಕ ನಾಟಕಗಳನ್ನಾಡಿ ಈ ಮಂಡಳಿ ಪಟ್ಟಣದ ಜನರಿಗೆ ಮನರಂಜನೆ ಒದಗಿಸುತ್ತ, ಬೌದ್ಧಿಕ ಜಾಗ್ರತಿಗೆ ಎಡೆಮಾಡಿದೆ. ಶಂಭುಲಿಂಗಪ್ಪ ಕರಕಿಕಟ್ಟಿ (ಪವಾರ), ನಿಂಗಪ್ಪ ಯಮನಪ್ಪ ಹಣಗಿ (ಹಾಸ್ಯ), ಇಮಾಮಹುಸೇನಿ ಅರಗಂಜಿ (ನಾಯಕಿ ಪಾತ್ರಧಾರಿ), ಕಾಶಯ್ಯ ಸಾರಂಗಮಠ, ವೀರಣ್ಣ ಬಸವಂತಪ್ಪ ಬಣಗಾರ (ಖಳನಾಯಕ), ಸಣ್ಣ ಹನುಮಂತಗೌಡ ತಿರುಕನಗೌಡರು (ನಾಯಕ), ರಂಗನಗೌಡ ತಿರುಕನಗೌಡರು, ಅಲ್ಲಾಸಾಬ ರಾಯಾಸಾಬ ಅರಗಂಜಿ, ಶಂಕ್ರಪ್ಪ ಅಬ್ಬಿಗೇರಿ (ಸ್ತ್ರೀ ಪಾತ್ರ), ನಿಂಗಪ್ಪ ಸಂಗಪ್ಪ ಚವಡಿ, ವೀರಣ್ಣಾ ಮಡಿವಾಳರ, ಪ್ರವೀಣ ಹುಲ್ಲೂರ, ಬಾಬು ಪುಟಕನಕೇರಿ, ಖಾಜೇಸಾಬ ಫಕ್ರುಸಾಬ ಅರಗಂಜಿ, ದಾದೂಸಾಬ ನದಾಫ, ಬಸವರಾಜ ಚವಡಿ, ಪರಶುರಾಮ ತೊಂಡಿಹಾಳ (ಸ್ತ್ರೀ-ಹಾಸ್ಯಪಾತ್ರ), ಬಸವರಾಜ ಚಿಕ್ಕನರಗುಂದ (ಸ್ತ್ರೀ ಪಾತ್ರ), ಮಗತುಮಸಾಬ ಮೂಲೀಮನಿ, ಇಮಾಮಸಾಬ ಬಾಳಿಕಾಯಿ, ರಾಜೇಸಾಬ ಮೂಲೀಮನಿ (ಸ್ತ್ರೀ ಪಾತ್ರ), ಪರಶುರಾಮ ಮಡಿವಾಳರ, ರಾಘು ಹಣಗಿ, ಮಂಜೂ ಸುಣಗಾರ, ಚೆನಬಸಪ್ಪ ಮಡಿವಾಳರ, ನಿಂಗಪ್ಪ ಚವಡಿ ಮೊದಲಾದವರು ಅಭಿನಯ ಕಲಾವಿದರಾಗಿದ್ದಾರೆ. ವೀರಪ್ಪ ಶಿವಪ್ಪ ಚಿಕ್ಕನರಗುಂದ ಹಾರ್ಮೋನಿಯಂ ಮೇಸ್ತ್ರು.

ಶಿರೋಳದ 'ಭಾರತಮಾತಾ ನಾಟ್ಯಸಂಘ'ವು ೧೯೬೦ ರಿಂದ ನಾಟಕಗಳನ್ನು ಪ್ರದರ್ಶಿಸುತ್ತ ಬಂದಿರುವ ಮಂಡಳಿಯಾಗಿದೆ. ವೀರಭದ್ರಪ್ಪ ಮುದೇನಗುಡಿ, ಶಿವಪುತ್ರಪ್ಪ ಬೆಳವಟಿಗಿ, ಶೇಖರಪ್ಪ ಬೆಟಗೇರಿ, ಶಂಭಣ್ಣ ಕರಕಿಕಟ್ಟಿ (ಸ್ತ್ರೀ ಪಾತ್ರ), ಬಸವರಾಜ ನಿಡಗುಂದಿ, ಮಾನಪ್ಪ ಬಡಿಗೇರ (ಸ್ತ್ರೀ ಪಾತ್ರ), ಗಂಗಪ್ಪ ಭೀಮಪ್ಪ ಕೊಣ್ಣೂರು (ಖಳನಾಯಕ), ಜಂಬಣ್ಣಾ ಬಸಪ್ಪಾ ದಿಂಡಿ (ನಾಯಕ), ಬಸವರಾಜ ಮುದೇನಗುಡಿ ಮೊದಲಾದವರು ಕಲಾವಿದರು. ಸುಭಾನಪ್ಪ ಮಾಸ್ತರ ಅಸುಂಡಿ ಹಾರ್ಮೋನಿಯಂ ಹಾಗೂ ಯಮನಪ್ಪ ಹಣಗಿ ತಬಲಾವಾದಕರು.

**ನರಗುಂದ ತಾಲೂಕಿನ ನಾಟಕ ಮಂಡಳಿಗಳು ಮತ್ತು ಕಲಾವಿದರು**

* ಶ್ರೀ ಅಚ್ಚೇಶ್ವರ ನಾಟ್ಯಸಂಘ, ಮದಗುಣಕಿ
* ಶ್ರೀ ದೊರೆಸ್ವಾಮಿ ಯುವಸ್ನೇಹವರ್ಧಕ ನಾಟಕಮಂಡಳಿ, ಬೈರನಟ್ಟಿ
* ಶ್ರೀ ಬ್ರಹ್ಮಾನಂದ ತರುಣ ನಾಟ್ಯಸಂಘ, ಬೈರನಟ್ಟಿ
* ಶ್ರೀ ಮರಡಿ ಮಾರುತಿ ಕೃಪಾಪೋಷಿತ ನಾಟ್ಯಸಂಘ, ಶಿರೋಳ
* ಶ್ರೀ ದುರ್ಗಾದೇವಿ ನಾಟ್ಯಸಂಘ, ಶಿರೋಳ
* ಭಾರತಮಾತಾ ನಾಟ್ಯ ಸಂಘ, ಶಿರೋಳ
* ಭೀಮಪ್ಪ ದೊಡ್ಡಮನಿ, ಮದಗುಣಕಿ (ಹಾರ್ಮೋನಿಯಂ)

* ಯಲ್ಲಪ್ಪಗೌಡ, ಮದಗುಣಕಿ (ತಬಲಾ ವಾದನ)
* ಶಿವಸಮೂರ್ತಯ್ಯ ಹಿರೇಮಠ, ಬೈರನಟ್ಟಿ (ಹಾರ್ಮೋನಿಯಂ)
* ಬಸವರಾಜ ಹಡಪದ, ಬೈರನಟ್ಟಿ (ಹಾರ್ಮೋನಿಯಂ)
* ಈರಪ್ಪ ಬಡಿಗೇರ, ಬೈರನಟ್ಟಿ (ತಬಲಾ ವಾದನ)
* ಎಸ್.ಎ. ಮುದಿಯಪ್ಪನವರ, ನರಗುಂದ (ಮಕ್ಕಳ ನಾಟಕ ನಿರ್ದೇಶನ, ಸಂಘಟನೆ) ಕನ್ನಡ ಉಪನ್ಯಾಸಕರು
* ಅಪ್ಪಾಸಾಹೇಬ ಕುದರಿ, ನರಗುಂದ, (ಅಭಿನಯ ಖಳನಾಯಕ).

**ಶಿರಹಟ್ಟಿ ತಾಲೂಕಿನ ನಾಟಕ ಮಂಡಳಿಗಳು ಮತ್ತು ಕಲಾವಿದರು**

* ಎಂ.ಎಸ್. ಬಡಿಗೇರ ಲಕ್ಷ್ಮೇಶ್ವರ (ನಾಟಕ ರಚನೆ)
* ಡಾ. ಬಿ.ಎಸ್. ಕೋಟಿಮಠ, ಲಕ್ಷ್ಮೇಶ್ವರ (ನಾಟಕ ರಚನೆ)
* ಪಿ.ಬಿ. ಬೊಮ್ಮನಳ್ಳಿ, ಲಕ್ಷ್ಮೇಶ್ವರ (ನಾಟಕ ರಚನೆ)
* ಪರಮೇಶ್ವರಪ್ಪ ಬೂದೆಪ್ಪ ಈಟಿ, ಬನ್ನಿಕೊಪ್ಪ (ಅಭಿನಯ, ಹಾರ್ಮೋನಿಯಂ ಪ್ರಸಾಧನ)
* ಇಮಾಮಸಾಬ ಅಗಸರ, ಯತ್ತಿನಹಳ್ಳಿ (ಅಭಿನಯ)
* ಎಸ್.ಎಸ್. ಮೇಟಿ, ನಿವೃತ್ತ ಪ್ರಾಚಾರ್ಯರು, ಶಿರಹಟ್ಟಿ (ನಾಟಕ ನಿರ್ದೇಶನ, ಅಭಿನಯ, ಸಂಗೀತ ನಿರ್ದೇಶನ, ಹಾರ್ಮೋನಿಯಂ ವಾದಕರು, ಹಾಡುಗಾರರು)
* ಶ್ರೀಮತಿ ಸುಲೋಚನಾ ಕಲಾವಂತ, ಶಿರಹಟ್ಟಿ (ಅಭಿನಯ)
* ಸಣ್ಣವೀರಪ್ಪ ಹಳೆಪ್ಪನವರ, ಹೊಳೆಇಟಗಿ (ಸಂಘಟಕರು, ಅಭಿನಯ)
* ಶಿವರುದ್ರಯ್ಯ ಫಕ್ಕೀರಪ್ಪ ಮಠ, ಲಕ್ಷ್ಮೇಶ್ವರ (ಅಭಿನಯ)
* ಬಿ.ಎನ್. ಕಾಳಮ್ಮನವರ, ಲಕ್ಷ್ಮೇಶ್ವರ (ರಂಗವಿಮರ್ಶಕರು)
* ರಮೇಶ ನವಲೆ, ಲಕ್ಷ್ಮೇಶ್ವರ (ರಂಗವಿಮರ್ಶಕರು)
* ಬಿ.ಎಸ್. ಬಾಳೇಶ್ವರಮಠ, ಲಕ್ಷ್ಮೇಶ್ವರ (ರಂಗವಿಮರ್ಶಕರು)
* ವಸಂತರಾವ ಜೋಷಿ, ಲಕ್ಷ್ಮೇಶ್ವರ (ರಂಗವಿಮರ್ಶಕರು)
* ಸೋಮಯ್ಯ ಕಲೆವಾಡಿಮಠ, ಲಕ್ಷ್ಮೇಶ್ವರ (ಅಭಿನಯ)
* ಸಿದ್ಧರಾಮಗೌಡ ಶಂ. ರಾಯನಗೌಡರ, ಯತ್ತಿನಹಳ್ಳಿ (ಅಭಿನಯ)
* ಶೇಖರಗೌಡ ಶಂ. ರಾಯನಗೌಡರ, ಯತ್ತಿನಹಳ್ಳಿ (ಅಭಿನಯ)
* ರುದ್ರಪ್ಪ ಸೀತಾರ, ಯತ್ತಿನಹಳ್ಳಿ (ಅಭಿನಯ)
* ಬಸವಣ್ಣೆಪ್ಪ ಕೊಟಗಿ, ಯತ್ತಿನಹಳ್ಳಿ (ಅಭಿನಯ)

* ಬಸಪ್ಪ ಸಂ. ತಳವಾರ, ವರವಿ (ಅಭಿನಯ)
* ಮಹಾರುದ್ರಪ್ಪ ಸೀತಾರ, ಯತ್ತಿನಹಳ್ಳಿ (ಅಭಿನಯ)
* ಮಲಕಾಜಪ್ಪ ಸೀತಾರ, ಯತ್ತಿನಹಳ್ಳಿ (ಅಭಿನಯ)
* ಮಲ್ಲನಗೌಡ ಪಾಟೀಲ, ಸಾಸಲವಾಡ (ವಾದ್ಯಗಾರರು)
* ಫಕ್ಕೀರಯ್ಯ ಶಂ. ಮಾಗಡಿ, ಯತ್ತಿನಹಳ್ಳಿ (ಅಭಿನಯ)
* ಫಕ್ಕೀರಪ್ಪ ಜ. ಬಿನ್ನಾಳ, ಯತ್ತಿನಹಳ್ಳಿ (ಅಭಿನಯ)
* ಚಂದ್ರಪ್ಪ ಗು. ಸೀತಾರ, ಯತ್ತಿನಹಳ್ಳಿ (ಅಭಿನಯ)
* ಈಶ್ವರಪ್ಪ ಗು. ಯತ್ತಿನಹಳ್ಳಿ (ಅಭಿನಯ)
* ದೇವೇಂದ್ರ, ಕಾಶಮ್ಮನವರ (ಅಭಿನಯ)
* ರಾಚಯ್ಯ ಹಿರೇಮಠ, ಪುಟಗಾಂವ ಬಡ್ನಿ (ಅಭಿನಯ)
* ಪೀರಸಾಬ ನದಾಫ, ಯತ್ತಿನಹಳ್ಳಿ (ಅಭಿನಯ)
* ವೀರಯ್ಯ ಮಠಪತಿ, ಮಾಗಡಿ (ಅಭಿನಯ)
* ಮೇಲಗಿರಿಗೌಡ ಪಾಟೀಲ, ಗೊಜನೂರ (ಅಭಿನಯ)
* ಶ್ರೀಮತಿ ಶಾರದಾ ಕುಸನೂರಮಠ, ಲಕ್ಷ್ಮೇಶ್ವರ (ಅಭಿನಯ)
* ಶಿವಯ್ಯ ಕುಸನೂರಮಠ, ಲಕ್ಷ್ಮೇಶ್ವರ (ಅಭಿನಯ)
* ಖಾನಸಾಬ ಸುಂಕದ, ಶಿಗ್ಲಿ (ಸಂಘಟನೆ, ಅಭಿನಯ).

**ಮುಂಡರಗಿ ತಾಲೂಕಿನ ನಾಟಕ ಮಂಡಳಿಗಳು ಮತ್ತು ಕಲಾವಿದರು :**

ದೇವಪ್ಪ ಭಜಂತ್ರಿ, ಮುಂಡರಗಿ (ತಬಲಾ ವಾದನ)
ಬಿ. ಬಾಬು, ಮುಂಡರಗಿ (ಅಭಿನಯ, ವೃತ್ತಿ ಹಾಗೂ ಹವ್ಯಾಸಿ ಕಲಾವಿದ)
ದೇವೇಂದ್ರಪ್ಪ ಭಂಡಾರಿ, ಶಿರೋಳ (ಹಾರ್ಮೋನಿಯಂ)
ಮುಳ್ಳಪ್ಪ ಗುಡಿಸಲಮನಿ, ಗುಡ್ಡದ ಬೂದಿಹಾಳ (ಹಾರ್ಮೋನಿಯಂ)
ಸತ್ಯಪ್ಪ ಚಿಗರಿ, ಹಳ್ಳಿಗುಡಿ (ಹಾರ್ಮೋನಿಯಂ)
ಗೋಣೆಪ್ಪ ಹಮ್ಮಿಗಿ, ಕೊರ್ಲಹಳ್ಳಿ (ತಬಲಾ ವಾದನ)
ಕಾಶಪ್ಪ ಚಿಕ್ಕಣ್ಣವರ, ಡೋಣಿ (ಹಾರ್ಮೋನಿಯಂ)
ಪ್ರಾಣೇಶ ಪುರದ, ಕೊರ್ಲಹಳ್ಳಿ (ಹಾರ್ಮೋನಿಯಂ)
ಮಲ್ಲಪ್ಪ ಕೊಳಲ, ಕೊರ್ಲಹಳ್ಳಿ (ಮೃದಂಗ ವಾದನ)
ಈಶಪ್ಪ ಬಂಡಿ, ಗಂಗಾಪೂರ (ಹಾರ್ಮೋನಿಯಂ)
ದೇವಪ್ಪ ಬಚೇನಹಳ್ಳಿ, ಕೊರ್ಲಹಳ್ಳಿ (ಹಾರ್ಮೋನಿಯಂ)
ಗುಡದಪ್ಪ ಹಡಗಲಿ, ಗಂಗಾಪೂರ (ಹಾರ್ಮೋನಿಯಂ)

ದುರ್ಗಪ್ಪ ಮಲ್ಲಿಕೇರಿ, ಸೀರನಹಳ್ಳಿ (ಹಾರ್ಮೋನಿಯಂ)
ರಂಗಪ್ಪ ಗೊಂಡಬಾಳ, ಕೊರ್ಲಹಳ್ಳಿ (ಕ್ಯಾಶಿಯೋ ವಾದನ)
ಮೌನೇಶ ಬಡಿಗೇರ, ಡೋಣಿ (ತಬಲಾ ವಾದನ)
ಸಂಜೀವಕುಮಾರ ಗುರಿಕಾರ, ಡೋಣಿ (ತಬಲಾ ವಾದನ)
ಮಹೇಶ ಮುತ್ತಾಳಮಠ, ಡೋಣಿ (ತಬಲಾ ವಾದನ)
ಯಲ್ಲಪ್ಪ ಹೊಸಮನಿ, ಡೋಣಿ (ಹಾರ್ಮೋನಿಯಂ)
ಮಲ್ಲಿಕಾರ್ಜುನ ಹಡಪದ, ಡೋಣಿ (ಹಾರ್ಮೋನಿಯಂ)
ಕಲ್ಲನಗೌಡ ಪರಂಗಿ, ಚಿಕ್ಕವಡ್ಡಟ್ಟಿ (ಹಾರ್ಮೋನಿಯಂ)
ಜಗದೇವಪ್ಪ ಬಡಿಗೇರ, ಚಿಕ್ಕವಡ್ಡಟ್ಟಿ (ಹಾರ್ಮೋನಿಯಂ)
ಬಸಪ್ಪ ಕಲಕೇರಿ, ಚಿಕ್ಕವಡ್ಡಟ್ಟಿ (ಹಾರ್ಮೋನಿಯಂ)
ಶೇಕಪ್ಪ ಮಡಿವಾಳರ, ಬಾಗೇವಾಡಿ (ಹಾರ್ಮೋನಿಯಂ)
ದೇವರಾಜ ಹಡಪದ, ಹಾರೋಗೇರಿ (ಹಾರ್ಮೋನಿಯಂ, ಕ್ಯಾಶಿಯೋ)
ವೀರಯ್ಯ ಹಿರೇಮಠ, ಬಿಡನಾಳ (ಹಾರ್ಮೋನಿಯಂ)
ಬಸಪ್ಪಾ ಕಾತರಕಿ, ಬಾಗೆವಾಡಿ (ಹಾರ್ಮೋನಿಯಂ)
ರೇವಣಪ್ಪ ಶಾಸಕ್ಕಿ ಬಾಗೆವಾಡಿ (ಹಾರ್ಮೋನಿಯಂ)
ಯಲ್ಲನಗೌಡ ಪಾಟೀಲ, ಮುರುಡಿ (ಹಾರ್ಮೋನಿಯಂ)
ರುದ್ರಮುನಿ ಬಡಿಗೇರ, ಮಲ್ಲಿಕಾರ್ಜುನಪುರ (ತಬಲಾ ವಾದನ)
ನಾಗರಾಜ ಸನದಿ, ಗುಡ್ಡದ ಬೂದಿಹಾಳ ವೃತ್ತಿ ಹಾಗೂ ಹವ್ಯಾಸಿ ಕಲಾವಿದ, (ಹಾರ್ಮೋನಿಯಂ)
ರಾಮಣ್ಣ ಮಾಸ್ತರ, ಜಂತ್ಲಿ-ಶಿರೂರು, ವೃತ್ತಿ ಹಾಗೂ ಹವ್ಯಾಸಿ ಕಲಾವಿದ (ಹಾರ್ಮೋನಿಯಂ)
ಈರಣ್ಣ ಕುರಡಗಿ, ಹಳ್ಳಿಗುಡಿ (ಹಾರ್ಮೋನಿಯಂ)
ಬಾಬು ಕಲಕೇರಿ,ಕಲಕೇರಿ (ಅಭಿನಯ) ವೃತ್ತಿ ಹಾಗೂ ಹವ್ಯಾಸಿ ಕಲಾವಿದ
ದಿ. ಶ್ರೀಮತಿ ಗಂಗವ್ವ ಜ್ಯುಲಕಟ್ಟಿ, ಮುಂಡರಗಿ, (ಅಭಿನಯ) ವೃತ್ತಿ ಹಾಗೂ ಹವ್ಯಾಸಿ ಕಲಾವಿದೆ
ನಬಿಸಾಬ, ಹಿರೇವಡ್ಡಟ್ಟಿ, (ಹಾರ್ಮೋನಿಯಂ, ಅಭಿನಯ) ವೃತ್ತಿ ಹಾಗೂ ಹವ್ಯಾಸಿ ಕಲಾವಿದ.
ಗೊಂಡಬಾಳ ಮಾಸ್ತರ, ಹಿರೇವಡ್ಡಟ್ಟಿ, (ಅಭಿನಯ)
ಹನುಮಂತಪ್ಪ ಹೂಗಾರ, ಪೇಟಾಆಲೂರು, (ನಿರ್ದೇಶನ)
ಜಯಶಂಕರ ಹಿರೇಮಠ, ಎಲಿಶಿರುಂಜ, (ಹಾರ್ಮೋನಿಯಂ ಮಾಂತ್ರಿಕ)

# ೪. 'ಪ್ರಸಾಧನ' ಕಲಾವಂತರು, ನಾಟಕ ಸಾಮಗ್ರಿಗಳನ್ನು ಸರಬರಾಜು ಮಾಡುವ ರಂಗಕರ್ಮಿಗಳು

ನಾಟಕ ಪ್ರದರ್ಶನಕ್ಕೆ ಬೇಕಾದ ರಂಗಸಜ್ಜಿಕೆ, ವರ್ಣಮಯ ದೃಶ್ಯಪರದೆಗಳು, ಪಾತ್ರಗಳಿಗೆ ಒಪ್ಪವಾಗುವ ವೇಷಭೂಷಣಗಳು, ಆಭರಣಗಳು, ಕಿರೀಟ, ಅಸ್ತ್ರ-ಶಸ್ತ್ರಗಳು ಮೊದಲಾಗಿ ಎಲ್ಲ ರಂಗಪರಿಕರಗಳನ್ನು ಸರಬರಾಜು ಮಾಡುವ ಹಾಗೂ ಮುಖಾಲಂಕಾರ ಮಾಡುವ ನೇಪಥ್ಯ ರಂಗಕರ್ಮಿಗಳ ಸೇವೆ ಅಮೂಲ್ಯವಾದುದು. ಹಳ್ಳಿ-ಹಳ್ಳಿಗಳಿಗೆ ನಾಟಕ ಸಾಮಗ್ರಿಗಳನ್ನು ಕೊಂಡೊಯ್ದು, ಅಲ್ಲೊಂದು ಸುಂದರ ರಂಗಮಂಟಪ ನಿರ್ಮಿಸಿ, ಪರಿಕರಗಳನ್ನೆಲ್ಲ ಒದಗಿಸಿ ನಾಟಕ ಪ್ರದರ್ಶನಕ್ಕೆ ಕಳೆಕಟ್ಟುವಂತೆ ಮಾಡುವ ಇವರ ಕಾರ್ಯ ಅತ್ಯಂತ ಮಹತ್ವದ್ದು. ಹಲವು ಕುಶಲಕರ್ಮಿ ಕೆಲಸಗಾರರನ್ನು ಕಟ್ಟಿಕೊಂಡು ಪರಿಕರಗಳನ್ನು ವೇದಿಕೆಗೆ ಹೊಂದಿಸಿ, ಸುಂದರ ರಂಗಸಜ್ಜಿಕೆ ನಿರ್ಮಿಸಿ, ವಿದ್ಯುದ್ದೀಪ, ಧ್ವನಿವರ್ಧಕಗಳನ್ನು ವಿಧಿವತ್ತಾಗಿ ಅಳವಡಿಸುವ ಕಾರ್ಯ ಮಾಡುವ ರಂಗಕರ್ಮಿಗಳ ಸೇವೆ ನಗಣ್ಯವೇನಲ್ಲ. ಇಂತಹ ರಂಗಕರ್ಮಿಗಳ ಆರ್ಥಿಕ ಸಂಕಷ್ಟಗಳಿಗೆ ಭದ್ರತೆಯಿಲ್ಲದಿರುವುದು ಗಂಭೀರವಾಗಿ ಯೋಚಿಸಬೇಕಾದ ಸಂಗತಿ.

ಗದಗ ಜಿಲ್ಲೆಯಲ್ಲಿ ಪ್ರಸಾಧನ ಸೇವೆ, ನಾಟಕ ಪರಿಕರಗಳ ಸರಬರಾಜು ಮಾಡುತ್ತಿರುವ ರಂಗಕರ್ಮಿಗಳ ಬಗೆಗಿನ ವಿವರಗಳು ಇಂತಿವೆ :

## ಕಲ್ಲಪ್ಪ ಬಾಲಪ್ಪ ದ್ಯಾವಣಸಿ (ಹುಯಿಲಗೋಳ) ಮತ್ತು ರಂಗಪ್ಪ ಕಲ್ಲಪ್ಪ ದ್ಯಾವಣಸಿ (ಹುಯಿಲಗೋಳ) ಇವರ ಮಾಲತೇಶ ಡ್ರಾಮಾ ಸೀನರೀಸ್, ಗದಗ.

ಗದುಗಿನ ಕಲ್ಲಪ್ಪ ಬಾಲಪ್ಪ ದ್ಯಾವಣಸಿ (ಹುಯಿಲಗೋಳ) ಮತ್ತು ರಂಗಪ್ಪ ಕಲ್ಲಪ್ಪ ದ್ಯಾವಣಸಿ (ಹುಯಿಲಗೋಳ) ಇವರ 'ಮಾಲತೇಶ ಡ್ರಾಮಾ ಸೀನರೀಸ್' ರಂಗ ಭೂಮಿಯ ನಾಟಕ ಪ್ರದರ್ಶನಗಳಿಗೆ ಪರದೆ, ಉಡುಪು, ಪರಿಕರಗಳನ್ನು ಒದಗಿಸುತ್ತಿರುವ ಹಾಗೂ ಪ್ರಸಾಧನ ಸೇವೆ (ಅಲಂಕಾರ) ಸಲ್ಲಿಸುತ್ತಿರುವ ಪ್ರಮುಖ ಸಂಸ್ಥೆಗಳಲ್ಲೊಂದಾಗಿದೆ. ರಂಗಪ್ಪ ಕಲ್ಲಪ್ಪ ದ್ಯಾವಣಸಿ ೧೯೭೨ ರಿಂದ ಈ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ತಂದೆ ಕಲ್ಲಪ್ಪ ಬಾಲಪ್ಪ ದ್ಯಾವಣಸಿ, ಅವರ ತಂದೆ ಬಾಲಪ್ಪ ಹನುಮಂತಪ್ಪ ದ್ಯಾವಣಸಿ ಇದೇ ವೃತ್ತಿಯನ್ನು ಅರಸಿಕೊಂಡು ಬಂದವರು. ೧೯೨೦ ರಿಂದಲೇ ಇವರ ಕುಟುಂಬದ ಈ ವೃತ್ತಿಯಲ್ಲಿ ಅದೇಷ್ಟೋ ಬದಲಾವಣೆಗಳಾದುದನ್ನು ಇವರು ಕಂಡವರು.

ವಿದ್ಯುದ್ದೀಪಗಳಿಲ್ಲದಿದ್ದಾಗ ಪೆಟ್ರೋಮ್ಯಾಕ್ಸ್‌ಗಳನ್ನು ಪೂರೈಸುತ್ತಿದ್ದ ಕಾಲವೊಂದಿತ್ತು. ಅಂದಿನಿಂದ ಇಂದಿನವರೆಗಿನ ಪರಿಕರಗಳ ಸ್ವರೂಪದಲ್ಲಾದ ಮಾರ್ಪಾಡುಗಳು ಅಪಾರ. ವೃತ್ತಿರಂಗದ ಬಹುತೇಕ ಕಂಪನಿಗಳಿಗೆ ರಂಗ ಪರಿಕರಗಳನ್ನು ಸರಬರಾಜು ಮಾಡಿರುವ ಹೆಗ್ಗಳಿಕೆ ಈ ಸಂಸ್ಥೆಯದು.

'ವಸ್ತ್ರಾಲಂಕೃತ ಶಿರೋಮಣಿ', 'ಪ್ರಸಾಧನ ಕಲಾವಂತ', 'ರಂಗಭೂಮಿ ತಂತ್ರಜ್ಞ' ಎಂಬ ಬಿರುದುಗಳನ್ನು ಪಡೆದ ಕಲ್ಲಪ್ಪನವರು ತಮ್ಮ ಐದು ದಶಕಗಳ ನಾಟಕ ಕಲಾಸೇವೆಯಲ್ಲಿ ತೃಪ್ತಿ-ಸಂತೋಷವನ್ನು ಅರಸಿದವರು. ಈಗ ಅವರ ಪುತ್ರ ರಂಗಪ್ಪ ಕಲ್ಲಪ್ಪ ದ್ಯಾವಣಸಿ (ಹುಯಿಲಗೋಳ) ಈ ಸೇವೆಯನ್ನು ಯಥಾವತ್ತಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ನಾಟಕಗಳ ರಂಗಸಜ್ಜಿಕೆ ನಿರ್ಮಾಣ, ವರ್ಣಮಯ ದೃಶ್ಯಪರದೆಗಳು, ಪಾತ್ರಗಳಿಗೆ ತಕ್ಕ ವೇಷಭೂಷಣ-ಸರ್ವಾಂಗ ಆಭರಣಗಳು, ಕಿರೀಟ, ಕವಚಗಳು, ಅಸ್ತ್ರ-ಶಸ್ತ್ರಗಳು, ಜನರೇಟರ್, ಮೈಕ್‌ಸೆಟ್- ಹೀಗೆ ಪರಿಕರಗಳ ಸಮಗ್ರ ಒದಗಣೆ ಮಾಡುವ, ಸಂಪನ್ಮೂಲ ಸಂಸ್ಥೆಯಾಗಿ ಬೆಳೆದಿರುವ 'ಮಾಲತೇಶ ಡ್ರಾಮಾ ಸೀನರೀಸ್' ಮೂರು ತಲೆಮಾರುಗಳ ಪರಿಶ್ರಮದ ಫಲಶ್ರುತಿ.

ರಂಗಪ್ಪ ಹುಯಿಲಗೋಳ ಪಾತ್ರಗಳ ಅಲಂಕಾರ ಕಲೆಯಲ್ಲಿ ಸಿದ್ಧಹಸ್ತರು. ಎಂತಹ ಪಾತ್ರಗಳಿಗೆ ಯಾವ ವಿಧವಾದ ಅಲಂಕಾರ, ಬಣ್ಣ ಸಂಯೋಜನೆ, ವೇಷಭೂಷಣಗಳು, ಮುಖದ ಮಾಟ ಬೇಕೆಂಬುದು ಇವರಿಗೆ ಸಹಜ ಪ್ರವೃತ್ತಿಯ ನೆಲೆಯಲ್ಲಿಯೇ ವೇದ್ಯವಾಗುತ್ತದೆ. ರಂಗಪರಿಕರಗಳನ್ನು ಅಚ್ಚುಕಟ್ಟಾಗಿ ನಿರ್ಮಿಸಿ ಕೊಡುವ ಇವರ ಕರಕೌಶಲ ಮೆಚ್ಚುವಂತಹುದು. ಥರ್ಮಾಕೋಲ ಪರಿಕರಗಳ ಸೃಷ್ಟಿಯಂತೂ ಅದ್ಭುತ. ಪ್ರೇಕ್ಷಕರೆದುರಿಗೆ ಮಾಯಾನಗರಿಯನ್ನೇ ತೆರೆದಿರಿಸುವ ಕೈಚಳಕ. ಪಾತ್ರಧಾರಿಗಳನ್ನು ಸಿಂಗರಿಸುವುದು ಒಂದು ವಿಶಿಷ್ಟ ಕಲೆ. ಗದುಗಿನ ಪರಿಸರದಲ್ಲಿ ನೇಪಥ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಂಗಪ್ಪ ಹುಯಿಲಗೋಳ ನಿಷ್ಣಾತ ರಂಗಕರ್ಮಿಯಾಗಿದ್ದಾರೆ.

ರೋಣ ತಾಲೂಕಿನ ಸರೇಗಲ್ಲಿನ ವೀರಭದ್ರದೇವರ ಗುಡಿ ಓಣಿಯ ಶಿವಲಿಂಗಯ್ಯ ಚೌಕಿಮಠ ಇವರು ೧೯೬೦ ರಿಂದ ೧೯೮೭ ರವರೆಗೆ ನಾಟಕ ಸಾಮಗ್ರಿಗಳನ್ನು ಒದಗಿಸುತ್ತಿದ್ದರು.

ಗಜೇಂದ್ರಗಡದ ಈರಪ್ಪ ಅವರ 'ಚೌಡೇಶ್ವರಿ ಸೀನರೀಜ್' ಹಾಗೂ ಶಿವಯ್ಯ ಗ್ಯಾನಯ್ಯನಮಠ ಅವರ 'ಕಲ್ಲಿನಾಥೇಶ್ವರ ಸೀನರೀಜ್' ಹಾಗೂ ಅಂದಪ್ಪ ನೂಲ್ವಿಯವರ 'ನೂಲ್ವಿ ಸೀನರೀಜ್' ಮೊದಲಾದವುಗಳು ಈ ಉದ್ಯಮವನ್ನು ಹಲವು ದಶಕಗಳಿಂದ ಕೈಗೊಂಡವುಗಳಾಗಿವೆ.

## ಮುಂಡರಗಿಯ ಮಾರುತಿ ಜಾಲಿಹಾಳ ಇವರ 'ಜಾಲಿಹಾಳ ಡ್ರಾಮಾ ಸೀನ್ಸ್'

ನಾಟಕ ಪ್ರದರ್ಶನಕ್ಕೆ ಬೇಕಾದ ರಂಗಪರಿಕರಗಳನ್ನು ಸರಬರಾಜು ಮಾಡುವ ಹಾಗೂ ಪ್ರಸಾಧನ ಸೇವೆಯನ್ನು ಒದಗಿಸುತ್ತಿರುವ 'ಮಾರುತಿ ಜಾಲಿಹಾಳರ ಮಾರುತಿ ಡ್ರಾಮಾ ಸೀನ್ಸ್' ಕುಟುಂಬದ ಉದ್ಯಮವಾಗಿ ಬೆಳೆದು ಬಂದಿದೆ. ತಂದೆ ದಿವಂಗತ ಯಲ್ಲಪ್ಪ ಜಾಲಿಹಾಳ ಸುಮಾರು ಅರವತ್ತು ವರ್ಷಗಳಷ್ಟು ಹಿಂದೆಯೇ ಈ ಉದ್ಯಮದಲ್ಲಿ ತೊಡಗಿದ್ದರು. ಪೆಟ್ರೋಮ್ಯಾಕ್ಸ್, 'ಗಡಿಗಿ ಗ್ಯಾಸ್'ಗಳನ್ನು ನಾಟಕ ಕಂಪನಿಗಳಿಗೆ ಒದಗಿಸುತ್ತಿದ್ದರು ಎನ್ನಲಾಗುವ ಹಿನ್ನೆಲೆಯಲ್ಲಿ ಇದು ಜಾಲಿಹಾಳ ಮನೆತನದ ಉದ್ಯಮವೇ ಆಗಿರಬೇಕು. ಕೊಪ್ಪಳ, ಬಳ್ಳಾರಿಯ ಹಲವು ಪ್ರದೇಶಗಳಿಗೂ ಅವರು ನಾಟಕ ಸಾಮಗ್ರಿಗಳನ್ನು ಸರಬರಾಜು ಮಾಡುತ್ತಿದ್ದರು. ಪಾತ್ರಗಳಿಗೆ ವೇಷಾಲಂಕಾರ ಹಾಗೂ ಮುಖಾಲಂಕಾರ ಮಾಡುವುದರೊಂದಿಗೆ ರಂಗಸಜ್ಜಿಕೆಯ ನಿರ್ಮಾಣದಲ್ಲಿ ಅತ್ಯಂತ ನಾಜೂಕಿನ ಕಾರ್ಯಕ್ಷಮತೆಯನ್ನು ಬೆಳೆಸಿಕೊಂಡು ಬಂದ ಹೆಗ್ಗಳಿಕೆ ಇವರದು. ಗ್ರಾಮಗಳಲ್ಲಿ ನಾಟಕಗಳನ್ನು ರಂಗಕ್ಕೇರಿಸಲು ಇವರು ನೆರವಾಗುತ್ತಾರೆ. ಉತ್ತಮ ಸೇವೆ ಒದಗಿಸುತ್ತ ಬಂದಿರುವ ಮಾರುತಿ ಜಾಲಿಹಾಳರ ಸೇವೆಯನ್ನು ರಂಗಾಸಕ್ತರು ತುಂಬು ಮನಸ್ಸಿನಿಂದ ನೆನೆಯುತ್ತಾರೆ.

## ಪರಿಸಾಬ ಮಾಬೂಸಾಬ ಸಕಲಿ ಇವರ ಶ್ರೀ ಸಾಯಿಬಾಬಾ ಸೀನ್ಸ್ ಆ್ಯಂಡ್ ಎಲೆಕ್ಟ್ರಿಕಲ್ಸ್, ನರಗುಂದ

ನರಗುಂದ ಪಟ್ಟಣದ ಕಾಯಿಪಲ್ಲೆ ಮಾರುಕಟ್ಟೆಯಲ್ಲಿರುವ ಪರಿಸಾಬ ಮಾಬೂಸಾಬ ಸಕಲಿ ಇವರ ಶ್ರೀ ಸಾಯಿಬಾಬಾ ಸೀನ್ಸ್ ಆ್ಯಂಡ್ ಎಲೆಕ್ಟ್ರಿಕಲ್ಸ್ ನಾಟಕ ಸಾಮಗ್ರಿಗಳನ್ನು ಸರಬರಾಜು ಮಾಡುವ ಸಂಸ್ಥೆಯಾಗಿದೆ. ಕಳೆದ ಆರು ದಶಕಗಳಿಂದ ಸಕಲಿ ಸೋದರರು ಈ ಉದ್ಯಮವನ್ನು ನಿಭಾಯಿಸುತ್ತ ಬಂದಿದ್ದು, ನರಗುಂದ, ನವಲಗುಂದ, ಬದಾಮಿ, ರಾಮದುರ್ಗ ಮೊದಲಾಗಿ ದೂರದ ಗ್ರಾಮಗಳಿಗೆಲ್ಲ ನಾಟಕ ಸಾಮಗ್ರಿಗಳನ್ನು, ರಂಗಸಜ್ಜಿಕೆಗಳನ್ನು ಸರಬರಾಜು ಮಾಡುತ್ತ ಬಂದಿದ್ದಾರೆ. ಈಗ ವೃದ್ಧಾಪ್ಯದ ಅಂಚಿನಲ್ಲಿರುವ ಪರಿಸಾಬ ಸಕಲಿ ತಮ್ಮ ಈ ಉದ್ಯಮವನ್ನು ಮುನ್ನಡೆಸಿಕೊಂಡು ಹೋಗುವ ವಾರಸುದಾರರಿಲ್ಲವಾದ್ದರಿಂದ ಆಸಕ್ತಿ ಕಡಿಮೆಯಾಗುತ್ತಿದೆ ಎನ್ನುತ್ತಾರೆ. ಹೀಗೆ ತಮ್ಮ ಉದ್ಯಮದಲ್ಲಿ ಸಂಪೂರ್ಣ ಸಂತಸವನ್ನು ಅರಸಿದ ಇವರು ನಾಟಕಾಸಕ್ತರು. ಈಗಲೂ ಆಸಕ್ತ ನಾಟಕಾಸಕ್ತರಿಗೆ

ಬಣ್ಣ ಬಳೆಯುವ, ವೇಷಭೂಷಣಗಳನ್ನು ನೀಡಿ ಸಿಂಗರಿಸುವ ಕೆಲಸದಲ್ಲಿ ನಿರತರಾಗಿದ್ದಾರೆ.

## ಪರಮೇಶಪ್ಪ ಬೂದೆಪ್ಪ ಈಟಿ (ಬನ್ನಿಕೊಪ್ಪ, ಶಿರಹಟ್ಟಿ ತಾಲೂಕು) ಇವರ ಭವಾನಿ ಡ್ರಾಮಾ ಸೀನರಿ ಕಂಪನಿ

ಶಿರಹಟ್ಟಿ ತಾಲೂಕಿನ ಬನ್ನಿಕೊಪ್ಪ ಗ್ರಾಮದ ಪರಮೇಶಪ್ಪ ಬೂದೆಪ್ಪ ಈಟಿ ಸ್ವತಃ ಕಲಾವಿದರು. ಹಾರ್ಮೋನಿಯಂ ನುಡಿಸುವುದರಲ್ಲಿ ನಿಪುಣರು. ಬಡಿಗತನ ವೃತ್ತಿಯೊಂದಿಗೆ ನಾಟಕ ಸಾಮಗ್ರಿಗಳ ಸರಬರಾಜು ಇವರ ಮನೆತನದ ಉದ್ಯಮ. ರೂರಲ್ ಆರ್ಟಿಜನ್ಸ್ ತರಬೇತಿ ಪಡೆದ ಇವರು ಶಿಲ್ಪಕಲಾಕಾರರು. ನಾಟಕಗಳ ವೈವಿಧ್ಯಮ - ವರ್ಣಮಯ ಪರದೆಗಳನ್ನು ತಾವೇ ನಿರ್ಮಿಸುತ್ತಾರೆ. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳಿಗೆ ಬೇಕಾದ ಎಲ್ಲ ಸೀನರಿಗಳು ಇವರಲ್ಲಿ ಲಭ್ಯ. ಧಾರವಾಡ, ಹುಬ್ಬಳ್ಳಿ, ಗದಗ, ಹಾವೇರಿ, ಕೊಪ್ಪಳ, ಬಳ್ಳಾರಿ ಜಿಲ್ಲೆಗಳಿಗೆ ನಾಟಕ ಸಾಮಗ್ರಿಗಳನ್ನು ಕಳೆದ ಮೂರುವರೆ ದಶಕಗಳಿಂದ ಸರಬರಾಜು ಮಾಡುತ್ತ ಬಂದಿದ್ದಾರೆ. ಶಿರಹಟ್ಟಿ ತಾಲೂಕಿನ ನಾಟಕ ಕಲಾವಿದರನ್ನು ಸಂಘಟಿಸಿ ನಾಟಕಗಳನ್ನಾಡಿಸುವುದು ಇವರ ಹವ್ಯಾಸ. ಪರಮೇಶಪ್ಪ ಈಟಿಯವರ ಸರಳ-ನೇರ ಸ್ವಭಾವಕ್ಕೆ ಮಾರು ಹೋಗಿರುವ ಕಲಾವಿದರು ಅವರ ಬಗೆಗೆ ಗೌರವ-ಅಭಿಮಾನದ ಮಾತುಗಳನ್ನಾಡುತ್ತಾರೆ.

## ಲಕ್ಷ್ಮೇಶ್ವರದ ಹನುಮಂತಸಾ ಚಿಣ್ಣೂಸಾ ಮೇರವಾಡೆ ಇವರ 'ನಾಟಕ ವಸ್ತು ಭಂಡಾರ'

ಸುಮಾರು ಎರಡು ದಶಕಗಳ ಕಾಲ ಶಿರಹಟ್ಟಿ ತಾಲೂಕಿನ ವಿವಿಧ ಗ್ರಾಮ-ಪಟ್ಟಣಗಳಿಗೆ ನಾಟಕ ಸಾಮಗ್ರಿಗಳನ್ನು ಒದಗಿಸುತ್ತ ಬಂದಿರುವ ಹನುಮಂತಸಾ ಚಿಣ್ಣೂಸಾ ಮೇರವಾಡೆ ತೀರ ಇತ್ತೀಚೆಗಷ್ಟೇ ಆರ್ಥಿಕ ತೊಂದರೆಗಳಿಂದಾಗಿ ಈ ಉದ್ಯಮಕ್ಕೆ ಕಡಿಮೆ ಗಮನ ನೀಡುತ್ತಿದ್ದಾರೆ. ಲಕ್ಷ್ಮೇಶ್ವರ, ಶಿರಹಟ್ಟಿಯ ಸುತ್ತಲಿನ ಎಲ್ಲ ಗ್ರಾಮಗಳಿಗೆ ಇವರ ನಾಟಕ ಸಾಮಗ್ರಿಗಳ ಸೇವೆ ಒದಗಣೆಯಾಗುತ್ತಿತ್ತು.

## ಗದುಗಿನ ರಾಜು ಪೇಂಟರ್ ಇವರ 'ಸೀನ್ಸ್, ಬ್ಯಾನರ್ಸ್'

ಗದುಗಿನಲ್ಲಿ 'ರಾಜು ಪೇಂಟರ್' ಎಂದೇ ಗುರುತಿಸಲ್ಪಡುತ್ತಿರುವ ವ್ಹಿ. ಎಮ್. ಬಡಿಗೇರ ಮೂಲತಃ ರೋಣ ತಾಲೂಕಿನ ಹಿರೇಹಾಳ ಗ್ರಾಮದವರು. ಚಿತ್ರಕಲೆ.

ವರ್ಣಕಲೆಯಲ್ಲಿ ಸಾಧನೆ ಮಾಡಿದ ರಾಜು ೧೯೭೩ ರಿಂದ ನಾಟಕ ಕಂಪನಿಗಳಿಗೆ ಸೀನರಿಗಳನ್ನು, ವರ್ಣಮಯ ಪರದೆಗಳನ್ನು, ಬ್ಯಾನರ್‌ಗಳನ್ನು, ಪ್ರಚಾರ ಭಿತ್ತಿ ಚಿತ್ರಗಳನ್ನು ಒದಗಿಸುತ್ತಿದ್ದಾರೆ. ಇವರ ವರ್ಣಚಿತ್ರಗಳ ಕುಶಲತೆ ನೋಡುಗರನ್ನು ತಕ್ಷಣವೇ ಸೆಳೆದು ನಿಲ್ಲುವಂತಹದು. ಗುಡಗೇರಿ ಕಂಪನಿಯಲ್ಲಿ ವಿಶೇಷ ಅನುಭವ ಪಡೆದ ಇವರ 'ಸೀನ್ಸ್, ಬ್ಯಾನರ್ಸ್'ಗಳಿಗೆ ಭಾರೀ ಬೇಡಿಕೆಯಿದೆ. ಕರ್ನಾಟಕದ ಉತ್ತರದಲ್ಲಿ ಅಕ್ಕಲಕೋಟೆಯಿಂದ ದಕ್ಷಿಣದಲ್ಲಿ ಕೊಪ್ಪಳ, ರಾಯಚೂರ, ಬಳ್ಳಾರಿ, ಆದವಾನಿಗಳ ವರೆಗೆ ಸೀನ್ಸ್ ಮತ್ತು ಬ್ಯಾನರ್ಸ್‌ನ್ನು ಪೂರೈಕೆ ಮಾಡುತ್ತ ಬಂದಿದ್ದಾರೆ. ಇವರ ಪುತ್ರ, ವಿಜಯಕುಮಾರ ಈ ಕಲೆಯನ್ನು ರೂಢಿಸಿಕೊಂಡು ಮುಂದುವರೆಯುತ್ತಿದ್ದಾರೆ.

## ಹಳ್ಳಿಕೇರಿ (ಮುಂಡರಗಿ)ಯ ಮುತ್ತು ತಾವರಿ ಇವರ 'ಶ್ರೀ ಸಿದ್ಧಲಿಂಗೇಶ್ವರ ಡ್ರಾಮಾ ಸೀನ್ಸ್'

ಮುಂಡರಗಿ ತಾಲೂಕಿನ ಹಳ್ಳಿಕೇರಿ ಗ್ರಾಮದಲ್ಲಿರುವ ಮುತ್ತು ತಾವರಿಯವರ 'ಶ್ರೀ ಸಿದ್ಧಲಿಂಗೇಶ್ವರ ಡ್ರಾಮಾ ಸೀನ್ಸ್' ೩೦ ವರ್ಷಗಳಿಂದ ನಾಟಕ ಪ್ರದರ್ಶನಕ್ಕೆ ಬೇಕಾದ ಎಲ್ಲ ಸಾಮಗ್ರಿಗಳನ್ನು ಒದಗಿಸುತ್ತಿರುವ ಸಂಸ್ಥೆಯಾಗಿದೆ. ಸೀನರಿಗಳು, ವರ್ಣಮಯ ಪರದೆಗಳು, ರಂಗಸಜ್ಜಿಕೆಯ ನಿರ್ಮಾಣ, ವಿದ್ಯುದ್ದೀಪ-ಮೈಕ್ ವ್ಯವಸ್ಥೆಯಿಂದ ಹಿಡಿದು ಉಡುಪುಗಳು, ಕಿರೀಟ-ಕವಚಗಳು, ಆಭರಣಗಳವರೆಗೆ ಹಾಗೂ ಆಸನಗಳನ್ನು ಒದಗಿಸುವ ಕೆಲಸವನ್ನು ಅತ್ಯಂತ ಕ್ಷಮತೆಯಿಂದ ನಿರ್ವಹಿಸುತ್ತಿದ್ದಾರೆ. ಗದಗ ಸೇರಿದಂತೆ ಕೊಪ್ಪಳ, ಹಾವೇರಿ ಜಿಲ್ಲೆಗಳವರೆಗೂ ತಾವರಿಯವರ ಸರಬರಾಜು ಸೇವೆ ವಿಸ್ತೃತವಾಗಿದೆ. ತಂದೆಯವರ ಕಾಲದಿಂದ ನಡೆದು ಬಂದಿರುವ ಈ ಉದ್ಯಮವನ್ನು ಮುತ್ತು ತಾವರಿ ದಕ್ಷತೆಯಿಂದ ನಿರ್ವಹಿಸುತ್ತಿದ್ದಾರೆ.

ಗಜೇಂದ್ರಗಡದ ಈರಪ್ಪ ಅವರ 'ಚೌಡೇಶ್ವರಿ ಸೀನರಿಜ್', ಶಿವಯ್ಯ ಗ್ಯಾನಯ್ಯನಮಠ ಅವರ 'ಕಲ್ಲಿನಾಥೇಶ್ವರ ಸೀನರೀಜ್', ಅಂದಪ್ಪಾ ನೂಲ್ವಿಯವರ 'ನೂಲ್ವೀ ಸೀನರೀಜ್' ಈ ಉದ್ಯಮವನ್ನು ಹಲವು ದಶಕಗಳಿಂದ ಕೈಕೊಂಡವುಗಳಾಗಿವೆ.

# ೫. ಈಗ ಬರಿ ನೆನಪಾಗಿ ಉಳಿದ ರಂಗಮಂದಿರಗಳು

**'ಮಲ್ಲಮ್ಮ ಥಿಯೇಟರ್' :**

ಶ್ರೀ ಕುಮಾರೇಶ್ವರ ಕೃಪಾಪೋಷಿತ ಲಿಂ. ಪಂಚಾಕ್ಷರಿ ಗವಾಯಿಗಳ ನಾಟಕ ಮಂಡಳಿಯು 'ಹೇಮರೆಡ್ಡಿ ಮಲ್ಲಮ್ಮ' ನಾಟಕ ಪ್ರದರ್ಶನಕ್ಕೆಂದೇ ನಿರ್ಮಾಣಗೊಂಡ ರಂಗಮಂದಿರವು 'ಮಲ್ಲಮ್ಮ ಥಿಯೇಟರ್' ಎಂದೇ ಜನಪ್ರಿಯವಾಗಿತ್ತು. ೧೯೬೦ ರಲ್ಲಿ ಈ ಮಂಡಳಿಯು ಗದುಗಿನ 'ಡಬ್ಬಾ' (ಮಹಾಲಕ್ಷ್ಮೀ) ಥಿಯೇಟರ್‌ನಲ್ಲಿ ನಾಟಕ ಪ್ರದರ್ಶನ ಮಾಡುತ್ತಿತ್ತು. ಆಗ ಆ ಥಿಯೇಟರ್‌ನಲ್ಲಿ ಸಿನೇಮಾ ಪ್ರದರ್ಶನ ಆರಂಭವಾದ್ದರಿಂದ ಗವಾಯಿಗಳ ಮಂಡಳಿಗೆ ರಂಗಮಂದಿರವೊಂದು ಬೇಕಾಯಿತು. ಆಗ 'ಹೇಮರೆಡ್ಡಿ ಮಲ್ಲಮ್ಮ' ನಾಟಕವನ್ನು ರಂಗಕ್ಕೇರಿಸುವ ತಾಲೀಮು ನಡೆದಿತ್ತು. ಲಿಂ. ಪಂಚಾಕ್ಷರಿ ಗವಾಯಿಗಳು ಅನುಷ್ಠಾನಗೈದಿದ್ದ ನಾಲ್ವಾಡದವರ ಜಾಗೆಯಲ್ಲಿಯೇ ನಾಟಕವಾಡಲು ಪಂ. ಪುಟ್ಟರಾಜರು ತೀರ್ಮಾನಿಸಿದರು. ಅವರ ಆದೇಶದಂತೆ ಅಲ್ಲಿ ರಂಗಮಂದಿರ ನಿರ್ಮಾಣವಾಯಿತು. ಆ ಥಿಯೇಟರ್‌ನಲ್ಲಿ 'ಹೇಮರೆಡ್ಡಿ ಮಲ್ಲಮ್ಮ' ನಾಟಕವು ೩೮೦ ಯಶಸ್ವಿ ಪ್ರಯೋಗಗಳನ್ನು ಕಂಡು ಹೊಸದೊಂದು ದಾಖಲೆಯನ್ನು ನಿರ್ಮಿಸಿತು. ಮುಂದೆ ಈ ರಂಗಮಂದಿರವನ್ನು ಜನರು 'ಮಲ್ಲಮ್ಮನ ಥಿಯೇಟರ್' ಎಂದೇ ಕರೆಯುವುದು ರೂಢಿಯಾಯಿತು. ೧೯೯೦ ರ ದಶಕದ ವರೆಗೂ ಅಸ್ತಿತ್ವದಲ್ಲಿದ್ದ ಈ ರಂಗಮಂದಿರದಲ್ಲಿ ಹಲವು ಕಂಪನಿಗಳು ಹಲವಾರು ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿದ್ದವು.

**ಗದುಗಿನ ಪುಷ್ಪಾ ಥಿಯೇಟರ್ :**

ಗದುಗಿನ ಹಳೆಯ ಬಸ್-ಸ್ಟ್ಯಾಂಡ್ ಸಮೀಪದಲ್ಲಿ ಈಗಿರುವ ಬಿ.ಎಸ್.ಎನ್.ಎಲ್. ಕಛೇರಿಯ ಸ್ಥಳದಲ್ಲಿ ಇಂದಿಗೆ ಹನ್ನೆರಡು ವರ್ಷಗಳ ಹಿಂದೆ ಒಂದು ನಾಟಕ ಮಂದಿರವಿತ್ತು. ತಗಡಿನ ಚಾವಣಿಯಡಿ ತಟ್ಟಿಗೋಡೆಯಿಂದ ನಿರ್ಮಿತವಾಗಿದ್ದ ಆ ಬೃಹತ್ ಸೀದಾ ಸಾದಾ ಮಳಿಗೆ ನಗರಕ್ಕೊಂದು ಕಳೆಕಟ್ಟಿತ್ತು. ನಾಟಕಗಳ ದೊಡ್ಡ ಬೋರ್ಡುಗಳು ಆಕರ್ಷಕ ವರ್ಣ ಚಿತ್ರಗಳಿಂದ ಜನರ ಗಮನವನ್ನು ಸೆಳೆಯುತ್ತಿದ್ದವು. ಸಂಜೆಯಾಗುತ್ತಿದ್ದಂತೆ ವಿದ್ಯುದ್ದೀಪಗಳ ಝಗಝಗಿಸುವಿಕೆಯಲ್ಲಿ ಆ ರಂಗಮಂದಿರ ಮಾಯಾನಗರಿಯಾಗಿ ಮಾರ್ಪಡುತ್ತಿತ್ತು , ಜನಸಂದಣಿಯ ಬೀಡಾಗುತ್ತಿತ್ತು. ನಾಟಕದ ರಂಗಸಜ್ಜಿಕೆಯಿಂದ ಆ ದುರ್ಬಲ ಗೋಡೆಗಳನ್ನು ಛೇದಿಸಿಕೊಂಡು ಬರುತ್ತಿದ್ದ ಸಂಗೀತದ ಮಾರ್ದನಿ, ಆವೇಶ, ಕರುಣೆ-ಆಕ್ರಂದನದ ಅಸ್ಖಲಿತ ಮಾತುಗಳು, ವಾದ್ಯಮೇಳಗಳ

ರಸಾಯನದ ಸುಸ್ವರಗಳು ದಾರಿಹೋಕರ ಚಿತ್ತವನ್ನು ಅತ್ತ ಸೆಳೆಯುತ್ತಿದ್ದವು. ಹೀಗೆ ರಂಗಮಂದಿರವಾಗಿ ಜನಾನುರಾಗಿಯಾಗಿದ್ದ ಗದುಗಿನ ಪುಷ್ಪಾ ಥಿಯೇಟರ್ ಸಮುದಾಯದ ಬದುಕಿನ ಅವಿಭಾಜ್ಯ ಅಂಗವಾಗಿತ್ತು. ತನ್ನ ಜೀವಿತದ ಮೂವತ್ನಾಕು ವರ್ಷಗಳ ಕಾಲ ಅದು ಅದೆಷ್ಟೋ ನಾಟಕ ಕಂಪನಿಗಳಿಗೆ ಆಶ್ರಯ ನೀಡಿತ್ತು. ಮಾನವ ಬದುಕಿನ ಸುಖ-ದುಃಖ, ನೋವು-ನರಳಿಕೆ, ಹಿಗ್ಗು-ಆನಂದ, ನಿರಾಶೆ-ಹತಾಶೆ ಮೊದಲಾಗಿ ಎಲ್ಲ ಭಾವನೆಗಳ ಗಟ್ಟಿ ಅಭಿವ್ಯಕ್ತಿಗೆ ಮೂಕಸಾಕ್ಷಿಯಾಗಿತ್ತು.

೧೯೬೪ ರಲ್ಲಿ ಅಸ್ತಿತ್ವ ತಳೆದಿದ್ದ ಪುಷ್ಪಾ ಥಿಯೇಟರ್‌ನಲ್ಲಿ ಪ್ರದರ್ಶನಗೊಂಡಿದ್ದ ಮೊದಲ ನಾಟಕ ಸುಳ್ಳದ ದೇಸಾಯಿ ನಾಟಕ ಮಂಡಳಿಯ 'ಶ್ರೀಕೃಷ್ಣಗಾರುಡಿ', ಸುಮಾರು ೫೦೦ ಜನ ಪ್ರೇಕ್ಷಕರನ್ನು ಒಳಗೊಳ್ಳಬಹುದಾದ ರಂಗಮಂದಿರವದಾಗಿತ್ತು. ಗುಬ್ಬಿ ವೀರಣ್ಣನವರ ಕಂಪನಿ, ಹುಚ್ಚೇಶ್ವರ ನಾಟ್ಯಸಂಘ, ಗುಡಗೇರಿ ಬಸವರಾಜ ಅವರ ನಾಟಕ ಕಂಪನಿ, ಕೆ.ಬಿ. ಆರ್. ಡ್ರಾಮಾ ಕಂಪನಿ, ಶಾರದಾ ನಾಟಕ ಮಂಡಳಿ, ರವಿ ನಾಟಕ ಮಂಡಳಿ - ಹೀಗೆ ಹಲವಾರು ನಾಟಕ ಮಂಡಳಿಗಳು ವೈವಿಧ್ಯಮಯ ನಾಟಕಗಳನ್ನು ಪ್ರದರ್ಶಿಸಿದ್ದವು. ಪುಷ್ಪಾ ಥಿಯೇಟರ್ ಕಂಡ ಕೊನೆಯ ನಾಟಕ 'ಪೋಲೀಸನ ಮಗಳು'. ಗದುಗಿನ ವಿರುಪಾಕ್ಷಯ್ಯ ಸಂಗಯ್ಯ ಹಿರೇಮಠರ ಒಡೆತನದ ಪುಷ್ಪಾ ಥಿಯೇಟರ್ ೧೯೯೮ ರಲ್ಲಿ ಇನ್ನಿಲ್ಲವಾಯಿತು.

## ಶಾರದಾ ನಾಟ್ಯಗೃಹ, ಗದಗ

ಗದಗ ಪಟ್ಟಣದ ಮಧ್ಯವರ್ತಿ ನೆಲೆಯಲ್ಲಿ (ವಿಜಯ ಕಲಾಮಂದಿರದ ಹಿಂಬದಿಯಲ್ಲಿ) ರಾತ್ರಿಯಿಡಿ ಬೆಳಕಿನ ಹೊಳಪಿನಿಂದ ಝಗಝಗಿಸುತ್ತ, ಸಂಗೀತದ ನಿನಾದವನ್ನು ಹೊರಸೂಸುತ್ತ, ನಾಟಕೀಯ ಸಂಭಾಷಣೆಗಳನ್ನು ವಾದ್ಯಮೇಳದ ಸಮರಸದೊಂದಿಗೆ ಢಾಳವಾಗಿ ಪ್ರಸರಿಸುತ್ತ ಚಿತ್ತಾಕರ್ಷಕ ಕೇಂದ್ರಸ್ಥಾನವಾಗಿದ್ದ 'ಶ್ರೀ ಶಾರದಾ ನಾಟ್ಯಗೃಹ' ೧೯೫೩ ರಿಂದ ೧೯೮೮ ರ ವರೆಗೆ ನಮ್ಮೂರ ಕಣ್ಮಣಿಯಾಗಿ ವಿರಾಜಿಸಿತ್ತು. ಅದೆಷ್ಟೋ ನಾಟಕ ಪ್ರದರ್ಶನಗಳಿಗೆ ಭವ್ಯ ರಂಗಸಜ್ಜಿಕೆಯಾಗಿದ್ದ ಈ ನಾಟ್ಯಗೃಹವು ೧೫೦೦ ಪ್ರೇಕ್ಷಕರನ್ನೊಳಗೊಳ್ಳುವ ವಿಶಾಲ ರಂಗಮಂದಿರವಾಗಿತ್ತು. 'ಗಂಡಸಮಾನ' ನಾಟಕವು ಒಂದು ವರ್ಷಕಾಲ ನಿರಂತರವಾಗಿ ಪ್ರದರ್ಶನಗೊಂಡು ದಾಖಲೆ ಮಾಡಿತ್ತು. ಉತ್ತರ ಕರ್ನಾಟಕ ರಂಗಭೂಮಿಯಲ್ಲಿ ಅಮೋಘ ಸೇವೆ ಸಲ್ಲಿಸಿದ ಗೋಕಾಕದ 'ಶ್ರೀ ಶಾರದಾ ನಾಟಕ ಮಂಡಳಿ'ಯ ಒಡೆತನದ ಈ ನಾಟ್ಯಗೃಹ ತುಕಾರಾಮ ಬುವಾ ಅವರ ಪುತ್ರರಾಗಿದ್ದ ಭಗವಂತಪ್ಪ ಹಾಗೂ ಬಸವರಾಜ ಹೊಸಮನಿ ಅವರ ಮೇಲ್ವಿಚಾರಣೆಯಲ್ಲಿ ಉತ್ತಮ ರಂಗಮಂದಿರವಾಗಿ ನಾಟಕಾಸಕ್ತರನ್ನು ಆಕರ್ಷಿಸಿತ್ತು. ವಿವಿಧ ಕಂಪನಿಗಳಲ್ಲಿ ನಟ, ನಿರ್ದೇಶಕರಾಗಿ, ಗವಾಯಿಗಳಾಗಿ ಸೇವೆ ಸಲ್ಲಿಸಿದ್ದ

ತುಕಾರಾಮ ಬುವಾ ಹೊಸಮನಿ ಅವರು ೧೯೩೩ ರಲ್ಲಿ ತಮ್ಮದೇ 'ಶ್ರೀ ಶಾರದಾ ಸಂಗೀತ ನಾಟಕ ಮಂಡಳಿ'ಯನ್ನು ಗೋಕಾಕಿನಲ್ಲಿ ಆರಂಭಿಸಿದ್ದರು. ಅವರ ಪುತ್ರರಾಗಿದ್ದ ಭಗವಂತಪ್ಪ ಹೊಸಮನಿ ಹಾರ್ಮೋನಿಯಂ ವಾದ್ಯಗಾರರಾಗಿದ್ದರು. ಹಾಗೂ ಬಸವರಾಜ ಹೊಸಮನಿ ನಟ ಶ್ರೇಷ್ಠರಾಗಿದ್ದರು.

## ಹವ್ಯಾಸಿ ರಂಗಚಟುವಟಿಕೆಗಳ ಪ್ರದರ್ಶನಾಂಗಣಗಳು

ಗದುಗಿನಲ್ಲಿ ಹವ್ಯಾಸಿ ರಂಗಾಸಕ್ತರಿಗೆ ಸುಸಜ್ಜಿತ ರಂಗಮಂದಿರವು ಇಲ್ಲವಾಗಿದ್ದರೂ, ಕೆಲವು ಶಾಲೆ-ಕಾಲೇಜುಗಳು, ಮಠಮಾನ್ಯಗಳು, ಮಂಗಲ ಕಾರ್ಯಾಲಯಗಳು ಮುಕ್ತ ಅವಕಾಶಗಳನ್ನು ಮಾಡಿಕೊಟ್ಟು ಸಹಕರಿಸುತ್ತಿರುವುದು ನಿಜಕ್ಕೂ ಸ್ತುತ್ಯಕಾರ್ಯವಾಗಿದೆ. ಗದಗ ಜಿಲ್ಲೆಯಾದ್ಯಂತ ಅಲ್ಲಲ್ಲಿ ಇಂತಹ ಪೋಷಕರು ಹವ್ಯಾಸಿ ರಂಗ ಚಟುವಟಿಕೆಗಳಿಗೆ ನೆರವಾಗುತ್ತಿದ್ದಾರೆ. ಇಂತಹ ಅವಕಾಶಗಳನ್ನು ಒದಗಿಸಿಕೊಟ್ಟು ಹವ್ಯಾಸಿ ರಂಗಭೂಮಿ ಬೆಳೆಯಲು ಕಾರಣವಾದ ಪೋಷಕರನ್ನು, ಸಂಘಸಂಸ್ಥೆಗಳನ್ನು ಧನ್ಯತೆಯಿಂದ ಸ್ಮರಿಸೋಣ. ಹವ್ಯಾಸಿ ರಂಗಚಟುವಟಿಕೆಗಳ ಪ್ರದರ್ಶನಾಂಗಣಗಳ ವಿವರಗಳು ಇಂತಿವೆ :

* ಗದಗ ನಗರ : ಜಗದ್ಗುರು ತೋಂಟದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಶ್ರೀ ತೋಂಟದಾರ್ಯ ಮಠ (ಡಂಬಳ-ಗದಗ)ದ ಶಿವಾನುಭವ ಕಾರ್ಯಕ್ರಮಗಳಲ್ಲಿ ಹವ್ಯಾಸಿ ನಾಟಕಗಳ ಪ್ರಸ್ತುತಿಗೆ ಅವಕಾಶ ಮಾಡಿಕೊಡುತ್ತ ಹವ್ಯಾಸಿಗಳನ್ನು ಪ್ರೋತ್ಸಾಹಿಸುತ್ತಿದ್ದಾರೆ. ತೋಂಟದಾರ್ಯ ಮಠದ ಪ್ರತಿವರ್ಷದ ಜಾತ್ರೆಯಲ್ಲಿ ನಾಟಕ ಪ್ರದರ್ಶನಗಳಿಗೆ ಆದ್ಯತೆ ನೀಡಿ ಪುರಸ್ಕರಿಸುತ್ತಿದ್ದಾರೆ.
* ತೋಂಟದಾರ್ಯ ಮಠದ ಶ್ರೀ ಸಿದ್ಧಲಿಂಗ ಕಲ್ಯಾಣ ಮಂಟಪದಲ್ಲಿ ಹವ್ಯಾಸಿ ನಾಟಕ ಪ್ರದರ್ಶನಗಳಿಗೆ ಮುಕ್ತ ಅವಕಾಶ ಮಾಡಿಕೊಡಲಾಗುತ್ತಿದೆ.
* ಪಂ. ಡಾ. ಪುಟ್ಟರಾಜ ಕವಿ ಗವಾಯಿಗಳ ಶ್ರೀ ವೀರೇಶ್ವರ ಪುಣ್ಯಾಶ್ರಮದ ವಿಶಾಲವಾದ ಸಭಾ ಭವನದಲ್ಲಿ ಹವ್ಯಾಸಿ ನಾಟಕಗಳ ಪ್ರದರ್ಶನಗಳಿಗೆ ಮುಕ್ತ ಅವಕಾಶಗಳಿವೆ. ಆಶ್ರಮದ ಮ್ಯಾನೇಜರ್ ವೇದಮೂರ್ತಿ ಬಸವರಾಜಸ್ವಾಮಿ ಹಿಡಕಿಮಠರು ಹವ್ಯಾಸಿಗಳಿಗೆ ಎಲ್ಲ ರೀತಿಯ ನೆರವು ನೀಡುತ್ತಿದ್ದಾರೆ.
* ಸಿ.ಡಿ.ಓ. ಜೈನ್ ಹಾಲ್, ಗದಗ, ಗದಗ ಸೇರಿದಂತೆ ರಾಜ್ಯದ ಹಲವು ಪ್ರಮುಖ ಹವ್ಯಾಸಿ ಸಂಘಟನೆಗಳ ಅಪರೂಪದ ನಾಟಕಗಳು ಇಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಂಡಿವೆ.

* ೧೯೭೦ ರ ದಶಕದಲ್ಲಿ ಗದುಗಿನ ಪುಷ್ಪಾ ಥಿಯೇಟರ್ ಹಾಗೂ ಮಲ್ಲಮ್ಮನ ಥಿಯೇಟರ್ ಹವ್ಯಾಸಿ ನಾಟಕಗಳಿಗೆ ಸೂಕ್ತ ರಂಗಮಂದಿರಗಳಾಗಿ ನೆರವಾಗಿದ್ದವು. ಇವು ಇಂದು ಅಸ್ತಿತ್ವದಲ್ಲಿಲ್ಲ.
* ಗದುಗಿನ ವಿದ್ಯಾದಾನ ಸಮಿತಿ ಶಾಲೆಯ ಡ್ರಾಯಿಂಗ್ ಹಾಲ್ ಹಾಗೂ ಶಾಲೆಯ ಬಯಲು ಅನೇಕ ಒಳ್ಳೆಯ ನಾಟಕಗಳನ್ನು ಪ್ರಸ್ತುತಿಯನ್ನು ಕಂಡಿದೆ. ವಿದ್ಯಾದಾನ ಸಮಿತಿಯ ಅಂದಿನ ಅಧ್ಯಕ್ಷರಾಗಿದ್ದ ಶ್ರೀ. ಬಿ.ಪಿ. ಹುಯಿಲಗೋಳ ಹಾಗೂ ಇಂದಿನ ಅಧ್ಯಕ್ಷರಾದ ಶ್ರೀ ಧೀರೇಂದ್ರ ಹುಯಿಲಗೋಳ ಇಂತಹ ಅನುಕೂಲತೆಗಳನ್ನು ಒದಗಿಸಿಕೊಡುತ್ತಲೇ ಇದ್ದಾರೆ. ಗದುಗಿನ ಹವ್ಯಾಸಿ ನಾಟಕಾಭಿಯಾನದ ಆರಂಭದಲ್ಲಿ ಮೊದಲಿಗರಾಗಿದ್ದ ನಾಟಕಕಾರ ಹುಯಿಲಗೋಳ ನಾರಾಯಣರಾಯರು ಈ ಶಾಲೆಯ ಸಂಸ್ಥಾಪಕರು ಎಂಬುದು ಇಲ್ಲಿ ಗಮನಾರ್ಹ.
* ಮರಾಠಿ ವಾಙ್ಮಯ ಪ್ರೇಮಿ ಮಂಡಳ, ವಕೀಲಚಾಳ, ಗದಗ : ಹಲವು ದಶಕಗಳಿಂದ ನಾಟಕಾಸಕ್ತ ಹವ್ಯಾಸಿಗಳಿಗೆ ನಾಟಕ ಪ್ರದರ್ಶನ ಮಾಡಲು ಮರಾಠಿ ವಾಙ್ಮಯ ಪ್ರೇಮಿ ಮಂಡಳವು ಅವಕಾಶ ನೀಡುತ್ತ ಬಂದಿದೆ. ವಿಶೇಷ ಸಂದರ್ಭಗಳಲ್ಲಿ ಹವ್ಯಾಸಿ ಮಂಡಳಿಗಳನ್ನು ಆಮಂತ್ರಿಸಿ ಇಲ್ಲಿ ನಾಟಕ ಮಾಡಿಸಲಾಗುತ್ತಿದೆ.

ಶಿರಹಟ್ಟಿ ಪಟ್ಟಣ : ಬೇಂದ್ರೆ ಕಲಾಭವನ ಹಾಗೂ ಶ್ರೀ ಶಿರಹಟ್ಟಿ ಫಕೀರೇಶ್ವರ ಮಠ.

ಲಕ್ಷ್ಮೇಶ್ವರ : ತಾಯಿ ಪಾರ್ವತಿ ಮಕ್ಕಳ ಭವನದ ಸಭಾಂಗಣ, ಶಂಕರಭಾರತಿ ಮಠದ ಸಭಾಭವನ.

ಡಂಬಳ : ಶ್ರೀ ತೋಂಟದಾರ್ಯ ಸಂಸ್ಥಾನಮಠ, ಡಂಬಳ.

ಮುಂಡರಗಿ ಪಟ್ಟಣ : ಮೊಂಡಗೈ ಭೀಮರಾಯರ ವಂಶಸ್ಥರಾದ ವಿ.ಎಲ್. ನಾಡಗೌಡರ ವಾಡೆದಲ್ಲಿಯ ಬಯಲು ಜಾಗ.

ಅಬ್ಬಿಗೇರಿ : ಶ್ರೀ ಅನ್ನದಾನೇಶ್ವರ ಸಂಸ್ಥಾನ ಮಠ, ಅಬ್ಬಿಗೇರಿ ಶಾಖೆ (ಹಾಳಕೇರಿ).

ನರೇಗಲ್ಲ : ಅಂದಾನಗೌಡರು ವಿ. ಪೋಲೀಸಪಾಟೀಲರ ಬಯಲು ಜಾಗೆ, ಗಣೇಶ ದೇವಸ್ಥಾನದ ರಂಗಸಜ್ಜಿಕೆ (ಸಂತೆ ಬಜಾರ), ಶ್ರೀ ದತ್ತಾತ್ರೇಯ ದೇವಸ್ಥಾನದ ಸಭಾಮಂಟಪ, ಪಂಪನಗೌಡ ವೀರನಗೌಡ ಪಾಟೀಲ (ಮಾಜಿಪಾಟೀಲ) ಇವರ ಬಯಲು ಜಾಗೆ (ಲಕ್ಷ್ಮೇಶ್ವರ ವಖಾರ), ಗೊಂತಿ ಮಲ್ಲೇಶ್ವರ ದೇವಸ್ಥಾನದ ಆವರಣ.

**ರೋಣ ಪಟ್ಟಣ :** ಹುಚ್ಚಪ್ಪ ನಾಗಪ್ಪ ಗಡಗಿ ಇವರ ಬಯಲು ಜಾಗೆ, ಅಂದಾನಗೌಡರು ವಿ. ಪಾಟೀಲ (ಮಾಜಿ ಶಾಸಕರು ರೋಣ) ಇವರ ಜಿನ್, ಲಕ್ಷ್ಮೀಶ್ವರ ಶೆಟ್ಟರ್ ಇವರ ಜಿನ್.

**ಗಜೇಂದ್ರಗಡ :** ಶ್ರೀ ದುರ್ಗಾದೇವಿ ಗುಡಿ, ಶಿವಾಜಿ ಪೇಟೆ ಬಯಲು.

**ನರಗುಂದ ಪಟ್ಟಣ :** ಹಸಬಿಯವರ ಬಯಲು ಜಾಗ, ನರಗುಂದ ಬಾಬಾಸಾಹೇಬರ ಕೆಂಪಗಸಿ ಬಯಲು, ದಂಡಾಪೂರ ದುರ್ಗಾದೇವಿ ದೇವಸ್ಥಾನದ ಬಯಲು, ಬಸವೇಶ್ವರ ಸಮುದಾಯ ಭವನ.

## ೬. ರಂಗವಿಮರ್ಶಕರು

ನಾಟಕ ಪ್ರದರ್ಶನದ ನಂತರ ಅದರ ಮೌಲ್ಯಮಾಪನ ಬಹು ಮಹತ್ವದ ಕೆಲಸ. ನಾಟಕವಾಡಿದವರಿಗೆ ತಮ್ಮ ಪ್ರದರ್ಶನ ಹೇಗಾಯಿತು ಎಂದು ತಿಳಿಯುವ ಕುತೂಹಲವಿರುತ್ತದೆ. ನಾಟಕವನ್ನು ಜನ ಮೆಚ್ಚಿದ್ದಾರೆ ಎಂದರೆ ಆಡಿದವರಿಗೆ ಖುಷಿ-ತೃಪ್ತಿ. ಹಾಗೆಯೇ ನಾಟಕದ ಓರೆ-ಕೋರೆಗಳ, ತಪ್ಪು-ತಡೆಗಳ ವಿಶ್ಲೇಷಣೆ ನಾಟಕದ ಮುಂದಿನ ಪ್ರಸ್ತುತಿಗಳ ಸುಧಾರಣೆಗೆ ನೆರವಾಗುತ್ತದೆ. ವಿಮರ್ಶಕರು ನಾಟಕವನ್ನು ಬಹು ಸೂಕ್ಷ್ಮವಾಗಿ ಅವಲೋಕಿಸಿ ನಾಟಕದ ವಿವಿಧ ಅಂಶಗಳಲ್ಲಾಗುವ ದೋಷಗಳನ್ನು ಗಮನಿಸಿ, ಒಟ್ಟಾರೆ ನಾಟಕ ಪ್ರದರ್ಶನದ ಪರಿಣಾಮಕ್ಕೆ ಅವು ಹೇಗೆ ಕಾರಣವಾಗುತ್ತವೆ ಎಂಬುದನ್ನು ವಿಶ್ಲೇಷಿಸಿದಾಗ, ನಿರ್ದೇಶಕರೂ ಸೇರಿದಂತೆ ಪಾತ್ರಧಾರಿಗಳು ತಮ್ಮ ಕಾರ್ಯ ನಿರ್ವಹಣೆಯ ಕುರಿತು ಆತ್ಮಾವಲೋಕನ ಮಾಡಿಕೊಳ್ಳಲು ಅನುವಾಗುತ್ತದೆ. ನಾಟಕದ ಗಟ್ಟಿ ಅಂಶಗಳನ್ನು ಕುರಿತು ಓದುವಾಗ ಪಾತ್ರಧಾರಿಗಳ ಆತ್ಮವಿಶ್ವಾಸ ಇಮ್ಮಡಿಸುತ್ತದೆ. ಹೀಗೆ ರಂಗವಿಮರ್ಶಕರ ಕಾರ್ಯವು ನಾಟಕ ಪ್ರದರ್ಶನಗಳ ಒಟ್ಟಾರೆ ಬೆಳವಣಿಗೆಗೆ ಚೇತೋಹಾರಿಯಾದಂತೆ ಪೋಷಕವೂ ಆಗಿದೆ. ಗದಗ ಜಿಲ್ಲೆಯಲ್ಲಿ ಹಲವು ಸಂವೇದನಶೀಲ ರಂಗ ವಿಮರ್ಶಕರು ರೂಪುಗೊಂಡು ಬೆಳೆಯುತ್ತಿದ್ದಾರೆ.

ದತ್ತ ಪ್ರಸನ್ನ ಪಾಟೀಲ
ಇತಿಹಾಸ ಉಪನ್ಯಾಸಕರು, ಗದಗ

ಅನ್ನದಾನಿ ಹಿರೇಮಠ
ಕವಿ-ವಿಜ್ಞಾನ ಉಪನ್ಯಾಸಕರು, ಗದಗ

ವಿಶ್ವನಾಥ ಬೇಲೇರಿ
ಕಲಾವಿದ-ಬರಹಗಾರರು, ಗದಗ

ಅರುಣ ಕುಲಕರ್ಣಿ
ಶಿಕ್ಷಕರು-ಬರಹಗಾರರು, ನರೇಗಲ್ಲ

ಆರ್.ಎಸ್. ಕುಲಕರ್ಣಿ
ನಾಟಕಕಾರ, ನಿರ್ದೇಶಕರು, ನಟ

ಎಸ್.ಡಿ. ಬಡಿಗೇರ
ನಾಟಕಕಾರ-ಶಿಕ್ಷಕರು, ಹಾಳಕೆರೆ

ಡಾ. ಪ್ರಭು ಗಂಜಿಹಾಳ
ಪ್ರಾಧ್ಯಾಪಕರು, ಹೊಳೆಆಲೂರು

ಅಂದಾನೆಪ್ಪ ವಿಭೂತಿ
ಬರಹಗಾರರು, ಗದಗ

ಸಿ.ಎಸ್. ಅರಸನಾಳ
ಪ್ರಾಧ್ಯಾಪಕರು, ಮುಂಡರಗಿ

ಎಂ. ಜಿ. ವಡ್ಡಟ್ಟಿ
ಪತ್ರಕರ್ತರು, ಮುಂಡರಗಿ

ದಿಲೀಪಕುಮಾರ ಜೋಷಿ
ಪತ್ರಕರ್ತರು, ಮುಂಡರಗಿ

ವಸಂತ ಜೋಷಿ
ಸಾಹಿತಿಗಳು, ಲಕ್ಷ್ಮೇಶ್ವರ

ಬಿ.ಎಸ್. ಕಾಳಮ್ಮನವರ
ನಿವೃತ್ತ ಶಿಕ್ಷಕರು, ಲಕ್ಷ್ಮೇಶ್ವರ

ಬಿ.ಎಸ್. ಬಾಳೇಶ್ವರಮಠ
ಬ್ಯಾಂಕ ಅಧಿಕಾರಿ, ಲಕ್ಷ್ಮೇಶ್ವರ

ರಮೇಶ ನವಲಿ
ಶಿಕ್ಷಕರು, ಲಕ್ಷ್ಮೇಶ್ವರ

ಎಂ.ಪಿ. ರಮೇಶ
ಕವಿ-ಬರಹಗಾರರು, ಗದಗ

ವಿಶಾಲಾಕ್ಷಿ ದೇಶಪಾಂಡೆ
ಕನ್ನಡ ಉಪನ್ಯಾಸಕಿ, ಶಿರಹಟ್ಟಿ

ಎಸ್.ಎಸ್. ಮೇಟಿ
ನಿವೃತ್ತ ಪ್ರಾಚಾರ್ಯರು, ಶಿರಹಟ್ಟಿ.

## ಸಮಾರೋಪ :

ಗದಗ ಜಿಲ್ಲೆಯಲ್ಲಿ ಹವ್ಯಾಸಿ ರಂಗಾಸಕ್ತರ ಉತ್ಸಾಹಕ್ಕೇನೂ ಕೊರತೆಯಿಲ್ಲವಾದರೂ ಒಟ್ಟಾರೆ ಫಲಶ್ರುತಿ ನಿರೀಕ್ಷಿತ ಮಟ್ಟದ್ದಾಗಿಲ್ಲ. ಒಂದು ಬೃಹತ್ ಸಮುದಾಯದಲ್ಲಿ ರಂಗಾಸಕ್ತ ಹವ್ಯಾಸಿ ಕಲಾವಿದರ ಮಧ್ಯೆ ಸಂಪರ್ಕಗಳ ಕೊರತೆಯಿದೆ. ನಾಟಕ ಪ್ರದರ್ಶನಗಳಿಗೆ ಸ್ಥಳಾಭಾವ ತೀವ್ರಸ್ವರೂಪದ್ದಾಗಿದೆ. ನಾಟಕ ಮಾಡುವುದನ್ನು ಗೀಳಾಗಿಸಿಕೊಂಡವರಿಗೆ ಪ್ರದರ್ಶನಗಳನ್ನು ಏರ್ಪಡಿಸಲು ಅಗತ್ಯಕ್ಕೆ ತಕ್ಕಷ್ಟೂ ವೆಚ್ಚ ಮಾಡುವ ಸಾಮರ್ಥ್ಯವಿಲ್ಲವಾಗಿದೆ. ರಂಗಮಂದಿರ ಸೌಲಭ್ಯಗಳ ಲಭ್ಯತೆ ರಂಗಾಸಕ್ತರ ಉಮೇದಿಗೆ ಉತ್ತೇಜಕವಾಗಿ ರಂಗಭೂಮಿಯ ಸ್ವಸ್ಥ ಹಾಗೂ ಸಮೃದ್ಧ ಬೆಳವಣಿಗೆಗೆ ಚೇತೋಹಾರಿಯಾಗಬಹುದಾಗಿದೆ. ರಂಗಾಸಕ್ತ ಹವ್ಯಾಸಿಗಳನ್ನು ಪ್ರೋತ್ಸಾಹಿಸುವ ಹಾಗೂ ಪರಸ್ಪರರ ಮಧ್ಯೆ ವಿಚಾರ ವಿನಿಮಯ ಸಾಧ್ಯವಾಗುವಂತೆ ಮಾಡುವ ಕಾರ್ಯಗಳು ಸರಕಾರ ಮಾತ್ರವಲ್ಲದೆ ಸಾರ್ವಜನಿಕ ಸೇವಾ ಸಂಸ್ಥೆಗಳಿಂದಲೂ ಆಗಬೇಕು.

ಅಂತರ್ಯದ ತುಡಿತ-ಸಂಭ್ರಮ-ಹುಮ್ಮಸ್ಸನ್ನು ಪ್ರಕಟಿಸಲು, ತನ್ಮೂಲಕ ಅಸ್ತಿತ್ವವನ್ನು ಜಾಹೀರುಪಡಿಸಲೆತ್ನಿಸುವುದು ಸಹಜ ಪ್ರವೃತ್ತಿಯ ನೆಲೆಯಲ್ಲಿ ನಡೆಯುವ ಮಾನವ ವರ್ತನೆಯ ಗುಣಧರ್ಮ. ಸಾಮಾಜಿಕ ಮನ್ನಣೆಗಾಗಿ ಎಲ್ಲರಂತೆ ಕಲಾವಿದರೂ ಹಾತೊರೆಯುವುದು ಮಾನಸಿಕ ತೃಪ್ತಿ-ಸಂತೋಷವನ್ನರಸುವ ಅಂತರ್ಯದ ಪ್ರಬಲ ಚೋದನೆಯಿಂದಾಗಿಯೇ. ಅದಿಲ್ಲವಾದಾಗ ನಿರಾಶಾಭಾವ ಕವಿಯುತ್ತದೆ.

ಸಾರ್ವಜನಿಕರ ದೃಷ್ಟಿಯಲ್ಲಿ ರಾಜಕೀಯವನ್ನೇ ಕೇಂದ್ರೀಕರಿಸಿದಂತೆ ಸುದ್ದಿ-ಮೌಲ್ಯದ ನಿಷ್ಕರ್ಷೆಯಾಗುತ್ತಿರುವುದು ಅಸ್ವಸ್ಥ ಬೆಳವಣಿಗೆ. ಇದುವೇ ಸಾಂಸ್ಕೃತಿಕ ರಂಗದ ಬೆಳವಣಿಗೆಗೆ ತಡೆಯನ್ನುಂಟು ಮಾಡಿದೆ. ಜನಸಾಮಾನ್ಯರ ಬದುಕಿನ ಓಘದಲ್ಲಿ ನಡೆಯುವ ಚಿಕ್ಕಪುಟ್ಟ ಮಹತ್ತರ ಸಾಧನೆ - ಸಂಗತಿಗಳಿಗೂ ಪತ್ರಿಕೆಗಳಲ್ಲಿ ಆದ್ಯತೆಯ ಪ್ರಚಾರ ಲಭಿಸಬೇಕು. ಸಾಂಸ್ಕೃತಿಕ ಬದುಕನ್ನು ಗಟ್ಟಿಗೊಳಿಸುವ ವಿದ್ಯಮಾನಗಳು ಬಹಿರಂಗವಾಗಬೇಕು. ಕಲೆಯ ಸಂವರ್ಧನೆಗೆ, ಕಲಾವಿದರ ಬೆಳವಣಿಗೆಗೆ ಪೋಷಕವಾಗುವಂತಹ ವಾತಾವರಣ ನಿರ್ಮಾಣವಾಗಬೇಕು.

ನಮ್ಮ ಸಮುದಾಯದಲ್ಲಿ ಜೀವನವನ್ನು ಅದಮ್ಯವಾಗಿ ಪ್ರೀತಿಸುವ ಜೀವನ ದೃಷ್ಟಿಯಿದೆ. ಅಂತೆಯೇ ಹಲವು ಸಮಸ್ಯೆಗಳ ಮಧ್ಯೆಯೂ ಭಾರತೀಯರಲ್ಲಿ ಆಶಾವಾದದ ಭಾವ ತಗ್ಗಿಲ್ಲ. ನಮ್ಮ ಘನವಂತ ಸಾಂಸ್ಕೃತಿಕ ಪರಂಪರೆಯ ಹಿನ್ನೆಲೆಯೇ ಇಂತಹ ಮಾನಸಿಕತೆಯನ್ನು ರೂಪಿಸಿದ ಅಗೋಚರ ಬುಗ್ಗೆಯಾಗಿದೆ. ಸಂಪದ್ಭರಿತವಾದ ಮಾನವಶಕ್ತಿಯನ್ನು ಸ್ವಸ್ಥ ಸಾಮಾಜಿಕ ಸಂಘಟನೆಯತ್ತ ಹರಿಸಬೇಕು. ಆರ್ಥಿಕವಾಗಿ, ಶೈಕ್ಷಣಿಕವಾಗಿ ಸಬಲರಲ್ಲದ ಕಲಾವಿದರನ್ನು ಸಾಂಸ್ಥಿಕ ಸ್ವರೂಪದ ದಾಸ್ಯತ್ವಕ್ಕೆ ಒಳಪಡಿಸುವ ಅಧಿಕಾರಶಾಹಿತ್ವದ ದೃಷ್ಟಿಕೋನದಲ್ಲಿ ಆಮೂಲಾಗ್ರ, ಬದಲಾವಣೆಯಾಗಬೇಕು. ಸಾರ್ವಜನಿಕ ಸೇವಾ ಸಂಸ್ಥೆಗಳು ಸಾಂಸ್ಕೃತಿಕ ಬದುಕಿನ ವಿದ್ಯಮಾನಗಳಿಗೆ ಹೆಚ್ಚಿನ ಆದ್ಯತೆ ಹಾಗೂ ಪ್ರಚಾರ ನೀಡಬೇಕು. ಹಾಗಾದಾಗ ನಮ್ಮ ಜನಪದರಂಗ ಉತ್ಸುಕತೆಯಿಂದ ಬೀಗಲು, ಹವ್ಯಾಸಿ ರಂಗಭೂಮಿ ಸ್ವಸ್ಥವಾಗಿ ಬೆಳೆದು ಸಮಾಜವನ್ನು ತಿದ್ದಿ, ರೂಪಿಸುವ ಶಕ್ತಿಯಾಗಿ ಹೊರಹೊಮ್ಮಲು ಸಾಧ್ಯವಾದೀತು.

★★★

## ಮಾಹಿತಿ ನೀಡಿದ ರಂಗಾಸಕ್ತರಿಗೆ
## ನಮನ-ಕೃತಜ್ಞತೆಗಳು

ಜಿಲ್ಲೆಯಾದ್ಯಂತ ನಾಟಕ ಮಂಡಳಿಗಳ ಹಾಗೂ ಕಲಾವಿದರ ವಿವರಗಳನ್ನು ಸಂಗ್ರಹಿಸಿ ಉಪಯುಕ್ತ ಮಾಹಿತಿಯನ್ನು ಒದಗಿಸಿದ ರಂಗಾಸಕ್ತರು.

ರವೀಂದ್ರ ದೊಡ್ಡಮೇಟಿ,
ರಂಗಾಸಕ್ತರು, ಕಲಾವಿದರು,
ಜಕ್ಕಲಿ (ರೋಣ)

ಡಾ. ಪ್ರದೀಪ ಹಾದಿಮನಿ,
ಕಲಾವಿದರು, ಗದಗ

ಅಂದಾನೆಪ್ಪ ವಿಭೂತಿ,
ಬರಹಗಾರರು, ಗದಗ

ಎಂ. ಎಸ್. ಕುಲಕರ್ಣಿ,
ಉಪನ್ಯಾಸಕರು, ನರೇಗಲ್ಲ

ಮೌನೇಶ ಬಡಿಗೇರ,
ಕಲಾವಿದರು, ಗದಗ

ಪ್ರಕಾಶ ಚೆಂದನ್ನವರ,
ಜೈ ಕಿಸಾನ ಯುವಕ ಮಂಡಳ
ಕೊಣ್ಣೂರು (ನರಗುಂದ)

ಡಿ.ಡಿ. ವಾಲ್ಮೀಕಿ,
ನಾಟಕಾಸಕ್ತ ವಿದ್ಯಾರ್ಥಿ,
ಉಳ್ಳಟ್ಟಿ (ಶಿರಹಟ್ಟಿ)

ಎಸ್.ಎಸ್. ಸಾರಂಗಮಠ,
ವೃತ್ತಿ ನಾಟಕ ಕಲಾವಿದರು, ಗದಗ

ಅನೀಲ ವೈದ್ಯ
ಇಂಗ್ಲೀಷ್ ಉಪನ್ಯಾಸಕರು, ಗದಗ

ನರೇಂದ್ರ ಗೋರಪ್ಪನವರ,
ಅಧ್ಯಕ್ಷರು, ಸೌಹಾರ್ದ ದೊಡ್ಡಾಟ
ಸಂಘ, ಬಾಗೇವಾಡಿ (ಮುಂಡರಗಿ)

ಅರುಣ ಕುಲಕರ್ಣಿ,
ಬರಹಗಾರರು, ಶಿಕ್ಷಕರು,
ನರೇಗಲ್ಲ

ದತ್ತಪ್ರಸನ್ನ ಪಾಟೀಲ,
ಇತಿಹಾಸ ಉಪನ್ಯಾಸಕರು, ಗದಗ

ವಾಯ್. ಎಸ್. ಗೌಡರ,
ಕಲಾವಿದರು, ಮುಂಡರಗಿ

ರಾಮಕೃಷ್ಣ ದೊಡ್ಡಮನಿ,
ಕಲಾವಿದರು, ಮುಂಡರಗಿ

ಬಸನಗೌಡ ಪಾಟೀಲ, ಕಲಾವಿದರು,
ಭಾವನೂರು (ಶಿರಹಟ್ಟಿ)

ಎನ್. ಆರ್. ಕುಲಕರ್ಣಿ,
ಕಲಾವಿದರು, ಸಂಘಟಕರು, ಶಿರಹಟ್ಟಿ

ಎಸ್. ಬಿ. ಅಂಗಡಿ,
ರಂಗಾಸಕ್ತರು, ಲಕ್ಷ್ಮೇಶ್ವರ

ದಿಗಂಬರ ಪೂಜಾರ,
ಪತ್ರಕರ್ತರು, ಲಕ್ಷ್ಮೇಶ್ವರ

ಮಲ್ಲಿಕಾರ್ಜುನ ಪೂಜಾರ,
ಕಲಾವಿದರು, ಹಾತಲಗೇರಿ (ಗದಗ)

ಮಂಜುನಾಥ ಡೋಣಿ,
ರಂಗಕಲಾವಿದರು, ಕವಿ,
ನಾಟಕಕಾರ, ಸಂಭಾಪೂರ (ಗದಗ)

ಆಯ್. ಎಸ್. ಹಿರೇಮಠ,
ಉಪನ್ಯಾಸಕರು, ಹುಲಕೋಟಿ

ಮಹೇಶ ಪಾಟೀಲ,
ಕಲಾವಿದರು, ಗದಗ

ಆರ್. ಎನ್. ಕುಲಕರ್ಣಿ,
ಆರ್.ಎನ್.ಕೆ. ಮಿತ್ರಮಂಡಳಿ, ಗದಗ

ಸುಶೀಲೇಂದ್ರ ಜೋಷಿ,
'ಅಭಿನಯರಂಗ' ಗದಗ

ಶ್ರೀಮತಿ ಭಾರತಿ ಶಿರಹಟ್ಟಿ,
ವೃತ್ತಿರಂಗ ಕಲಾವಿದೆ, ಗದಗ

ಶ್ರೀಮತಿ ಶ್ರೀದೇವಿ,
ವೃತ್ತಿರಂಗ ಕಲಾವಿದೆ, ಗದಗ

ಚಿದಂಬರ ಪಿ. ನಿಂಬರಗಿ,
ಅಧ್ಯಕ್ಷರು, ಶ್ರೀ ಶಿವಚಿದಂಬರ ಶಿಕ್ಷಣ
ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ,
ಶಿರೋಳ (ನರಗುಂದ)

ಚಂದ್ರಕಾಂತ ಇನಾಮದಾರ,
ಶಿಕ್ಷಕರು, ನರಗುಂದ.

ವೆಂಕಣ್ಣಾ ಬಂಗಾರಿ (ರೋಣ)

ವಾಯ್.ಸಿ.ಪಾಟೀಲ, ಗಜೇಂದ್ರಗಡ

ನಾಗರಾಜ ಹೊಸ್ಮೂರ, ಬೆನಕೊಪ್ಪ

ಶೇಖರಗೌಡ ಪಾಟೀಲ, ಸೂಡಿ

ಎಂ.ಎಸ್. ಬಿದರೂರ, ಸೂಡಿ

ಆರ್.ಬಿ. ಚಿನಿವಾಲರ, ಅರ್ಥಶಾಸ್ತ್ರ
ಉಪನ್ಯಾಸಕರು, ಕೊಣ್ಣೂರು

ವಿದ್ಯಾಧರ್ಕ ದೊಡ್ಡಮನಿ, ಕೊಟುಮಚಗಿ

ಎಂ.ಬಿ. ಗೂಳಪ್ಪನವರ (ನಿಡಗುಂದಿ),
ನಿವೃತ್ತ ಶಿಕ್ಷಕರು, ಗದಗ.

ಡಾ. ಬಿ.ಎಸ್. ರಾಠೋಡ
ಉಪನ್ಯಾಸಕರು, ವಿದ್ಯಾದಾನ ಸಮಿತಿ
ಹೆಣ್ಣುಮಕ್ಕಳ ಪ.ಪೂ. ಕಾಲೇಜ, ಗದಗ.

ಶ್ರೀ ವೆಂಕಟೇಶ ಕಟ್ಟಿಮನಿ
ನಿವೃತ್ತ ಪ್ರಾಚಾರ್ಯರು, ಮುನಿಸಿಪಲ್
ಪಿ.ಯು. ಕಾಲೇಜ, ಗದಗ.

# ಗ್ರಂಥಋಣ


| | |
|---|---|
| ಉತ್ತರ ಕರ್ನಾಟಕದ ವೃತ್ತಿರಂಗಭೂಮಿ | ಡಾ. ರಾಮಕೃಷ್ಣ ಮರಾಠೆ, ಇಳಾ ಪ್ರಕಾಶನ, ಬೆಂಗಳೂರು. |
| ಕರ್ನಾಟಕ ರಂಗಭೂಮಿ | ಡಾ. ಎಚ್.ಕೆ. ರಂಗನಾಥ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು,(೨೦೦೦). |
| ಕನ್ನಡ ರಂಗಭೂಮಿ : ಅಂದು-ಇಂದು | ವಿವಿಧ ಲೇಖಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. (೧೯೭೪) |
| ಕರ್ನಾಟಕ ರಂಗಭೂಮಿ-ನೆನ್ನೆ-ಇಂದು-ನಾಳೆ | ಸಂ. ಡಾ. ಸಿಂಧುವಳ್ಳಿ ಅನಂತಮೂರ್ತಿ, ಎಚ್.ಕೆ. ರಾಮನಾಥ್ |
| ಗರುಡ ಸದಾಶಿವರಾಯರು | ಡಾ. ಬಸವರಾಜ ಜಗಜಂಪಿ |
| ನಾಟಕ ಸಾಹಿತ್ಯ ಹಾಗೂ ವೃತ್ತಿ ರಂಗಭೂಮಿಯ ಅಧ್ಯಯನ | ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ. |
| ಶ್ರೀ ಗರುಡ ಸದಾಶಿವರಾಯರು | ಕುಲಕರ್ಣಿ ಎನ್.ಕೆ. (ಎನ್ಕೆ) |
| ನಾಟಕ ಸಾರ್ವಭೌಮ ಶಿರಹಟ್ಟಿ ವೆಂಕೋಬರಾಯರು | ಸದಾನಂದ ಕನವಳ್ಳಿ, ಐ.ಬಿ.ಎಚ್. ಪ್ರಕಾಶನ ಬೆಂಗಳೂರು. (೧೯೭೮) |
| ನಮ್ಮ ಗದಗ-ಬೆಟಗೇರಿ | ಸಂ. ಹ.ರಾ. ಕಿಡಿಯೂರು, ಡೈರೆಕ್ಟರಿ ಪಬ್ಲಿಷರ್ಸ್, ಗದಗ (೧೯೭೫) |
| ಜ್ಞಾನದೇಗುಲ ಶ್ರೀ. ವೇ.ಪಂ.ಡಾ. ಪುಟ್ಟರಾಜ ಗವಾಯಿಗಳವರ ಅಭಿನಂದನ ಗ್ರಂಥ, (೧೯೯೯) | ಸಂ. ವ್ಹಿ.ಬಿ. ಹಿರೇಮಠ |
| ಉತ್ತರ ಕರ್ನಾಟಕ ರಂಗಭೂಮಿ | ಕುಲಕರ್ಣಿ ಎನ್. ಕೆ. (ಎನ್ಕೆ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. (೨೦೦೧) |
| ನಾಟಕಕಾರ ಮಹಾಂತೇಶ ಶಾಸ್ತ್ರಿ | ಡಾ. ವ್ಹಿ. ಬಿ. ಹಿರೇಮಠ, ಅಶ್ವಿನಿ ಪ್ರಕಾಶನ, ಗದಗ (೨೦೦೯) |
| ನಾಟಕಕಾರ ಚಿಕ್ಕೋಡಿ ಶಿವಲಿಂಗಶಾಸ್ತ್ರಿಗಳು | ಡಾ. ಎಸ್.ಎಂ. ಅಂಬಲಿಯವರ, ವೃಷ್ಟಿ ಪ್ರಕಾಶನ, ಗದಗ (೨೦೦೯) |
| ಕೂನೇರಿ (ಸ್ಮರಣ ಸಂಚಿಕೆ) | ಅಭಿನಯರಂಗ, ಗದಗ (೧೯೯೩). |